27	ರಾಮನಗರ – ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ ವಶಧಲ್ಲಿರುವ ಚನ್ನಪಟ್ಟಣದ ಸುಣ್ಣಘಟ್ಟ ಸಿಜಿ ವಸತಿ ಬಡಾವಣೆಗೆ ಎಸ್‌ಹೆಚ್–94 ರಸ್ತೆಯ ಎಡಭಾಗದಲ್ಲಿರುವ ಪಾರ್ಕ–9ಕ್ಕೆ ಫೆನ್ಸಿಂಗ್ ಅಳವಡಿಸುವ ಕಾಮಗಾರಿ.	19.91	1,280,090	528,407.00	935513	25/03/2013	12,801	51,204	12,801	12,801	13/56–59	ಈರೇಗೌಡ
28	ರಾಮನಗರ – ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ ವಶಧಲ್ಲಿರುವ ಚನ್ನಪಟ್ಟಣ ಕುಡಿನೀರು ಕಟ್ಟೆ ಉದ್ಯಾನವನ ಅಭಿವೃದ್ಧಿ ಕಾಮಗಾರಿ.	19.97	147,134	528,407.00	760946	22/6/2012	1,471	5,885	1,471	1,471	4/69–71	ಹೆಚ್. ನಾಗಣ್ಣ
29	ರಾಮನಗರ – ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ ವಶಧಲ್ಲಿರುವ ಚನ್ನಪಟ್ಟಣದ ಸುಣ್ಣಘಟ್ಟ ಸಿಜಿ ಕಣ್ಣಾ ವಸತಿ ಬಡಾವಣೆಯ ಹೆಚ್ಚುವರಿ ಚರಂಡಿ ನಿರ್ಮಾಣ ಕಾಮಗಾರಿ.	9.85	477,343	528,407.00	659558	27/6/12	4,773	19,094	4,773	4,773	4/74–75	ಎಸ್. ಪ್ರದೀಪ್ ಕುಮಾರ್
			Total	23,778,315.00			356,647.77	1,426,591.08	356647.77	356647.77		

27. ಅರ್ಕಾವತಿ ನದಿಪಥ ಶುದ್ದಿಗೊಳಿಸಿರುವ ಬಗ್ಗೆ:

ರಾಮನಗರ ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ರಾಮನಗರದಲ್ಲಿ ಹರಿಯುವ ಅರ್ಕಾವತಿ ಹೊಳೆಯ ಶುದ್ಧೀಕರಣ ಮಾಡುವ ಸಲುವಾಗಿ 2012-13ನೇ ಸಾಲಿನಲ್ಲಿ ಡಿ.ಪಿ.ಆರ್ ವರದಿ ಹಾಗೂ ಕಾಮಗಾರಿ ಸೇರಿ ಒಟ್ಟು ರೂ.42,78,121/- ಗಳನ್ನು ವೆಚ್ಚ ಮಾಡಿರುವುದು ಸರಿಯಷ್ಟೆ.

ಆದರೆ ಸರ್ಕಾರದ ವತಿಯಿಂದ ಈ ಬೃಹತ್ ವೆಚ್ಚಕ್ಕೆ ಸಂಬಂಧಿಸಿದಂತೆ ಯಾವುದೇ ಅನುದಾನ ಪ್ರಾಧಿಕಾರಕ್ಕೂ ಬಂದಿರುವುದಿಲ್ಲ. ಬದಲಾಗಿ ಪ್ರಾಧಿಕಾರದ ನಿಧಿಯಿಂದಲೇ ಈ ವೆಚ್ಚ ಬಾಬ್ತಿಗೆ ಪಾಲುದಾರಿಕೆ ಇರುವುದಿಲ್ಲ. ಲೆಕ್ಕ ತನಿಖಾ ಆಕ್ಷೇಪಣೆಯಿನೆಂದರೆ ಈ ವೆಚ್ಚದಿಂದ ಪ್ರಾಧೀಕಾರಕ್ಕೆ ಯಾವುದೇ ಆದಾಯ ಹಾಗೂ ಆಸ್ತಿ ಉದ್ಭವವಾಗಿರುವುದಿಲ್ಲ. ಇದೇ ಹಣವನ್ನು ಪ್ರಾಧಿಕಾರದ ಬಡಾವಣೆಗಳ ಅಭಿವೃದ್ಧಿಗೆ ಬಳಸಿದ್ದಾರೆ ಮೂಲ ಸೌಕರ್ಯ ಹೆಚ್ಚಿದಂತಾಗಿರುತ್ತಿತ್ತು. ಹಾಗೂ ನಿವೇಶನ ವಸೂಲಿ ಹಣ ಸದ್ಬಳಕೆಯಾದಂತಿರುತ್ತದೆ. ಆದುದರಿಂದ ಇದೊಂದು ಅನಗತ್ಯ ವೆಚ್ಚವೆಂದು ಅಭಿಪ್ರಾಯಪಡಲಾಗಿದೆ ಹಾಗೂ ಈ ತರಹದ ವೆಚ್ಚಗಳಿಗೆ ಕಡಿವಾಣ ಹಾಕಲು ಸೂಚಿಸಿದೆ.

28.ಕಾಮಗಾರಿ ಬಿಲ್ಲುಗಳಲ್ಲಿ ಹೆಚ್ಚುವರಿ ಪಾವತಿಯಾಗಿರುವುದು:

2012-13ನೇ ಸಾಲಿನಲ್ಲಿ ಪಾವತಿಸಲಾಗಿರುವ ಕಾಮಗಾರಿ ಬಿಲ್ಲುಗಳನ್ನು ಟೆಂಡರ್ ಅನುಮೋದಿತ ಮೊತ್ತಕ್ಕೆ ಹೆಚ್ಚುವರಿ ಪಾವತಿಯಾಗಿದ್ದು ವಿವರವನ್ನು ಈ ಕೆಳಕಂಡಂತೆ ವಿವರಿಸಿದ್ದು ಸಂಬಂಧಿಸಿದವರಿಂದ ರೂ.61,423/- ವಸೂಲಾತಿಗೆ ಸೂಚಿಸಿದೆ.

ಕ್ರ.ಸಂ	ಕಾಮಗಾರಿ ಹೆಸರು/ಗುತ್ತಿಗೆದಾರರ ಹೆಸರು	ಟೆಂಡರ್ ಮೊತ್ತ	ಬಿಲ್ಲು ಮೊತ್ತ	ಹೆಚ್ಚುವರಿ ಮೊತ್ತ
1	ಸುಣ್ಣಘಟ್ಟ ಸಿಜಿ ವಸತಿ ಬಡಾವಣೆಗೆ ಎಸ್‌ಹೆಚ್-94 ರಸ್ತೆಯ ಎಡಭಾಗಕ್ಕೆ ಚರಂಡಿ ನಿರ್ಮಾಣ ಕಾಮಗಾರಿ (1) ಸಿದ್ದರಾಜು.ಎಂ	19,18,745	19,25,057	6,312
2	ಸುಣ್ಣಘಟ್ಟ ಸಿಜಿ ವಸತಿ ಬಡಾವಣೆಗೆ ಎಸ್‌ಹೆಚ್-94 ರಸ್ತೆಯ ಬಲಭಾಗಕ್ಕೆ ಚರಂಡಿ ನಿರ್ಮಾಣ ಕಾಮಗಾರಿ (1) ಸಿದ್ದರಾಜು.ಎಂ	19,35,582	19,48,287	12,705
3	ಸುಣ್ಣಘಟ್ಟ ಸಿಜಿ ವಸತಿ ಬಡಾವಣೆಗೆ ಎಸ್‌ಹೆಚ್-94 ರಸ್ತೆಯ ಬಲಭಾಗಕ್ಕೆ 6 ಕಿ.ಮೀ ಆರ್‌ಸಿಸಿ ಅಡ್ಡಮೋರಿಗಳ ನಿರ್ಮಾಣ (1) ಎಂ.ಸಿ ಚಂದ್ರಪ್ಪ	19,31,415	19,34,308	2,893
4	ಸುಣ್ಣಘಟ್ಟ ಸಿಜಿ /ಕಣ್ವ ವಸತಿ ಬಡಾವಣೆಗೆ ಎಸ್‌ಹೆಚ್-94 ರಸ್ತೆಯ ಬಲಭಾಗದಲ್ಲಿರುವ 8ನೇ ಎ ಮತ್ತು 13ನೇ ತಿರುವು ರಸ್ತೆಗಳಿಗೆ ಚರಂಡಿ ನಿರ್ಮಾಣ (1)ಈರೇಗೌಡ	9,68,778	9,88,922	20,144
5	ಸುಣ್ಣಘಟ್ಟ ಸಿಜಿ ವಸತಿ ಬಡಾವಣೆಯಲ್ಲಿನ ಡೆತ್‌ಸ್ಲಾಬ್ ಕಟ್ಟಡ ನಿರ್ಮಾಣ (1)ಚನ್ನಪ್ಪ	9,96,106	9,88,966	7,140
6	ರಾಮನಗರ ರಂಗರಾಯನದೊಡ್ಡಿ ಕೆರೆಯಲ್ಲಿನ ಅಭಿವೃದ್ಧಿ (1) ಎಸ್.ಕುಮಾರ್	9,92,823	9,97,062	4,239
7	ರಾಮನಗರ ಜೀಗೇನಹಳ್ಳಿ ಆ.ಜಿ ವಸತಿ ಬಡಾವಣೆಯಲ್ಲಿನ 8ಎ ಮುಖ್ಯ ರಸ್ತೆಗೆ ಚರಂಡಿ ನಿರ್ಮಾಣ(1)ಎಸ್.ಭೈರೇಗೌಡ	9,96,271	10,00,340	4,069
8	ಹೊಸ ಕಛೇರಿ ಕಟ್ಟಡದಲ್ಲಿ ನೆಟ್ ವರ್ಕಿಂಗ್ ಸಿಸ್ಟಮ್ ಅಳವಡಿಕೆ (1) ಎ.ಆರ್ ರವಿ	4,19,270	4,23,192	3,921
	ಒಟ್ಟು ರೂ.			61,423

29. ವರ್ಕ್ ಸ್ಲಿಪ್ ಅನುಮೋದನೆ ಪಡೆಯುವ ಬಗ್ಗೆ:

ಪ್ರಾಧಿಕಾರ ವತಿಯಿಂದ 2012-13ರ ಕಾಮಗಾರಿ ಬಿಲ್ಲುಗಳನ್ನು ಅವಲೋಕಿಸಲಾಗಿ ನಿಗಧಿತ ಪ್ರಮಾಣಕ್ಕಿಂತ ಅಧಿಕವಾಗಿ ಕಾಮಗಾರಿ ನಿರ್ವಹಿಸಿದ್ದು ಈಗಾಗಲೇ ಕೆಲವು ಕಡತಗಳಲ್ಲಿ ವರ್ಕ್‌ಸ್ಲಿಪ್ ದಾಖಲಿಸಿದ್ದು, ಕೆಲವೊಂದಕ್ಕೆ ತಾಂತ್ರಿಕ ಅನುಮೋದನೆ ಪಡೆದಿರುವುದಿಲ್ಲ. ಅಂತಹ ಕೆಲವು ಕಾಮಗಾರಿ ಬಿಲ್ಲು ವಿವರಗಳನ್ನು ಈ ಕೆಳಕಂಡಂತೆ ವಿತರಿಸಿದ್ದು ಸಂಬಂಧಿಸಿದ ತಾಂತ್ರಿಕ ಇಲಾಖೆಯಿಂದ ಅನುಮೋದನೆ ಪಡೆದು ಮುಂದಿನ ಸಾಲಿನ ಲೆಕ್ಕ ತನಿಖೆಗೆ ವಿವರವನ್ನು ಹಾಜರುಪಡಿಸಲು ಸೂಚಿಸಿದೆ.

ಕ್ರ.ಸಂ	ಕಾಮಗಾರಿ ಹೆಸರು/ಗುತ್ತಿಗೆದಾರರ ಹೆಸರು	ಟೆಂಡರ್ ಮೊತ್ತ	ಬಿಲ್ಲು ಮೊತ್ತ
1	ಸುಣ್ಣಘಟ್ಟ ಸಿಜಿ ವಸತಿ ಬಡಾವಣೆಗೆ ಚರಂಡಿ ನಿರ್ಮಾಣ ಕಾಮಗಾರಿ (1) ವಿಶ್ವ	19,78,806	21,39,330
2	ಸುಣ್ಣಘಟ್ಟ ಸಿಜಿ/ಕಣ್ವ ವಸತಿ ಬಡಾವಣೆ ಬಲಭಾಗದಲ್ಲಿರುವ 2-5,9,10ನೇ ತಿರುವು ರಸ್ತೆಗಳಿಗೆ ಚರಂಡಿ ನಿರ್ಮಾಣ ಕಾಮಗಾರಿ (1) ಮುರುಳಿ ಹೆಚ್.ಸಿ	19,79,297	21,03,850
3	ಸುಣ್ಣಘಟ್ಟ ಸಿಜಿ/ಕಣ್ವ ವಸತಿ ಬಡಾವಣೆ ಎಡಭಾಗದಲ್ಲಿರುವ 4ಎ, 5ಎಹಾಗೂ 6ಎ ತಿರುವುಗಳಿಗೆ ಚರಂಡಿ ನಿರ್ಮಾಣ ಕಾಮಗಾರಿ (1) ಎಂ.ಸಿದ್ದರಾಜು	19,77,800	20,89,909
4	ಸುಣ್ಣಘಟ್ಟ ಸಿಜಿ ವಸತಿ ಬಡಾವಣೆ ಎಸ್.ಹೆಚ್.94 ರಸ್ತೆಯ ಬಲಭಾಗಕ್ಕೆ ಆರ್‌ಸಿಸಿ ಚರಂಡಿ ನಿರ್ಮಾಣ (1) ಎಂ.ಸಿದ್ದರಾಜು	19,71,800	20,14,053
5	ಸುಣ್ಣಘಟ್ಟ ಸಿಜಿ ವಸತಿ ಬಡಾವಣೆ ಎಸ್.ಹೆಚ್.94 ರಸ್ತೆಯ ಎಡಭಾಗಕ್ಕೆ ಆರ್‌ಸಿಸಿ ಅಡ್ಡಮೋರಿಗಳ ನಿರ್ಮಾಣ (1) ಕೆ.ಜಿ ಜಯರಾಮ್	9,72,690	9,95,927
6	ಸುಣ್ಣಘಟ್ಟ ಸಿಜಿ ವಸತಿ ಬಡಾವಣೆ ಬಲಭಾಗದ 10ನೇ ಮತ್ತು 11ನೇ ಮುಖ್ಯ ರಸ್ತೆಗೆ ಚರಂಡಿ ನಿರ್ಮಾಣ(1)ಹೆಚ್.ಆರ್ ಸತೀಶ್	9,72,763	10,04,473
7	ಸುಣ್ಣಘಟ್ಟ ಸಿಜಿ ವಸತಿ ಬಡಾವಣೆಗೆ ಉಳಿದ ರಸ್ತೆಗಳಿಗೆ ಹೆಚ್ಚುವರಿ ಚರಂಡಿ ನಿರ್ಮಾಣ (1) ರಮೇಶ್ ವಿ	19,84,944	20,17,407
8	ಸುಣ್ಣಘಟ್ಟ ಸಿಜಿ ವಸತಿ ಬಡಾವಣೆ ಎಸ್.ಹೆಚ್.94 ರಸ್ತೆಯ ಬಲಭಾಗದಲ್ಲಿರುವ ಪಾರ್ಕ್-1ಕ್ಕೆ ಆರ್‌ಸಿಸಿ ಚರಂಡಿ ನಿರ್ಮಾಣ (1) ಎಸ್.ಶಿವರಾಜು	9,93,301	10,06,615
9	ಸುಣ್ಣಘಟ್ಟ ಸಿಜಿ ವಸತಿ ಬಡಾವಣೆ ಎಸ್.ಹೆಚ್.94 ರಸ್ತೆಯ ಬಲಭಾಗದಲ್ಲಿರುವ ಪಾರ್ಕ್ ಸಂಖ್ಯೆ-1 3ಕ್ಕೆ ಫೆನ್ಸಿಂಗ್ ಅಳವಡಿಕೆ ಕಾಮಗಾರಿ (1) ಎನ್.ಶಿವರಾಜು	19,44,988	19,72,665
10	ಸುಣ್ಣಘಟ್ಟ ಸಿಜಿ ವಸತಿ ಬಡಾವಣೆ ಎಸ್.ಹೆಚ್.94 ರಸ್ತೆಯ ಬಲಭಾಗದಲ್ಲಿರುವ ಪಾರ್ಕ್ ಸಂಖ್ಯೆ 4ಕ್ಕೆ ಕಟ್ಟಡ ಹಾಗೂ ಪಾರ್ಕ್‌ಗೆ ಕಾಮಗಾರಿ (1)ಚನ್ನವೀರೇಗೌಡ	19,86,896	20,08,289
11	ಸುಣ್ಣಘಟ್ಟ ಸಿಜಿ ವಸತಿ ಬಡಾವಣೆ ಎಸ್.ಹೆಚ್.94 ರಸ್ತೆಯ ಎಡಭಾಗಕ್ಕೆ ಉಳಿದ 7ಎ,8ಎ ಮತ್ತು 9ಎ ರಸ್ತೆಗೆ ಆರ್‌ಸಿಸಿ ಚರಂಡಿ ನಿರ್ಮಾಣ(1) ಹೆಚ್.ಆರ್ ಸತೀಶ್	4,97,086	5,21,647
12	ಎಲೆಕೇರಿ ಬಡಾವಣೆಯ ರುದ್ರಭೂಮಿಯಲ್ಲಿ ಕಾಂಪೌಂಡ್ ಗೋಡೆ ನಿರ್ಮಾಣ (1)ಚನ್ನವೀರೇಗೌಡ	4,97,439	5,20,769

30. ಪ್ರಾಧೀಕಾರದ ಹೊಸ ಕಛೇರಿ ಕಟ್ಟಡದ ನಿರ್ಮಾಣ ಮಾಡುತ್ತಿರುವ ಬಗ್ಗೆ:

ರಾಮನಗರ ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ತಾಲ್ಲೂಕು ಪಂಚಾಯಿತಿ ರಾಮನಗರ ಸಹಯೋಗದೊಂದಿಗೆ ತಾಲ್ಲೂಕು ಪಂಚಾಯಿತಿ ಜಾಗದಲ್ಲಿ ಪ್ರಾಧಿಕಾರದ ವತಿಯಿಂದ ಕಛೇರಿ ಕಟ್ಟಡ ನಿರ್ಮಾಣ ಪ್ರಾರಂಭವಾಗಿರುತ್ತದೆ. ಈ ಕಟ್ಟಡದ ಅಂದಾಜು ವೆಚ್ಚ 499.55 ಲಕ್ಷಗಳಾಗಿದ್ದು ಶ್ರೀ ಜಗದೀಶ್ ಎಂಬುವವರು ಟೆಂಡರ್ ಗುತ್ತಿಗೆದಾರರಾಗಿರುತ್ತಾರೆ. 2012-13ನೇ ಸಾಲಿನಲ್ಲಿ ಈ ಬಾಬ್ತಿನಲ್ಲಿ ಮೊದಲ ಮತ್ತು ಭಾಗಶಃ ಬಿಲ್ ರೂ.53,60,954/- ಗಳಲ್ಲಿ ಚೆಕ್ ರೂಪದಲ್ಲಿ ರೂ.49,85,687/- ಪಾವತಿಯಾಗಿರುತ್ತದೆ. ಚೆಕ್ ಸಂಖ್ಯೆ: 935480/11.3.2013 ಹಾಗೂ 935508/19.3.2013 ಆಗಿರುತ್ತದೆ.

31. ಚನ್ನಪಟ್ಟಣ ಖಾಸಗೀ ಬಸ್ ಟರ್ಮಿನಲ್ ಮತ್ತು ವಾಣಿಜ್ಯ ಸಂಕೀರ್ಣ ನಿರ್ಮಾಣದ ಬಗ್ಗೆ:

ಉಲ್ಲೇಖ:1. ಸರ್ಕಾರದ ಆದೇಶ ಸಂಖ್ಯೆನಅಇ/44/ಬೆರೂಪ್ರಾ/2012, ಬೆಂಗಳೂರು ದಿ:7.6.2012

2. ಸರ್ಕಾರದ ಆದೇಶ ಸಂಖ್ಯೆನಅಇ/4408/ಬೆರೂಪ್ರಾ/2013, ಬೆಂಗಳೂರು ದಿ:15.2.2013

ಮೇಲ್ಕಂಡ ಉಲ್ಲೇಖ-1ರಂತೆ ಚನ್ನಪಟ್ಟಣದ ಖಾಸಗಿ ಬಸ್ ಟರ್ಮಿನಲ್ ಮತ್ತು ವಾಣಿಜ್ಯ ಸಂಕೀರ್ಣದ ಬಗ್ಗೆ ಪ್ರಾಧೀಕಾರ ಹಾಗೂ ನಗರಸಭೆ ಜಂಟಿಯಾಗಿ ನಿರ್ಮಿಸಲು ಉದ್ದೇಶಿಸಿರುವ ಕಾಮಗಾರಿಗೆ ರೂ.32,63,66,963/- ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಉಲ್ಲೇಖ-2ರಂತೆ ರೂ.35,71,38,881/-ಗಳ ಸಂದಾಯದ ನಂತರ ಟೆಂಡರ್ ಮೊತ್ತಕ್ಕೆ ಮೆ//ಕೆ.ಎಂ.ವಿ ಪ್ರಸಾದ್ ರಾವ್‌ಗೆ (ಕೆ.ಎಂ.ವಿ ಪ್ರಸಾದ್ ಅಮಿಟೆಡ್) ಅನುಮೋದನೆ ನೀಡಲಾಗಿದೆ.

2012-13ನೇ ಸಾಲಿನಲ್ಲಿ ಈ ಸಂಬಂಧ ಯಾವುದೇ ಕಾಮಗಾರಿ ಪ್ರಾರಂಭವಾಗಿರುವುದಿಲ್ಲ ಬದಲಾಗಿ ಡಿ.ಪಿ.ಆರ್ ವರದಿಯ ಬಾಬ್ತು ರೂ.12,94,933/- ಗಳು ಮಾತ್ರ ಪಾವತಿಯಾಗಿರುವುದು ಅಂಕಿ ಅಂಶಗಳಿಂದ ತಿಳಿದು ಬಂದಿದೆ.

32.ದಾಸ್ತಾನು ವಹಿ ನಿರ್ವಹಣೆ ಬಗ್ಗೆ.

ಹಿಂದಿನ ಸಾಲಿನಲ್ಲಿ ಹಾಗೂ ಈ ಸಾಲಿನಲ್ಲಿಯೂ ಸಹ ಅತಿ ಹೆಚ್ಚಿ ಪ್ರಮಾಣದಲ್ಲಿ ಪೀಠೋಪಕರಣಗಳು, ಯಂತ್ರೋಪಕರಣಗಳು ಕ್ಯಾಮರಾ, ಟಿವಿ, ಡಿ.ವಿ.ಡಿ ಪ್ಲೇಯರ್‌ಗಳು ಹೊಸ ಕಂಪ್ಯೂಟರ್‌ಗಳು ಹಾಗೂ ಇತರೆ ಸಾಮಾಗ್ರಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪೀಠೋಪಕರಣಗಳನ್ನು ಖರೀದಿಸಲಾಗಿದೆ. ಆದರೆ ಬಿಲ್ಲುಗಳಲ್ಲಿ ದಾಸ್ತಾನು ದೃಢೀಕರಣ ಮಾಡಿ ದಾಸ್ತಾನು ವಹಿಯಲ್ಲಿ ದಾಖಲಿಸಬೇಕಾಗಿದೆ. ಹಾಗೂ ವಾರ್ಷಿಕ ದಾಸ್ತಾನು ಪರಿಶೀಲನೆ ನಡೆಸಲು ಸೂಚಿಸಿದೆ ಈಗ ನಿರ್ವಹಿಸಿರುವ ದಾಸ್ತಾನು ವಹಿ ಅಪೂರ್ಣವಾಗಿದ್ದು ಪೂರ್ಣವಾಗಿ ನಿರ್ವಹಿಸಲು ಸೂಚಿಸಿದೆ.

33. ಲೆಕ್ಕ ತನಿಖಾ ಶುಲ್ಕದ ಲೆಕ್ಕಾಚಾರ ಬಗ್ಗೆ.

2012-13ನೇ ಸಾಲಿನ ಆರ್ಥಿಕ ವಹಿವಾಟಿನ ಆಧಾರದ ಮೇಲೆ ಲೆಕ್ಕ ತನಿಖಾ ಶುಲ್ಕವನ್ನು ಈ ಕೆಳಕಂಡಂತೆ ನಿಗಧಿಪಡಿಸಿ ಈ ಕೆಳಕಂಡಂತೆ ಇರುತ್ತದೆ.

2012-13ನೇ ಸಾಲಿನ ಒಟ್ಟಾರೆ ಜಮಾ	ರೂ.19,59,54,950-00
2012-13ನೇ ಸಾಲಿನ ಒಟ್ಟಾರೆ ಜಮಾ	ರೂ.20,90,31,573-00
ಒಟ್ಟು	ರೂ.40,49,86,523-00

ಅ) ಜಮಾ ವಿಭಾಗದಿಂದ ಕಳೆಯಬೇಕಾಗಿರುವುದು.

1.	ನಿಶ್ಚಿತ ಠೇವಣಿ ಒಟ್ಟಾರೆ	ರೂ.8,00,00,000-00
2.	ಹೂಡಿಕೆ ಸಾಲ	ರೂ.25,00,000-00
3.	ಖಾತೆ ವರ್ಗಾವಣೆಯಿಂದ ಬಂದ ಒಟ್ಟಾರೆ	-
4.	ಕರಗಳ ಜಮಾ	ರೂ.88,217-00
	ಒಟ್ಟು	**ರೂ.8,25,88,217-00**

ಆ) ವೆಚ್ಚದ ವಿಭಾಗದಿಂದ ಕಳೆಯಬೇಕಾದ್ದು.

1.	ನಿಶ್ಚಿತ ಠೇವಣಿ ಹೂಡಿಕೆ ಬಾಬ್ತು	ರೂ.8,65,00,000-00
2.	ಹೂಡಿಕೆ ಸಾಲ ವಾಪಸ್ಸಾತಿ	ರೂ.25,00,000-00
3.	ಸಾಲದ ಬಾಬ್ತು ವೆಚ್ಚ	ರೂ.25,200-00
4.	ಇ.ಎಂ.ಡಿ.-ಎಫ್.ಎಸ್.ಡಿ	ರೂ.2,00,745-00
5.	ಗೌರವಧನ ಮತ್ತು ಸಿಬ್ಬಂದಿ ವೆಚ್ಚ	ರೂ.48,35,267-00
6.	ವಿದ್ಯುತ್ ಮತ್ತು ದೂರವಾಣಿ ವೆಚ್ಚ	ರೂ.2,62,017-00
7.	ಕರಗಳು ಮತ್ತು ತೆರಿಗೆಗಳ ವೆಚ್ಚ	ರೂ.4,90,534,-00
8.	ಲೆಕ್ಕತನಿಖೆ ಶುಲ್ಕ ಪಾವತಿ ವೆಚ್ಚ	ರೂ.4,39,775-00
9.	ನಿವೇಶನ ಹೆಚ್ಚುವರಿ, ಮುಂಗಡ, ಅಂಚೆವೆಚ್ಚ,	ರೂ.4,99,332-00
10	ಕಟ್ಟಡ ಬಾಡಿಗೆ	2,92,000
	ಒಟ್ಟು	**ರೂ.9,60,44,870**

(1) ಮತ್ತು (2) ವಿಭಾಗದಿಂದ ಕಳೆಯಬೇಕಾಗಿದ್ದು ರೂ.17,86,33,087-00

ಒಟ್ಟು ಲೆಕ್ಕ ತನಿಖೆ ಶುಲ್ಕಕ್ಕೆ ಒಳಪಡುವ ಮೊತ್ತ ರೂ.22,63,53,436-00

ಲೆಕ್ಕ ತನಿಖಾ ಶುಲ್ಕದ ಮೊತ್ತ X ದರ	=	22,63,53,436 x 0.20	ರೂ.4,52,706 ಅಥವಾ ರೂ.4,52,710 ಆಗಿರುತ್ತದೆ.
100		100	

ಲೆಕ್ಕ ತನಿಖಾ ಶುಲ್ಕದ ಡಿ.ಸಿ.ಬಿ ವಿವರ

01-04-2012ಕ್ಕೆ ಪ್ರಾರಂಭಿಕ ಶಿಲ್ಕು	ರೂ.4,39,775
2012-2013ನೇ ಸಾಲಿಗೆ ಶಿಲ್ಕು	ರೂ.4,52,710
ಒಟ್ಟು	ರೂ.8,92,485
2012-13ನೇ ಸಾಲಿಗೆ ಜಮಾ	ರೂ.4,39,775
31-03-2013ಕ್ಕೆ ಅಂತಿಮ ಶಿಲ್ಕು	ರೂ.4,52,710

ಲೆಕ್ಕ ಶಿರ್ಷಿಕೆ:

070 - ಇತರೆ ಅಡಳಿತ ಸೇವೆಗಳು

060 - ಇತರೆ ಸೇವೆಗಳು

110 - ಸರ್ಕಾರಿ ಲೆಕ್ಕಾ ತನಿಖೆ ಶುಲ್ಕ

01 - ಆಡಿಟ್ ಶುಲ್ಕ

34. ಸಾಮಾನ್ಯ ಅಭಿಪ್ರಾಯ:

1) ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಎಲ್ಲಾ ದಾಖಲಾತಿಗಳು, ದಾಸ್ತಾನು ಪುಸ್ತಕಗಳನ್ನು ಸರಿಯಾಗಿ ನಿರ್ವಹಿಸಲು ತಿಳಿಸಿದ್ದು ಈ ಸಾಲಿಯು ದಾಸ್ತಾನು ನಿರ್ವಹಿಸಿಲ್ಲದ ಕಾರಣ ಈ ಬಗ್ಗೆ ಕೂಡಲೇ ಗಮನಹರಿಸಿ ದಾಸ್ತಾನು ವಹಿ ನಿರ್ವಹಿಸಲು ಸೂಚಿಸಿದೆ.

2) ಪ್ರಾಥೀಕಾರಕ್ಕೆ ಸಂಬಂಧಿಸಿದ ಎಲ್ಲಾ ಚರ ಸ್ಥಿರಾಸ್ತಿ ದಾಖಲಿಸಲು ಸೂಚಿಸಿದೆ.

3) ನಗದು ಪುಸ್ತಕದಲ್ಲಿ ಈ ಸಾಲಿಯೂ ಸಹ ಏಪ್ರಿಲ್-2012 ರಿಂದ ಮಾರ್ಚ್-2013ರವರೆಗೆ ಕ್ರಮಬದ್ಧ ಪಾವತಿಗಳಿಗೆ ವೋಚರ್ ಸಂಖ್ಯೆಗಳನ್ನು ದಾಖಲಿಸಿಲ್ಲ ಇದರಿಂದ ನಗದು ಪುಸ್ತಕ ಹಾಗೂ ವೋಚರ್ ಹೊಂದಿಸಲು ಕಷ್ಟಕರವಾಗಿರುತ್ತದೆ. ಈ ನ್ಯೂನತೆ ಸರಿಪಡಿಸಲು ಸೂಚಿಸಿದೆ.

4) ಇ.ಎಂ.ಡಿ/ಎಫ್.ಎಸ್.ಡಿ ವಹಿಗಳನ್ನು ನಿರ್ವಹಿಸಿರುವುದಿಲ್ಲ ಇದರಿಂದ ವಾಸ್ತವಿಕವಾಗಿ ಜಮಾ ಮತ್ತು ಖರ್ಚಿನ ನಿಖರವಾದ ಅಂಕಿ ಅಂಶಗಳು ಲಭ್ಯವಿರುವುದಿಲ್ಲ.

5) ಕಾಮಗಾರಿ ಬಿಲ್ಲುಗಳಿಗೆ ಸಂಬಂಧಿಸಿದಂತೆ ಮುಕ್ತಾಯದ ವರದಿ (complication report) ಲಗತ್ತಿಸಿರುವುದಿಲ್ಲ.

6) ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮೂರನೇ ವ್ಯಕ್ತಿ ತಪಾಸಣಾ ವರದಿ ಲಗತ್ತಿಸಿರುವುದು ಕಂಡುಬಂದಿಲ್ಲ ಹಾಗೂ ಹೆಚ್ಚುವರಿ ಪ್ರಮಾಣದ ಕಾಮಗಾರಿ ಬಿಲ್ಲುಗಳಿಗೆ ವರ್ಕ್‌ಸ್ಲೀಪ್ ಅನುಮೋದನೆ ಪಡೆದು ಲಗತ್ತಿಸಲು ಸೂಚಿಸಿದೆ.

7) ಪ್ರಾಧಿಕಾರದಲ್ಲಿನ ಬಡಾವಣೆ ವೆಚ್ಚಗಳನ್ನು ಪ್ರತ್ಯೇಕವಾಗಿ ದಾಖಲಿಸಿಕೊಳ್ಳಲು ಸೂಚಿಸಿದ್ದು ಈ ಸಾಲಿನಲ್ಲಿಯೂ ಸಹ ನಿರ್ವಹಿಸದಿರುವುದು ಕಂಡುಬಂದಿದೆ. ಇದ್ದರಿಂದ ಬಡಾವಣೆಗಳ ನಿರ್ಧಿಷ್ಠ ವೆಚ್ಚದ ಅಂಕಿ ಅಂಶ ತಿಳಿಯಲಾಗಿದ್ದರಿಂದ ನಿರ್ವಹಿಸಲು ಸೂಚಿಸಿದೆ.

8) ಸರ್ಕಾರಿ ತೆರಿಗೆ/ಕರಗಳು/ಇತರೆ ಶುಲ್ಕವನ್ನು ಆಗಿಂದ್ದಾಗ್ಗೆ ಜಮಾ ಮಾಡಲು ಸೂಚಿಸಿದೆ.

9) ಹಿಂದಿನ ಸಾಲುಗಳಲ್ಲಿ ಖಾಯಂ ಸಿಬ್ಬಂದಿ ನೇಮಕ ಬಗ್ಗೆ ತಿಳಿಸುತ್ತಾ ಬಂದಿದ್ದರೂ ಸಹ ನೇಮಕವಾಗಿರುವುದಿಲ್ಲ ಕಾರಣ ಪ್ರಾಧೀಕಾರದ ಆರ್ಥಿಕ ವಹಿವಾಟು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದು ಜವಾಬ್ದಾರಿಯುತ ಖಾಯಂ ಸಿಬ್ಬಂದಿಯ ಅವಶ್ಯಕತೆಯಿದ್ದು ನೇಮಕಾತಿ ಮಾಡಿಕೊಳ್ಳಲು ಸಕ್ಷಮ ಪ್ರಾಧೀಕಾರದಿಂದ ಅನುಮೋದನೆ ಪಡೆದು ಕ್ರಮವಹಿಸುವುದು ಅಗತ್ಯ.

10) ವಾಹನದ ಲಾಗ್ ಪುಸ್ತಕದಲ್ಲಿ ಪ್ರತಿ ತಿಂಗಳು ಸರಾಸರಿ ಪ್ರತಿ ಲೀಟರ್‌ಗೆ 10 ಕಿ.ಮೀ ಕ್ರಮಿಸುವ ಬಗ್ಗೆ ಧೃಢೀಕರಣವಿದ್ದು ವಾಸ್ತವಿಕತೆಗೆ ತಕ್ಕಂತೆ ದಾಖಲಿಸಲು ಸೂಚಿಸಿದೆ.

ಸಹಿ
ಸಹಾಯಕ ನಿಯಂತ್ರಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ರಾಮನಗರ.

ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರ, ರಾಮನಗರ.

ವರ್ಷ	ಲೆಕ್ಕಪತ್ರಗಳನ್ನು ವರ್ಷಾವಾರು ಪೂರ್ಣಗೊಳಿಸಿ ಲೆಕ್ಕಪರಿಶೋಧನೆಗೆ ಸಿದ್ಧಪಡಿಸಿದ ದಿನಾಂಕ:	ವರ್ಷವಾರು ಲೆಕ್ಕಪತ್ರಗಳನ್ನು ಸಿದ್ಧಪಡಿಸಿದ ದಿನಾಂಕ	ವಿಳಂಬಕ್ಕೆ ಯಾವುದಾದರೂ ಕಾರಣಗಳು ಇದ್ದರೆ	ರಾಜ್ಯ ಲೆಕ್ಕಪತ್ರ ಇಲಾಖೆಗೆ ಲೆಕ್ಕ ಪರಿಶೋಧನೆ ನಡೆಸಲು ಕೋರಿ ಬರೆದ ಪತ್ರದ ಉಲ್ಲೇಖ ಮತ್ತು ದಿನಾಂಕ	ರಾಜ್ಯ ಲೆಕ್ಕಪತ್ರ ಇಲಾಖೆಗೆ ಲೆಕ್ಕ ಪರಿಶೋಧನೆ ಪ್ರಾರಂಭಿಸಿದ ದಿನಾಂಕ ಮತ್ತು ಪೂರ್ಣಗೊಳಿಸಿದ ದಿನಾಂಕ	ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಲೆಕ್ಕ ಪರಿಶೋಧನೆ ಪ್ರಮಾಣ ಪತ್ರವನ್ನು ನೀಡಿದ ಪತ್ರದ ಉಲ್ಲೇಖ ಮತ್ತು ದಿನಾಂಕ	ಅವುಗಳನ್ನು ಅಚ್ಚಿಗಾಗಿ ನೀಡಿದ ಮತ್ತು ಅಚ್ಚು ಪ್ರತಿಗಳನ್ನು ಸ್ವೀಕರಿಸಿದ ದಿನಾಂಕ	ಪ್ರತಿಗಳನ್ನು ಶಾಸಕಾಂಗ ಸಭೆಯಲ್ಲಿ ಸಚಿವಾಲಯಕ್ಕೆ ಸಲ್ಲಿಸಿದ ಪತ್ರದ ಉಲ್ಲೇಖ ಹಾಗೂ ದಿನಾಂಕ	ಶಾಸಕಾಂಗ ಸಭೆಯಲ್ಲಿ ಮಂಡಿಸಲು ವಿಳಂಬಕ್ಕೆ ಕಾರಣಗಳು	ಷರಾ
1	2	3	4	5	6	7	8	9	10	11
2012–13	01–04–2013	25–04–2013	ಯಾವುದು ಇಲ್ಲ	ರಾಚನಪ್ರಾ/ವಾ. ಲೆ.ಪ/ 44/2013–14 ದಿನಾಂಕ: 25–04–2013	20–05–2013 ರಿಂದ 30–05–2013	ಸ.ನಿ.ಸ್ಥ.ಲೆ.ಪ.ವ. ರಾ.ಕಾವಿ. 2013–14/1, ದಿನಾಂಕ: 28–06–2013	01–07–2013 ರಂದು ನೀಡಿದ್ದು ಮತ್ತು ದಿನಾಂಕ 08–07–2013	—	—	—

ಸಹಿ/–

ಆಯುಕ್ತರು

ರಾಮನಗರ–ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರ

ರಾಮನಗರ

ರಾಮನಗರ – ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರ, ರಾಮನಗರ.

1	ವರ್ಷ	2012–13
2	ಲೆಕ್ಕಪತ್ರಗಳನ್ನು ವರ್ಷಾವಾರು ಪೂರ್ಣಗೊಳಿಸಿ ಲೆಕ್ಕಪರಿಶೋಧನೆಗೆ ಸಿದ್ದಪಡಿಸಿದ ದಿನಾಂಕ:	01–04–2013
3	ವರ್ಷವಾರು ಲೆಕ್ಕಪತ್ರಗಳನ್ನು ಸಿದ್ಧಪಡಿಸಿದ ದಿನಾಂಕ	25–04–2013
4	ವಿಳಂಬಕ್ಕೆ ಯಾವುದಾದರೂ ಕಾರಣಗಳು ಇದ್ದರೆ	2012–13ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಸಂಬಂಧಿಸಿದಂತೆ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ರಾಮನಗರ ರವರು ದಿನಾಂಕ 20–05–2013 ರಿಂದ 30–05–2013 ರವರೆಗೆ ಲೆಕ್ಕ ತಪಾಸಣೆ ಕೈಗೊಂಡು ದಿನಾಂಕ 28–06–2013 ರಂದು ಲೆಕ್ಕ ಪರಿಶೋಧನಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ಕನ್ನಡ ಅವತರಣಿಕೆ ವರದಿಯನ್ನು ದಿನಾಂಕ 01–07–2013 ರಂದು ಅಚ್ಚಿಗೆ ಕಳುಹಿಸಿದ್ದು, ಅಚ್ಚು ಪ್ರತಿಗಳನ್ನು ದಿನಾಂಕ 08–07–2013 ರಂದು ಪ್ರಾಧಿಕಾರಕ್ಕೆ ಪಡೆಯಲಾಗಿದೆ. ಈ ವರದಿಯನ್ನು ಆಂಗ್ಲ ಭಾಷೆಗೆ ಬೆರಳಚ್ಚು ಮಾಡಲು ಬಾಕಿ ಇರುತ್ತದೆ. ಈ ಹಿನ್ನಲೆಯಲ್ಲಿ ವರದಿಯನ್ನು ಸಲ್ಲಿಸಲಾಗಿರುವುದಿಲ್ಲ. ಮುಂದುವರೆದು ಸದರಿ ವರದಿಯನ್ನು ಆಂಗ್ಲ ಭಾಷೆಗೆ ಬೆರಳಚ್ಚಿಸಿದ್ದು, ಸರ್ಕಾರಕ್ಕೆ ಸಲ್ಲಿಸಿದೆ.
5	ರಾಜ್ಯ ಲೆಕ್ಕಪತ್ರ ಇಲಾಖೆಗೆ ಲೆಕ್ಕ ಪರಿಶೋಧನೆ ನಡೆಸಲು ಕೋರಿ ಬರೆದ ಪತ್ರದ ಉಲ್ಲೇಖ ಮತ್ತು ದಿನಾಂಕ	ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ರಾಮನಗರ ಇವರಿಗೆ ರಾಚನಪ್ರಾ/ವ.ಲೆ.ತ/ 44/2013–14, ದಿನಾಂಕ 25–04–2013.
6	ರಾಜ್ಯ ಲೆಕ್ಕಪತ್ರ ಇಲಾಖೆಗೆ ಲೆಕ್ಕ ಪರಿಶೋಧನೆ ಪ್ರಾರಂಭಿಸಿದ ದಿನಾಂಕ ಮತ್ತು ಪೂರ್ಣಗೊಳಿಸಿದ ದಿನಾಂಕ	ಪ್ರಾರಂಭಿಸಿದ ದಿನಾಂಕ 20–05–2013. ಪೂರ್ಣಗೊಳಿಸಿದ ದಿನಾಂಕ 30–05–2013.
7	ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಲೆಕ್ಕ ಪರಿಶೋಧನೆ ಪ್ರಮಾಣ ಪತ್ರವನ್ನು ನೀಡಿದ ಪತ್ರದ ಉಲ್ಲೇಖ ಮತ್ತು ದಿನಾಂಕ	ಸ.ನಿ.ಸ್ಥ.ಲೆ.ಪ.ವ.ರಾ.ಕ.ವಿ/2013–14/1, ದಿನಾಂಕ 28–06–2013.
8	ಅವುಗಳನ್ನು ಅಚ್ಚಿಗಾಗಿ ನೀಡಿದ ಮತ್ತು ಅಚ್ಚು ಪ್ರತಿಗಳನ್ನು ಸ್ವೀಕರಿಸಿದ ದಿನಾಂಕ	ಕನ್ನಡದ ಪ್ರತಿಗಳನ್ನು ಅಚ್ಚಿಗಾಗಿ ನೀಡಿದ ದಿನಾಂಕ 01–07–2013 ಕನ್ನಡದ ಅಚ್ಚು ಪ್ರತಿಗಳನ್ನು ಸ್ವೀಕರಿಸಿದ ದಿನಾಂಕ 08–07–2013
9	ಪ್ರತಿಗಳನ್ನು ಶಾಸಕಾಂಗ ಸಭೆಯಲ್ಲಿ ಸಚಿವಾಲಯಕ್ಕೆ ಸಲ್ಲಿಸಿದ ಪತ್ರದ ಉಲ್ಲೇಖ ಹಾಗೂ ದಿನಾಂಕ	ರಾನಪ್ರಾ/2019–20/ ದಿನಾಂಕ 29–11–2019 ರನ್ವಯ ವರದಿ ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸಿದೆ.
10	ಶಾಸಕಾಂಗ ಸಭೆಯಲ್ಲಿ ಮಂಡಿಸಲು ವಿಳಂಬಕ್ಕೆ ಕಾರಣಗಳು	ಸದರಿ ವರದಿಯನ್ನು ಲೆಕ್ಕ ಪತ್ರ ಇಲಾಖೆಯಿಂದ ಸ್ವೀಕರಿಸಿದ ನಂತರ ಕನ್ನಡ ಮುದ್ರಣ ಮಾಡಿಸಿದ್ದು, ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ, ಮನ್ನಿಸುವಂತೆ ಬಿನ್ನವಿಸಿಕೊಳ್ಳಲಾಗಿದೆ. ಆಂಗ್ಲ ಭಾಷೆಗೆ ಬೆರಳಚ್ಚು ಮಾಡಲು ಬಾಕಿ ಇರುತ್ತದೆ. ಈ ಹಿನ್ನಲೆಯಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿರುವುದಿಲ್ಲ.
11	ಷರಾ	ಪ್ರಾಧಿಕಾರಕ್ಕೆ ಲೆಕ್ಕ ಪರಿಶೋಧನಾ ವರದಿ ಸ್ವೀಕರಿಸಿದ ಕೂಡಲೇ ಮುದ್ರಣ ಮಾಡಿ ಸರ್ಕಾರಕ್ಕೆ ಸಲ್ಲಿಸಲು ವಿಳಂಬವಾಗಿದ್ದು, ಮನ್ನಿಸುವಂತೆ ಬಿನ್ನವಿಸಿಕೊಳ್ಳಲಾಗಿದೆ.

ಸಹಿ/–
ಆಯುಕ್ತರು
ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ
ರಾಮನಗರ

ಕರ್ನಾಟಕ ಸರ್ಕಾರ

ರಾಮನಗರ ಜಿಲ್ಲಾ ಪಂಚಾಯತ್

ರಾಮನಗರ ಜಿಲ್ಲೆ

Ramanagara Zilla Panchayath, Ramanagara.



ವಾರ್ಷಿಕ ಆಡಳಿತ ವರದಿ - 2017-18

Yearly Adminstrative Report - 2017-18



ರೇಷ್ಮೆ ಅಭಿವೃದ್ಧಿ ಯೋಜನೆ/ ವಿಶೇಷ ಘಟಕ ಯೋಜನೆಯಡಿ ರೇಷ್ಮೆ ಹುಳು ಸಾಕುವ ಮನೆ ನಿರ್ಮಾಣ ಕಾಮಗಾರಿ



ಕಲ್ಯಾಣಿ ಅಭಿವೃದ್ಧಿ ಕಾಮಗಾರಿ: ಕೂಡ್ಲೂರು ಗ್ರಾಮ ಪಂಚಾಯಿತಿ, ಚನ್ನಪಟ್ಟಣ ತಾಲ್ಲೂಕು



ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿ: ಕಲ್ಯಾ ಗ್ರಾಮ ಪಂಚಾಯಿತಿ, ಮಾಗಡಿ ತಾಲ್ಲೂಕು

ರಾಮನಗರ ಜಿಲ್ಲಾ ಪಂಚಾಯತ್

ರಾಮನಗರ ಜಿಲ್ಲೆ

ವಾರ್ಷಿಕ ಆಡಳಿತ ವರದಿ

2017–18



ಮುನ್ನುಡಿ

ರಾಮನಗರ ಜಿಲ್ಲಾ ಪಂಚಾಯಿತಿಯ 2017–18ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಹೊರತರುತ್ತಿರುವುದನ್ನು ತುಂಬು ಹೃದಯದಿಂದ ಹರ್ಷಿಸುತ್ತೇನೆ.

ಜಿಲ್ಲೆಯು ನಾಲ್ಕು ತಾಲ್ಲೂಕುಗಳಲ್ಲಿ 127 ಗ್ರಾಮ ಪಂಚಾಯಿತಿ ಒಳಗೊಂಡಿದ್ದು, ಗ್ರಾಮಪಂಚಾಯತ್ ವ್ಯಾಪ್ತಿಯ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗಾಗಿ 2017–18ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ಜಿಲ್ಲಾ ಪಂಚಾಯಿತಿ ವತಿಯಿಂದ ವಿವಿಧ ಇಲಾಖೆಗಳು ತಮ್ಮ ಇಲಾಖಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿರುವ ವಿವರಗಳನ್ನು ಈ ವಾರ್ಷಿಕ ಆಡಳಿತ ವರದಿಯಲ್ಲಿ ಕ್ರೋಢೀಕರಿಸಲಾಗಿದೆ.

ಜಿಲ್ಲಾ ಪಂಚಾಯಿತಿ ವಿವಿಧ ವಲಯಗಳಲ್ಲಿ ನಿಗಧಿಪಡಿಸಿದ ಯೋಜನೆ ಮತ್ತು ಯೋಜನೇತರ ಅನುದಾನವನ್ನು ಆರ್ಥಿಕ ವರ್ಷದಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸಹಕಾರ ನೀಡಿದಂತಹ ನಮ್ಮ ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳಿಗೆ ಹಾಗೂ ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ಸರ್ವರಿಗೂ ನನ್ನ ವಂದನೆಗಳು,

(ಸಿ.ಪಿ. ಶೈಲಜಾ ಭಾ.ಆ.ಸೇ.)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ರಾಮನಗರ ಜಿಲ್ಲಾ ಪಂಚಾಯತ್.

ರಾಮನಗರ ಜಿಲ್ಲಾ ಪಂಚಾಯತ್
2017–18ನೇ ಸಾಲಿನ ವಾರ್ಷಿಕ ಆಡಳಿತ ವರದಿ
ವಿಷಯ ಸೂಚಿ

ಕ್ರ.ಸಂ.	ಇಲಾಖೆಗಳು	ಪುಟಗಳ ಸಂಖ್ಯೆ
1	ವಾರ್ಷಿಕ ಆಡಳಿತ ವರದಿ	5–8
2	ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ	9–18
3	ಕೃಷಿ ಇಲಾಖೆ	19–21
4.	ತೋಟಗಾರಿಕೆ ಇಲಾಖೆ	22–24
5	ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ	25–26
6.	ಸಮಾಜ ಕಲ್ಯಾಣ ಇಲಾಖೆ	27–28
7	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ	29–30
8	ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ	31
9.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	32–41
10.	ಜಿಲ್ಲಾ ಆಯುಷ್ ಇಲಾಖೆ	42–24
11.	ರೇಷ್ಮೆ ಇಲಾಖೆ	48–53
12.	ಸಾರ್ವಜನಿಕ ಶಿಕ್ಷಣ ಇಲಾಖೆ	54–57
13	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	58–61
14.	ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ	62–63
15.	ಲೋಕ ಶಿಕ್ಷಣ ಇಲಾಖೆ	64–65
16.	ಮೀನುಗಾರಿಕೆ ಇಲಾಖೆ	66–69
17.	ಕೈಮಗ್ಗ ಮತ್ತು ಜವಳಿ ಇಲಾಖೆ	70–71
18.	ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ	72
19.	ಕೃಷಿ ಮಾರುಕಟ್ಟೆ ಇಲಾಖೆ	73–77
20	ಸಹಕಾರ ಇಲಾಖೆ	78–79
21	ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ	80
22	ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ	81–82
23.	ಸಾಮಾಜಿಕ ಅರಣ್ಯ ಇಲಾಖೆ	83–84

* * * * *

**** ವಾರ್ಷಿಕ ಆಡಳಿತ ವರದಿ 2017–18 ****

ಮಾನ್ಯ ವಿಧಾನ ಸಭಾ ಸದಸ್ಯರುಗಳು ರಾಮನಗರ ಜಿಲ್ಲೆ

ಶ್ರೀಯುತರು:	ಕ್ಷೇತ್ರ
ಡಿ.ಕೆ. ಶಿವಕುಮಾರ್, ಮಾನ್ಯ ಇಂಧನ ಹಾಗೂ ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರು	ಕನಕಪುರ ಕ್ಷೇತ್ರ
ಹೆಚ್.ಡಿ. ಕುಮಾರಸ್ವಾಮಿ, ಶಾಸಕರು	ರಾಮನಗರ ಕ್ಷೇತ್ರ
ಎಚ್.ಸಿ. ಬಾಲಕೃಷ್ಣ, ಶಾಸಕರು	ಮಾಗಡಿ ಕ್ಷೇತ್ರ
ಸಿ.ಪಿ.ಯೋಗೇಶ್ವರ್, ಶಾಸಕರು	ಚನ್ನಪಟ್ಟಣ ಕ್ಷೇತ್ರ
ಡಾ॥ ಶ್ರೀನಿವಾಸಮೂರ್ತಿ, ಶಾಸಕರು	ನೆಲಮಂಗಲ ಕ್ಷೇತ್ರ

ಮಾನ್ಯ ಲೋಕಸಭಾ ಸದಸ್ಯರುಗಳು

ಶ್ರೀಯುತರು	ಕ್ಷೇತ್ರ
ಡಿ.ಕೆ. ಸುರೇಶ್	ಬೆಂಗಳೂರು ಗ್ರಾಮಾಂತರ ಕ್ಷೇತ್ರ.
ವೀರಪ್ಪ ಮೊಯಿಲಿ	ಚಿಕ್ಕಬಳ್ಳಾಪುರ ಕ್ಷೇತ್ರ,

ವಿಧಾನ ಪರಿಷತ್ ಸದಸ್ಯರುಗಳು

ಶ್ರೀ ಪುಟ್ಟಣ್ಣ
ಶ್ರೀ ಎಸ್. ರವಿ
ಶ್ರೀ ಸೈಯದ್ ಮುದಿರ್ ಆಗಾ
ಶ್ರೀ ಹೆಚ್.ಎಂ. ರೇವಣ್ಣ
ಶ್ರೀ ರಾಮಚಂದ್ರೇಗೌಡ
ಶ್ರೀ ಸಿ.ಎಂ. ಲಿಂಗಪ್ಪ

ರಾಮನಗರ ಜಿಲ್ಲಾ ಪಂಚಾಯತ್ ಜನವರಿ 2016ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆ ಪ್ರಕಾರ 1995 ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 172ರ ಪ್ರಕಾರ ಆಯ್ಕೆಯಾದ ಜಿಲ್ಲಾ ಪಂಚಾಯತ್ ಸದಸ್ಯರುಗಳ ವಿವರ.

ಕ್ರ ಸಂ	ಜಿಲ್ಲಾ ಪಂಚಾಯತ್ ಸದಸ್ಯರುಗಳ ಹೆಸರು ಶ್ರೀಮತಿ / ಶ್ರೀ	ಕ್ಷೇತ್ರ	ಮೀಸಲಾತಿ
1	ಗಂಗಾಧರ್ ಎಸ್.	ಅಕ್ಕೂರು	ಹಿಂ.'ಅ' ವರ್ಗ
2	ಪ್ರಸನ್ನಕುಮಾರ್ ಎಲ್.	ಕೋಡಂಬಳ್ಳಿ	ಅನುಸೂಚಿತ ಜಾತಿ
3	ಸಿ.ಪಿ. ರಾಜೇಶ್	ಮಳೂರು	ಸಾಮಾನ್ಯ
4	ಜಿ.ಡಿ. ವೀಣಾಕುಮಾರಿ	ಹೊಂಗನೂರು	ಸಾಮಾನ್ಯ (ಮ)
5	ಎನ್. ಸುಗುಣ	ಬೇವೂರು	ಹಿಂ 'ಅ' ವರ್ಗ (ಮ)
6	ಶಂಕರ್	ಸಾತನೂರು	ಸಾಮಾನ್ಯ
7	ಎ. ಮಂಜುನಾಥ್	ಕುದೂರು	ಸಾಮಾನ್ಯ
8	ಚಂದ್ರಮ್ಮ	ಮಾಡಬಾಳ್	ಅನುಸೂಚಿತ ಜಾತಿ (ಮ)
9	ನಾಗರತ್ನ	ತಗ್ಗೀಕುಪ್ಪೆ	ಸಾಮಾನ್ಯ (ಮ)
10	ಬಿ.ಎನ್. ದಿವ್ಯ	ತಿಪ್ಪಸಂದ್ರ	ಹಿಂ 'ಬ' ವರ್ಗ (ಮ)
11	ಪ್ರಭಾವತಿ	ಕೈಲಾಂಚ	ಸಾಮಾನ್ಯ (ಮ)
12	ಎಸ್. ನಾಗರತ್ನ	ಕಸಬಾ	ಅನುಸೂಚಿತ ಜಾತಿ (ಮ)
13	ಶಿವಕುಮಾರ್	ದೊಡ್ಡಾಲಹಳ್ಳಿ	ಸಾಮಾನ್ಯ
14	ಎಂ.ಎನ್. ನಾಗರಾಜು	ದೊಡ್ಡಮರಳವಾಡಿ	ಹಿಂ 'ಅ' ವರ್ಗ
15	ಹೆಚ್.ಕೆ. ನಾಗರಾಜು	ಹಾರೋಹಳ್ಳಿ	ಅನುಸೂಚಿತ ಜಾತಿ
16	ಹೆಚ್. ಬಸಪ್ಪ	ಹೊಸದುರ್ಗ	ಸಾಮಾನ್ಯ
17	ಡಿ.ಹೆಚ್. ಜಯರತ್ನ	ಕೋಡಿಹಳ್ಳಿ	ಸಾಮಾನ್ಯ (ಮ)
18	ಭಾಗ್ಯ	ಶಿವನಹಳ್ಳಿ	ಅನುಸೂಚಿತ ಪಂ. (ಮ)
19	ಸಿ.ವಿ. ಉಷಾರವಿ	ತುಂಗಣಿ	ಸಾಮಾನ್ಯ (ಮ)
20	ನಾಜಿಯಾ ಖಾನಂ	ಸೋಲೂರು	ಹಿಂ 'ಅ' ವರ್ಗ (ಮ)
21	ಹೆಚ್.ಎನ್. ಅಶೋಕ	ಕೂಟಗಲ್	ಸಾಮಾನ್ಯ
22	ಎಂ.ಎನ್. ಮಂಜುನಾಥ್	ಬೈರಮಂಗಲ	ಹಿಂ 'ಅ' ವರ್ಗ

ಅಧ್ಯಕ್ಷರ ಹೆಸರು	ಕಾರ್ಯನಿರ್ವಹಿಸಿದ ಅವಧಿ
1 ಶ್ರೀ ಸಿ.ಪಿ. ರಾಜೇಶ್	01.04.2017 ರಿಂದ 31.03.2018

ಸ್ಥಾಯಿ ಸಮಿತಿಯ ವಿವರಗಳು

ದಿನಾಂಕ:02.07.2016 ರಂದು ರಾಮನಗರ ಜಿಲ್ಲಾ ಪಂಚಾಯಿತಿಯ ಸ್ಥಾಯಿ ಸಮಿತಿ ಸದಸ್ಯರುಗಳ ಚುನಾವಣೆಯನ್ನು ರಾಮನಗರ ಜಿಲ್ಲಾ ಪಂಚಾಯಿತಿಯ (ಸ್ಥಾಯಿ ಸಮಿತಿಗಳಿಗೆ ಸದಸ್ಯರ ಚುನಾವಣೆ) ನಿಯಮಗಳು 2009ರಂತೆ ದಿನಾಂಕ:02.07.2016 ರಂದು ರಾಮನಗರ ಜಿಲ್ಲಾ ಪಂಚಾಯತ್‌ನಲ್ಲಿ ಸ್ಥಾಯಿ ಸಮಿತಿ ಚುನಾವಣಾ ನಡಾವಳಿಯಂತೆ 05 ಸ್ಥಾಯಿ ಸಮಿತಿಗಳನ್ನು ರಚಿಸಿ ದಿನಾಂಕ:02.07.2016 ರಿಂದ ಜಾರಿಯಲ್ಲಿರುತ್ತದೆ.

ಶ್ರೀಮತಿ / ಶ್ರೀಯುತ

ಕ್ರ. ಸಂ.		**I - ಸಾಮಾನ್ಯ ಸ್ಥಾಯಿ ಸಮಿತಿ**
1	ಬಿ.ಎನ್. ದಿವ್ಯಾ	ಅಧ್ಯಕ್ಷರು
2	ಡಿ. ಹೆಚ್. ಜಯರತ್ನ	ಸದಸ್ಯರು
3	ಸಿ.ವಿ. ಉಷಾರವಿ	ಸದಸ್ಯರು
4	ಎಂ. ಎನ್. ಮಂಜುನಾಥ್	ಸದಸ್ಯರು
5	ಎಂ.ಎನ್. ನಾಗರಾಜು	ಸದಸ್ಯರು
6	ಶಿವಕುಮಾರ್	ಸದಸ್ಯರು
7	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ	ಪದನಿಮಿತ್ತ ಕಾರ್ಯದರ್ಶಿ

ಕ್ರ. ಸಂ.		**II - ಹಣಕಾಸು ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ**
1	ಸಿ.ಪಿ. ರಾಜೇಶ್	ಅಧ್ಯಕ್ಷರು
2	ಹೆಚ್. ಎನ್. ಅಶೋಕ್	ಸದಸ್ಯರು
3	ಶಿವಕುಮಾರ್	ಸದಸ್ಯರು
4	ಎಂ.ಎನ್. ನಾಗರಾಜು	ಸದಸ್ಯರು
5	ಎ. ಮಂಜುನಾಥ್	ಸದಸ್ಯರು
6	ಭಾಗ್ಯ	ಸದಸ್ಯರು
7	ಮುಖ್ಯ ಲೆಕ್ಕಾಧಿಕಾರಿ	ಪದನಿಮಿತ್ತ ಕಾರ್ಯದರ್ಶಿ

ಕ್ರ.ಸಂ.		**III - ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ**
1	ಹೆಚ್.ಕೆ. ನಾಗರಾಜು	ಅಧ್ಯಕ್ಷರು
2	ಸಿ.ವಿ. ಉಷಾರವಿ	ಸದಸ್ಯರು
3	ನಾಗರತ್ನ ಎಸ್.	ಸದಸ್ಯರು
4	ಪ್ರಸನ್ನ ಕುಮಾರ್ ಎಲ್.	ಸದಸ್ಯರು
5	ನಾಗರತ್ನ	ಸದಸ್ಯರು
6	ಭಾಗ್ಯ	ಸದಸ್ಯರು
7	ಯೋಜನಾ ನಿರ್ದೇಶಕರು	ಪದನಿಮಿತ್ತ ಕಾರ್ಯದರ್ಶಿ

ಕ್ರ. ಸಂ.		**IV -** ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ
1	ಗಂಗಾಧರ್ ಎಸ್.	ಅಧ್ಯಕ್ಷರು
2	ಪ್ರಸನ್ನಕುಮಾರ್	ಸದಸ್ಯರು
3	ಡಿ.ಹೆಚ್. ಜಯರತ್ನ	ಸದಸ್ಯರು
4	ಜಿ.ಡಿ. ವೀಣಾಕುಮಾರಿ	ಸದಸ್ಯರು
5	ಸುಗುಣ ಎಸ್.	ಸದಸ್ಯರು
6	ಪ್ರಭಾವತಿ ಶಿವಲಿಂಗಯ್ಯ	ಸದಸ್ಯರು
7	ಉಪಕಾರ್ಯದರ್ಶಿ	ಪದನಿಮಿತ್ತ ಕಾರ್ಯದರ್ಶಿ

ಕ್ರ. ಸಂ.		**V- ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ**
1	ಹೆಚ್. ಬಸಪ್ಪ	ಅಧ್ಯಕ್ಷರು
2	ಶಂಕರ್	ಸದಸ್ಯರು
3	ಎನ್. ಸುಗುಣ	ಸದಸ್ಯರು
4	ಚಂದ್ರಮ್ಮ ನಂಜಯ್ಯ	ಸದಸ್ಯರು
5	ಜಿ. ಡಿ. ವೀಣಾಕುಮಾರಿ	ಸದಸ್ಯರು
6	ನಾಜಿಯಾ ಖಾನಂ	ಸದಸ್ಯರು
7	ಉಪಕಾರ್ಯದರ್ಶಿ	ಪದನಿಮಿತ್ತ ಕಾರ್ಯದರ್ಶಿ

ಅನುಬಂಧ –I

ರಾಮನಗರ ಜಿಲ್ಲಾ ಪಂಚಾಯತ್ 2017–18ನೇ ಸಾಲಿನ ವಾರ್ಷಿಕ ಆಡಳಿತ ವರದಿ

<table>
<tr><td>1 ಜಿಲ್ಲಾ ಪಂಚಾಯಿತಿಯ ರಚನೆ ಕಾಲಂ 158</td><td>ರಾಮನಗರ ಜಿಲ್ಲಾ ಪಂಚಾಯತ್ ವ್ಯಾಪ್ತಿಯು (ನಗರ ಪ್ರದೇಶಕ್ಕೆ ಸೇರಿದ ನಗರ ಪಾಲಿಕೆ ಪುರಸಭೆ ಇತ್ಯಾದಿಗಳ ವ್ಯಾಪ್ತಿಯನ್ನು ಹೊರತುಪಡಿಸಿ) ರಾಮನಗರ ಗ್ರಾಮಾಂತರ ಪ್ರದೇಶಕ್ಕೆ ಸೇರಿರುತ್ತದೆ. ಈ ಜಿಲ್ಲೆಯು ನಾಲ್ಕು ತಾಲ್ಲೂಕು ಪಂಚಾಯಿತಿಗಳನ್ನು 127 ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಿರುತ್ತದೆ.</td></tr>
<tr><td>ಅ. ವಿಸ್ತೀರ್ಣ</td><td>3555 ಚ.ಕಿ.ಮೀ.</td></tr>
<tr><td>ಆ. ಜನಸಂಖ್ಯೆ 1) ಗ್ರಾಮೀಣ
2) ನಗರ
ಒಟ್ಟು</td><td>814877
267759
1082636</td></tr>
<tr><td>1. ಒಟ್ಟು ಸ್ಥಾನಗಳು</td><td>39</td></tr>
<tr><td>2. ಜಿಲ್ಲಾ ಪಂಚಾಯತ್‌ಚುನಾಯಿತ ಸದಸ್ಯರ ಸಂಖ್ಯೆ</td><td>22</td></tr>
<tr><td>3. ಲೋಕಸಭಾ ಸದಸ್ಯರ ಸಂಖ್ಯೆ</td><td>02</td></tr>
<tr><td>4. ರಾಜ್ಯ ಸಭಾ ಸದಸ್ಯರ ಸಂಖ್ಯೆ</td><td>00</td></tr>
<tr><td>5. ವಿಧಾನ ಸಭಾ ಸದಸ್ಯರ ಸಂಖ್ಯೆ</td><td>05</td></tr>
<tr><td>6. ವಿಧಾನ ಪರಿಷತ್ತಿನ ಸದಸ್ಯರಸಂಖ್ಯೆ</td><td>06</td></tr>
<tr><td>7. ಸಹ ಸದಸ್ಯರು</td><td>04 (ತಾಲ್ಲೂಕು ಪಂಚಾಯತ್ ಅಧ್ಯಕ್ಷರು)</td></tr>
<tr><td>8. ಸದಸ್ಯರ ಪ್ರವಾಸ ಭತ್ಯೆ, ದಿನಭತ್ಯೆ,</td><td>ನಿಯಮಾನುಸಾರ ಪಾವತಿಸಲಾಗಿದೆ.</td></tr>
<tr><td>9. ಗೌರವಧನ</td><td>ರೂ.4,80,000/–</td></tr>
<tr><td>2 ಅಧ್ಯಕ್ಷರ ಮತ್ತು ಉಪಾಧ್ಯಕ್ಷರುಗಳಿಗೆ ನೀಡಲಾಗಿರುವ ವೇತನ ಮತ್ತು ಇತರೆ ಭತ್ಯೆಗಳ ವಿವರ</td><td>2017–18ನೇ ಸಾಲು (ರೂ. ಗಳಲ್ಲಿ)
<table>
<tr><th>ಕ್ರ.ಸಂ</th><th>ಅಧ್ಯಕ್ಷರ ಹೆಸರು</th><th>ಗೌರವ ಧನ</th><th>ಇತರೆ ಭತ್ಯೆ</th><th>ಪ್ರವಾಸ ಭತ್ಯೆ</th></tr>
<tr><td>1</td><td>ಶ್ರೀ ಸಿ.ಪಿ. ರಾಜೇಶ್</td><td>350000</td><td>348950</td><td>–</td></tr>
<tr><th>ಕ್ರ.ಸಂ</th><th>ಉಪಾಧ್ಯಕ್ಷರ ಹೆಸರು</th><th>ಗೌರವ ಧನ</th><th>ಇತರೆ ಭತ್ಯೆ</th><th>ಪ್ರವಾಸ ಭತ್ಯೆ</th></tr>
<tr><td>1</td><td>ಶ್ರೀಮತಿ ಬಿ.ಎಸ್.ದಿವ್ಯ ಗಂಗಾಧರ್</td><td>46500</td><td>57500</td><td>–</td></tr>
</table></td></tr>
<tr><td>ಉಪಾಧ್ಯಕ್ಷರಿಗೆ ನೀಡಲಾಗಿರುವ ಅಧಿಕಾರ</td><td>ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ 1993 ರಂತೆ</td></tr>
<tr><td>ಅವಿಶ್ವಾಸ ನಿರ್ಣಯ ಏನಾದರು ಇದ್ದಲ್ಲಿ</td><td>ಇಲ್ಲ</td></tr>
<tr><td>ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಸ್ಪರ್ಧೆ ಇತ್ತೇ ಅಥವಾ ತಕರಾರು ಇದ್ದಿತೇ</td><td>ಸ್ಪರ್ಧೆ ಇತ್ತು
ತಕರಾರು ಇಲ್ಲ</td></tr>
<tr><td>3. ಅಧಿಕಾರಿಗಳ ಹೆಸರು ಮತ್ತು ಕಾರ್ಯನಿರ್ವಹಿಸಿದ ದಿನಾಂಕ:</td><td></td></tr>
</table>

ಅ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು	1. ಸಿ.ಪಿ.ಶೈಲಜ ಭಾ.ಆ.ಸೇ. ದಿ:01.04.2017 ರಿಂದ 09.08.2017 ರವರೆಗೆ 2. ಆರ್. ಲತಾ ಕ.ಆ.ಸೇ. ದಿ:09.08.2017 ರಿಂದ 27.02.2018 ರವರೆಗೆ 3. ಆರ್. ಲತಾ ಭಾ.ಆ.ಸೇ. ದಿ:27.02.2018 ರಿಂದ 14.03.2018 ರವರೆಗೆ 4. ಕ್ಯಾಪ್ಟನ್ ಡಾ.ಕೆ.ರಾಜೇಂದ್ರ ಭಾ.ಆ.ಸೇ. ದಿ:14.03.2019 ರಿಂದ 31.03.2018 ರವರೆಗೆ
ಆ. ಉಪ ಕಾರ್ಯದರ್ಶಿಗಳು	1. ಆರ್. ಲತಾ ಕ.ಆ.ಸೇ. ದಿ:01.04.2017 ರಿಂದ 08.08.2017 ರವರೆಗೆ 2. ಶ್ರೀನಿವಾಸ ಮೂರ್ತಿ (ಪ್ರಭಾರ) ದಿ:09.08.2017 ರಿಂದ 20.09.2017 ರವರೆಗೆ 3. ಹೆಚ್.ಸಿ. ಪುಟ್ಟಸ್ವಾಮಿ ಕೆ.ಜಿ.ಎಸ್. ದಿ:21.09.2017 ರಿಂದ 31.03.2018 ರವರೆಗೆ
ಇ. ಮುಖ್ಯ ಯೋಜನಾಧಿಕಾರಿಗಳು	1. ಶ್ರೀ ಎನ್. ಮಾಧುರಾಮ್ ಕೆ.ಎಸ್.ಎಸ್. ದಿ:01.04.2017 ರಿಂದ 31.03.2018
ಈ. ಮುಖ್ಯ ಲೆಕ್ಕಾಧಿಕಾರಿಗಳು	1. ಶ್ರೀ ಶ್ರೀನಿವಾಸಮೂರ್ತಿ ಕೆ.ಎಸ್.ಎ.ಎಸ್. ದಿ:01.04.2017 ರಿಂದ 31.03.2018
ಯೋಜನಾ ನಿರ್ದೇಶಕರು (ಡಿ.ಆರ್.ಡಿ.ಎ)	1. ಶ್ರೀ ವಿ.ನಾಗರಾಜ ದಿ:01.04.2017 ರಿಂದ 31.03.2018 ರವರೆಗೆ
ಊ. ಸಹಾಯಕ ಕಾರ್ಯದರ್ಶಿ	2. ಶ್ರೀ ಎನ್.ಜಿ. ನಾಗರಾಜ್ (ಪ್ರಭಾರ) ದಿ:01.04.2017 ರಿಂದ 31.03.2018 ರವರೆಗೆ
4 ಚುನಾವಣೆಗಳು	
ಅ. ಚುನಾವಣೆ ದಿನಾಂಕ:	ಇಲ್ಲ
ಆ. ಉಪ ಚುನಾವಣೆ ಏನಾದರೂ ಇದ್ದರೆ ಕಾರಣ ಮತ್ತು ಅದರ ಫಲಿತಾಂಶ	ಇಲ್ಲ
ಇ. ಜಿಲ್ಲಾ ಪಂಚಾಯತ್ ಅವಧಿಯನ್ನು ಮುಂದುವರಿಸಲು ಏನಾದರೂ ಕಾರಣ ಇರುವುದೇ?	ಇಲ್ಲ
ಈ. ಚುನಾವಣೆ ವೆಚ್ಚ	ಇಲ್ಲ
ಉ. ಚುನಾವಣೆ ತಕರಾರು ಏನಾದರೂ ಇದ್ದರೆ	
5 ಜಿಲ್ಲಾ ಪಂಚಾಯತ್‌ನ ಸಭೆಗಳು ಮತ್ತು ಹಾಜರಾತಿ ಸೆಕ್ಷನ್ 180	
ಅ. ಸಾಮಾನ್ಯ ಸಭೆಗಳ ಸಂಖ್ಯೆ	04
ಆ. ವಿಶೇಷ ಸಭೆಗಳ ಸಂಖ್ಯೆ	00

ಇ. ಮುಂದೂಡಲಾದ ಸಭೆಗಳ ಸಂಖ್ಯೆ	01
ಈ. ಸಭೆಗಳನ್ನು ನಡೆಸುವುದರಲ್ಲಿ ಕ್ರಮಬದ್ದತೆ	ಕ್ರಮವಾಗಿ ನಡೆಸಲಾಗಿದೆ
ಉ. ಸಭೆಗಳಲ್ಲಿ ಸದಸ್ಯರ ಹಾಜರಾತಿ	ಶೇಕಡ 75
ಊ. ಕೋರಂ ಇಲ್ಲದೆ ಮುಂದೂಡಲಾದ ಸಭೆಗಳ ಸಂಖ್ಯೆ	ಇಲ್ಲ
ಋ. ಸಭಾ ನಡವಳಿ ನಿಯಮಗಳ ಪಾಲನೆ	ಪಾಲನೆ ಮಾಡಲಾಗಿದೆ.
ಋ. ಠರಾವುಗಳು	
1) ಮಂಡಿಸಿದವು	39
2) ಅಂಗೀಕೃತವಾದವು	39
3) ಚರ್ಚಿಸಲ್ಪಟ್ಟವು	39
4) ವಾಪಸ್ಸು ತೆಗೆದುಕೊಂಡವುಗಳು	ಇಲ್ಲ
5) ಬಿಟ್ಟು ಹೋದವುಗಳು/ ಅಂಗೀಕಾರವಾಗದಿರುವುವು.	ಇಲ್ಲ
6 ಸ್ಥಾಯಿ ಸಮಿತಿಗಳ ಮತ್ತು ಇತರೆ ಸಮಿತಿಗಳು	
ಅ. 1) ರಚಿಸಿದ ಸ್ಥಾಯಿ ಸಮಿತಿಗಳ ಸಂಖ್ಯೆ	05
2) ಇತರೆ ಸಮಿತಿಗಳ ಸಂಖ್ಯೆ	ಇಲ್ಲಾ
3) ಸ್ಥಾಯಿ ಸಮಿತಿ ಸದಸ್ಯರ ಸಂಖ್ಯೆ	06 (ಪ್ರತಿ ಸ್ಥಾಯಿ ಸಮಿತಿಗೆ ಅಧ್ಯಕ್ಷರು ಸೇರಿ)
ಆ. ಸಮಿತಿಗಳ ಚುನಾವಣಾ ದಿನಾಂಕ:	02.07.2016.
ಇ. ಪ್ರತಿಯೊಂದು ಸಮಿತಿಯ ಕಾರ್ಯನಿರ್ವಹಣೆ ಬಗ್ಗೆ ಸಾಮಾನ್ಯ ವಿವರಣೆ	ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕಾರ 186 ನೇ ತಿದ್ದುಪಡಿ ಪ್ರಕರಣ 2ರ ಪ್ರಕಾರ ಪ್ರತಿಯೊಂದು ಸ್ಥಾಯಿ ಸಮಿತಿಯು 06 ಜನ ಸದಸ್ಯರನ್ನು ಒಳಗೊಂಡಿದೆ. ಅಧಿನಿಯಮದಂತೆ ಕಾರ್ಯನಿರ್ವಹಿಸಿದೆ.
ಈ. ಇತರೆ ಸಮಿತಿಗಳು ಏನಾದರೂ ಇದ್ದಲ್ಲಿ ಮತ್ತು ಅವುಗಳ ಕಾರ್ಯನಿರ್ವಹಣೆ	ಇಲ್ಲ

ಸರ್ಕಾರದ ಆದೇಶದ ಸಂಖ್ಯೆ:ಗ್ರಾಅಪ/179/ಕೆ.ಎಸ್.ಎಸ್.2007(1), ದಿ:22/08/2007ರ ಆದೇಶದಂತೆ

ಜಿಲ್ಲಾ ಪಂಚಾಯತ್ ಕಾರ್ಯಾಲಯಕ್ಕೆ ಮಂಜೂರಾದ ಹುದ್ದೆಗಳು	ಶ್ರೇಣಿ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
ಮುಖ್ಯ ಕಾರ್ಯನಿರ್ವಾಕ ಅಧಿಕಾರಿಗಳು	ಎ	1	1	0
ಉಪ ಕಾರ್ಯದರ್ಶಿ	ಎ	1	1	0
ಯೋಜನಾ ನಿರ್ದೇಶಕರು	ಎ	1	1	0
ಮುಖ್ಯ ಲೆಕ್ಕಾಧಿಕಾರಿ	ಎ	1	1	0
ಮುಖ್ಯ ಯೋಜನಾಧಿಕಾರಿ	ಎ	1	1	0
ಕಾರ್ಯನಿರ್ವಾಹ ಅಭಿಯಂತರರು	ಎ	1	0	1
ಸಹಾಯಕ ಕಾರ್ಯದರ್ಶಿ	ಎ	1	0	1
ಸಹಾಯಕ ಯೋಜನಾಧಿಕಾರಿ	ಎ	1	1	0
ಸಹಾಯಕ ಯೋಜನಾ ಅಧಿಕಾರಿ (ಎಸ್‌ಜಿಎಸ್‌ವೈ)	ಬಿ	1	1	0
ಲೆಕ್ಕಾಧಿಕಾರಿ	ಬಿ	2	0	2

ಯೋಜನಾ ಅಂದಾಜು ಮತ್ತು ಮೌಲಮಾಪನ ಅಧಿಕಾರಿ	ಎ	1	1	0
ಮಾನವ ಸಂಪನ್ಮೂಲ ಮತ್ತು ಯೋಜನಾ ಮಾಪನ ಅಧಿಕಾರಿ	ಬಿ	1	0	1
ಸಾಂಖಿಕ ಅಧಿಕಾರಿ	ಸಿ	1	0	1
ತಾಂತ್ರಿಕ ಸಹಾಯಕ	ಸಿ	1	1	0
ತಾಲ್ಲೂಕು ಯೋಜನಾ ಅಧಿಕಾರಿ	ಬಿ	4	1	3
ಅಧೀಕ್ಷಕರು	ಸಿ	3	2	1
ಲೆಕ್ಕಾಧಿಕ್ಷಕರು	ಬಿ	4	2	2
ಜೂನಿಯರ್ ಇಂಜಿನಿಯರ್	ಸಿ	3	0	3
ಸಹಾಯಕ ಸಾಂಖಿಕ ಅಧಿಕಾರಿ	ಸಿ	2	1	1
ಪ್ರಥಮ ದರ್ಜೆ ಸಹಾಯಕ	ಸಿ	18	3	15
ಸ್ಟೆನೋಗ್ರಾಫರ್	ಸಿ	7	0	7
ದ್ವಿತೀಯ ದರ್ಜೆ ಸಹಾಯಕ	ಸಿ	15	7	8
ಬೆರಳಚ್ಚುಗಾರರು	ಸಿ	8	1	7
ರೇಕಾರ್ಡ್ ಕೀಪರ್	ಡಿ	1	0	1
ವಾಹನ ಚಾಲಕರು	ಸಿ	8	1	7
ಜವಾನ	ಡಿ	11	8	3
ಕಾವಲುಗಾರ / ಬೈಡರ್	ಡಿ	1	0	1
ಒಟ್ಟು		**100**	**35**	**65**

ಅ. ಖಾಲಿ ಇರುವ ಹುದ್ದೆಗಳ ಸಂಖ್ಯೆ ಮತ್ತು ನೇಮಕಾತಿ ಮಾಡದಿರುವ ಬಗ್ಗೆ ಕಾರಣ

ಈ ಕಛೇರಿಯಲ್ಲಿ 64 ಹುದ್ದೆಗಳು ಖಾಲಿ ಇದ್ದು, ಸರ್ಕಾರ ಭರ್ತಿ ಮಾಡಬೇಕಾಗಿರುತ್ತದೆ.

ಇ. ಪ್ರತಿಯೊಂದು ವಿಭಾಗದಲ್ಲಿ ತಗಲುತ್ತಿರುವ ಸಿಬ್ಬಂದಿ ವೆಚ್ಚ

2017–18 **(ರೂ. ಲಕ್ಷಗಳಲ್ಲಿ)**

	ನಿಗದಿ	**ಬಿಡುಗಡೆ**	**ಖರ್ಚು**
1. ಜಿಲ್ಲಾ ಪಂಚಾಯತ್ (ಆಡಳಿತ ಶಾಖೆ)	166.81	166.81	71.26
2. ಜಿಲ್ಲಾ ಪಂಚಾಯತ್ (ಡಿ.ಆರ್.ಡಿ.ಎ ಶಾಖೆ)	162.00	179.42	94.46
3. ಮುಖ್ಯ ಯೋಜನಾಧಿಕಾರಿಗಳ (ಶಾಖೆ)	42.21	42.21	41.98

4. ಅಕ್ಷರ ದಾಸೋಹ ವಿಭಾಗ

ಈ. ಅಧಿಕಾರಿಗಳು ಮತ್ತು ನೌಕರರಿಗೆ ತರಬೇತಿ — ನೀಡಲಾಗಿದೆ

ಉ. ಸಮ್ಮೇಳನಗಳನ್ನು ನಡೆಸಿದ್ದು ಮತ್ತು ಹಣನೀಡಿದ್ದು — ಯಾವುದು ಇರುವುದಿಲ್ಲ

ಊ. ಅಧಿಕಾರಿ/ನೌಕರರಿಗೆ ಅಮಾನತ್ತು ಅಥವಾ ಇಲಾಖಾ ವಿಚಾರಣೆ — 04

8 ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ, ಸಮ್ಮೇಳನಗಳು ಮತ್ತು ವಸ್ತು ಪ್ರದರ್ಶನಗಳು ಮತ್ತು ಚರ್ಚಾಗೋಷ್ಠಿಗೆ ವಂತಿಕೆ ನೀಡಿರುವ ವಿವರ:

ಅ. ಅಖಿಲ ಭಾರತ ಮಟ್ಟದ ಸಂಘ ಸಂಸ್ಥೆಗಳು

ಆ. ಅಂತರರಾಜ್ಯ ಮಟ್ಟದ ಸಂಸ್ಥೆಗಳು — ಯಾವುದೂ ಇರುವುದಿಲ್ಲ

ಇ. ಆರ್ಥಿಕ ಸಂಘ ಸಂಸ್ಥೆಗಳು

ಈ. ಇತರೆ ಸಂಘ ಸಂಸ್ಥೆಗಳು

9 ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಲ್ಯಾಣಕ್ಕಾಗಿ ನಿಗಧಿಪಡಿಸಿದ ಹಣ

2017–18ನೇ ಸಾಲಿಗೆ (ರೂ.ಲಕ್ಷಗಳಲ್ಲಿ)

	ನಿಗಧಿ	**ಖರ್ಚು**
1. ಯೋಜನೆ:–		
ಅ) ಪರಿಶಿಷ್ಟ ಜಾತಿ	2646.95	2028.51
ಆ) ವರ್ಗ ಕಲ್ಯಾಣ	277.54	217.37
ಆ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ	2182.96	2102.02
ಇ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ	110.70	102.51
ಒಟ್ಟು	**5218.15**	**4450.41**

10	ಜಿಲ್ಲಾ ಪಂಚಾಯತ್ ಎತ್ತಿದ ಸಾಲಗಳು	ಇಲ್ಲ
11	ಋಣ ಪರಿಹಾರ ನಿಧಿ (ಸಿಂಕಿಂಗ್) ಫಂಡ್	ಇಲ್ಲ
12	ಬಜೆಟ್ ವ್ಯಾಪ್ತಿಯಲ್ಲಿ ಬರದ ಜಿಲ್ಲಾ ಪಂಚಾಯತ್ ನಿಂದ ಖರ್ಚಾಗಿರುವ ಹಣ ಮತ್ತು ಅದಕ್ಕೆ ಕಾರಣಗಳು	ಇಲ್ಲ
13	ಬಜೆಟ್ ಅನ್ನು ಸಕಾಲದಲ್ಲಿ ಮಂಡಿಸಿದ ವಿವರ: ಅ. ಜಿಲ್ಲಾ ಪಂಚಾಯತ್ ಬಜೆಟ್‌ನ್ನು ಅನುಮೋದಿಸಿದ ದಿನಾಂಕ: ಆ. ಸದರಿ ಬಜೆಟ್ ಅನ್ನು ಸರ್ಕಾರಕ್ಕೆ ಕಳುಹಿಸಿದ ದಿನಾಂಕ: ಇ. ಬಜೆಟ್‌ನ ಗಾತ್ರ (ರೂ.ಕೋಟಿಗಳಲ್ಲಿ) ರಾಮನಗರ ಜಿಲ್ಲೆಗೆ	 23.08.2017 26.09.2017 **ಯೋಜನೆ/ಯೋಜನೇತರ** **489.43 ಕೋಟಿ**
14	ಲೆಕ್ಕ ಪತ್ರಗಳನ್ನು ಸಕಾಲದಲ್ಲಿ ರವಾನಿಸಲಾಯಿತೆ. ಅ. ಸಂಗ್ರಹಿಸಲಾದ ಹಣವನ್ನು ಮನ್ನಾ ಮಾಡಿದ ಬಗ್ಗೆ 1. ಜಿಲ್ಲಾ ಪಂಚಾಯತ್ ವತಿಯಿಂದ 2. ಸರ್ಕಾರದಿಂದ ಮಂಜೂರಾತಿ ಪಡೆದ ದಿನಾಂಕ:	ಹೌದು – ಇಲ್ಲ ಇಲ್ಲ
15	ಅ. ಲೆಕ್ಕ ಪತ್ರಗಳನ್ನು ಪರಿಶೋಧಿಸಿದ ದಿನಾಂಕ: ಆ. ಲೆಕ್ಕ ಪರಿಶೋಧಕರಿಂದ ನಿರಾಕರಿಸಿದ ಐಟಂಗಳ ಸಂಖ್ಯೆ ಮತ್ತು ಈ ಬಗ್ಗೆ ಜಿಲ್ಲಾ ಪಂಚಾಯತ್‌ನ ಆದೇಶ	2017–18ರ ಲೆಕ್ಕ ತಪಾಸಣೆ ಮಹಾಲೇಖಪಾಲರಿಂದ ಆಗಿರುತ್ತದೆ. ಲೆಕ್ಕ ಪರಿಶೋಧನೆ ಆಗಿರುತ್ತದೆ.
16	ಲೆಕ್ಕ ಪರಿಶೋಧಕರು ನಿರಾಕರಿಸಿದ ಹಣವನ್ನು ಸಂಗ್ರಹಿಸಿದ ಒಟ್ಟು ಮೊತ್ತ ಅದರ ಮೇಲಿನ ಬಡ್ಡಿ ಸಂಗ್ರಹಣೆ	ಇಲ್ಲ
17	ಗ್ರಾಮ ಪಂಚಾಯತಿ ಆದೇಶಗಳನ್ನು ಜಿಲ್ಲಾ ಪಂಚಾಯತ್‌ರವರು ಅಮಾನತ್ತುಗೊಳಿಸಿದ ಪ್ರಕರಣಗಳ ಸಂಖ್ಯೆ(ಗ್ರಾಮ ಪಂಚಾಯತಿವಾರು)	ಇಲ್ಲ
18	ಜಿಲ್ಲಾ ಪಂಚಾಯತ್‌ರವರು ವಿಸರ್ಜಿಸಿದ ಗ್ರಾಮ ಪಂಚಾಯಿತಿಗಳ ಸಂಖ್ಯೆ	ಇಲ್ಲ
19	ಗ್ರಾಮ ಪಂಚಾಯತಿ ಆದೇಶಗಳ ವಿರುದ್ಧವಾಗಿ ಜಿಲ್ಲಾ ಪಂಚಾಯತ್‌ರವರು ಸಲ್ಲಿಸಲಾದ ಅಪೀಲುಗಳ ಸಂಖ್ಯೆ	ಇಲ್ಲ
20	ಜಿಲ್ಲಾ ಪಂಚಾಯತ್‌ರವರು ಸ್ಥಾಯಿ ಸಮಿತಿಗಳ ಯಾವುದೇ ತೀರ್ಮಾನಗಳನ್ನು ಪುನರ್ ಪರಿಶೀಲಿಸಿದ ಆದೇಶಗಳ ಸಂಖ್ಯೆ	ಇಲ್ಲ
21	ಜಿಲ್ಲಾ ಪಂಚಾಯತ್‌ರವರು ಬದಲಾಯಿಸಿದ ಸಮಿತಿಗಳ ತೀರ್ಮಾನಗಳ ಸಂಖ್ಯೆ	ಇಲ್ಲ
22	ರಚಿಸಿದ ನಿಯಮಗಳ ಸಂಖ್ಯೆ ಇದಕ್ಕೆ ಸರ್ಕಾರದ ಪೂರ್ವ ಮಂಜೂರಾತಿ ತೆಗೆದುಕೊಳ್ಳಲಾಗಿತ್ತೇ?	ಇಲ್ಲ
23	ಗ್ರಾಮ ಪಂಚಾಯಿತಿಯವರು ನಿಯಮಾವಳಿಗಳನ್ನು ರಚಿಸಿಕೊಳ್ಳಲು ಜಿಲ್ಲಾ ಪಂಚಾಯತ್‌ರವರು ಪೂರ್ವಾನುಮತಿಯತ್ತ ಪ್ರಕರಣಗಳ ಸಂಖ್ಯೆ	ಇಲ್ಲ
24	ಜಿಲ್ಲಾ ಪಂಚಾಯತ್‌ನ ನಿಧಿಗೆ ಜಮಾ ಮಾಡಲ್ಪಟ್ಟ ಒಟ್ಟು ದಂಡ, ಬಾಡಿಗೆ ಮತ್ತು ಫೀ ವಸೂಲಾತಿ	ಇಲ್ಲ

ರಾಮನಗರ ಜಿಲ್ಲಾ ಪಂಚಾಯಿತಿಗೆ 2017–18ನೇ ಸಾಲಿನಲ್ಲಿ ಯೋಜನೆಯಡಿ ರೂ.49123.52 ಲಕ್ಷಗಳು ಬಿಡುಗಡೆಯಾಗಿದ್ದು, ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಒಟ್ಟು ರೂ.44514.79 ಲಕ್ಷಗಳನ್ನು ವೆಚ್ಚ ಮಾಡುವುದರ ಮೂಲಕ ಶೇ.90.62 ಪ್ರಗತಿ ಸಾಧಿಸಲಾಗಿದೆ.

1. ಮಹಾತ್ಮ ಗಾಂಧಿ ನರೇಗಾ ಯೋಜನೆಯ ಪ್ರಗತಿ ವರದಿ :–

ರಾಮನಗರ ಜಿಲ್ಲೆಯಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು 2008–09 ನೇ ಸಾಲಿನಲ್ಲಿ ಪ್ರಾರಂಭಗೊಂಡು ರಾಮನಗರ ಜಿಲ್ಲೆಯ 04 ತಾಲ್ಲೂಕುಗಳಾದ ಚನ್ನಪಟ್ಟಣ, ಕನಕಪುರ, ರಾಮನಗರ ಮತ್ತು ಮಾಗಡಿ ತಾಲ್ಲೂಕುಗಳ ವ್ಯಾಪ್ತಿಯ 127 ಗ್ರಾಮ ಪಂಚಾಯಿತಿಗಳಲ್ಲಿ ಜಾರಿಯಲ್ಲಿರುತ್ತದೆ.

ಮಹತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಉದ್ದೇಶಗಳು:–

1. ಬೇಡಿಕೆಯ ಪ್ರಕಾರ, ಒಂದು ಆರ್ಥಿಕ ವರ್ಷದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿ ಕುಟುಂಬಕ್ಕೆ 100 ದಿನಗಳಿಗಿಂತ ಕಡಿಮೆ ಇಲ್ಲದಂತೆ ಅಕುಶಲ ದೈಹಿಕ ಉದ್ಯೋಗವನ್ನು ಒದಗಿಸುವುದರ ಮೂಲಕ ನಿಗದಿತ ಗುಣಮಟ್ಟ ಹಾಗೂ ಬಾಳಿಕೆ ಬರುವ ಉತ್ಪಾದನಾಶೀಲ ಆಸ್ತಿಗಳ ಸೃಜನೆ ಮಾಡುವುದು.
2. ಬಡವರ ಜೀವನೋಪಾಯದ ಸಂಪನ್ಮೂಲಗಳನ್ನು ಬಲಪಡಿಸುವುದು.
3. ಸ್ವಯಂ ಪ್ರೇರಿತವಾಗಿ ಸಾಮಾಜಿಕ ಒಳಗೊಳ್ಳುವಿಕೆಯನ್ನು ಖಾತರಿಪಡಿಸುವುದು.
4. ಪಂಚಾಯತ್ ರಾಜ್ ಸಂಸ್ಥೆಗಳನ್ನು ಬಲಪಡಿಸುವುದು.

ರೂ. ಲಕ್ಷಗಳಲ್ಲಿ

1	ದಿನಾಂಕ:01.04.2017ಕ್ಕೆ ಪ್ರಾರಂಭಿಕ ಶಿಲ್ಕು	52.80
2	2017–18ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ	24523.92
3	2017–18ನೇ ಸಾಲಿನ ವೆಚ್ಚ	27196.97
4	2017–18ನೇ ಸಾಲಿಗೆ ನೊಂದಣಿಯಾದ ಕುಟುಂಬಗಳ ಸಂಖ್ಯೆ	154604
5	2017–18ನೇ ಸಾಲಿನಲ್ಲಿ ವಿತರಿಸಲಾದ ಉದ್ಯೋಗ ಚೀಟಿಗಳ ಸಂಖ್ಯೆ	153466
6	2017–18ನೇ ಸಾಲಿಗೆ ಉದ್ಯೋಗಕ್ಕಾಗಿ ಬೇಡಿಕೆ ಸಲ್ಲಿಸಿರುವ ಕುಟುಂಬಗಳ ಸಂಖ್ಯೆ	91818
7	2017–18ನೇ ಸಾಲಿನ ಕ್ರಿಯಾ ಯೋಜನೆಯ ಒಟ್ಟು ಮೊತ್ತ	146870.93
8	2017–18ನೇ ಸಾಲಿನ ಅನುಮೋದನೆಯಾದ ಒಟ್ಟು ಕಾಮಗಾರಿಗಳ ಸಂಖ್ಯೆ	86835
9	2017–18ನೇ ಸಾಲಿಗೆ ಸೃಜನೆಯಾದ ಒಟ್ಟು ಮಾನವ ದಿನಗಳು (ಲಕ್ಷಗಳಲ್ಲಿ)	64.97
10	2017–18ನೇ ಸಾಲಿಗೆ 100 ದಿನ ಉದ್ಯೋಗ ನೀಡಿದ ಕುಟುಂಬಗಳ ಸಂಖ್ಯೆ	24722

2) ವಸತಿ ಯೋಜನೆ:–

ರಾಮನಗರ ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಸತಿ ರಹಿತರ ಸಂಖ್ಯೆ ಒಟ್ಟು:35596 ಇದ್ದು, 2017–18ನೇ ಸಾಲಿನಲ್ಲಿ ಜಿಲ್ಲೆಗೆ ಒಟ್ಟು 7621 ಗುರಿ ಮಂಜೂರಾಗಿದ್ದು, ಈಗಾಗಲೇ 6463 ಮನೆಗಳನ್ನು ನಿರ್ಮಾಣ ಮಾಡಲಾಗಿರುತ್ತದೆ. ಉಳಿಕೆ ಮನೆಗಳು ವಿವಿಧ ನಿರ್ಮಾಣದ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ.

ವಸತಿ ಯೋಜನೆಗಳು

- **ಬಸವ ವಸತಿ :–** 2010–11ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು, ರಾಜ್ಯ ಸರ್ಕಾರದ ಯೋಜನೆಯಾಗಿದ್ದು, ವಸತಿ ರಹಿತ ಫಲಾನುಭವಿಗಳಿಗೆ ಮನೆ ನಿರ್ಮಿಸಿಕೊಳ್ಳಲು ಸಾಮಾನ್ಯ ವರ್ಗಕ್ಕೆ ಶೇಕಡ 90% ರಷ್ಟು ಅಲ್ಪಸಂಖ್ಯಾತ ವರ್ಗದವರಿಗೆ ಶೇಕಡ10% ರಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಸರ್ಕಾರದಿಂದ ರೂ.1,20,000/– ಸಹಾಯಧನ ನೀಡಲಾಗುವುದು.

- **ಡಾ॥ ಬಿ.ಆರ್ ಅಂಬೇಡ್ಕರ್ ಆವಾಸ್ ಯೋಜನೆ:**– 2015–16ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು, ರಾಜ್ಯ ಸರ್ಕಾರದ ಯೋಜನೆಯಾಗಿರುತ್ತದೆ. ವಸತಿ ರಹಿತ ಪ.ಜಾತಿ ಮತ್ತು ಪ.ಪಂಗಡದ ಅರ್ಹ ಕುಟುಂಬಗಳಿಗೆ ಬೇಡಿಕೆ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ಸರ್ಕಾರದಿಂದ ರೂ.1,50,000/– ಸಹಾಯಧನ ನೀಡಲಾಗುವುದು.
- **ಪ್ರಧಾನಮಂತ್ರಿ ಆವಾಸ್ ಯೋಜನೆ ಗ್ರಾಮೀಣ :**– 2016–17ನೇ ಸಾಲಿನಲ್ಲಿ ಪ್ರಾರಂಭಗೊಂಡಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಯೋಜನೆಯಾಗಿದ್ದು–ಶೇಕಡ 60 ರಷ್ಟು – ರೂ.72000/– ಕೇಂದ್ರ ಹಾಗೂ ಶೇಕಡ 40 ರಷ್ಟು –ರೂ.48000/– ರಾಜ್ಯ ಸರ್ಕಾರ ಭರಿಸುತ್ತಿದ್ದು, ಸಾಮಾಜಿಕ ಆರ್ಥಿಕ ಜಾತಿಗಣತಿ –2011ರ ಸಮೀಕ್ಷೆ ಆಧಾರದ ಮೇಲೆ ನಿಗಮದಿಂದಲೇ ಗುರಿ ನಿಗಧಿಪಡಿಸಲಾಗುತ್ತಿದೆ.
- **ಡಿ.ದೇವರಾಜ್ಅರಸ್ ಯೋಜನೆ :**– 2015–16ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು, ರಾಜ್ಯ ಸರ್ಕಾರದ ಯೋಜನೆಯಾಗಿರುತ್ತದೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ವಿಶೇಷ ವರ್ಗದ ಜನಾಂಗದವರಿಗೆ (14 ಪ್ರಕರಣಗಳು), ಈ ಯೋಜನೆಯಲ್ಲಿ ರೂ. 1.20.000 /– ಸಹಾಯಧನ ನೀಡಲಾಗುತ್ತದೆ.
- ಮೇಲ್ಕಂಡ ಎಲ್ಲಾ ವಸತಿ ಯೋಜನೆಗಳ ಫಲಾನುಭವಿಗಳಿಗೆ ಹೊಂದಾಣಿಕೆಯಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ(ಉದ್ಯೋಗ ಚೀಟಿ ಹೊಂದಿದ್ದಲ್ಲಿ) 90ದಿನಗಳ ಮಾನವ ದಿನಗಳ ಕೆಲಸ ನೀಡಲಾಗುವುದು. ಇದರ ಬಾಬ್ತು ರೂ. 22410/– ಆಗಿರುತ್ತದೆ.

3) ಸ್ವಚ್ಛ ಭಾರತ್ ಮಿಷನ್

2012 ಬೇಸ್‌ಲೈನ್ ಸರ್ವೆ ನಂ.ಪ್ರಕಾರ ಈ ಜಿಲ್ಲೆಯಲ್ಲಿ ಒಟ್ಟು 168962 ಕುಟುಂಬಗಳಿದ್ದು, ವೈಯಕ್ತಿಕ ಗೃಹ ಶೌಚಾಲಯ ಹೊಂದಿರುವ ಕುಟುಂಬಗಳ ಸಂಖ್ಯೆ:168962 ಹೊಂದಿರುತ್ತವೆ. 2019–20ನೇ ಸಾಲಿಗೆ ಎಲ್.ಒ.ಬಿ (ಬೇಸ್ ಲೈನ್ ನಿಂದ ಹೊರಗುಳಿದ) ಕುಟುಂಬಗಳ ಸಂಖ್ಯೆ:10212 ಇದ್ದು, 2019–20ನೇ ಸಾಲಿಗೆ 10212 ವೈಯಕ್ತಿಕ ಗೃಹ ಶೌಚಾಲಯಗಳನ್ನು ನಿರ್ಮಿಸುವ ಗುರಿಯನ್ನು ನೀಡಲಾಗಿದ್ದು, ಜೂನ್–2019ರ ಅಂತ್ಯಕ್ಕೆ ಒಟ್ಟು 6136 ಶೌಚಾಲಯಗಳನ್ನು ನಿರ್ಮಿಸಲಾಗಿರುತ್ತದೆ. ಹೆಚ್ಚು ಹೆಣ್ಣು ಮಕ್ಕಳಿರುವ 64 ಸರ್ಕಾರಿ ಪ್ರೌಢಶಾಲೆಗಳಲ್ಲಿ ಇನ್ಸಿಲೇಟರ್‌ಗಳನ್ನು ಅಳವಡಿಸಲಾಗಿರುತ್ತದೆ.

2017–18ನೇ ಸಾಲಿನಲ್ಲಿ ರಾಮನಗರ ಜಿಲ್ಲೆಯನ್ನು *ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆಯೆಂದು ಘೋಷಿಸಲಾಗಿರುತ್ತದೆ.

4) ಸಂಜೀವಿನಿ ಯೋಜನೆ (ಎನ್.ಆರ್.ಎಲ್.ಎಂ)

ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯವು ತನ್ನ ಪ್ರಮುಖ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಒಂದಾದ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯನ್ನು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಅಜೀವಿಕಾ) ಯೋಜನೆ ಮೂಲಕ ಪುನರ್ ರಚನೆ ಮಾಡಿದೆ. ಗ್ರಾಮೀಣ ಬಡತನದ ನಿವಾರಣೆ ಈ ಅಭಿಯಾನದ ಮುಖ್ಯ ಗುರಿಯಾಗಿದೆ, ಗ್ರಾಮೀಣ ಪ್ರದೇಶದ ಬಡ ಹಾಗೂ ಕಡುಬಡ ಕುಟುಂಬಗಳ ಮಹಿಳೆಯರನ್ನು ಸ್ವ–ಸಹಾಯ ಗುಂಪುಗಳ ಮೂಲಕ ಸಂಪರ್ಕಿಸಿ ಅವರ ಜೀವನೋಪಾಯ ಚಟುವಟಿಕೆಯನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕರ್ನಾಟಕದಲ್ಲಿ ಯೋಜನೆಯನ್ನು **"ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ"** ಎಂದು ಹೆಸರಿಸಲಾಗಿದೆ. ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ (ಕೆ.ಎಸ್.ಆರ್.ಎಲ್.ಪಿ.ಎಸ್) ಎಂಬ ನೊಂದಾಯಿತ ಸಂಸ್ಥೆಯ ಮೂಲಕ **"ಸಂಜೀವಿನಿ"** ಅನುಷ್ಠಾನಗೊಳ್ಳುತ್ತಿದೆ.

2017–18ನೇ ಸಾಲಿನಲ್ಲಿ 23 ಸ್ವ–ಸಹಾಯ ಸಂಘಗಳಿಗೆ ರೂ.3,45,000/– (ಮೂರು ಲಕ್ಷದ ನಲವತ್ತ ಐದು ಸಾವಿರ)ಗಳನ್ನು ಸುತ್ತುನಿಧಿ ನೀಡಲಾಗಿದೆ.

2017–18ನೇ ಸಾಲಿನಲ್ಲಿ ಜಿಲ್ಲೆಯ 4 ತಾಲ್ಲೂಕುಗಳಾದ ಕನಕಪುರ ಮತ್ತು ಮಾಗಡಿ, ಚನ್ನಪಟ್ಟಣ,ರಾಮನಗರ ತಾಲ್ಲೂಕುಗಳನ್ನು ಇನ್‌ಟೇನ್ಸಿವ್ ತಾಲ್ಲೂಕುಗಳಾಗಿ ಆಯ್ಕೆ ಮಾಡಲಾಗಿದೆ.

Sl No.	Taluk	Formation of GP Level Federation	No. of villages	No. of wards	No. of House Hold	No. of SHGs	No. of SHGs Newly formed	Total	CIF Fund (Rs. In Lakhs)
1	Kanakapura	5	26	25	3738	246	58	304	0
2	Magadi	0	0	0	0	0	0	0	5.00
3	channapatana	8	60	52	8228	501	0	501	1.00
4	Ramanagara	8	38	63	7732	500	20	520	0
	Total	21	124	140	19698	1247	78	1325	6.00

5) ಸಂಜೀವಿನಿ ಯೋಜನೆ (ಎನ್.ಆರ್.ಎಲ್.ಎಂ)

ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯವು ತನ್ನ ಪ್ರಮುಖ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಒಂದಾದ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯನ್ನು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಅಜೀವಿಕಾ) ಯೋಜನೆ ಮೂಲಕ ಪುನರ್ ರಚನೆ ಮಾಡಿದೆ. ಗ್ರಾಮೀಣ ಬಡತನದ ನಿವಾರಣೆ ಈ ಅಭಿಯಾನದ ಮುಖ್ಯ ಗುರಿಯಾಗಿದೆ, ಗ್ರಾಮೀಣ ಪ್ರದೇಶದ ಬಡ ಹಾಗೂ ಕಡುಬಡ ಕುಟುಂಬಗಳ ಮಹಿಳೆಯರನ್ನು ಸ್ವ–ಸಹಾಯ ಗುಂಪುಗಳ ಮೂಲಕ ಸಂಪರ್ಕಿಸಿ ಅವರ ಜೀವನೋಪಾಯ ಚಟುವಟಿಕೆಯನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕರ್ನಾಟಕದಲ್ಲಿ ಯೋಜನೆಯನ್ನು "ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ " ಎಂದು ಹೆಸರಿಸಲಾಗಿದೆ. ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ (ಕೆ.ಎಸ್.ಆರ್.ಎಲ್.ಪಿ.ಎಸ್) ಎಂಬ ನೊಂದಾಯಿತ ಸಂಸ್ಥೆಯ ಮೂಲಕ "ಸಂಜೀವಿನಿ" ಅನುಷ್ಠಾನಗೊಳ್ಳುತ್ತಿದೆ.

2017–18ನೇ ಸಾಲಿನಲ್ಲಿ ಸುತ್ತು ನಿಧಿಗೆ ನಿಗಧಿಪಡಿಸಿರುವ ಗುರಿ 196 ಸಂಘಗಳು, ಸುತ್ತು ನಿಧಿ ನೀಡಿರುವ ಸಂಘಗಳ ಸಂಖ್ಯೆ 196 ಈ ಸ್ವ–ಸಹಾಯ ಸಂಘಗಳಿಗೆ ರೂ. 29.40/– (ಇಪತ್ತೊಂಬತ್ತು ಲಕ್ಷದ ನಲವತ್ತು ಸಾವಿರ ರೂ)ಗಳನ್ನು, ನೀಡಲಾಗಿದೆ.

2017–18ನೇ ಸಾಲಿನಲ್ಲಿ ಬಡ್ಡಿ ಸಹಾಯಧನಕ್ಕೆ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 1326 ಸ್ವ–ಸಹಾಯ ಗುಂಪುಗಳ ಗುರಿ ನೀಡಲಾಗಿದೆ. ಬಡ್ಡಿ ಸಹಾಯಧನ ಮೊತ್ತ ಒಟ್ಟು ರೂ. 56.66/–(ಐವತ್ತಾರು ಲಕ್ಷದ ಆರವತ್ತಾರು ಸಾವಿರ)ಗಳನ್ನು ಸಂಜೀವಿನಿ ಸಂಸ್ಥೆಯಿಂದ ನೇರವಾಗಿ ಸ್ವ–ಸಹಾಯ ಸಂಘಗಳ ಬ್ಯಾಂಕ್ ಸಾಲದ ಖಾತೆಗೆ ಬಿಡುಗಡೆ ಮಾಡಿರುತ್ತದೆ.

6) ಗ್ರಾಮ ವಿಕಾಸ ಯೋಜನೆ

ಗ್ರಾಮ ವಿಕಾಸ ಯೋಜನೆಯು 2016 ನೇ ಸಾಲಿನಲ್ಲಿ ಪ್ರಾರಂಭಗೊಂಡಿದ್ದು, ಸದರಿ ಯೋಜನೆಯಡಿಯಲ್ಲಿ ರಾಮನಗರ ಜಿಲ್ಲೆಯ 05 ಮಾನ್ಯ ವಿಧಾನ ಸಭಾ ಸದಸ್ಯರುಗಳು ಒಟ್ಟು 22 ಗ್ರಾಮಗಳನ್ನು, ಆಯ್ಕೆ ಮಾಡಿ ಅನುಮೋದನೆ ನೀಡಲಾಗಿರುತ್ತದೆ.

- ಸದರಿ 22 ಗ್ರಾಮಗಳಿಗೆ ಪ್ರತಿಯೊಂದು ಗ್ರಾಮಕ್ಕೆ ತಲಾ ರೂ. 75 ಲಕ್ಷ ದಂತೆ ಒಟ್ಟು 22 ಗ್ರಾಮಗಳ ಗ್ರಾಮಾಭಿವೃದ್ಧಿ ಯೋಜನೆಗಳಿಗೆ ಗ್ರಾಮ ಪಂಚಾಯಿತಿ ಗ್ರಾಮ ಸಭೆಗಳಲ್ಲಿ ಅನುಮೋದನೆ ಪಡೆದು ಜಿಲ್ಲಾ ಪಂಚಾಯಿತಿಯಲ್ಲಿ ಅನುಮೋದನೆ ನೀಡಲಾಗಿರುತ್ತದೆ.
- ಸರ್ಕಾರದ ಮಾರ್ಗಸೂಚಿಯಂತೆ ಆಯ್ಕೆಯಾದ ಗ್ರಾಮಗಳಲ್ಲಿ ಈ ಕೆಳಕಂಡಂತೆ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುತ್ತದೆ.

1. ಗ್ರಾಮದೊಳಗಿನ ಪರಿಸರವನ್ನು ಉತ್ತಮಪಡಿಸಲು ರಸ್ತೆ, ಚರಂಡಿ (ಸ್ಥಳೀಯ ಅವಶ್ಯಕತೆಯನ್ನು ಆಧರಿಸಿ ಸಿಸಿ ರಸ್ತೆ/ಕಲ್ಲು ಚಪ್ಪಡಿ ರಸ್ತೆಗಳನ್ನು ಗ್ರಾಮ ಪಂಚಾಯತ್‌ಗಳು ನಿರ್ಧರಿಸಿದ ಮಾದರಿಯಲ್ಲಿ)– 50%
2. ಗ್ರಂಥಾಲಯ/ಸಾಹಿತಿ ಕಲಾವಿಧರ ಸ್ಮಾರಕ/ಸಭಾಭವನ/ಬಯಲು ರಂಗಮಂದಿರ ನಿರ್ಮಾಣ (ಇವುಗಳಲ್ಲಿ ಯಾವುದಾದರೂ ಒಂದು ಮಾತ್ರ)– 12%
3. ಯುವಕ/ಯುವತಿ ಮಂಡಳಿಗಳ ಕ್ರೀಡಾ ಚಟುವಟಿಕೆಗಳ ಅಭಿವೃದ್ಧಿಗಾಗಿ ಜಿಮ್/ಗರಡಿಮನೆ/ಫ್ಲಡ್‌ಲೈಟ್ ಆಟದ ಮೈದಾನ/ದೇಶೀ ಕ್ರೀಡೆ ಅಭಿವೃದ್ಧಿ ಚಟುವಟಿಕೆಗಳಿಗೆ– 12%
4. ಸೌರ ಬೆಳಕು ದೀಪಗಳ ಅಳವಡಿಕೆ/ಎಲ್‌ಇಡಿ ದೀಪಗಳು– 3%
5. ತಿಪ್ಪೆ/ತಿಪ್ಪೆ ಗುಂಡಿಗಳ ವೈಜ್ಞಾನಿಕ ಹಾಗೂ ಆಧುನಿಕ ರೀತಿಯಲ್ಲಿ ಸಂಸ್ಕರಣೆ ಮಾಡುವ ಘಟಕಗಳ ನಿರ್ಮಾಣ (ಕೊಪ್ಪಳ ಜಿಲ್ಲೆಯ ಹಿಟ್ನಾಳ ಹಾಗೂ ಗದಗ ಜಿಲ್ಲೆ ಕಣಕಿನ ಕೊಪ್ಪ ಮಾದರಿಯಂತೆ)– 10%
6. ಗ್ರಾಮ ಪಂಚಾಯತ್ ನಡವಳಿಗಳನ್ನು ಟೆಲಿವಿಷನ್ ಮುಖಾಂತರ ನೇರ ಪ್ರಸಾರದ ಮೂಲ ಸೌಕರ್ಯಕ್ಕೆ– 2%

7. ಗುಡಿ (ಗ್ರಾಮ ದೇವತೆ)/ಮಸೀದಿ/ಚರ್ಚ್‌ಗಳ, ಪುನರುಜ್ಜೀವನ/ಜೀರ್ಣೋದ್ಧಾರ/ಕಟ್ಟಡ ನಿರ್ಮಾಣಕ್ಕಾಗಿ– 6%
8. ಫ್ಲೆಕ್ಸಿ ಫಂಡ್ – 5%

- ಮಾನ್ಯ ಶಾಸಕರುಗಳು ಮತ್ತು ವಿಧಾನಪರಿಷತ್ ಸದಸ್ಯರುಗಳ ಶಿಫಾರಸ್ಸಿನಂತೆ ಕೆ.ಆರ್.ಐ.ಡಿ.ಎಲ್. ಸಂಸ್ಥೆ, ರಾಮನಗರ ವತಿಯಿಂದ 11 ಗ್ರಾಮಗಳಲ್ಲಿ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ ಮುಖಾಂತರ 11 ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಆದೇಶಿಸಲಾಗಿದ್ದು, ಕಾಮಗಾರಿ ಕ್ರಿಯಾ ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಕಾಮಗಾರಿಗಳು ಚಾಲ್ತಿಯಲ್ಲಿರುತ್ತವೆ.

2017–18ನೇ ಸಾಲಿನಲ್ಲಿ ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಮಾರ್ಚ್–2018ರ ಅಂತ್ಯಕ್ಕೆ ಅನುದಾನದ ಬಿಡುಗಡೆ ಮತ್ತು ವೆಚ್ಚದ ವಿವರ

(ರೂ ಲಕ್ಷಗಳಲ್ಲಿ)

ಕ್ರ. ಸಂ	ವಿಧಾನ ಸಭಾ ಕ್ಷೇತ್ರದ ಹೆಸರು	ತಾಲ್ಲೂಕಿನ ಹೆಸರು	ನಿಗಧಿಪಡಿಸಿದ ಅನುದಾನ	ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ
1	ಚನ್ನಪಟ್ಟಣ	ಚನ್ನಪಟ್ಟಣ	375.00	375.00	150.00
2	ಕನಕಪುರ	ಕನಕಪುರ	375.00	375.00	147.00
3	ರಾಮನಗರ	ರಾಮನಗರ	450.00	450.00	188.54
4	ಮಾಗಡಿ	ಮಾಗಡಿ	375.00	375.00	128.30
		ಒಟ್ಟು	**1575.00**	**1575.00**	**613.84**

7) ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆ

ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯು 2018 ನೇ ಸಾಲಿನಲ್ಲಿ ಪ್ರಾರಂಭಗೊಂಡಿದ್ದು, ಸದರಿ ಯೋಜನೆಯಡಿಯಲ್ಲಿ ರಾಮನಗರ ಜಿಲ್ಲೆಯ 05 ಮಾನ್ಯ ವಿಧಾನ ಸಭಾ ಸದಸ್ಯರುಗಳು ಒಟ್ಟು 18 ಗ್ರಾಮಗಳನ್ನು, ಮಾನ್ಯ ವಿಧಾನ ಸಭಾ ಪರಿಷತ್ ಸದಸ್ಯರುಗಳು 06 ಗ್ರಾಮಗಳನ್ನು ಮತ್ತು ಮಾನ್ಯ ಬೆಂಗಳೂರು ಗ್ರಾಮಾಂತರ ಲೋಕಸಭಾ ಸದಸ್ಯರು 05 ಗ್ರಾಮಗಳನ್ನು ಹೀಗೆ ಒಟ್ಟು 29 ಗ್ರಾಮಗಳನ್ನು ಆಯ್ಕೆ ಮಾಡಿ ಅನುಮೋದನೆ ನೀಡಲಾಗಿರುತ್ತದೆ.

- ಸದರಿ 29 ಗ್ರಾಮಗಳಿಗೆ ಪ್ರತಿಯೊಂದು ಗ್ರಾಮಕ್ಕೆ ತಲಾ ರೂ.1.00 ಕೋಟಿಯಂತೆ ಒಟ್ಟು 29 ಗ್ರಾಮಗಳ ಗ್ರಾಮಾಭಿವೃದ್ಧಿ ಯೋಜನೆಗಳಿಗೆ ಗ್ರಾಮ ಪಂಚಾಯಿತಿ ಗ್ರಾಮ ಸಭೆಗಳಲ್ಲಿ ಅನುಮೋದನೆ ಪಡೆದು ಜಿಲ್ಲಾ ಪಂಚಾಯಿತಿಯಲ್ಲಿ ಅನುಮೋದನೆ ನೀಡಲಾಗಿರುತ್ತದೆ.
- ಸರ್ಕಾರದ ಮಾರ್ಗಸೂಚಿಯಂತೆ ಆಯ್ಕೆಯಾದ ಗ್ರಾಮಗಳಲ್ಲಿ ಈ ಕೆಳಕಂಡಂತೆ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುತ್ತದೆ.

1. ಗ್ರಾಮದೊಳಗಿನ ಪರಿಸರವನ್ನು ಉತ್ತಮಪಡಿಸಲು ರಸ್ತೆ, ಚರಂಡಿ (ಸ್ಥಳೀಯ ಅವಶ್ಯಕತೆಯನ್ನು ಆಧರಿಸಿ ಸಿಸಿ ರಸ್ತೆ/ಕಲ್ಲು ಚಪ್ಪಡಿ ರಸ್ತೆಗಳನ್ನು ಗ್ರಾಮ ಪಂಚಾಯತ್‌ಗಳು ನಿರ್ಧರಿಸಿದ ಮಾದರಿಯಲ್ಲಿ)– 50%
2. ಗ್ರಂಥಾಲಯ/ಸಾಹಿತಿ ಕಲಾವಿಧರ ಸ್ಮಾರಕ/ಸಭಾಭವನ/ಬಯಲು ರಂಗಮಂದಿರ ನಿರ್ಮಾಣ (ಇವುಗಳಲ್ಲಿ ಯಾವುದಾದರೂ ಒಂದು ಮಾತ್ರ)– 12%
3. ಯುವಕ/ಯುವತಿ ಮಂಡಳಿಗಳ ಕ್ರೀಡಾ ಚಟುವಟಿಕೆಗಳ ಅಭಿವೃದ್ಧಿಗಾಗಿ ಜಿಮ್/ಗರಡಿಮನೆ/ಫ್ಲಡ್‌ಲೈಟ್ ಆಟದ ಮೈದಾನ/ದೇಶೀ ಕ್ರೀಡೆ ಅಭಿವೃದ್ಧಿ ಚಟುವಟಿಕೆಗಳಿಗೆ– 12%
4. ಸೌರ ಬೆಳಕು ದೀಪಗಳ ಅಳವಡಿಕೆ/ಎಲ್‌ಇಡಿ ದೀಪಗಳು– 3%
5. ತಿಪ್ಪೆ/ತಿಪ್ಪೆ ಗುಂಡಿಗಳ ವೈಜ್ಞಾನಿಕ ಹಾಗೂ ಆಧುನಿಕ ರೀತಿಯಲ್ಲಿ ಸಂಸ್ಕರಣೆ ಮಾಡುವ ಘಟಕಗಳ ನಿರ್ಮಾಣ (ಕೊಪ್ಪಳ ಜಿಲ್ಲೆಯ ಹಿಟ್ನಾಳ ಹಾಗೂ ಗದಗ ಜಿಲ್ಲೆ ಕಣಕಿನ ಕೊಪ್ಪ ಮಾದರಿಯಂತೆ)– 10%
6. ಗ್ರಾಮ ಪಂಚಾಯತ್ ನಡವಳಿಗಳನ್ನು ಟೆಲಿವಿಷನ್ ಮುಖಾಂತರ ನೇರ ಪ್ರಸಾರದ ಮೂಲ ಸೌಕರ್ಯಕ್ಕೆ– 2%
7. ಗುಡಿ (ಗ್ರಾಮ ದೇವತೆ)/ಮಸೀದಿ/ಚರ್ಚ್‌ಗಳ, ಪುನರುಜ್ಜೀವನ/ಜೀರ್ಣೋದ್ಧಾರ/ಕಟ್ಟಡ ನಿರ್ಮಾಣಕ್ಕಾಗಿ– 6%
8. ಫ್ಲೆಕ್ಸಿ ಫಂಡ್ – 5%

- ಮಾನ್ಯ ಶಾಸಕರುಗಳು ಮತ್ತು ವಿಧಾನಪರಿಷತ್ ಸದಸ್ಯರುಗಳ ಶಿಫಾರಸ್ಸಿನಂತೆ ಕೆ.ಆರ್.ಐ.ಡಿ.ಎಲ್. ಸಂಸ್ಥೆ, ರಾಮನಗರ ವತಿಯಿಂದ 19 ಗ್ರಾಮಗಳಲ್ಲಿ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ ಮುಖಾಂತರ 10 ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಆದೇಶಿಸಲಾಗಿದ್ದು, ಕಾಮಗಾರಿ ಕ್ರಿಯಾ ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಕಾಮಗಾರಿಗಳು ಚಾಲ್ತಿಯಲ್ಲಿರುತ್ತವೆ.
- ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಒಟ್ಟು ರೂ.29.00 ಕೋಟಿಗಳಲ್ಲಿ ಪ್ರಸ್ತುತ ದಿನಾಂಕದವರೆಗೆ ಸರ್ಕಾರದಿಂದ ಒಟ್ಟು ರೂ.4.00 ಕೋಟಿ ಅನುದಾನ ಬಿಡುಗಡೆಯಾಗಿದ್ದು ಅದರಲ್ಲಿ 4.00 ಕೋಟಿ ವೆಚ್ಚವಾಗಿರುತ್ತದೆ. ಈ ಕೆಳಕಂಡಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ.

ರಾಮನಗರ ಜಿಲ್ಲಾ ಪಂಚಾಯತ್ 2017–18ನೇ ಸಾಲಿನ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯ ವಿವರ

ಕ್ರ. ಸಂ.	ವಿಧಾನಸಭಾ ಕ್ಷೇತ್ರ/ ವಿಧಾನ ಪರಿಷತ್ ಕ್ಷೇತ್ರ	ಆಯ್ಕೆಯಾದ ಗ್ರಾಮಗಳ ಸಂಖ್ಯೆ	ನಿಗಧಿ ಮಾಡಲಾದ ಅನುದಾನ (ಲಕ್ಷ ರೂ.ಗಳಲ್ಲಿ)	ಬಿಡುಗಡೆಯಾದ ಅನುದಾನ (ಲಕ್ಷ ರೂ.ಗಳಲ್ಲಿ)	ಷರಾ
1	ಚನ್ನಪಟ್ಟಣ	6	600	400	ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯು 2017–18ನೇ ಸಾಲಿನಲ್ಲಿ ಪ್ರಾರಂಭಗೊಂಡು ರಸ್ತೆ ಮತ್ತು ಚರಂಡಿ ಹಾಗೂ ಇತರೆ ಕಾಮಗಾರಿಗಳಿಗೆ ಅನುಮೋದನೆ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತವೆ.
2	ಕನಕಪುರ	9	800		
3	ಮಾಗಡಿ	9	500		
4	ರಾಮನಗರ	5	800		
	ಒಟ್ಟು	**29**	**2700**	**400**	

ಕರವಸೂಲಿ

ರಾಮನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳ ಮಾರ್ಚ್–2018 ಮಾಹೆಯ ಅಂತ್ಯಕ್ಕೆ ಡಿ.ಸಿ.ಬಿ ತಗಾದೆ ವಸೂಲಿ ಬಾಕಿ ತಖ್ತೆ:

ಕ್ರ. ಸಂ	ತಾಲ್ಲೂಕು ಪಂಚಾಯಿತಿ	ಗ್ರಾಮ ಪಂಚಾಯಿತಿ ಸಂಖ್ಯೆ	1–4–17ಕ್ಕೆ ಬಾಕಿ ತಗಾದೆ	2017–18ನೇ ಸಾಲಿನ ತಗಾದೆ.	ಒಟ್ಟು ತಗಾದೆ	ಹಿಂದಿನ ತಿಂಗಳವರೆಗೆ ಒಟ್ಟು ವಸೂಲಿ	ಚಾಲ್ತಿತಿಂಗಳ ವಸೂಲಿ	ಒಟ್ಟು ವಸೂಲಿ	ಬಾಕಿ ತಗಾದೆ.	ಶೇ.ವಾರು.
1	**ಚನ್ನಪಟ್ಟಣ**	**32**	**31374580**	**20541989**	**51916569**	**19425641**	**2599219**	**22024860**	**29891709**	**42.42**
2	**ಕನಕಪುರ**	**43**	**18592654**	**34204234**	**52796888**	**15909607**	**2331069**	**18240676**	**34556212**	**34.55**
3	**ಮಾಗಡಿ**	**32**	**31900510**	**22676909**	**54577419**	**25436839**	**2852312**	**28289151**	**26288268**	**51.83**
4	**ರಾಮನಗರ**	**20**	**62576653**	**69771609**	**132348262**	**59742755**	**4049273**	**63792028**	**68556234**	**48.20**
	ಒಟ್ಟು	**127**	**144444397**	**147194741**	**291639138**	**120514842**	**11831873**	**132346715**	**159292423**	**45.38**

ರಾಮನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳ ಮಾರ್ಚ್– 2018 ಮಾಹೆಯ ಅಂತ್ಯಕ್ಕೆ ನೀರಿನ ತಗಾದೆ ತಃಖ್ತೆ

ಕ್ರ. ಸಂ	ತಾಲ್ಲೂಕು ಪಂಚಾಯಿತಿ	ಗ್ರಾಮ ಪಂಚಾಯಿತಿ ಸಂಖ್ಯೆ	1–4–17ಕ್ಕೆ ಬಾಕಿ ತಗಾದೆ	2017–18ನೇ ಸಾಲಿನ ತಗಾದೆ.	ಒಟ್ಟು ತಗಾದೆ	ಹಿಂದಿನ ತಿಂಗಳವರೆಗೆ ಒಟ್ಟು ವಸೂಲಿ	ಚಾಲ್ತಿತಿಂಗಳ ವಸೂಲಿ	ಒಟ್ಟು ವಸೂಲಿ	ಬಾಕಿ ತಗಾದೆ.	ಶೇ.ವಾರು.
1	**ಚನ್ನಪಟ್ಟಣ**	**32**	17186003	7334284	24520287	10032249	990736	11022985	13497302	44.95
2	**ಕನಕಪುರ**	**43**	20668706	16529259	37197965	7053497	1460398	8513895	28684070	22.89
3	**ಮಾಗಡಿ**	**32**	18618837	7682147	26300984	6645216	785242	7430458	18870526	28.25
4	**ರಾಮನಗರ**	**20**	18771431	8909798	27681229	6785216	699575	7484791	20196438	27.04
	ಒಟ್ಟು	**127**	**75244977**	**40455488**	**115700465**	**30516178**	**3935951**	**34452129**	**81248336**	**29.78**

ಕೃಷಿ ಇಲಾಖೆ

ಕೃಷಿ ಇಲಾಖೆಯ ಎಲ್ಲಾ ಕಾರ್ಯಕ್ರಮಗಳಿಗೆ ಜಿಲ್ಲಾ ಮಟ್ಟದಲ್ಲಿ ಜಂಟಿ ಕೃಷಿ ನಿರ್ದೇಶಕರು ಉಸ್ತುವಾರಿ ಅಧಿಕಾರಿಯಾಗಿರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಉಪ ಕೃಷಿ ನಿರ್ದೇಶಕರು ಹಾಗೂ ತಾಲ್ಲೂಕು ಮಟ್ಟದಲ್ಲಿ ಸಹಾಯಕ ಕೃಷಿ ನಿರ್ದೇಶಕರುಗಳು ಅನುಷ್ಠಾನಾಧಿಕಾರಿ ಗಳಾಗಿರುತ್ತಾರೆ. ಜಿಲ್ಲೆಯ ಎಲ್ಲಾ 18 ಹೋಬಳಿಗಳಲ್ಲಿ ರೈತ ಸಂಪರ್ಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ಕೃಷಿ ಅಧಿಕಾರಿಗಳು ಅನುಷ್ಠಾನ ಅಧಿಕಾರಿಗಳಾಗಿರುತ್ತಾರೆ. ಜಲಾನಯನ ಪ್ರದೇಶಗಳಲ್ಲಿ ಅರಣ್ಯ ಚಟುವಟಿಕೆ ಅನುಷ್ಠಾನಕ್ಕಾಗಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ತೋಟಗಾರಿಕೆ ಚಟುವಟಿಕೆ ಅನುಷ್ಠಾನಕ್ಕಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಅನುಷ್ಠಾನಾಧಿಕಾರಿಗಳಾಗಿರುತ್ತಾರೆ.

ಜಿಲ್ಲೆಯ ಸರಾಸರಿ ವಾಡಿಕೆ ಮಳೆ 882.8 ಮಿ.ಮೀ ಇದ್ದು ವಾಸ್ತವ 1213 ಮಿ.ಮೀ ಮಳೆಯಾಗಿರುತ್ತದೆ. ಮುಂಗಾರು ಹಂಗಾಮಿನಲ್ಲಿ ಕೃಷಿ ಬೆಳೆಗಳ ಬಿತ್ತನೆ ವಿಸ್ತೀರ್ಣದ ಗುರಿ 114000 ಹೆ. ಗುರಿ ಇದ್ದು ವಾಸ್ತವ 100451 ಹೆ. ಪ್ರದೇಶವು ವಿವಿಧ ಕೃಷಿ ಬೆಳೆಗಳಿಂದ ಆವರಿಸಲ್ಪಟ್ಟಿರುತ್ತದೆ.

2017–18ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದ್ದ ಯೋಜನೆಗಳ ಸಂಕ್ಷಿಪ್ತ ಪ್ರಗತಿ ಈ ಕೆಳಗಿನಂತಿದೆ.

ಜಿಲ್ಲಾ ವಲಯ

1. **ಇತರೆ ಕೃಷಿ ಯೋಜನೆ:**– ಯೋಜನೆಯಡಿ 711 ಜನ ರೈತರಿಗೆ ರೂ.7.95 ಲಕ್ಷ ಸಹಾಯಧನದಲ್ಲಿ ಎತ್ತುಚಾಲಿತ ಕೃಷಿ ಉಪಕರಣಗಳನ್ನು ವಿತರಣೆ ಮಾಡಲಾಗಿದೆ.
2. **ಸಾವಯವ ಗೊಬ್ಬರ ಯೋಜನೆ:**– ಯೋಜನೆಯಡಿ 272 ಜನ ರೈತರಿಗೆ ರೂ.5.50 ಲಕ್ಷ ಸಹಾಯಧನದಲ್ಲಿ ಸಾವಯವ ಪರಿಕರಗಳಾದ ಹಸಿರೆಲೆ ಗೊಬ್ಬರದ ಬೀಜ ವಿತರಣೆ ಮಾಡಲಾಗಿದೆ.
3. **ಎಣ್ಣೆಕಾಳು ಅಭಿವೃದ್ಧಿ ಯೋಜನೆ:**– ಯೋಜನೆಯಡಿ ರೂ.7.23 ಲಕ್ಷ ಸಹಾಯಧನದಲ್ಲಿ 1250 ಹೆಕ್ಟೇರ್ ಪ್ರದೇಶಕ್ಕೆ ಜೀವಾಣು ಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿಗಳು, ಸಸಂ ಉಪಕರಣಗಳನ್ನು ವಿತರಣೆ ಮಾಡಲಾಗಿದೆ.
4. **ಸಸ್ಯ ಸಂರಕ್ಷಣಾ ಯೋಜನೆ(ತಾಪಂ):**– ಯೋಜನೆಯಡಿ ರೂ.4.49 ಲಕ್ಷ ಸಹಾಯಧನದಲ್ಲಿ 428 ಹೆಕ್ಟೇರ್ ಪ್ರದೇಶಕ್ಕೆ ಸಸ್ಯ ಸಂರಕ್ಷಣಾ ಔಷಧಿ ಹಾಗೂ 304 ಜನ ರೈತರಿಗೆ ಕೈಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳನ್ನು ವಿತರಣೆ ಮಾಡಲಾಗಿದೆ.

ರಾಜ್ಯ ವಲಯ

1. **ಕೃಷಿ ಅಭಿಯಾನ:**– ಕೃಷಿ ಮತ್ತು ಇತರೇ ಸಹ ಇಲಾಖೆಗಳ ಕಾರ್ಯಕ್ರಮಗಳ ವಿವರಗಳನ್ನು ರೈತರಿಗೆ ಪ್ರಚುರಪಡಿಸುವ ಸಲುವಾಗಿ ಇಲಾಖೆಗಳ ನಡಿಗೆ ರೈತರ ಮನೆ ಬಾಗಿಲಿಗೆ ಎಂಬ ಶೀರ್ಷಿಕೆಯೊಂದಿಗೆ ಜಿಲ್ಲೆಯ 18 ಹೋಬಳಿಗಳಲ್ಲಿ 127 ಗ್ರಾಮ ಪಂಚಾಯ್ತಿ ಹಾಗೂ ಪ್ರಮುಖ ಹಳ್ಳಿಗಳಲ್ಲಿ ಸಂಚಾರಿ ಮಾಹಿತಿ ಘಟಕ ಹಾಗೂ ವೇದಿಕೆ ಕಾರ್ಯಕ್ರಮದೊಂದಿಗೆ 13.09 ಲಕ್ಷ ಅನುದಾನದಲ್ಲಿ ವ್ಯಾಪಕ ಪ್ರಚಾರ ನೀಡಲಾಗಿದೆ.
2. **ಬಿತ್ತನೆ ಬೀಜ ವಿತರಣೆ:**– ರೂ.22.34 ಲಕ್ಷ ಅನುದಾನದಲ್ಲಿ 3659 ಕ್ವಿಂ. ವಿವಿಧ ಬೆಳೆಗಳ ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರಗಳ ಮುಖಾಂತರ ವಿತರಿಸಲಾಗಿದೆ.
3. **ಮಣ್ಣು ಆರೋಗ್ಯ ಅಭಿಯಾನ:**– ಭೂ–ಇಡುವಳಿ ಹೊಂದಿರುವ ರೈತರ ಜಮೀನಿನಲ್ಲಿ ಗ್ರಿಡ್ ಮಾದರಿ ಆಧಾರದ ಮೇಲೆ ಮಣ್ಣು ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಿ ಫಲಿತಾಂಶದ ವರದಿಯ ಭೂ ಫಲವತ್ತತೆಯ ಕಾರ್ಡ್‌ಗಳನ್ನು ಮುದ್ರಿಸಿ ಎಲ್ಲಾ ರೈತರಿಗೆ ವಿತರಣೆ ಮಾಡಲಾಗುವುದು. ಯೋಜನೆಯಡಿ 40.37 ಲಕ್ಷ ವೆಚ್ಚ ಭರಿಸಲಾಗಿದೆ.
4. **ಕೃಷಿ ಯಾಂತ್ರಿಕರಣ ಯೋಜನೆ:**– ಕೃಷಿ ಯಾಂತ್ರಿಕರಣ ಯೋಜನೆಯಡಿ ರೂ.139.28 ಲಕ್ಷ ಸಹಾಯಧನದಲ್ಲಿ 448 ರೈತರಿಗೆ ಮಿನಿ ಟ್ರ್ಯಾಕ್ಟರ್, ಪವರ್ ಟಿಲ್ಲರ್ ಸೇರಿದಂತೆ ವಿವಿಧ ಬಗೆಯ ಹೈಟೆಕ್ ಕೃಷಿ ಯಂತ್ರೋಪಕರಣಗಳನ್ನು ವಿತರಣೆ ಮಾಡಲಾಗಿದೆ. ಸಾಮಾನ್ಯ ವರ್ಗಕ್ಕೆ ಶೇ.50 ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90ರ ಸಹಾಯಧನದಲ್ಲಿ ವಿತರಣೆ ಮಾಡಲಾಗಿದೆ.
5. **ಕೃಷಿ ಸಂಸ್ಕರಣೆ ಯೋಜನೆ:**– ಈ ಯೋಜನೆಯಡಿ ರೂ.49.74ಲಕ್ಷ ಅನುದಾನದಲ್ಲಿ 1363 ಜನ ರೈತರಿಗೆ ಸಹಾಯಧನದಲ್ಲಿ ಸಾಮಾನ್ಯ ವರ್ಗಕ್ಕೆ ಶೇ.50 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ ಶೇ.90ರ ಸಹಾಯಧನದಲ್ಲಿ ಹೆಚ್‌ಡಿಪಿಇ ಟಾರ್ಪಲುಗಳನ್ನು ಹಾಗೂ ಕೃಷಿ ಸಂಸ್ಕರಣಾ ಘಟಕಗಳನ್ನು ವಿತರಣೆ ಮಾಡಲಾಗಿದೆ.
6. **ಮಣ್ಣಿನ ಸತ್ವ ಹೆಚ್ಚಿಸುವಿಕೆ:**– ಯೋಜನೆಯಡಿ ರೂ. 47.47 ಲಕ್ಷ ಸಹಾಯಧನದಲ್ಲಿ 5154 ಹೆಕ್ಟೇರ್ ಪ್ರದೇಶಕ್ಕೆ ಮಣ್ಣಿನ ಫಲವತ್ತತೆ ಹೆಚ್ಚಿಸಲು ಶೇ.50ರ ಸಹಾಯಧನದಲ್ಲಿ ಹಸಿರೆಲೆ ಗೊಬ್ಬರ ಬಿತ್ತನೆ ಬೀಜ, ಜಿಪ್ಸಂ, ಲಘು ಪೋಷಕಾಂಶಗಳು, ಜೈವಿಕ ಗೊಬ್ಬರವನ್ನು ವಿತರಣೆ ಮಾಡಲಾಗಿದೆ.

7. **ಭೂ ಚೇತನ ಯೋಜನೆ:**– ಜಿಲ್ಲೆಯಲ್ಲಿ ಮಣ್ಣಿನ ಫಲವತ್ತತೆ ಹೆಚ್ಚಿಸಿ ಖುಷ್ಕಿಯಲ್ಲಿ ಶೇ.20% ಇಳುವರಿ ಹೆಚ್ಚಿಸುವ ಸಲುವಾಗಿ ಸ್ಥಳೀಯವಾಗಿ ರೈತ ಅನುವುಗಾರರನ್ನು ನೇಮಿಸಿಕೊಂಡು ಯೋಜನೆಯ ವಿವಿಧ ಘಟಕಗಳಾದ ಅನುವುಗಾರರ ವೇತನ, ಯೋಜನೆಯ ಅನುದಾನ, ತರಬೇತಿಗಳು, ಪ್ರಚಾರಕ್ಕಾಗಿ 18.85 ಲಕ್ಷ ಅನುದಾನ ವೆಚ್ಚ ಭರಿಸಲಾಗಿದೆ.

8. **ಸಾವಯವ ಭಾಗ್ಯ ಯೋಜನೆ:**– ಸಾವಯವ ಕೃಷಿ ಉತ್ತೇಜನಕ್ಕಾಗಿ ಜಿಲ್ಲೆಯಲ್ಲಿ 4 ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ 14 ಹೋಬಳಿಗಳಲ್ಲಿನ 14 ಗ್ರಾಮಗಳಲ್ಲಿ 100 ಹೆಕ್ಟೇರ್ ಪ್ರದೇಶವನ್ನು ಸಾವಯವ ಕೃಷಿಗೆ ಒಳಪಡಿಸುವುದಲ್ಲದೆ ಸದರಿ ಗ್ರಾಮಗಳಲ್ಲಿ ಸಾವಯವ ಕೃಷಿಗೆ ಉತ್ತೇಜನ ನೀಡಲು 14.49 ಲಕ್ಷ ವೆಚ್ಚ ಭರಿಸಲಾಗಿದೆ.

9. **ಪರಂಪರಾಗತ ಕೃಷಿ ವಿಕಾಸ ಯೋಜನೆ:**– ಪ್ರತಿ ಹೋಬಳಿಯಲ್ಲಿ 100 ಹೆ. ಪ್ರದೇಶವನ್ನು ಸಾವಯವ ಕೃಷಿಗೆ ಒಳಪಡಿಸಲು ಆಯ್ದ ಗುಚ್ಛಗ್ರಾಮಗಳಲ್ಲಿ ಶೇ.100ರ ಸಹಾಯಧನದಲ್ಲಿ ಸಾವಯವ ಕೃಷಿ ಪರಿಕರಗಳು ಮತ್ತು ಸಾವಯವ ಪರಿಕರಗಳ ತಯಾರಿಕಾ ಘಟಕಕ್ಕೆ ಸಹಾಯಧನ ನೀಡಲಾಗುವುದು. ಸದರಿ ವರ್ಷದಲ್ಲಿ ಯೋಜನೆಯಡಿ 32.81 ಲಕ್ಷ ವೆಚ್ಚ ಭರಿಸಲಾಗಿದೆ.

10. **ಹಾವು ಕಡಿತ ಮತ್ತು ಬೆಂಕಿ ಆಕಸ್ಮಿಕದಿಂದ ಹುಲ್ಲು ಮೆದೆ ನಷ್ಟಕ್ಕೆ ಪರಿಹಾರ:**– ಕೃಷಿ ಕೆಲಸದಲ್ಲಿ ತೊಡಗಿರುವಾಗ ಆಕಸ್ಮಿಕವಾಗಿ ಹಾವು ಕಚ್ಚಿ ಹಾಗೂ ಮರದಿಂದ ಬಿದ್ದು ಮರಣ ಹೊಂದಿದ 4 ರೈತರಿಗೆ ತಲಾ ಒಂದು ಲಕ್ಷದಂತೆ ಒಟ್ಟು ರೂ.4 ಲಕ್ಷ ಪರಿಹಾರ ಹಾಗೂ ಬೆಂಕಿ ಆಕಸ್ಮಿತದಿಂದ ಹುಲ್ಲು ಮೆದೆ ಸುಟ್ಟು ಹೋದ 8 ರೈತರಿಗೆ 0.25 ಲಕ್ಷ ಪರಿಹಾರವನ್ನು ಉಪ ವಿಭಾಗ ಮಟ್ಟದ ಸಮಿತಿಯ ತೀರ್ಮಾನದ ಮೇರೆಗೆ ವಿತರಣೆ ಮಾಡಲಾಗಿದೆ. ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ 7 ರೈತ ಕುಟುಂಬಗಳಿಗೆ ಉಪವಿಭಾಗ ಮಟ್ಟದ ಸಮಿತಿಯ ಶಿಫಾರಸ್ಸಿನ ಮೇರೆಗೆ ಪ್ರತಿ ಕುಟುಂಬಕ್ಕೆ ರೂ.5.00 ಲಕ್ಷದಂತೆ ಒಟ್ಟು ರೂ.35.00 ಲಕ್ಷಗಳನ್ನು ವಿತರಣೆ ಮಾಡಲಾಗಿದೆ.

11. **ರಾಷ್ಟ್ರೀಯ ಆಹಾರ ಭದ್ರತಾ ಮಿಷನ್:**– ದ್ವಿದಳಧಾನ್ಯ ಬೆಳೆಗಳ ವಿಸ್ತೀರ್ಣ ಹಾಗೂ ಇಳುವರಿ ಹೆಚ್ಚಿಸುವ ಸಲುವಾಗಿ 53.91 ಲಕ್ಷ ಅನುದಾನದಲ್ಲಿ 4797 ಹೆ/ರೈತರ ಪ್ರದೇಶಕ್ಕೆ ಲಘುಪೋಷಕಾಂಶಗಳು/ ಜೈವಿಕ ಪೀಡೆನಾಶಕಗಳು/ಸಸ್ಯ ಸಂರಕ್ಷಣಾ ಔಷಧಿ/ಸಸ್ಯ ಸಂರಕ್ಷಣಾ ಉಪಕರಣಗಳು/ ಜೈವಿಕಗೊಬ್ಬರಗಳು/ಶಕ್ತಿಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳನ್ನು ವಿತರಣೆ ಮಾಡಲಾಗಿದೆ.

12. **ಲಘು ನೀರಾವರಿ:**– ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆಯ ಲಘು ನೀರಾವರಿ ಯೋಜನೆಯಡಿ 1918 ರೈತರಿಗೆ 437.90 ಲಕ್ಷ ಅನುದಾನದಲ್ಲಿ ಶೇ.90ರ ಸಹಾಯಧನದಲ್ಲಿ ಹನಿ ನೀರಾವರಿ/ತುಂತುರು ನೀರಾವರಿ ಘಟಕಗಳನ್ನು ವಿತರಣೆ ಮಾಡಲಾಗಿದೆ.

13. **ರಾಗಿ ಮತ್ತು ಜೋಳದ ಬೆಳೆಗಳಲ್ಲಿ ಉತ್ಪಾದನೆ ಹೆಚ್ಚಿಸುವ ವಿಶೇಷ ಯೋಜನೆ:**– ಜಿಲ್ಲೆಯಲ್ಲಿ ರಾಗಿ ಬೆಳೆಯಲ್ಲಿ ಉತ್ಪಾದಕತೆ ಹೆಚ್ಚಿಸುವ ಸಲುವಾಗಿ ತಾಂತ್ರಿಕತೆ ಅಳವಡಿಸಿಕೊಂಡ ವಿಸ್ತೀರ್ಣ 3693 ಹೆ. ರೈತರಿಗೆ 55.39 ಲಕ್ಷ ಸಹಾಯಧನವನ್ನು ಡಿ.ಬಿ.ಟಿ. ಮೂಲಕ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಲಾಗಿದೆ. ಹಾಗೂ 9.68 ಲಕ್ಷ ಸಹಾಯಧನದಲ್ಲಿ 939 ರೈತರಿಗೆ ಎತ್ತು ಚಾಲಿತ ಕೃಷಿ ಉಪಕರಣಗಳನ್ನು ವಿತರಣೆ ಮಾಡಲಾಗಿದೆ.

14. **ಆತ್ಮ ಯೋಜನೆ:**– ಸದರಿ ಯೋಜನೆಯಡಿ 74.66 ಲಕ್ಷ ಅನುದಾನದಲ್ಲಿ ರೈತರಿಗೆ ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ, ಅರಣ್ಯ ಮೀನುಗಾರಿಕೆ ಇಲಾಖೆಗಳ ಸಹಭಾಗಿತ್ವದಲ್ಲಿ ರೈತರಿಗೆ ತರಬೇತಿ, ಪ್ರಾತ್ಯಕ್ಷಿಕೆ, ಅಂತರ್ ರಾಜ್ಯ ಪ್ರವಾಸ, ರೈತ ಶಕ್ತಿ ಗುಂಪುಗಳ ರಚನೆ, ಕಿಸಾನ್ ಗೋಷ್ಟಿ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

15. **ಮಣ್ಣು ಆರೋಗ್ಯ ಅಭಿಯಾನ:**– ಮಣ್ಣು ಆರೋಗ್ಯ ಚೀಟಿ ಕಾರ್ಯಕ್ರಮವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಹಾತ್ವಕಾಂಕ್ಷೆ ಯೋಜನೆಯಾಗಿದ್ದು ಜಿಲ್ಲೆಯ ಎಲ್ಲಾ ರೈತ ಹಿಡುವಳಿದಾರರಿಗೆ ಮಣ್ಣು ಆರೋಗ್ಯ ಚೀಟಿಗಳನ್ನು ವಿತರಿಸುವ ಕಾರ್ಯಕ್ರಮದಡಿ 38.55 ಲಕ್ಷ ಅನುದಾನದಲ್ಲಿ ಮಣ್ಣು ಆರೋಗ್ಯ ಚೀಟಿಗಳನ್ನು ವಿತರಣೆ ಮಾಡಲಾಗಿದೆ.

16. **ಕೃಷಿ ಭಾಗ್ಯ:**– ಕೃಷಿ ಭಾಗ್ಯ ಯೋಜನೆ ಮುಖ್ಯ ಉದ್ದೇಶ ಮಳೆಯಾಶ್ರಿತ ರೈತ ಸಮುದಾಯದ ಜೀವನೋಪಾಯವನ್ನು ಉತ್ತಮಪಡಿಸುವುದಾಗಿದ್ದು, 2017–18ನೇ ಸಾಲಿನಲ್ಲಿ 581.30 ಲಕ್ಷ ಸಹಾಯಧನದಲ್ಲಿ 865 ಫಲಾನುಭವಿಗಳಿಗೆ ಕೃಷಿ ಹೊಂಡ ನಿರ್ಮಾಣ ಹಾಗೂ ಇತರೇ ಘಟಕಗಳಾದ ತುಂತುರು ನೀರಾವರಿ, ಡೀಸೆಲ್ ಪಂಪ್‌ಸೆಟ್, ಬದು ನಿರ್ಮಾಣ, ಬೆಳೆ ಪದ್ಧತಿ, ಪಾಲಿಹೌಸ್ ಘಟಕಗಳಿಗೆ ಸಹಾಯಧನ ನೀಡಲಾಗಿದೆ.

17. **ಎಸ್.ಎಂ.ಎ.ಎಂ:**– ಕೃಷಿ ಯಾಂತ್ರೀಕರಣ ಯೋಜನೆಯಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹೊಂದಾಣಿಕೆ ಮೊತ್ತ ರೂ.92.39 ಲಕ್ಷ ಅನುದಾನದಲ್ಲಿ 324 ಜನ ಫಲಾನುಭವಿಗಳಿಗೆ ಆಧುನಿಕ ಕೃಷಿ ಯಂತ್ರೋಪಕರಣಗಳನ್ನು ಸಹಾಯಧನದಲ್ಲಿ ವಿತರಣೆ ಮಾಡಲಾಗಿದೆ.

18. **ಬಂಡವಾಳ ವೆಚ್ಚ:**– ಯೋಜನೆಯಡಿ 332 ರೈತರಿಗೆ 71.74 ಲಕ್ಷ ಅನುದಾನದಲ್ಲಿ ಶೇ.90ರ ಸಹಾಯಧನದಲ್ಲಿ ಹನಿ ನೀರಾವರಿ/ ತುಂತುರು ನೀರಾವರಿ ಘಟಕಗಳನ್ನು ವಿತರಣೆ ಮಾಡಲಾಗಿದೆ.

19. PÀ¥ÀÄ AiÀÄÄwæêÀÄgÀÄ :- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಕೃಷಿ ಯಾಂತ್ರೀಕರಣ ಘಟಕದಡಿ 10 ರೈತರಿಗೆ 4.94 ಲಕ್ಷ ಸಹಾಯಧನದಲ್ಲಿ ಕೃಷಿ ಯಂತ್ರೋಪಕರಣಗಳನ್ನು ವಿತರಣೆ ಮಾಡಲಾಗಿದೆ.

20. ರೈತ ಸಂಪರ್ಕ ಕೇಂದ್ರ ಕಟ್ಟಡ ನಿರ್ಮಾಣ:– ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ 85.00 ಲಕ್ಷ ಅನುದಾನದಲ್ಲಿ ಕನಕಪ್ಪರ ತಾಲ್ಲೂಕಿನ ದೊಡ್ಡಾಲಹಳ್ಳಿ ಹಾಗೂ ರಾಮನಗರ ತಾಲ್ಲೂಕಿನ ಬಿಡದಿಯಲ್ಲಿ ರೈತ ಸಂಪರ್ಕ ಕೇಂದ್ರ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ.

21. ಅನುಸೂಚಿತ ಮತ್ತು ಬುಡಕಟ್ಟು ಜಾತಿ ಉಪಯೋಜನೆ:– ಸದರಿ ಯೋಜನೆಯಡಿ 67.23 ಲಕ್ಷ ಅನುದಾನದಲ್ಲಿ ಪ.ಜಾ/ಪ.ಪಂ.ದ 96 ರೈತರಿಗೆ ಶೇ.90ರ ಸಹಾಯಧನದಲ್ಲಿ ಆಧುನಿಕ ಕೃಷಿ ಯಂತ್ರೋಪಕರಣಗಳನ್ನು ವಿತರಣೆ ಮಾಡಲಾಗಿದೆ.

22. ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ–ಜಲಾನಯನ ಅಭಿವೃದ್ಧಿ:– 2017–18ನೇ ಸಾಲಿಗೆ ಪ್ರಧಾನಮಂತ್ರಿ ಕೃಷಿ ಸಿಂಚಯಿ ಯೋಜನೆಯಡಿ ಲಭ್ಯವಿದ್ದ ರೂ.294.16 ಲಕ್ಷ (ಪ್ರಾರಂಭಿಕ ಶಿಲ್ಕು) ರೂ.ಗಳು ಹಾಗೂ ಬಿಡುಗಡೆಯಾದ ಅನುದಾನ ರೂ.650.51 ಲಕ್ಷ ರೂ.ಗಳು ಸೇರಿ ಒಟ್ಟು 944.67 ಲಕ್ಷ ರೂ.ಗಳಲ್ಲಿ, 510.28 ಲಕ್ಷಗಳ ವೆಚ್ಚದಲ್ಲಿ ಜಲಾನಯನ ಪ್ರದೇಶದಲ್ಲಿ 196 ವಿವಿಧ ಜಲಾನಯನ ಕಾಮಗಾರಿಗಳು ಹಾಗೂ ಅರಣ್ಯ ಸಸಿ ವಿತರಣೆಗೆ ವೆಚ್ಚ ಮಾಡಲಾಗಿರುತ್ತದೆ. ಸದರಿ ಯೋಜನೆಯಡಿ ಉಳಿಕೆ ಅನುದಾನವನ್ನು 2018–19ನೇ ಸಾಲಿನಲ್ಲಿ ಜಲಾನಯನ ಕಾಮಗಾರಿ ಕೈಗೊಳ್ಳಲು ವೆಚ್ಚ ಭರಿಸಲಾಗುವುದು.

23. ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ(ಇತರೆ ಉಪಚಾರಗಳು):– 2017–18ನೇ ಸಾಲಿಗೆ ಬಿಡುಗಡೆಯಾದ ಅನುದಾನ ರೂ.306.66 ಲಕ್ಷ ಹಾಗೂ ರೂ.121.22 ಲಕ್ಷ (ಪ್ರಾರಂಭಿಕ ಶಿಲ್ಕು) ಸೇರಿ ಒಟ್ಟು 427.88 ಲಕ್ಷ ಗಳಲ್ಲಿ 224.31 ಲಕ್ಷ ರೂ.ಗಳ ವೆಚ್ಚದಲ್ಲಿ ಜಲಾನಯನ ಪ್ರದೇಶದಲ್ಲಿ 80 ವಿವಿಧ ಜಲಾನಯನ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ಸದರಿ ಯೋಜನೆಯಡಿ ಉಳಿಕೆ ಅನುದಾನವನ್ನು 2018–19ನೇ ಸಾಲಿನಲ್ಲಿ ಜಲಾನಯನ ಕಾಮಗಾರಿ ಕೈಗೊಳ್ಳಲು ವೆಚ್ಚ ಭರಿಸಲಾಗುವುದು.

ತೋಟಗಾರಿಕೆ ಇಲಾಖೆ

ಮುನ್ನೋಟ:

ರಾಮನಗರ ಜಿಲ್ಲೆಯು ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ.27 ಭೂದಾಪು 2006 (ಭಾಗ–3), ದಿನಾಂಕ: 03–08–2007. ಕರ್ನಾಟಕ ರಾಜ್ಯ ಗೆಜೆಟ್ ವಿಶೇಷ ಪತ್ರಿಕೆ ಭಾಗ–4 (ಎ) ರಂತೆ ಹೊಸದಾಗಿ 2007–08 ನೇ ಸಾಲಿನಿಂದ ಅಸ್ತಿತ್ವಕ್ಕೆ ಬಂದಿರುತ್ತದೆ. ರಾಮನಗರ ಜಿಲ್ಲೆಯ ಒಟ್ಟು 3,55,912 ಹೆ ಪ್ರದೇಶದ ಭೌಗೋಳಿಕ ವಿಸ್ತೀರ್ಣದಲ್ಲಿದ್ದು (3555 sq ಕಿ.ಮೀ) ಒಟ್ಟು 10.30 ಲಕ್ಷ ಜನಸಂಖ್ಯೆಯನ್ನು ಹೊಂದಿರುತ್ತದೆ. ಜಿಲ್ಲೆಯ ಉತ್ತರ ಅಕ್ಷಾಂಶ 12 ಮತ್ತು ಪೂರ್ವ ರೇಖಾಂಶ 72 ಹಾಗೂ 77.3 ಬೆಂಗಳೂರು ನೈರುತ್ಯ ದಿಕ್ಕಿನವರೆಗೆ ಹರಡಿರುತ್ತದೆ. ಇದು ಕರ್ನಾಟಕದ 28 ನೇ ಜಿಲ್ಲೆಯಾಗಿದ್ದು ಮೂಲತಃ ಬೆಂಗಳೂರಿನಿಂದ ಬೇರ್ಪಡಿಸಲಾಗಿದೆ. ರಾಮನಗರವು ಬೆಂಗಳೂರಿನಿಂದ 50 ಕಿ.ಮೀಗಳ ಅಂತರದಲ್ಲಿದ್ದು ಒಟ್ಟು ನಾಲ್ಕು ತಾಲ್ಲೂಕುಗಳನ್ನು (ರಾಮನಗರ ಚನ್ನಪಟ್ಟಣ, ಮಾಗಡಿ ಹಾಗೂ ಕನಕಪುರ) ಹೊಂದಿರುತ್ತದೆ.

ಜಿಲ್ಲೆಯ ವಾರ್ಷಿಕ ಮಳೆಯ ಪ್ರಮಾಣವು 800 ರಿಂದ 900 ಮಿ.ಮಿ ಆಗಿರುತ್ತದೆ. ಇಲ್ಲಿಯ ಮಣ್ಣಿನ ಗುಣ ಮತ್ತು ಹವಾಗುಣ ಬಹಳಷ್ಟು ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಯೋಗ್ಯವಾಗಿರುತ್ತದೆ. ಹಣ್ಣಿನ ಬೆಳೆಗಳಾದ ಮಾವು, ಬಾಳೆ, ಸೀಬೆ, ಸಪೋಟ, ಪಪ್ಪಾಯ ಹಾಗೂ ತರಕಾರಿ ಬೆಳೆಗಳಾದ ಟೊಮ್ಯಾಟೊ, ಬದನೆ, ಹಸಿಮೆಣಸಿನಕಾಯಿ, ಗೆಡ್ಡೆಕೋಸು, ಬೆಂಡೆ ಈ ಜಿಲ್ಲೆಯ ಪ್ರಮುಖವಾದ ತೋಟಗಾರಿಕೆ ಬೆಳೆಗಳಾಗಿರುತ್ತದೆ. ತೆಂಗು ಮತ್ತು ಅಡಿಕೆ ಮುಖ್ಯವಾದ ತೋಟದ ಬೆಳೆಗಳಾಗಿರುತ್ತದೆ. ಪುಷ್ಪ ಬೆಳೆಗಳಾದ ಗುಲಾಬಿ, ಚಂಡು ಹೂ, ಮಲ್ಲಿಗೆ, ಕಾಕಡ, ಸೇವಂತಿಗೆ, ಆಸ್ಟರ್, ಮುಂತಾದವುಗಳನ್ನು ವಾಣಿಜ್ಯವಾಗಿ ಬೆಳೆಯಬಹುದಾಗಿರುತ್ತದೆ.

ಆದ್ದರಿಂದ ರಾಮನಗರ ಜಿಲ್ಲೆಯ ತೋಟಗಾರಿಕೆ ಬೆಳೆಗಳ ತವರೂರಾಗಿದ್ದು, ಇನ್ನೂ ಹೆಚ್ಚಿನ ಅಭಿವೃದ್ಧಿಗೆ ವಿಪುಲ ಅವಕಾಶವಿರುತ್ತದೆ. ಇಂದಿನ ದಿನಗಳಲ್ಲಿ ತೋಟಗಾರಿಕೆಯು ಕೃಷಿಗಿಂತ ಹೆಚ್ಚು ಲಾಭದಾಯಕವಾಗಿರುವ ಕಾರಣ ರೈತರು ತೋಟಗಾರಿಕೆ ಬೆಳೆಗಳಿಗೆ ಆಸಕ್ತಿ ತೋರುತ್ತಿರುವುದು ಸಾಮಾನ್ಯವಾಗಿರುವುದರಿಂದ ತೋಟಗಾರಿಕೆ ಇಲಾಖೆಯ ಜವಾಬ್ದಾರಿಯು ಸರಿಸಮಾನವಾಗಿ ಹೆಚ್ಚುತ್ತಿದೆ.

ಇತ್ತೀಚಿನ ದಿನಗಳಲ್ಲಿ ತೋಟಗಾರಿಕಾ ಬೆಳೆಗಳು ಹೆಚ್ಚಿನ ಪ್ರಾಮುಖ್ಯತೆ ಪಡೆದಿದ್ದು, ರೈತರ ಆರ್ಥಿಕ ಮಟ್ಟವನ್ನು ಹೆಚ್ಚಿಸುವಲ್ಲಿ ಸಫಲವಾಗಿದೆ. ತೋಟಗಾರಿಕೆಯ ಹೊಸ ತಾಂತ್ರಿಕತೆಗಳ ಅನುಕರಣೆಗೆ ರೈತರ ಮುಂದೆ ಬರುತ್ತಿರುವ ಹಿನ್ನೆಲೆಯಲ್ಲಿ ರೈತ ಸಮುದಾಯದಿಂದ ಹೆಚ್ಚಿನ ಬೇಡಿಕೆ ಬರುತ್ತಿದೆ. ಜಿಲ್ಲೆಯ ರೈತರಿಗೆ ವಿವಿಧ ತೋಟಗಾರಿಕೆ ಬೆಳೆಗಳ ಉತ್ಪಾದನೆಯಲ್ಲಿ ತುಂಬಾ ಆಸಕ್ತಿ ಇದ್ದು ಸಕ್ರಿಯವಾಗಿ ಕಾರ್ಯಪ್ರವೃತ್ತರಾಗಿರುತ್ತಾರೆ.

ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ ಹಾಗೂ ತೋಟಗಾರಿಕೆ ಅಭಿವೃದ್ಧಿ.

- ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ : 355912 ಹೆ.
- ಒಟ್ಟು ಸಾಗುವಳಿ ಭೂಮಿ ವಿಸ್ತೀರ್ಣ : 172097 ಹೆ.
- ಒಟ್ಟು ಅಂದಾಜು ತೋಟಗಾರಿಕೆ ಬೆಳೆಗಳ ವಿಸ್ತೀರ್ಣ : 60124 ಹೆ.
- ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ತೋಟಗಾರಿಕೆ ಬೆಳೆಯ ವಿಸ್ತೀರ್ಣ : ಶೇ.17.48
- ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಜಿಲ್ಲೆಯ ಒಟ್ಟು ಸಾಗುವಳಿ ಭೂಮಿ ವಿಸ್ತೀರ್ಣದಲ್ಲಿ : ಶೇ.35.17
- ಒಟ್ಟು ಅಂದಾಜು ಬೀಳು ಭೂಮಿ ವಿಸ್ತೀರ್ಣ : 30,000 ಹೆ.
- ತೋಟಗಾರಿಕೆ ಬೆಳೆಗಳನ್ನು ಅಭಿವೃದ್ಧಿ ಪಡಿಸಲು ಅವಕಾಶವಿರುವಂತಹ ವಿಸ್ತೀರ್ಣ 30,000 ಹೆ.

ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು

1. ಹನಿ ನೀರಾವರಿಗಾಗಿ ಕೇಂದ್ರವಲಯ ಯೋಜನೆ: (ಲೆಕ್ಕ ಶೀರ್ಷಿಕೆ: 2435–00–101–0–28)

2017–18 ನೇ ಸಾಲಿನ ಹನಿ ನೀರಾವರಿಯಾಗಿ ಕೇಂದ್ರವಲಯ ಯೋಜನೆಗೆ ರೂ.7.00 ಲಕ್ಷಗಳ ಗುರಿಯಿದ್ದು, ಬಿಡುಗಡೆಯಾದ ರೂ.6.99 ಲಕ್ಷಗಳನ್ನು ಉಪಯೋಗಿಸಿಕೊಂಡು ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

2. ತೋಟಗಾರಿಕಾ ಕಟ್ಟಡಗಳು (ಲೆಕ್ಕ ಶೀರ್ಷಿಕೆ: 2435–00–101–0–32)

2017–18 ನೇ ಸಾಲಿನ ತೋಟಗಾರಿಕಾ ಕಟ್ಟಡಗಳು ಯೋಜನೆಗೆ ರೂ.11.50 ಲಕ್ಷಗಳ ಗುರಿಯಿದ್ದು, ಈ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಕ್ಕೆ ಬಿಡುಗಡೆಯಾದ ರೂ.11.50 ಲಕ್ಷಗಳಲ್ಲಿ ಅವರ ವತಿಯಿಂದಲೇ ರೂ.10.83 ಲಕ್ಷಗಳು ಪ್ರಗತಿಯನ್ನು ಸಾಧಿಸಿ, ಹಿ.ಸ.ತೋ.ನಿ (ಜಿಪಂ) ಚನ್ನಪಟ್ಟಣ ಮತ್ತು ಮಾಗಡಿ ತಾಲ್ಲೂಕು ರವರ ಕಛೇರಿ ಗೋಡೌನ್, ತರಬೇತಿ ಕೊಠಡಿ ಹಾಗೂ ಪಂಪ್ ಸೆಟ್ ನಿರ್ಮಾಣ ಹಾಗೂ ಕಛೇರಿ ಅಧುನೀಕರಣ ಕಾರ್ಯ ಮಾಡಲಾಗಿರುತ್ತದೆ.

3. ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ: (ಲೆಕ್ಕ ಶೀರ್ಷಿಕೆ: 2435–00–101–0–35)

ಈ ಯೋಜನೆಯಡಿ ತೋಟಗಾರಿಕೆ ಕ್ಷೇತ್ರಗಳಲ್ಲಿ ನಿರ್ವಹಣಾ ಕಾರ್ಯ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿಯನ್ನು ತೆಗೆದುಕೊಳ್ಳಲಾಗುವುದು. ಸದರಿ ಕಾರ್ಯಕ್ಕೆ ಈ ಸಾಲಿನಲ್ಲಿ ರೂ.16.00 ಲಕ್ಷ ನಿಗಧಿಪಡಿಸಿದ್ದು, ಪೂರ್ಣ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರೀ ಅನುದಾನದಲ್ಲಿ ರೂ.15.99 ಲಕ್ಷಗಳ ಆರ್ಥಿಕ ಪ್ರಗತಿ ಸಾಧಿಸಿದ್ದು, ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

ಕ್ಷೇತ್ರ ನಿರ್ವಹಣಾ ಕಾರ್ಯಗಳು:

- ಬೇವಿನ ಹಿಂಡಿ, ಕೊಟ್ಟಿಗೆ ಗೊಬ್ಬರ, ಕೆಂಪುಮಣ್ಣು, ಜೈವಿಕ ಗೊಬ್ಬರ ಹಾಗೂ ಸಲಕರಣೆಗಳ ಖರೀದಿ ಮತ್ತು ಇತರೆ ಕಾರ್ಯಗಳು.
- ಉಳುಮೆ, ಪಾತಿ ಮುಂತಾದ ಗುತ್ತಿಗೆ ಕೆಲಸಗಳ ವೆಚ್ಚ.

4. ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ: (ಲೆಕ್ಕ ಶೀರ್ಷಿಕೆ: 2435–00–101–0–36)

ಜಿಲ್ಲೆಯಲ್ಲಿ ಹೊಸದಾಗಿ ತೋಟಗಳನ್ನು ಅಭಿವೃದ್ಧಿ ಪಡಿಸಲಿಸಚ್ಚಿಸುವ ರೈತರಿಗೆ ಒಳ್ಳೆಯ ಗುಣಮಟ್ಟದ ತೆಂಗಿನ ಸಸಿಗಳು, ಉತ್ಪಾದಿಸಿ ಸರಬರಾಜು ಮಾಡುವ ಉದ್ದೇಶವಿರುತ್ತದೆ. 2017–18 ನೇ ಸಾಲಿನಲ್ಲಿ 17,181 ಸಂಖ್ಯೆಯ ಉತ್ತಮ ಗುಣಮಟ್ಟದ ಬೀಜದ ತೆಂಗಿನಕಾಯಿಗಳನ್ನು ಸಂಗ್ರಹಿಸಿ ಸಸಿಗಳನ್ನು ಉತ್ಪಾದಿಸುವ ಗುರಿ ಇದ್ದು, ಪೂರ್ಣ ಪ್ರಗತಿ ಸಾಧಿಸಲಾಗಿರುತ್ತದೆ. 2015–16 ನೇ ಮತ್ತು 2016–17 ನೇ ಸಾಲಿನಲ್ಲಿ ಬಿತ್ತನೆ ಮಾಡಿ ಅಭಿವೃದ್ಧಿಪಡಿಸಲಾದ 40,467 ತೆಂಗಿನ ಗಿಡಗಳ ನಿರ್ವಹಣೆ ಮಾಡಲಾಗಿದೆ. ಈ ಕಾರ್ಯಕ್ರಮಕ್ಕೆ ರೂ.6.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ರೂ.5.99 ಲಕ್ಷಗಳ ಆರ್ಥಿಕ ಪ್ರಗತಿ ಸಾಧಿಸಲಾಗಿರುತ್ತದೆ.]

5. ಪ್ರಚಾರ ಮತ್ತು ಸಾಹಿತ್ಯ (ಲೆಕ್ಕ ಶೀರ್ಷಿಕೆ: 2435–00–101–0–35):

ಸದರಿ ಯೋಜನೆಯಡಿ ತೋಟಗಾರಿಕೆ ಬೆಳೆಗಳ ಬಗ್ಗೆ ತಾಂತ್ರಿಕ ವಿಷಯಗಳು ಹಾಗೂ ಇಲಾಖಾ ಯೋಜನೆಗಳ ಬಗ್ಗೆ ಮಾಹಿತಿ ನೀಡಲು ಕರಪತ್ರ, Pamplets ಹಾಗೂ ಬ್ರೋಚರ್‌ಗಳನ್ನು ಮುದ್ರಿಸಿ ರೈತರಿಗೆ ವಿತರಿಸಲು ರೂ.5.00 ಲಕ್ಷಗಳ ಗುರಿಯಿದ್ದು, ಬಿಡಗಡೆಯಾದ ರೂ.4.99 ಲಕ್ಷಗಳನ್ನು ಉಪಯೋಗಿಸಿಕೊಂಡು ಪ್ರಗತಿ ಸಾಧಿಸಲಾಗಿರುತ್ತದೆ.

6. ಜೇನು ಕೃಷಿ: (ಲೆಕ್ಕ ಶೀರ್ಷಿಕೆ: 2851–00–107–0–33):

ಈ ಯೋಜನೆಯಡಿ ತೋಟಗಾರಿಕೆ ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಲು ಜೇನು ಕೃಷಿ ಮಾಡುವ ರೈತರಿಗೆ ಶೇಕಡ.50 ರ ಸಹಾಯಧನದಲ್ಲಿ ಜೇನು ಪೆಟ್ಟಿಗೆ ಮತ್ತು ಜೇನು ಕಾಲೋನಿ ನೀಡಲು ಹಾಗೂ ತರಬೇತಿ ವೆಚ್ಚಕ್ಕಾಗಿ ರೂ.2.00 ಲಕ್ಷಗಳ ಗುರಿಯಿದ್ದು, ಬಿಡಗಡೆಯಾದ ರೂ.1.99 ಲಕ್ಷಗಳನ್ನು ಉಪಯೋಗಿಸಿಕೊಂಡು ಪ್ರಗತಿ ಸಾಧಿಸಲಾಗಿರುತ್ತದೆ.

ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು

1. ರೈತರಿಗೆ ತರಬೇತಿ (ಲೆಕ್ಕ ಶೀರ್ಷಿಕೆ: 2435–00–101–0–64)

ತೋಟಗಾರಿಕಾ ಕ್ಷೇತ್ರಗಳಲ್ಲಿ ಅಭಿವೃದ್ಧಿಪಡಿಸಲಾದ ಆಧುನಿಕ ತಂತ್ರಜ್ಞಾನವನ್ನು ರೈತರಿಗೆ ಮನದಟ್ಟು ಮಾಡುವ ಸಲುವಾಗಿ ರೈತರಿಗೆ ತರಬೇತಿಗಾಗಿ ರೂ. 0.50 ಲಕ್ಷಗಳ ಅನುದಾನದ ಗುರಿ ಇದ್ದು, ಅದರಲ್ಲಿ ರೂ. 0.49 ಲಕ್ಷಗಳ ಪ್ರಗತಿ ಸಾಧಿಸಲಾಗಿರುತ್ತದೆ.

2. ರೈತರಿಗೆ ಸಹಾಯ: (ಲೆಕ್ಕ ಶೀರ್ಷಿಕೆ: 2435–00–101–0–62)

ಈ ಯೋಜನೆಯಡಿಯಲ್ಲಿ ನಾಲ್ಕು ಕಾರ್ಯಕ್ರಮಗಳಿರುತ್ತವೆ. ರೈತರಿಗೆ ಸಹಾಯ ಯೋಜನೆಗೆ ರೂ.9.00 ಲಕ್ಷಗಳ ಗುರಿಯಿದ್ದು, ರೂ.8.98 ಲಕ್ಷಗಳ ಪ್ರಗತಿಯನ್ನು ಸಾಧಿಸಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತದೆ.

- **ಪ್ರದೇಶ ವಿಸ್ತರಣೆ:**

  ರೈತರ ತೋಟದಲ್ಲಿ ಬಹುವಾರ್ಷಿಕ ತೋಟಗಾರಿಕೆ ಕಸಿ ಗಿಡಗಳನ್ನು ನೆಡಲು ರೂ 3.47885 ಲಕ್ಷಗಳನ್ನು ವೆಚ್ಚ ಭರಿಸಿ 349 ಎಕರೆ ಭೌತಿಕ ಸಾಧನೆ ಮಾಡಲಾಗಿದೆ.

- **ಅಲಂಕಾರಿಕ ಗಿಡಗಳ ಅಭಿವೃದ್ಧಿ:**

  ರಾಷ್ಟ್ರೀಯ ದಿನಾಚರಣೆಯಂದು ಕಛೇರಿ ಮತ್ತು ಸರ್ಕಾರಿ ಕಾರ್ಯಕ್ರಮಗಳ ವೇದಿಕೆಯ ಮುಂದೆ ಜೋಡಿಸಲು ಮತ್ತು ರೂ.0.87 ಲಕ್ಷಗಳನ್ನು ವೆಚ್ಚ ಭರಿಸಿ 1740 ಅಲಂಕಾರಿಕಾ ಗಿಡಗಳನ್ನು ಅಭಿವೃದ್ಧಿ ಪಡಿಸುವ ಗುರಿಯಿದ್ದು ಪೂರ್ಣ ಗುರಿ ಸಾಧಿಸಲಾಗಿದೆ.

- **ಶೇಕಡ 50 ರ ಸಹಾಯಧನದಲ್ಲಿ ಸಸ್ಯಸಂರಕ್ಷಣಾ ಔಷಧಿಗಳ ವಿತರಣೆ:**

  ಜಿಲ್ಲೆಯಲ್ಲಿ ರೈತರು ಬೆಳೆಯುತ್ತಿರುವ ತೋಟಗಾರಿಕೆ ಬೆಳೆಗಳಿಗೆ ಬಾಧಿಸುತ್ತಿರುವ ಕ್ರಿಮಿಕೀಟ ಹಾಗೂ ರೋಗಗಳನ್ನು ನಿಯಂತ್ರಿಸುವ ಸಲುವಾಗಿ ಶೇಕಡಾ 50 ರಷ್ಟು ಸಹಾಯಧನದಲ್ಲಿ ಫಲಾನುಭವಿಗಳಿಗೆ ರೂ.4.33168 ಲಕ್ಷಗಳ ವೆಚ್ಚ ಭರಿಸಿ ಆರ್ಥಿಕ ಪ್ರಗತಿ ಸಾಧಿಸಲಾಗಿದೆ.

- **ಸಾಮಾಜಿಕ ತೋಟಗಾರಿಕೆ:**

  ಈ ಯೋಜನೆಯಡಿ ಶಾಲಾ ಆವರಣದಲ್ಲಿ ಹಾಗೂ ಸರ್ಕಾರಿ ಸಂಸ್ಥೆಗಳ ಆವರಣದಲ್ಲಿ ಪರಿಸರ/ ವನ ಸಂಪತ್ತು ಹೆಚ್ಚಿಸಲು ಹಣ್ಣಿನ ಕಸಿ/ಸಸಿ ಅಥವಾ ಇತರ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ಗಿಡಗಳನ್ನು ವಿತರಿಸಿ ಕಿರು ತೋಟ ನಿರ್ಮಿಸಲು ಕ್ರಮ ವಹಿಸುವುದು. ಹಾಗೂ ಸಾಮಾಜಿಕ ತೋಟಗಾರಿಕೆಗೆ ಅಭಿವೃದ್ಧಿಗಾಗಿ ಒಟ್ಟು ರೂ.0.30 ಲಕ್ಷಗಳ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

3. ವಿಶೇಷ ಘಟಕ ಯೋಜನೆ: (ಲೆಕ್ಕ ಶೀರ್ಷಿಕೆ: 2225–00–101–0–64)

ಈ ಯೋಜನೆಯಡಿ ಪರಿಶಿಷ್ಟ ಜಾತಿಯ ಫಲಾನುಭವಿಗಳ ಜಮೀನಿನಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ರೂ.3.17 ಲಕ್ಷಗಳ ಗುರಿಯಿದ್ದು, ರೂ.2.92 ಲಕ್ಷಗಳ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

4. ಗಿರಿಜನ ಉಪಯೋಜನೆ: (ಲೆಕ್ಕ ಶೀರ್ಷಿಕೆ: 2225–00–102–0–70)

ಈ ಯೋಜನೆಯಡಿ ಪರಿಶಿಷ್ಟ ವರ್ಗದ ಫಲಾನುಭವಿಗಳ ಜಮೀನಿನಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ರೂ.0.40 ಲಕ್ಷಗಳ ಗುರಿಯಿದ್ದು, ರೂ.0.00 ಲಕ್ಷಗಳ ಪ್ರಗತಿಯನ್ನು ಸಾಧಿಸಲಾಗಿರುತ್ತದೆ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ರಾಮನಗರ ಜಿಲ್ಲೆಯ 2017–18 ನೇ ಸಾಲಿನ ವಾರ್ಷಿಕ ಆಡಳಿತ ವರದಿ

ಜಿಲ್ಲೆಯು ಹೈನೋದ್ಯಮಕ್ಕೆ ಹೆಸರು ವಾಸಿಯಾಗಿದ್ದು ಸರಾಸರಿ ವಾರ್ಷಿಕ 2337.58 ಲಕ್ಷ ಲೀಟರ್ ಹಾಲು, ಮಾಂಸ 29.72 ಸಾವಿರ ಟನ್, ಮೊಟ್ಟೆ 178.31 ಲಕ್ಷ ಉತ್ಪಾದನೆಯಾಗುತ್ತಿದೆ. ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದಡಿ ಜಿಲ್ಲೆಯಲ್ಲಿ 869 ಹಾಲು ಉತ್ಪಾದಕರ ಸಹಕಾರ ಸಂಘಗಳು ಅಸ್ಥಿತ್ವದಲ್ಲಿರುತ್ತವೆ.

ಹತ್ತೋಂಬತ್ತನೇ ಜಾನುವಾರು ಗಣತಿಯಂತೆ (2012 ರ) ಒಟ್ಟು ಜಾನುವಾರುಗಳ ಸಂಖ್ಯೆ:– ದೇಶೀ ತಳಿ ದನ–1.34 ಲಕ್ಷ, ಮಿಶ್ರತಳಿ ದನ–1.25 ಲಕ್ಷ, ಎಮ್ಮೆ–0.30 ಲಕ್ಷ, ಕುರಿ–1.52 ಲಕ್ಷ, ಮೇಕೆ–1.20 ಲಕ್ಷ ಮತ್ತು ಹಿತ್ತಲ ಕೋಳಿ–2.32 ಲಕ್ಷ, ವಾಣಿಜ್ಯ ಮೊಟ್ಟೆ ಕೋಳಿ 1.21 ಲಕ್ಷ, ಮಾಂಸದ ಕೋಳಿ 9.31 ಲಕ್ಷ ಇರುತ್ತವೆ. ಜಿಲ್ಲೆಯಲ್ಲಿ 2.47 ಲಕ್ಷ ಕುಟುಂಬಗಳಿದ್ದು, 1.76 ಲಕ್ಷ ಕುಟುಂಬಗಳು ಪಶುಪಾಲನೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. (ದನ ಸಾಕಾಣಿಕೆದಾರರು 0.87 ಲಕ್ಷ, ಎಮ್ಮೆ ಸಾಕಾಣಿಕೆದಾರರು 0.16 ಲಕ್ಷ, ಕುರಿ/ಮೇಕೆ ಸಾಕಾಣಿಕೆದಾರರು 0.46 ಲಕ್ಷ, ಕೋಳಿ ಸಾಕಾಣಿಕೆದಾರರು 0.27 ಲಕ್ಷ) ಜಿಲ್ಲೆಯಲ್ಲಿ ಪಾಲಿಕ್ಲಿನಿಕ್ 1, ಪಶುಆಸ್ಪತ್ರೆ 17, ಪಶುಚಿಕಿತ್ಸಾಲಯ 63, ಸಂಚಾರಿ ಪಶುಚಿಕಿತ್ಸಾಲಯ 4, ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ 36, ಕೋಳಿ ಸಾಕಾಣಿಕಾ ಕೇಂದ್ರ 1, ಒಟ್ಟು 122 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ಪಶುಸಂಗೋಪನಾ ಇಲಾಖೆಯು ಅಭಿವೃದ್ಧಿ ಇಲಾಖೆಗಳಲ್ಲೊಂದಾಗಿದ್ದು ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರು, ತಾಲ್ಲೂಕು/ ಹೋಬಳಿ ಮಟ್ಟದಲ್ಲಿ ಸಹಾಯಕ ನಿರ್ದೇಶಕರು, ಪಶುವೈದ್ಯಾಧಿಕಾರಿ ಹಾಗೂ ಗ್ರಾಮಾಂತರ ಪಶುವೈದ್ಯ ಸಂಸ್ಥೆಗಳಲ್ಲಿ ಪಶುವೈದ್ಯಕೀಯ ಪರೀಕ್ಷಕರು ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಜಿಲ್ಲಾ/ ತಾಲ್ಲೂಕು ಮಟ್ಟದ ಕಾರ್ಯಾಲಯಗಳಲ್ಲಿ ತಾಂತ್ರಿಕ / ಅರೆ ತಾಂತ್ರಿಕ / ಲಿಪಿಕ ವರ್ಗದ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಜಾನುವಾರು ಆರೋಗ್ಯ ಸಂರಕ್ಷಣೆ ಇಲಾಖೆಯ ಆದ್ಯ ಕರ್ತವ್ಯವಾಗಿದ್ದು ಕಾಲ ಕಾಲಕ್ಕೆ ಜಾನುವಾರು ರೋಗಗಳ ವಿರುದ್ಧ ಸಾಮೂಹಿಕ ಲಸಿಕಾ ಕಾರ್ಯಕ್ರಮ ಹಮ್ಮಿಕೊಂಡು ರೋಗಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ ದಿನನಿತ್ಯ ಪಶುವೈದ್ಯ ಸಂಸ್ಥೆಗಳಲ್ಲಿ ಜಾನುವಾರುಗಳ ರೋಗಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ರೈತ ಸಂದರ್ಶನ ಸಭೆಗಳನ್ನು ಏರ್ಪಡಿಸಿ ಜಾನುವಾರುಗಳ ಸಾಕಾಣಿಕೆ ಮತ್ತು ಉತ್ಪತ್ತಿ ಹಾಗೂ ಉತ್ಪನ್ನಗಳ ಹೆಚ್ಚಳಕ್ಕೆ ಸಲಹೆ ಸೂಚನೆಗಳನ್ನು ನೀಡುತ್ತಿದ್ದಾರೆ.

ಜಾನುವಾರುಗಳಲ್ಲಿ ಕಾಯಿಲೆ ಮರುಕಳಿಸದಂತೆ ತಡೆಯಲು ಕಾಲು ಬಾಯಿ ಜ್ವರ ಲಸಿಕಾ ಕಾರ್ಯಕ್ರಮವನ್ನು ವರ್ಷಕ್ಕೆ ಎರಡು ಬಾರಿ ಹಮ್ಮಿಕೊಂಡಿರುತ್ತದೆ.

ಇತರೆ ಸಾಂಕ್ರಾಮಿಕ ರೋಗಗಳಾದ ಗಳಲೆ, ಚಪ್ಪೆ ರೋಗ ಹಾಗೂ ಕಂದು ರೋಗಕ್ಕೂ ಸಹ ಲಸಿಕೆಯನ್ನು ಮುಂಜಾಗ್ರತಾ ಕ್ರಮವಾಗಿ ಹಾಕಲಾಗಿದೆ. ಕುರಿ ಮತ್ತು ಮೇಕೆಗಳಲ್ಲಿ ಮುಂಜಾಗ್ರತೆ ಕ್ರಮವಾಗಿ ಕರುಳು ಬೇನೆ ಹಾಗೂ ಪಿ.ಪಿ.ಆರ್. ರೋಗ ಬಾರದಂತೆ ಲಸಿಕೆ ಕಾರ್ಯಕ್ರಮ ಹಮ್ಮಿಕೊಂಡು ರೋಗಗಳನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿದೆ. ಕೋಳಿಗಳಿಗೆ ಕೊಕ್ಕರೆ ರೋಗದ ವಿರುದ್ಧ ಲಸಿಕೆ ಎಲ್ಲಾ ಪಶುವೈದ್ಯ ಸಂಸ್ಥೆಗಳಲ್ಲಿ ಲಭ್ಯವಿರುತ್ತದೆ.

ಪಶುವೈದ್ಯ ಸಂಸ್ಥೆಗಳಲ್ಲಿ ಪ್ರೋವನ್ ಬ್ರೀಡ್ ತಳಿಗಳಾದ ಹೆಚ್.ಎಫ್. ಜರ್ಸಿ, ಅಮೃತ್ ಮಹಲ್, ಸುರ್ತಿ, ಮುರ್ರಾ, ಘನೀಕೃತ ವೀರ್ಯ ನಳಿಕೆಗಳು ಲಭ್ಯವಿದ್ದು, ಪ್ರತಿ ವೀರ್ಯ ನಳಿಕೆಗೆ ರೂ. 15/– ಸೇವಾ ಶುಲ್ಕವನ್ನು ರೈತರಿಂದ ಸಂಗ್ರಹಿಸಿ ಹಣವನ್ನು ಸರ್ಕಾರಕ್ಕೆ ಜಮಾ ಮಾಡಲಾಗುತ್ತದೆ. ರಾಸುಗಳಲ್ಲಿ ಕೃತಕ ಗರ್ಭಧಾರಣೆ ಕಾರ್ಯಕ್ರಮ ಪ್ರಚಲಿತದಲ್ಲಿದ್ದು, ಹೆಚ್ಚು ಹಾಲನ್ನು ನೀಡುವ ರಾಸುಗಳನ್ನು ಪಡೆಯುತ್ತಿದ್ದಾರೆ. ಇದರಿಂದ ರೈತರ ಆರ್ಥಿಕ ಮಟ್ಟ ಸುಧಾರಿಸಿದ್ದು, ಹೈನುಗಾರಿಕೆಗೆ ಅವಲಂಬಿತರಾಗಿರುತ್ತಾರೆ.

ಪಶುವೈದ್ಯ ಸಂಸ್ಥೆಗಳಿಂದ ಬಹು ದೂರವಿರುವ ಗ್ರಾಮಗಳಿಗೆ ಪಶುವೈದ್ಯ ಚಿಕಿತ್ಸಾ ಸೌಲಭ್ಯ ನಾಲ್ಕು ತಾಲ್ಲೂಕುಗಳ ಪಶುವೈದ್ಯ ಸಂಚಾರಿ ಘಟಕಗಳಿಂದ ಒದಗಿಸಲಾಗಿತ್ತಿದೆ.

ಜಾನುವಾರುಗಳಲ್ಲಿ ಬರಡುತನವನ್ನು ಹೋಗಲಾಡಿಸಲು ಚಿಕಿತ್ಸಾ ಶಿಬಿರಗಳನ್ನು ಹಮ್ಮಿಕೊಂಡು ತಜ್ಞ ವೈದ್ಯರಿಂದ ಅಂತಹ ಜಾನುವಾರುಗಳನ್ನು ಪರೀಕ್ಷೆಗೆ ಒಳಪಡಿಸಿ ಸೂಕ್ತ ಚಿಕಿತ್ಸಾ ಹಾಗೂ ಸಲಹೆಗಳನ್ನು ನೀಡಲಾಗುತ್ತಿದೆ.

ಜಿಲ್ಲೆಯಲ್ಲಿ ಮೇವಿನ ಕೊರತೆಯನ್ನು ನೀಗಿಸಲು ನೀರಾವರಿ ಸೌಲಭ್ಯವಿರುವ ರೈತರಿಗೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಹಾಗೂ ಬರ ಪರಿಹಾರ ನಿಧಿಯಡಿಯಲ್ಲಿ ಸೋರ್ಗಂ ಮಲ್ಟಿಕಟ್ ಆಫ್ರಿಕನ್ ಟಾಲ್ ಮೈಜ್ (ಎ.ಟಿ.ಎಂ) ಹಾಗೂ ಮೇವಿನ ಜೋಳದ 14260 ಕಿರುಪೊಟ್ಟಣಗಳನ್ನು ಹಸಿರು ಮೇವು ಉತ್ಪಾದನೆಗಾಗಿ ರೈತರಿಗೆ ಉಚಿತವಾಗಿ ನೀಡಲಾಗಿದೆ.

ಗ್ರಾಮಾಂತರ ಪ್ರದೇಶದಲ್ಲಿ ಪೌಷ್ಟಿಕ ಆಹಾರದ ಕೊರತೆ ನೀಗಿಸಲು ಹಾಗೂ ಆರ್ಥಿಕ ಸಬಲೀಕರಣಕ್ಕೆ 7 ವಾರದ ಗಿರಿರಾಜ ಕೋಳಿಗಳನ್ನು ರಿಯಾಯಿತಿ ದರ ರೂ. 80/– ರಂತೆ ಸಾಮಾನ್ಯ ವರ್ಗದವರಿಗೆ (ಮಹಿಳಾ/ಅಲ್ಪಸಂಖ್ಯಾಂತರು/ಅಂಗವಿಕಲರು/ಇತರೆ) ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗದವರಿಗೆ ಉಚಿತವಾಗಿ ಒಟ್ಟು 10580 ಗಿರಿರಾಜ ಕೋಳಿಮರಿಗಳನ್ನು ವಿತರಿಸಲಾಗಿದೆ.

ಹಾಲು ಉತ್ಪಾದಕರಿಗೆ ಹಾಲು ಉತ್ಪಾದನೆಯನ್ನು ಉತ್ತೇಜಿಸಲು ಸರ್ಕಾರ ಪ್ರತಿ ಲೀಟರ್‌ಗೆ ರೂ. 5/– ರಂತೆ ಪ್ರೋತ್ಸಾಹ ಧನ ಒಟ್ಟು ರೂ. 116.00 ಕೋಟಿಯನ್ನು ಪ್ರಸ್ತುತ ಸಾಲಿನಲ್ಲಿ ಹಾಲು ಉತ್ಪಾದಕರ ಖಾತೆಗೆ ಜಮಾ ಮಾಡಲಾಗಿದೆ.

ವಿಶೇಷ ಘಟಕ ಯೋಜನೆ (ರಾಜ್ಯವಲಯ) ಅಡಿಯಲ್ಲಿ ಆಯ್ಕೆಯಾದ 116 ಫಲಾನುಭವಿಗಳಿಗೆ ಸಹಾಯಧನ ರೂ. 69.60 ಲಕ್ಷ. ಹಾಗೂ ಗಿರಿಜನ ಉಪಯೋಜನೆ (ರಾಜ್ಯವಲಯ) ಅಡಿಯಲ್ಲಿ ಆಯ್ಕೆಯಾದ 27 ಫಲಾನುಭವಿಗಳಿಗೆ ರೂ. 16.20 ಲಕ್ಷ ಸಹಾಯಧನದೊಂದಿಗೆ ಮಿಶ್ರತಳಿ ರಾಸುಗಳನ್ನು ವಿತರಿಸಿದೆ.

ಪಶುಭಾಗ್ಯ ಯೋಜನೆಯಡಿಯಲ್ಲಿ ಒಟ್ಟು 676 ಫಲಾನುಭವಿಗಳಿಗೆ ರೂ. 1,61,88,150 ಸಹಾಯಧನ ನೀಡಿ, ಬ್ಯಾಂಕುಗಳ ಮುಖಾಂತರ ಸಾಲದೊಂದಿಗೆ ಹೈನುಗಾರಿಕೆ/ ಕುರಿ/ಆಡು/ಹಂದಿ/ಕೋಳಿ ಸಾಕಾಣಿಕಾ ಘಟಕಗಳನ್ನು ವಿತರಿಸಿ ಯೋಜನೆ ಅನುಷ್ಟಾನಗೊಳಿಸಲಾಗಿದೆ.

ಇಲಾಖಾ ಬೇಡಿಕೆಗಳು:–

- ಜಿಲ್ಲೆಯ ಪಶುವೈದ್ಯ ಸಂಸ್ಥೆಗಳಿಗೆ ದ್ರವಸಾರಜನಕ, ಔಷಧಿ ರಾಸಾಯನಿಕಗಳ ಪೂರೈಕೆಗಾಗಿ 1 ಮಿನಿ ಟ್ರಕ್ ವಾಹನದ ಅವಶ್ಯಕತೆ ಇರುತ್ತದೆ.
- ಜಿಲ್ಲಾ ಕೇಂದ್ರದಲ್ಲಿ ಔಷಧಿ ರಾಸಾಯನಿಕಗಳ ಸಂಗ್ರಹಣೆಗೆ 1 ಔಷಧಿ ಉಗ್ರಾಣದ ಅವಶ್ಯಕತೆಯಿದ್ದು 30 x 60 ಚದುರ ಅಡಿ ಅಳತೆಯುಳ್ಳ ಕಟ್ಟಡ ನಿರ್ಮಾಣಕ್ಕೆ ರೂ 50.00 ಲಕ್ಷ ಅನುದಾನ ಅವಶ್ಯಕತೆ ಇರುತ್ತದೆ.
- ಇಲಾಖಾ ಅಧಿಕಾರಿ / ಸಿಬ್ಬಂದಿಯವರಿಗೆ ತಾಂತ್ರಿಕ ಕಾರ್ಯಗಾರ ಹಾಗೂ ತರಬೇತಿ ಏರ್ಪಡಿಸಲು 30 x 60 ಚದುರ ಅಡಿ ಅಳತೆಯುಳ್ಳ ಕಟ್ಟಡ ನಿರ್ಮಾಣಕ್ಕೆ ರೂ 50.00 ಲಕ್ಷ ಅನುದಾನ ಅವಶ್ಯಕತೆ ಇರುತ್ತದೆ.
- ಜಿಲ್ಲೆಯ ಪಶುವೈದ್ಯ ಸಂಸ್ಥೆಗಳ ಆವರಣದಲ್ಲಿ ಚಿಕಿತ್ಸಾ ವಿಭಾಗ ಕೊರತೆ ಇದ್ದು ಇವುಗಳ ನಿರ್ಮಾಣಕ್ಕೆ ರೂ 15.00 ಲಕ್ಷ ದಂತೆ 20 ಚಿಕಿತ್ಸಾ ವಿಭಾಗಗಳಿಗೆ ರೂ 300.00 ಲಕ್ಷ ಅನುದಾನದ ಅವಶ್ಯಕತೆ ಇರುತ್ತದೆ.
- ಇಲಾಖಾ ಪಶುವೈದ್ಯ ಸಂಸ್ಥೆಗಳಲ್ಲಿ 71% ಡಿ–ದರ್ಜೆ ನೌಕರರ ಹುದ್ದೆಗಳು ಖಾಲಿ ಇದ್ದು, 41% ನ್ನು ಬಾಹ್ಯಮೂಲದಲ್ಲಿ ಸೇವೆ ಪಡೆಯಲಾಗುತ್ತಿದ್ದು, ಇನ್ನು 30% ಹುದ್ದೆಗಳು ಖಾಲಿ ಇದ್ದು ಇವುಗಳನ್ನು ಸದ್ಯಕ್ಕೆ ಎರವಲು ಸೇವೆ ಮೇಲೆ ತುಂಬ ಬೇಕಾಗಿರುತ್ತದೆ.
- ಉಪನಿರ್ದೇಶಕರ ಕಾರ್ಯಾಲಯದ ಕಟ್ಟಡದ ನಿರ್ಮಾಣಕ್ಕೆ ನಿವೇಶನ ಹಾಗೂ ರೂ 50.00 ಲಕ್ಷ ಅನುದಾನದ ಅವಶ್ಯಕತೆ ಇರುತ್ತದೆ.

ಸಮಾಜ ಕಲ್ಯಾಣ ಇಲಾಖೆ,

ಪೀಠಿಕೆ:– ಸರ್ಕಾರವು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಜನಾಂಗದವರನ್ನು ಗುರುತಿಸಿ ಅವರ ಕ್ಷೇಮಾಭಿವೃದ್ಧಿಗಾಗಿ 1958 ರಿಂದ ಜನತೆಯ ಆಶೋತ್ತರಗಳನ್ನು ಈಡೇರಿಸಲು ಹಲವಾರು ಜನಹಿತ ಹಾಗೂ ಪ್ರಗತಿಪರ ಯೋಜನೆಗಳನ್ನು ಹಮ್ಮಿಕೊಂಡಿದೆ. ಸರ್ಕಾರ ರಾಜ್ಯದ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಅಭಿವೃದ್ಧಿಗಾಗಿ ಸಂವಿಧಾನದ 15(4) ಅನುಚ್ಛೇದದಂತೆ ಶೈಕ್ಷಣಿಕ ಸೌಲಭ್ಯ ಮತ್ತು 16(4) ಅನುಚ್ಛೇದದಂತೆ ಉದ್ಯೋಗ ಮೀಸಲಾತಿಯ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿರುತ್ತದೆ. ಒಟ್ಟಾರೆ ಈ ಇಲಾಖೆಯು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಜನರು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಸ್ವಾವಲಂಭಿಗಳಾಗಲು ಶ್ರಮಿಸುತ್ತಿದೆ. ಗ್ರಾಮೀಣ ಹಾಗೂ ಹಿಂದುಳಿದ ವರ್ಗಗಳ ಪ್ರತಿಭಾನ್ವೇಶಣೆ, ಪ್ರತಿಭಾ ಪ್ರೋತ್ಸಾಹ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಹಾಯಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಪರಿಶಿಷ್ಟ ಜಾತಿ ಯೋಜನೆ ಕಾರ್ಯಕ್ರಮಗಳು

1. **ಲೆಕ್ಕ ಶೀರ್ಷಿಕೆ :** 2225–00–101–0–27 ರಡಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ ಸದರಿ ಲೆಕ್ಕ ಶೀರ್ಷಿಕೆಯಡಿ, ಒಟ್ಟು ರೂ 406.00/–(ಲಕ್ಷ) ಗಳು ಬಿಡುಗಡೆಯಾಗಿದ್ದು, 361.65 ಖರ್ಚಾಗಿದ್ದು, ಭೌತಿಕ ಗುರಿ 4800 ಇದ್ದು ಸಾದನೆ 4730 ಪ್ರಗತಿ ಸಾದಿಸಲಾಗಿದೆ.

2. **ಲೆಕ್ಕ ಶೀರ್ಷಿಕೆ :** 2225–00–101–0–29 ರಡಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿರ್ವಹಣೆಗೆ ಸದರಿ ಲೆಕ್ಕ ಶೀರ್ಷಿಕೆಯಡಿ ಒಟ್ಟು ರೂ99.00/–(ಲಕ್ಷ) ಗಳು ಬಿಡುಗಡೆಯಾಗಿದ್ದು, 99.00/– ಲಕ್ಷ ರೂ.ಗಳು ಖರ್ಚಾಗಿದ್ದು, ಭೌತಿಕ ಗುರಿ 10 ವಿದ್ಯಾರ್ಥಿನಿಲಯಗಳ ಸಿಬ್ಬಂದಿ ವೇತನ ಹಾಗೂ ನಿರ್ವಹಣೆಗೆ ಖರ್ಚು ಮಾಡಲಾಗಿದೆ.

3. **ಲೆಕ್ಕ ಶೀರ್ಷಿಕೆ :** 2225–00–101–0–30 ರಡಿ ನಿರ್ದೇಶನ ಮತ್ತು ಆಡಳಿತ ಕಾರ್ಯನಿರ್ವಾಹಕ ಸಿಬ್ಬಂದಿ ಸದರಿ ಲೆಕ್ಕ ಶೀರ್ಷಿಕೆಯಡಿ ಒಟ್ಟು ರೂ.119.95/–(ಲಕ್ಷ)ಗಳು ಬಿಡುಗಡೆಯಾಗಿದ್ದು, 119.00/– ಲಕ್ಷ ರೂ.ಗಳು ಖರ್ಚಾಗಿದ್ದು, ಭೌತಿಕ ಗುರಿ 5 ಕಛೇರಿಗಳ ಸಿಬ್ಬಂದಿ ವೇತನ ಮತ್ತು ಸಾದಿಲ್ವಾರು ವೆಚ್ಚಗಳಿಗೆ ಖರ್ಚು ಮಾಡಲಾಗಿದೆ.

4. **ಲೆಕ್ಕ ಶೀರ್ಷಿಕೆ :** 2225–00–101–0–36: ಸರ್ಕಾರಿ ಕಾಲೇಜು ವಿದ್ಯಾರ್ಥಿನಿಲಯಗಳ ನಿರ್ವಹಣೆ ಸದರಿ ಲೆಕ್ಕ ಶೀರ್ಷಿಕೆಯಡಿ ರೂ.30.63/–ಗಳು ಬಿಡುಗಡೆಯಾಗಿದ್ದು, ರೂ.30.63/–ಗಳಲ್ಲಿ 3 ವಿದ್ಯಾರ್ಥಿ ನಿಲಯಗಳ ಸಿಬ್ಬಂದಿ ವೇತನ ಮತ್ತು ಸಾದಿಲ್ವಾರು ವೆಚ್ಚಕ್ಕೆ ಖರ್ಚು ಮಾಡಲಾಗಿದೆ.

5. **ಲೆಕ್ಕ ಶೀರ್ಷಿಕೆ : 2225–00–101–0–37:** ಕಾಲೇಜು ವಿದ್ಯಾರ್ಥಿಗಳಿಗೆ ಪುರಸ್ಕಾರ/ಇತರೆ ರಿಯಾಯ್ತಿಗಳು /ಶ್ರೇಷ್ಟತೆ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಸಹಾಯ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ.249.50/–ಗಳು ಬಿಡುಗಡೆಯಾಗಿದ್ದು ರೂ.95.40/–ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 375 ಇದ್ದು ಸಾದನೆ 373 ಪ್ರಗತಿ ಸಾದಿಸಲಾಗಿದೆ.

6. **ಲೆಕ್ಕ ಶೀರ್ಷಿಕೆ : 2225–00–101–0–42 :** ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಸಹಾಯಧನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ.6.20/–ಗಳು ಬಿಡುಗಡೆಯಾಗಿದ್ದು ರೂ.6.20/–ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 65 ಇದ್ದು ಸಾದನೆ 63 ಪ್ರಗತಿ ಸಾದಿಸಲಾಗಿದೆ.

ತಾಲ್ಲೂಕು ಪಂಚಾಯತ್, ಕಾರ್ಯಕ್ರಮಗಳು (ಪರಿಶಿಷ್ಟ ಜಾತಿ)

7. **ಲೆಕ್ಕ ಶೀರ್ಷಿಕೆ : 2225–00–101–0–61:**(ತಾ.ಪಂ) ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ.678.13 ಗಳು ಬಿಡುಗಡೆಯಾಗಿದ್ದು ರೂ.674.18 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 37 ವಿದ್ಯಾರ್ಥಿನಿಲಗಳ ಪೈಕಿ, 1470 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

8. **ಲೆಕ್ಕ ಶೀರ್ಷಿಕೆ : 2225–00–101–0–65 :** ಹೆಚ್ಚಿನ ಊಟ ಮತ್ತು ವಸತಿ ವೆಚ್ಚಗಳ ಸಹಾಯ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ.36.20/ –ಗಳು ಬಿಡುಗಡೆಯಾಗಿದ್ದು ರೂ.36.17/–ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 13 ವಿದ್ಯಾರ್ಥಿನಿಲಯಗಳ 650 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

9. **ಲೆಕ್ಕ ಶೀರ್ಷಿಕೆ : 2225–00–101–0–67 :** ಕಟ್ಟಡಗಳ ನಿರ್ವಹಣೆ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ.15.00/–ಗಳು ಬಿಡುಗಡೆಯಾಗಿದ್ದು ರೂ.15.00/–ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 8 ಇದ್ದು ಸಾದನೆ 8 ಪ್ರಗತಿ ಸಾದಿಸಲಾಗಿದೆ.

10. **ಲೆಕ್ಕ ಶೀರ್ಷಿಕೆ: 2225–00–101–0–68 :** ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 429.78 ಲಕ್ಷಗಳು ಬಿಡುಗಡೆಯಾಗಿದ್ದು ರೂ.322.54ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 22000 ಇದ್ದು ಸಾದನೆ 22000 ಪ್ರಗತಿ ಸಾದಿಸಲಾಗಿದೆ.

11. **ಲೆಕ್ಕ ಶೀರ್ಷಿಕೆ: 2225–00–101–0–80** ಪರಿಶಿಷ್ಟ ಜಾತಿಯ ಕಾನೂನು ಪಧವೀದರರಿಗೆ ಪ್ರೋತ್ಸಾಹ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 10.00 ಲಕ್ಷಗಳು ಬಿಡುಗಡೆಯಾಗಿದ್ದು ರೂ.9.50 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 20 ಇದ್ದು ಸಾದನೆ 20 ಪ್ರಗತಿ ಸಾದಿಸಲಾಗಿದೆ.

12. **ಲೆಕ್ಕ ಶೀರ್ಷಿಕೆ: 2225–00–101–0–05 :** ಅಸ್ಪಶ್ಯತಾ ನಿವಾರಣೆ ಹಾಗೂ ಅಂತರ್ ಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹಧನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 70.00 ಲಕ್ಷಗಳು ಬಿಡುಗಡೆಯಾಗಿದ್ದು ರೂ.70.00 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 50 ಇದ್ದು ಸಾದನೆ 70 ಪ್ರಗತಿ ಸಾದಿಸಲಾಗಿದೆ.

13. **ಲೆಕ್ಕ ಶೀರ್ಷಿಕೆ: 2225–00–101–0–02(ಕೇಂದ್ರ ಯೋಜನೆ):** ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 435.60 ಲಕ್ಷಗಳು ಬಿಡುಗಡೆಯಾಗಿದ್ದು ರೂ.141.44 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 7800 ಇದ್ದು ಸಾದನೆ 3000 ಪ್ರಗತಿ ಸಾದಿಸಲಾಗಿದೆ.

14. **ಲೆಕ್ಕ ಶೀರ್ಷಿಕೆ: 2225–00–101–0–03(ಕೇಂದ್ರ ಯೋಜನೆ)** ಅಶುದ್ದ ವೃತ್ತಿಯಲ್ಲಿ ತೊಡಗಿರುವವರ ಮಕ್ಕಳಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 1.00 ಲಕ್ಷಗಳು ಬಿಡುಗಡೆಯಾಗಿದ್ದು ಅಶುದ್ದ ವೃತ್ತಿಯಲ್ಲಿ ತೊಡಗಿರುವವರು ಮಕ್ಕಳು ಅರ್ಜಿ ಸಲ್ಲಿಸಿರುವುದಿಲ್ಲ.

15. **ಲೆಕ್ಕ ಶೀರ್ಷಿಕೆ: 2225–00–101–0–85(ಕೇಂದ್ರ ಯೋಜನೆ)** ಅಶುದ್ದ ವೃತ್ತಿಯಲ್ಲಿ ತೊಡಗಿರುವವರ ಮಕ್ಕಳಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 2.96 ಲಕ್ಷಗಳು ಬಿಡುಗಡೆಯಾಗಿದ್ದು ಅಶುದ್ದ ವೃತ್ತಿಯಲ್ಲಿ ತೊಡಗಿರುವವರು ಮಕ್ಕಳು ಅರ್ಜಿ ಸಲ್ಲಿಸಿರುವುದಿಲ್ಲ.

ಪರಿಶಿಷ್ಟ ವರ್ಗದ ಯೋಜನೆ ಕಾರ್ಯಕ್ರಮಗಳು

16. **ಲೆಕ್ಕ ಶೀರ್ಷಿಕೆ: 2225–00–102–0–31:** ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 26.00 ಲಕ್ಷಗಳು ಬಿಡುಗಡೆಯಾಗಿದ್ದು ರೂ25.66ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 550 ಇದ್ದು ಸಾದನೆ 350 ಪ್ರಗತಿ ಸಾದಿಸಲಾಗಿದೆ.

17. **ಲೆಕ್ಕ ಶೀರ್ಷಿಕೆ: 2225–00–102–0–33**: ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳ ನಿರ್ವಹಣೆ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 59.28 ಲಕ್ಷಗಳು ಬಿಡುಗಡೆಯಾಗಿದ್ದು ರೂ.41.05ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 326 ಇದ್ದು ಸಾದನೆ 84 ಪ್ರಗತಿ ಸಾದಿಸಲಾಗಿದೆ.

18. **ಲೆಕ್ಕ ಶೀರ್ಷಿಕೆ: 2225–00–101–0–35 :** ಆಶ್ರಮ ಶಾಲೆಗಳು ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 101.01 ಲಕ್ಷಗಳು ಬಿಡುಗಡೆಯಾಗಿದ್ದು ರೂ.93.24ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 81 ಇದ್ದು ಸಾದನೆ 71 ಪ್ರಗತಿ ಸಾದಿಸಲಾಗಿದೆ.

19. **ಲೆಕ್ಕ ಶೀರ್ಷಿಕೆ: 2225–00–102–0–38:** ವಿದ್ಯಾರ್ಥಿನಿಲಯಗಳು, ವಿದ್ಯಾರ್ಥಿವೇತನ ಮತ್ತು ಸಹಾಯಧನ, ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 10.00ಲಕ್ಷಗಳು ಬಿಡುಗಡೆಯಾಗಿದ್ದು ರೂ.10.00 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 42 ಇದ್ದು ಸಾದನೆ 44 ಪ್ರಗತಿ ಸಾದಿಸಲಾಗಿದೆ.

ತಾಲ್ಲೂಕು ಪಂಚಾಯತ್, ಕಾರ್ಯಕ್ರಮಗಳು (ಪರಿಶಿಷ್ಟ ವರ್ಗ)

20. **ಲೆಕ್ಕ ಶೀರ್ಷಿಕೆ: 2225–00–102–0–68 :** ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 40.00 ಲಕ್ಷಗಳು ಬಿಡುಗಡೆಯಾಗಿದ್ದು ರೂ.32.82 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 2800 ಇದ್ದು ಸಾದನೆ 2300 ಪ್ರಗತಿ ಸಾದಿಸಲಾಗಿದೆ.

21. **ಲೆಕ್ಕ ಶೀರ್ಷಿಕೆ: 2225–00–102–0–71 :** ಇ.ಬಿ.ಎಲ್.ವೆಚ್ಚ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 8.00 ಲಕ್ಷಗಳು ಬಿಡುಗಡೆಯಾಗಿದ್ದು ರೂ.5.60 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 30 ಇದ್ದು ಸಾದನೆ 15 ಪ್ರಗತಿ ಸಾದಿಸಲಾಗಿದೆ.

22. **ಲೆಕ್ಕ ಶೀರ್ಷಿಕೆ: 2225–00–102–0–77 :** ಹಾಸ್ಟೆಲ್‌ಗಳ ಸೇರ್ಪಡೆ ಮತ್ತು ಮಾರ್ಪಡು ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 2.00 ಲಕ್ಷಗಳು ಬಿಡುಗಡೆಯಾಗಿದ್ದು ರೂ.2.00 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 2 ಇದ್ದು ಸಾದನೆ 2 ಪ್ರಗತಿ ಸಾದಿಸಲಾಗಿದೆ.

23. **ಲೆಕ್ಕ ಶೀರ್ಷಿಕೆ: 2225–00–102–0–07:** ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 22.25 ಲಕ್ಷಗಳು ಬಿಡುಗಡೆಯಾಗಿರುತ್ತದೆ.

ಪರಿಶಿಷ್ಟ ಜಾತಿ ಉಪಯೋಜನೆ

24. **ಲೆಕ್ಕ ಶೀರ್ಷಿಕೆ: 2225–00–101–0–62 :** ಪರಿಶಿಷ್ಟ ಜಾತಿಯ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳ ಅಭಿವೃದ್ದಿ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 25.00 ಲಕ್ಷಗಳು ಬಿಡುಗಡೆಯಾಗಿದ್ದು ರೂ.25.00ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 40 ಇದ್ದು ಸಾದನೆ 40 ಪ್ರಗತಿ ಸಾದಿಸಲಾಗಿದೆ.

25. **ಲೆಕ್ಕ ಶೀರ್ಷಿಕೆ: 2225–00–101–0–64** : ಪರಿಶಿಷ್ಟ ಜಾತಿಯ ಕುಟುಂಬಗಳಿಗೆ ಸಹಾಯಧನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 23.00 ಲಕ್ಷಗಳು ಬಿಡುಗಡೆಯಾಗಿದ್ದು ರೂ.23.00 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 220 ಇದ್ದು ಸಾದನೆ 220 ಪ್ರಗತಿ ಸಾದಿಸಲಾಗಿದೆ.

ಗಿರಿಜನ ಉಪಯೋಜನೆ

26. **ಲೆಕ್ಕ ಶೀರ್ಷಿಕೆ: 2225–00–102–0–69 :** ಪ.ವರ್ಗ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ದಿ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 3.00 ಲಕ್ಷಗಳು ಬಿಡುಗಡೆಯಾಗಿದ್ದು ರೂ.3.00 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 10 ಇದ್ದು ಸಾದನೆ 10 ಪ್ರಗತಿ ಸಾದಿಸಲಾಗಿದೆ.

27. **ಲೆಕ್ಕ ಶೀರ್ಷಿಕೆ: 2225–00–102–0–70 :** ಪ.ವರ್ಗದ ಕುಟುಂಬಗಳಿಗೆ ಆರ್ಥಿಕ ಸಹಾಯಧನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 4.00 ಲಕ್ಷಗಳು ಬಿಡುಗಡೆಯಾಗಿದ್ದು ರೂ.4.00 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 50 ಇದ್ದು ಸಾದನೆ 40 ಪ್ರಗತಿ ಸಾದಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಪೀಠಿಕೆ:– ಸರ್ಕಾರವು ಹಿಂದುಳಿದ ವರ್ಗಗಳ ಜನಾಂಗದವರನ್ನು ಗುರುತಿಸಿ ಅವರ ಕ್ಷೇಮಾಭಿವೃದ್ಧಿಗಾಗಿ 1977ರಿಂದ ಜನತೆಯ ಆಶೋತ್ತರಗಳನ್ನು ಈಡೇರಿಸಲು ಹಲವಾರು ಜನಹಿತ ಹಾಗೂ ಪ್ರಗತಿಪರ ಯೋಜನೆಗಳನ್ನು ಹಮ್ಮಿಕೊಂಡಿದೆ. ಸರ್ಕಾರ ರಾಜ್ಯದ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಸಂವಿಧಾನದ 15(4) ಅನುಚ್ಛೇದದಂತೆ ಶೈಕ್ಷಣಿಕ ಸೌಲಭ್ಯ ಮತ್ತು 16(4) ಅನುಚ್ಛೇದದಂತೆ ಉದ್ಯೋಗ ಮೀಸಲಾತಿಯ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿರುತ್ತದೆ. ಒಟ್ಟಾರೆ ಈ ಇಲಾಖೆಯು ಹಿಂದುಳಿದ ವರ್ಗಗಳ ಜನರು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಸ್ವಾವಲಂಭಿಗಳಾಗಲು ಶ್ರಮಿಸುತ್ತಿದೆ. ಗ್ರಾಮೀಣ ಹಾಗೂ ಹಿಂದುಳಿದ ವರ್ಗಗಳ ಪ್ರತಿಭಾನ್ವೇಶಣೆ, ಪ್ರತಿಭಾ ಪ್ರೋತ್ಸಾಹ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಹಾಯಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ನಿಟ್ಟಿನಲ್ಲಿ 2018–19ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯದಲ್ಲಿ ರಾಮನಗರ ಜಿಲ್ಲೆಗೆ ಹಿಂದುಳಿದ ವರ್ಗಗಳ ಏಳಿಗೆಗಾಗಿ ಜಿಲ್ಲಾವಲಯ ಬಾಬ್ತಿನಲ್ಲಿ ಒಟ್ಟು ರೂ. 2185.05 ಲಕ್ಷಗಳ ಆಯವ್ಯಯವನ್ನು ಒದಗಿಸಲಾಗಿದ್ದು, ರೂ. 2334.08 ಲಕ್ಷಗಳನ್ನು ಬಿಡುಗಡೆ ಇದಲ್ಲಿ ಕ್ರಮವಾಗಿ ಬಾಬ್ತಿನಲ್ಲಿ ಒಟ್ಟು ರೂ. 2296.78 ಲಕ್ಷಗಳನ್ನು ಖರ್ಚುಮಾಡಿ ಪ್ರಗತಿ ಸಾಧಿಸಲಾಗಿದೆ.

ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ತರಗತಿಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಅರ್ಹತೆಯ ಆಧಾರದ ಮೇಲೆ ಲಭ್ಯವಿರುವ ಅನುದಾನಕ್ಕೆ ಅನುಸಾರವಾಗಿ ಮಂಜೂರು ಮಾಡಲಾಗುತ್ತದೆ. 1ನೇ ತರಗತಿಯಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲಾಗುತ್ತದೆ.

1. ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ನೀಡಿಕೆ.

ಮೆಟ್ರಿಕ್ ಪೂರ್ವ

ತರಗತಿ	ಬಾಲಕ/ಬಾಲಕಿ
1 ರಿಂದ 5	750/–
6 ರಿಂದ 8	900/–
9 ರಿಂದ 10	1000/–

ಮೆಟ್ರಿಕ್ ನಂತರ

ಕ್ರ.ಸಂ	ಗುಂಪು	ಮಂಜೂರು ಮಾಡಲಾಗುವ ವಿದ್ಯಾರ್ಥಿವೇತನದ ದರ (ವಾರ್ಷಿಕ)
1	ಗುಂಪು–ಎ	3500/–
2	ಗುಂಪು–ಬಿ	3350/–
3	ಗುಂಪು–ಸಿ	2100/–
4	ಗುಂಪು–ಡಿ	1600/–

2018–19ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ ಒಟ್ಟು 563.26 ಲಕ್ಷ ಒದಗಿಸಿದ್ದು, 563.26 ಲಕ್ಷಗಳು ಖರ್ಚಾಗಿರುತ್ತದೆ. ಈ ಯೋಜನೆಯ ಕಾರ್ಯಕ್ರಮದಲ್ಲಿ 52790 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

2. ಶುಲ್ಕವಿನಾಯಿತಿ ಮಂಜೂರಾತಿ

ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳಾದ ಪ್ರವರ್ಗ–1, 2ಎ, 3ಎ ಮತ್ತು 3ಬಿ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಭೋದನಾಶುಲ್ಕ, ಪರೀಕ್ಷಾ ಶುಲ್ಕ, ಕ್ರೀಡಾ ಶುಲ್ಕ, ಗ್ರಂಥಾಲಯ ಶುಲ್ಕ, ಪ್ರಯೋಗಾಲಯ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಮಂಜೂರು ಮಾಡಲಾಗುವುದು. ಕುಟುಂಬದ ವಾರ್ಷಿಕ ಆದಾಯ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ರೂ. 2.50 ಲಕ್ಷಗಳು ಇತರೆ ಹಿಂದುಳಿದ ವಿದ್ಯಾರ್ಥಿಗಳಿಗೆ ರೂ. 1.00 ಲಕ್ಷ ಆದಾಯ ಮಿತಿಗೊಳಪಟ್ಟಿರುತ್ತದೆ. 2018–19ನೇ ಸಾಲಿನಲ್ಲಿ ರೂ. 680.91 ಲಕ್ಷ ಬಿಡುಗಡೆಯಾಗಿದ್ದು, ನಿಯಮಾನುಸಾರ ಮಂಜೂರು ಮಾಡಲಾಗಿದೆ. ರೂ. 680.91 ಲಕ್ಷಗಳು ಖರ್ಚಾಗಿರುತ್ತದೆ. ಈ ಯೋಜನೆಯ ಕಾರ್ಯಕ್ರಮದಲ್ಲಿ 14493 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

3. ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ ಮತ್ತು ಹೊಸ ತರಬೇತಿ ಕೇಂದ್ರಗಳು

ಹಿಂದುಳಿದ ವರ್ಗಗಳ ನಿರುದ್ಯೋಗಿ ಮಹಿಳೆಯರು ತಮ್ಮ ಜೀವನದಲ್ಲಿ ಸ್ವಾವಲಂಭಿಗಳಾಗಲು ಇಲಾಖೆಯು ಹಿಂದುಳಿದ ವರ್ಗಗಳ ಮಹಿಳೆಯರಿಗೆ ಹೊಲಿಗೆ ವೃತ್ತಿಯಲ್ಲಿ ಒಂದು ವರ್ಷದ ತರಬೇತಿಯನ್ನು ನೀಡಲಾಗುತ್ತಿದೆ. ಈ ತರಬೇತಿ ಪಡೆಯ ಬಯಸುವವರು 7ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ತರಬೇತಿ ಅವಧಿಯಲ್ಲಿ ತಿಂಗಳಿಗೆ ತಲಾ 300 ರಂತೆ ಸ್ಟೈಫಂಡ್ ನೀಡಲಾಗುವುದು. ವಿಧವೆಯರಿಗೆ ಮತ್ತು ನಿರ್ಗತಿಕ ನಿರಾಶ್ರಿತ ಮಹಿಳೆಯರಿಗೆ ಆದ್ಯತೆ ನೀಡಲಾಗುವುದು. ಹೊಲಿಗೆ ತರಬೇತಿಯ ನಂತರ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಉಚಿತ ಹೊಲಿಗೆ ಯಂತ್ರವನ್ನು ವಿತರಿಸಲಾಗುತ್ತದೆ. ಈ ಜಿಲ್ಲೆಯಲ್ಲಿ 01 ಹೊಲಿಗೆ ತರಬೇತಿ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ. 2018–19ನೇ ಸಾಲಿನಲ್ಲಿ ರೂ. 4.17 ಲಕ್ಷ ಆಯವ್ಯಯ ಒದಗಿಸಿದ್ದು, ಜಿಲ್ಲಾ ಪಂಚಾಯತ್‌ನಿಂದ ರೂ. 4.17 ಲಕ್ಷ ಬಿಡುಗಡೆಯಾಗಿರುತ್ತದೆ. ಒಟ್ಟು 20 ಅಭ್ಯರ್ಥಿಗಳಿಗೆ ರೂ. 3.95 ಲಕ್ಷಗಳು ಖರ್ಚು ಮಾಡಲಾಗಿದೆ.

4. ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆ

ಈ ಜಿಲ್ಲೆಯಲ್ಲಿ ಜಿಲ್ಲಾವಲಯ ಕಾರ್ಯಕ್ರಮದಡಿಯಲ್ಲಿ 16 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು, 26 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ. ಹಿಂದುಳಿದ ವರ್ಗಗಳ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ನಂತರದ ವಿದ್ಯಾಭ್ಯಾಸವನ್ನು ಮುಂದುವರೆಸಲು ಈ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ನೀಡಲಾಗುವುದು. ವಿದ್ಯಾರ್ಥಿನಿಲಯದಲ್ಲಿ ಉಚಿತ ಊಟ ಮತ್ತು ವಸತಿ ಸೌಲಭ್ಯ, ದಿನ ಪತ್ರಿಕೆಗಳ ಸೌಲಭ್ಯ, ಪುಸ್ತಕ ಬಂಡಾರದ ಸೌಲಭ್ಯ ಹಾಗೂ ಕ್ರೀಡಾ ಸಾಮಾಗ್ರಿಗಳ ಸೌಲಭ್ಯ ಒದಗಿಸಲಾಗುತ್ತದೆ.

ಇದೇ ರೀತಿ ಜಿಲ್ಲೆಯಲ್ಲಿ 26 ಮೆಟ್ರಿಕ್ ಪೂರ್ವ ಬಾಲಕ/ ಬಾಲಕಿಯರ ವಿದ್ಯಾರ್ಥಿನಿಲಯಗಳು ಹಾಗೂ 21 ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಗ್ರಾಮೀಣ ಪ್ರದೇಶದ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು 05 ರಿಂದ 10ನೇ ತರಗತಿಯವರಗೆ ವಿದ್ಯಾಭ್ಯಾಸವನ್ನು ಮುಂದುವರೆಸಲು ಈ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶವನ್ನು ನೀಡಲಾಗುತ್ತದೆ. ವಿದ್ಯಾರ್ಥಿನಿಲಯಗಳಲ್ಲಿ ಉಚಿತ ಊಟ ಮತ್ತು ವಸತಿ ಸೌಲಭ್ಯ, ಉಚಿತ ಹಾಸಿಗೆ–ಹೊದಿಕೆಗಳು, ವಾರ್ಷಿಕವಾಗಿ 02 ಜೊತೆ ಸಮವಸ್ತ್ರಗಳು, ದಿನಪತ್ರಿಕೆಗಳು, ಪಠ್ಯ–ಪುಸ್ತಕ ಮತ್ತು ಲೇಖನಾ ಸಾಮಾಗ್ರಿಗಳು, ವೈದ್ಯಕೀಯ ಸೌಲಭ್ಯ, ಕ್ರೀಡಾ ಸಾಮಾಗ್ರಿ, ಸಾಬೂನು, ಟ್ರಂಕು, ತಟ್ಟೆ–ಲೋಟಗಳು ಈ ಸೌಲಭ್ಯಗಳನ್ನು ನೀಡುವುದಲ್ಲದೆ ಅರೆಕಾಲಿಕ ಶಿಕ್ಷಕರಿಂದ ವಿದ್ಯಾರ್ಥಿನಿಲಯದಲ್ಲಿ ವಿಶೇಷ ಪಾಠದ ಸೌಲಭ್ಯ ಕಲ್ಪಿಸಲಾಗುತ್ತದೆ. ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಬೊರ್ಡಿಂಗ್ ವೆಚ್ಚವನ್ನು ಮಾತ್ರ ಮಂಜೂರು ಮಾಡಲಾಗುತ್ತದೆ.

2018–19ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ ರೂ. 1335.13 ಲಕ್ಷಗಳನ್ನು ಒದಗಿಸಲಾಗಿದ್ದು, ರೂ. 1318.98 ಲಕ್ಷಗಳನ್ನು ವೆಚ್ಚಮಾಡಿದ್ದು, ಒಟ್ಟು 3068 ವಿದ್ಯಾರ್ಥಿಗಳು ಪ್ರಯೋಜನೆ ಪಡೆದಿರುತ್ತಾರೆ

5. ಆಶ್ರಯ ಶಾಲೆಗಳ ನಿರ್ವಹಣೆ

ಈ ಜಿಲ್ಲೆಯಲ್ಲಿ ಇಲಾಖಾ ವತಿಯಿಂದ 02 ಆಶ್ರಮ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಅಲೆಮಾರಿ ಜನಾಂಗದ ಹಾಗೂ ಇತರೆ ಹಿಂದುಳಿದ ವರ್ಗಗಳ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ 01 ನೇ ತರಗತಿಯಿಂದ 05ನೇ ತರಗತಿಯವರೆಗೆ ಓದುವ ಮಕ್ಕಳಿಗೆ ಉಚಿತ ಊಟ ಮತ್ತು ವಸತಿ ಸೌಲಭ್ಯವನ್ನು ಕಲ್ಪಿಸಿಕೊಡಲಾಗುತ್ತದೆ. ಇದರಿಂದ ಪ್ರಮುಖವಾಗಿ ಅಲೆಮಾರಿ ಜನಾಂಗದವರು ತಮ್ಮ ನಿಯತಕಾಲಿಕ ವಲಸೆಯೊಂದಿಗೆ ತಮ್ಮ ಮಕ್ಕಳನ್ನು ಕರೆದುಕೊಂಡು ಹೋಗದೆ ಅವರ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಅನುಕೂಲವಾಗಿರುತ್ತದೆ. ಈ ಆಶ್ರಮ ಶಾಲೆಗಳಲ್ಲಿ ಉಚಿತ ಊಟ ಮತ್ತು ವಸತಿ ಸೌಲಭ್ಯಗಳಲ್ಲದೆ 02 ಜೊತೆ ಸಮವಸ್ತ್ರಗಳು, ಹಾಸಿಗೆ–ಹೊದಿಕೆಗಳು, ಸೋಪು, ತಲೆಕ್ಷೌರ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಸಹ ನೀಡಲಾಗುತ್ತದೆ.

2018–19ನೇ ಸಾಲಿನಲ್ಲಿ ಇವುಗಳ ನಿರ್ವಹಣೆಗಾಗಿ ರೂ. 42.21 ಲಕ್ಷಗಳನ್ನು ಒದಗಿಸಲಾಗಿದ್ದು, ಜಿಲ್ಲಾ ಪಂಚಾಯತ್‌ನಿಂದ ರೂ. 42.21 ಲಕ್ಷ ಬಿಡುಗಡೆಯಾಗಿರುತ್ತದೆ. ಹಾಗೂ ರೂ. 37.83 ಲಕ್ಷಗಳನ್ನು ಖರ್ಚುಮಾಡಲಾಗಿದೆ. 88 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

6. ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಕಟ್ಟಡ ದುರಸ್ತಿ ಮತ್ತು ನಿರ್ವಹಣೆ.

2018–19ನೇ ಸಾಲಿನಲ್ಲಿ ಜಿಲ್ಲಾವಲಯ ಯೋಜನೆಯಡಿಯಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಕಟ್ಟಡಗಳ ದುರಸ್ಥಿ ಹಾಗೂ ಅಪೂರ್ಣಗೊಂಡ ಕಾಮಗಾರಿಗಳನ್ನು ಪೂರ್ಣಗೊಳಿಸಲು ರೂ. 37.26 ಲಕ್ಷ ಅನುದಾನ ಒದಗಿಸಲಾಗಿದೆ. ಇದರಲ್ಲಿ 9 ಸ್ವಂತ ಕಟ್ಟಡಗಳನ್ನು ದುರಸ್ಥಿಗೊಳಿಸಲಾಗಿದೆ.

7. ವಿದ್ಯಾರ್ಥಿನಿಲಯದ ಸುಧಾರಣೆ

ರಾಮನಗರ ಜಿಲ್ಲೆಯಲ್ಲಿ ವಿದ್ಯಾರ್ಥಿನಿಲಯಗಳಿಗೆ ಬೇಕಾಗುವ ಅಗತ್ಯ ಪಾತ್ರೆ–ಸಾಮಾಗ್ರಿಗಳು, ಊಟದ ತಟ್ಟೆ–ಲೋಟ, ಹಾಸಿಗೆ–ಹೊದಿಕೆ, ಡೈನಿಂಗ್ ಟೇಬಲ್–ಖುರ್ಚಿಗಳು, ಗ್ರಂಥಾಲಯದ ಪುಸ್ತಕಗಳು ಹಾಗೂ ಅಲ್ಮೇರಾಗಳು, ಅನಿಲದ ಒಲೆ ಅಳವಡಿಕೆ ಮತ್ತಿತ್ತರ ಸಾಮಾಗ್ರಿಗಳ ಸರಬರಾಜು ಮಾಡಲಾಗಿದೆ. 2018–19ನೇ ಸಾಲಿಗೆ ರೂ. 30.00 ಲಕ್ಷಗಳನ್ನು ನಿಗಧಿಪಡಿಸಲಾಗಿದ್ದು, ರೂ. 29.93 ಖರ್ಚು ಮಾಡಲಾಗಿದೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಪೀಠಿಕೆ:– ಸರ್ಕಾರವು ಅಲ್ಪಸಂಖ್ಯಾತರ ಜನಾಂಗದವರನ್ನು ಗುರುತಿಸಿ ಅವರ ಕ್ಷೇಮಾಭಿವೃದ್ಧಿಗಾಗಿ 1977ರಿಂದ ಜನತೆಯ ಆಶೋತ್ತರಗಳನ್ನು ಈಡೇರಿಸಲು ಹಲವಾರು ಜನಹಿತ ಹಾಗೂ ಪ್ರಗತಿಪರ ಯೋಜನೆಗಳನ್ನು ಹಮ್ಮಿಕೊಂಡಿದೆ. ಸರ್ಕಾರ ರಾಜ್ಯದ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಸಂವಿಧಾನದ 15(4) ಅನುಚ್ಛೇದದಂತೆ ಶೈಕ್ಷಣಿಕ ಸೌಲಭ್ಯ ಮತ್ತು 16(4) ಅನುಚ್ಛೇದದಂತೆ ಉದ್ಯೋಗ ಮೀಸಲಾತಿಯ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿರುತ್ತದೆ. ಒಟ್ಟಾರೆ ಈ ಇಲಾಖೆಯು ಅಲ್ಪಸಂಖ್ಯಾತರ ಜನರು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಸ್ವಾವಲಂಭಿಗಳಾಗಲು ಶ್ರಮಿಸುತ್ತಿದೆ. ಅಲ್ಪಸಂಖ್ಯಾತರಲ್ಲಿ ಪ್ರತಿಭಾನ್ವೇಶಣೆ, ಪ್ರತಿಭಾ ಪ್ರೋತ್ಸಾಹ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಹಾಯಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ನಿಟ್ಟಿನಲ್ಲಿ 2017–18ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯದಲ್ಲಿ ರಾಮನಗರ ಜಿಲ್ಲೆಗೆ ಅಲ್ಪಸಂಖ್ಯಾತರ ಏಳಿಗೆಗಾಗಿ ಜಿಲ್ಲಾವಲಯ ಒಟ್ಟು ಬಾಬ್ತು ರೂ. 142.11 ಲಕ್ಷಗಳ ಆಯವ್ಯಯವನ್ನು ಒದಗಿಸಲಾಗಿರುತ್ತದೆ. ಒಟ್ಟು ರೂ. 104.229 ಲಕ್ಷಗಳನ್ನು ಖರ್ಚುಮಾಡಿದ್ದು, ಇದರಲ್ಲಿ ಖಾಸಗಿ ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ರೂ. 3.76 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಸದರಿ ಸಂಸ್ಥೆಯವರು 05 ವರ್ಷಗಳಿಂದ ಸಹಾಯಧನಗಳನ್ನು ಪಡೆಯುತ್ತಿಲ್ಲವಾದ್ದರಿಂದ ಹಾಗೂ ಅಲ್ಪಸಂಖ್ಯಾತರ ಔದ್ಯೋಗಿಕ ತರಬೇತಿಗಾಗಿ ಶಿಷ್ಯವೇತನ ಕಾರ್ಯಕ್ರಮದಡಿಯಲ್ಲಿ 2.02 ಲಕ್ಷಗಳು ಬಿಡುಗಡೆಯಾಗಿದ್ದು ವಿದ್ಯಾರ್ಥಿಗಳಿಂದ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ ಮತ್ತು ವಿದ್ಯಾರ್ಥಿನಿಲಯಗಳ ಹೊರಗುತ್ತಿಗೆ ಸಿಬ್ಬಂದಿಗಳ ವೇತನದ ಬಾಬ್ತು ರೂ. 24.90 ಲಕ್ಷಗಳು ಫೆಬ್ರವರಿ–2018ರ ಮಾಹೆಯಲ್ಲಿ ಬಿಡುಗಡೆಯಾಗಿದ್ದು, ವಿದ್ಯಾರ್ಥಿನಿಲಯಗಳಲ್ಲಿನ ಹೊರಸಂಪನ್ಮೂಲ ಸಿಬ್ಬಂದಿಗಳಿಗೆ 01 ತಿಂಗಳ ವೇತನ 0.48 ಲಕ್ಷಗಳನ್ನು ಖರ್ಚುಮಾಡಲಾಗಿದೆ. ಒಟ್ಟಾರೆ 2017–18ನೇ ಸಾಲಿನಲ್ಲಿ ರೂ. 104.229 ಲಕ್ಷಗಳನ್ನು ಖರ್ಚುಮಾಡಿ ಪ್ರಗತಿ ಸಾಧಿಸಲಾಗಿದೆ.

1. ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳ ನಿರ್ವಹಣೆ.

ಈ ಜಿಲ್ಲೆಯಲ್ಲಿ ಜಿಲ್ಲಾವಲಯ ಕಾರ್ಯಕ್ರಮದಡಿಯಲ್ಲಿ 04 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು (02 ಬಾಲಕ ಹಾಗೂ 02 ಬಾಲಕಿ) ಕಾರ್ಯನಿರ್ವಹಿಸುತ್ತಿದ್ದು, ಅಲ್ಪಸಂಖ್ಯಾತರ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ನಂತರದ ವಿದ್ಯಾಭ್ಯಾಸವನ್ನು ಮುಂದುವರೆಸಲು ಈ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ನೀಡಲಾಗುವುದು. ವಿದ್ಯಾರ್ಥಿನಿಲಯದಲ್ಲಿ ಉಚಿತ ಊಟ ಮತ್ತು ವಸತಿ ಸೌಲಭ್ಯ, ದಿನ ಪತ್ರಿಕೆಗಳ ಸೌಲಭ್ಯ, ಪುಸ್ತಕ ಬಂಡಾರದ ಸೌಲಭ್ಯ ಹಾಗೂ ಕ್ರೀಡಾ ಸಾಮಾಗ್ರಿಗಳ ಸೌಲಭ್ಯ ಒದಗಿಸಲಾಗುತ್ತದೆ.

ಇದೇ ರೀತಿ ಜಿಲ್ಲೆಯಲ್ಲಿ 01 ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಕಾರ್ಯನಿರ್ವಹಿಸುತ್ತಿದ್ದು, ಗ್ರಾಮೀಣ ಪ್ರದೇಶದ ಅಲ್ಪಸಂಖ್ಯಾತರ ಅಭ್ಯರ್ಥಿಗಳು 05 ರಿಂದ 10ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮುಂದುವರೆಸಲು ಈ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶವನ್ನು ನೀಡಲಾಗುತ್ತದೆ. ವಿದ್ಯಾರ್ಥಿನಿಲಯಗಳಲ್ಲಿ ಉಚಿತ ಊಟ ಮತ್ತು ವಸತಿ ಸೌಲಭ್ಯ, ಉಚಿತ ಹಾಸಿಗೆ–ಹೊದಿಕೆಗಳು, ವಾರ್ಷಿಕವಾಗಿ 02 ಜೊತೆ ಸಮವಸ್ತ್ರಗಳು, ದಿನಪತ್ರಿಕೆಗಳು, ಪಠ್ಯ–ಪುಸ್ತಕ ಮತ್ತು ಲೇಖನಾ ಸಾಮಾಗ್ರಿಗಳು, ವೈದ್ಯಕೀಯ ಸೌಲಭ್ಯ, ಕ್ರೀಡಾ ಸಾಮಾಗ್ರಿ, ಸಾಬೂನು, ಟ್ರಂಕು, ತಟ್ಟೆ–ಲೋಟಗಳು ಈ ಸೌಲಭ್ಯಗಳನ್ನು ನೀಡಲಾಗುತ್ತಿದೆ.

2017–18ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ ರೂ. 121.90 ಲಕ್ಷಗಳನ್ನು ಒದಗಿಸಲಾಗಿದ್ದು, ರೂ. 92.28 ಲಕ್ಷಗಳನ್ನು ವೆಚ್ಚಮಾಡಿದ್ದು, ಒಟ್ಟು 224 ವಿದ್ಯಾರ್ಥಿಗಳು ಹಾಗೂ 17 ಸಿಬ್ಬಂದಿಗಳು ಇದರ ಪ್ರಯೋಜನ ಪಡೆದಿರುತ್ತಾರೆ.

2. ಅಲ್ಪಸಂಖ್ಯಾತರ ಕಾನೂನು ಪದವಿಧರರಿಗೆ ಶಿಷ್ಯವೇತನ.

ರಾಮನಗರ ಜಿಲ್ಲೆಯಲ್ಲಿನ 05 ಕಾನೂನು ಪದವೀಧರರಿಗೆ ಶಿಷ್ಯವೇತನ ವಿತರಿಸಲು 2017–18ನೇ ಸಾಲಿಗೆ ರೂ. 1.20 ಲಕ್ಷಗಳನ್ನು ಒದಗಿಸಿದ್ದು, ಜಿಲ್ಲಾ ಪಂಚಾಯಿತಿಯಿಂದ ರೂ. 1.20 ಲಕ್ಷಗಳು ಬಿಡುಗಡೆ ಮಾಡಲಾಗಿದ್ದು, ಇದುವರೆವಿಗೂ ರೂ. 1.20 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಇದರಲ್ಲಿ 05 ಕಾನೂನು ಪದವೀಧರರು ಪ್ರಯೋಜನೆ ಪಡೆದಿರುತ್ತಾರೆ.

3. ಅಲ್ಪಸಂಖ್ಯಾತರ ಸಂಸ್ಥೆಗಳು ನಡೆಸುತ್ತಿರುವ ಖಾಸಗಿ ವಿದ್ಯಾರ್ಥಿನಿಲಯಗಳ ನಿರ್ವಹಣೆ.

2017–18ನೇ ಸಾಲಿಗೆ ರೂ. 3.76 ಲಕ್ಷಗಳು ಬಿಡುಗಡೆ ಮಾಡಲಾಗಿದ್ದು, ಮಾಗಡಿ ತಾಲ್ಲೂಕಿನಲ್ಲಿ ಇರುವ ಸೈಯದ್ ಶಾಕದ್ರಿ ಬಡಮಖಾನ್ ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯದ ನಿರ್ವಹಣೆಗಾಗಿ ವೆಚ್ಚ ಭರಿಸಲಾಗುವುದು. ಸದರಿ ವಿದ್ಯಾರ್ಥಿನಿಲಯವು 05 ವರ್ಷಗಳಿಂದ ಸಹಾಯಧನಗಳನ್ನು ಪಡೆಯುತ್ತಿಲ್ಲವಾದ್ದರಿಂದ ಅನುದಾನವು ಖರ್ಚಾಗಿರುವುದಿಲ್ಲ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

"ಎಲ್ಲೆಡೆ ಆರೋಗ್ಯ ಎಲ್ಲರಿಗೂ ಆರೋಗ್ಯ " ಎಂಬ ನಾಣ್ಣುಡಿಯಂತೆ ಎಲ್ಲರಿಗೂ "ಆರೋಗ್ಯ ಭಾಗ್ಯ" ಎಂಬ ಸರ್ಕಾರದ ಘೋಷಣೆಯಂತೆ ದಿನಾಂಕ: 23–09–2007 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ವಿಭಜಿಸಿ ನೂತವಾಗಿ ರಾಮನಗರ ಜಿಲ್ಲೆಯಾಗಿ ಪ್ರಾರಂಭ ಮಾಡಿ ಇದರಲ್ಲಿ

1. ಚನ್ನಪಟ್ಟಣ
2. ಕನಕಪುರ
3. ಮಾಗಡಿ
4. ರಾಮನಗರ

ಮೇಲಿನ ನಾಲ್ಕು ತಾಲ್ಲೂಕುಗಳು ಒಳಗೊಂಡಿರುತ್ತದೆ. ಜಿಲ್ಲಾ ಮಟ್ಟದಲ್ಲಿ 1 ಜಿಲ್ಲಾ ಆಸ್ಪತ್ರೆ, 3 ಸಾರ್ವಜನಿಕ ಆಸ್ಪತ್ರೆಗಳು ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿವೆ. 04 ಸಮುದಾಯ ಆರೋಗ್ಯ ಕೇಂದ್ರ, 61 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 04 ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ಹಾಗೂ 240 ಉಪ–ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಪ್ರಾಥಮಿಕ ಆರೋಗ್ಯ ಸೇವಾ ಸೌಲಭ್ಯಗಳನ್ನು ಗ್ರಾಮಾಂತರ ಜನರ ಮನೆ ಬಾಗಿಲಿಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಉಪ–ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಸರ್ಕಾರವು ರೂಪಿಸಿರುವ ಆರೋಗ್ಯ ಸೇವಾ ಸೌಲಭ್ಯಗಳು ಈ ರೀತಿ ಇರುತ್ತವೆ.

ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು:–

ಕುಟುಂಬ ಕಲ್ಯಾಣ ಕಾರ್ಯಕ್ರಮ 2017–18:–

ರಾಮನಗರ ಜಿಲ್ಲೆಯಲ್ಲಿ ಆರ್ ಸಿ ಹೆಚ್ ಕಾರ್ಯಕ್ರಮದ ಅಡಿಯಲ್ಲಿ ಆರೋಗ್ಯ ಮಾಹಿತಿಗಳು ಈ ಕೆಳಕಂಡಂತಿವೆ

ತಾಯಂದಿರ ಮರಣ ಪ್ರಮಾಣವು 2014–15 ರಲ್ಲಿ 5, 2015–16 ರಲ್ಲಿ 5, 2016–17 ರಲ್ಲಿ 07 ಹಾಗೂ 2017–18 ರಲ್ಲಿ 11 ಆಗಿರುತ್ತದೆ. ಶಿಶುಮರಣ ಪ್ರಮಾಣವು 2014–15 ನೇ ಸಾಲಿಗೆ 88, 2015–16 ನೇ ಸಾಲಿಗೆ 1052016–17 ನೇ ಸಾಲಿಗೆ 158 ಹಾಗೂ 2017–18 ನೇ ಸಾಲಿಗೆ 181 ಆಗಿರುತ್ತದೆ. ಗರ್ಭಿಣಿ ಸ್ತ್ರೀಯರಿಗೆ ಟಿಟಿ ಚುಚ್ಚುಮದ್ದು ಹಾಗೂ ಕಬ್ಬಿಣಾಂಶದ ಮಾತ್ರೆಗಳನ್ನು ವಿತರಿಸುವ ಕಾರ್ಯಕ್ರಮದಲ್ಲಿ ಪ್ರಗತಿ ಸಾಧಿಸಲಾಗಿದೆ. ಜನನಾಂಗ ಮಾರ್ಗದ ಸೋಂಕು ಮತ್ತು ಲೈಂಗಿಕ ಸಂಪರ್ಕದ ಸೋಂಕು ಹಾಗೂ ಹೆಚ್.ಐ.ವಿ/ ಏಡ್ಸ್ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಪ್ರಗತಿಯಲ್ಲಿದ್ದು, ಎನ್.ಆರ್.ಹೆಚ್.ಎಂ ಅಡಿಯಲ್ಲಿ ಹೆಚ್ಚು ಒತ್ತು ನೀಡಲಾಗಿದೆ. 2017–18 ನೇ ಸಾಲಿಗೆ ನೋ ಸ್ಕಾಲ್‌ಪೆಲ್ ವ್ಯಾಸಕ್ಟಮಿ 10 ಸಾಧನೆ ಆಗಿರುತ್ತದೆ. ನೋ ಸ್ಕಾ ಲ್‌ಪೆಲ್ ವ್ಯಾಸಕ್ಟಮಿ ಕಾರ್ಯಕ್ರಮದಲ್ಲಿ ಗಮನಾರ್ಹ ಪ್ರಗತಿ ಸಾಧಿಸಲು ಸಾಧ್ಯವಾಗಿಲ್ಲ. ಈ ನಿಟ್ಟಿನಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದು ಪ್ರತಿ ಉಪಕೇಂದ್ರದಿಂದ ಒಬ್ಬರಿಗೆ ಎನ್.ಎಸ್.ವಿ ಮಾಡಿಸುವ ಗುರಿ ಹೊಂದಲಾಗಿದೆ. ಸಂತಾನಹರಣ ಶಸ್ತ್ರಚಿಕಿತ್ಸೆಯಲ್ಲಿ 2014–15 ನೇ ಸಾಲಿಗೆ 5805 ಗುರಿ ಇದ್ದು ಸಾಧನೆ 4672 ಆಗಿರುತ್ತದೆ. 2015–16 ನೇ ಸಾಲಿನಲ್ಲಿ 6500 ಗುರಿ ಇದ್ದು 3724 ಸಾಧನೆ ಆಗಿರುತ್ತದೆ. 2016–17 ನೇ ಸಾಲಿನಲ್ಲಿ 6500 ಗುರಿ ಇದ್ದು 3700 ಸಾಧನೆ ಆಗಿರುತ್ತದೆ. 2017–18ನೇ ಸಾಲಿನಲ್ಲಿ 6500 ಗುರಿ ಇದ್ದು 3602 ಸಾಧನೆ ಆಗಿರುತ್ತದೆ. ಮುಂದಿನ ವರ್ಷದಲ್ಲಿ ಶೇ.100 ರಷ್ಟು ಪ್ರಗತಿ ಸಾಧಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

2014–15 ನೇ ಸಾಲಿಗೆ 4897 ಗುರಿ ಇದ್ದು 2470, ಹಾಗೂ 2015–16 ನೇ ಸಾಲಿನಲ್ಲಿ 2278 2016–17 ನೇ ಸಾಲಿನಲ್ಲಿ 2186, 2017–18 ನೇ ಸಾಲಿನಲ್ಲಿ 2771 ಮಹಿಳೆಯರಿಗೆ ವಂಕಿ ಅಳವಡಿಸಲಾಗಿದೆ 2014–15 ರಲ್ಲಿ 2134, 2015–16 ರಲ್ಲಿ 2134, 2017–18 ರಲ್ಲಿ 2100 ಫಲಾನುಭವಿಗಳಿಗೆ ನುಂಗುವ ಮಾತ್ರೆ ಮತ್ತು 2014–15 ರಲ್ಲಿ 4913, 2015–16 ರಲ್ಲಿ 4808 2016–17 ರಲ್ಲಿ 4450, 2017–18 ರಲ್ಲಿ 4900 ಪುರುಷರಿಗೆ ನಿರೋಧ್ ವಿತರಿಸುವ ಮೂಲಕ ಕುಟುಂಬ ಕಲ್ಯಾಣ ಕಾರ್ಯಕ್ರಮದಲ್ಲಿ ಗಮನಾರ್ಹ ಸಾಧನೆ ಸಾಧಿಸಲಾಗಿದೆ.

ರಾಷ್ಟ್ರೀಯ ಲಸಿಕಾ ಕಾರ್ಯಕ್ರಮದಡಿಯಲ್ಲಿ ಮಾರಕ ರೋಗಗಳ ವಿರುದ್ಧ ನೀಡುವ ಲಸಿಕೆಗಳಾದ 2014–15 ನೇ ಸಾಲಿಗೆ ಬಿ.ಸಿ.ಜಿ, ಡಿ.ಪಿ.ಟಿ., ಪೋಲಿಯೋ, ದಡಾರ ಲಸಿಕೆಗಳಿಗೆ 14916 ಗುರಿ ಇದ್ದು ಬಿ.ಸಿ.ಜಿ–14680, ಪೋಲಿಯೋ 15576, ಪೆಂಟಾ 14708 ಹಾಗೂ ದಡಾರ–15107 ಹಾಗೂ ಟಿ.ಟಿ. ಲಸಿಕೆಯ ಗುರಿ 17121 ಇದ್ದು 16344 ರಷ್ಟು ಪ್ರಗತಿ ಸಾಧಿಸಲಾಗಿದೆ. 2015–16 ನೇ ಸಾಲಿಗೆ ಬಿ.ಸಿ.ಜಿ, ಡಿ.ಪಿ.ಟಿ., ಪೋಲಿಯೋ, ದಡಾರ ಲಸಿಕೆಗಳಿಗೆ 14916 ಗುರಿ ಇದ್ದು ಬಿ.ಸಿ.ಜಿ–13789, ಪೋಲಿಯೋ14549,

ಪೆಂಟಾ 14549 ಹಾಗೂ ದಡಾರ–15089 ಹಾಗೂ ಟಿ.ಟಿ.ಲಸಿಕೆಯ ಗುರಿ 15893 ಇದ್ದು 14439 ರಷ್ಟು ಪ್ರಗತಿ ಸಾಧಿಸಲಾಗಿದೆ. 2016–17 ನೇ ಸಾಲಿಗೆ ಬಿ.ಸಿ.ಜಿ, ಡಿ.ಪಿ.ಟಿ., ಪೋಲಿಯೋ, ದಡಾರ ಲಸಿಕೆಗಳಿಗೆ 13153 ಗುರಿ ಇದ್ದು ಬಿ.ಸಿ.ಜಿ–11971, ಪೋಲಿಯೋ–14319, ಪೆಂಟಾ–14319, ಹಾಗೂ ದಡಾರ–12188 ಹಾಗೂ ಟಿ.ಟಿ.ಲಸಿಕೆಯ ಗುರಿ 15036 ಇದ್ದು 13518ರಷ್ಟು ಪ್ರಗತಿ ಸಾಧಿಸಲಾಗಿದೆ. 2017–18 ನೇ ಸಾಲಿಗೆ ಬಿ.ಸಿ.ಜಿ, ಡಿ.ಪಿ.ಟಿ., ಪೋಲಿಯೋ, ದಡಾರ ಲಸಿಕೆಗಳಿಗೆ 13153 ಗುರಿ ಇದ್ದು ಬಿ.ಸಿ.ಜಿ–10469, ಪೋಲಿಯೋ–13247, ಪೆಂಟಾ–13247, ಹಾಗೂ ದಡಾರ–13024 ಹಾಗೂ ಟಿ.ಟಿ.ಲಸಿಕೆಯ ಗುರಿ 15036 ಇದ್ದು 14343 ರಷ್ಟು ಪ್ರಗತಿ ಸಾಧಿಸಲಾಗಿದೆ.

2014–15 ನೇ ಸಾಲಿನಲ್ಲಿ ಎನ್.ಆರ್.ಹೆಚ್.ಎಂ ಯೋಜನೆಯ ಅಡಿಯಲ್ಲಿ ಜನನಿ ಸುರಕ್ಷಾ ಯೋಜನೆಯಲ್ಲಿ 7275 ಫಲಾನುಭವಿಗಳಿಗೆ 65.29 ಲಕ್ಷ ರೂ 2015–16 ನೇ ಸಾಲಿನಲ್ಲಿ 6700 ಫಲಾನುಭವಿಗಳಿಗೆ 82.57 ಲಕ್ಷ ರೂ ಹಾಗೂ 2016–17 ನೇ ಸಾಲಿನಲ್ಲಿ 6758 ಫಲಾನುಭವಿಗಳಿಗೆ 60.31 ಲಕ್ಷ ರೂ ಹಾಗೂ 2017–18 ನೇ ಸಾಲಿನಲ್ಲಿ 6299 ಫಲಾನುಭವಿಗಳಿಗೆ 53.52 ಲಕ್ಷ ರೂ ಸಹಾಯಧನ ಖರ್ಚು ಮಾಡಲಾಗಿದೆ.

ಪ್ರಸೂತಿ ಯೋಜನೆಯಲ್ಲಿ 2014–15 ನೇ ಸಾಲಿಗೆ 12269 ಫಲಾನುಭವಿಗಳಿಗೆ 1.5 ಕೋಟಿ ರೂ, 2015–16 ನೇ ಸಾಲಿಗೆ 2008 ಫಲಾನುಭವಿಗಳಿಗೆ 18.23 ಲಕ್ಷ ರೂ 2016–17 ನೇ ಸಾಲಿಗೆ 2768 ಫಲಾನುಭವಿಗಳಿಗೆ 23.23 ಲಕ್ಷ ರೂ ಗಳ 2017–18 ನೇ ಸಾಲಿಗೆ 5094 ಫಲಾನುಭವಿಗಳಿಗೆ 45.42 ಲಕ್ಷ ರೂ ಗಳ ಅನುದಾನ ಖರ್ಚು ಮಾಡಲಾಗಿದೆ.

ತಾಯಿ ಭಾಗ್ಯ ಪ್ಲಸ್‌ಯೋಜನೆಯಲ್ಲಿ 2016–17ನೇ ಸಾಲಿಗೆ 369 ಫಲಾನುಭವಿಗಳಿಗೆ 3.69 ಲಕ್ಷ ರೂ ಅನುದಾನ ಖರ್ಚು ಮಾಡಲಾಗಿದೆ. 2014–15 ನೇ ಸಾಲಿಗೆ 3993 ಫಲಾನುಭವಿಗಳಿಗೆ, 2015–16 ನೇ ಸಾಲಿಗೆ 3934 ಫಲಾನುಭವಿಗಳಿಗೆ, 2016–17 ನೇ ಸಾಲಿಗೆ 3343 ಫಲಾನುಭವಿಗಳಿಗೆ, 2017–18 ನೇ ಸಾಲಿಗೆ 1305 ಮಡಿಲುಕಿಟ್ ವಿತರಿಸಲಾಗಿರುತ್ತದೆ.

ಶಾಲಾ ಆರೋಗ್ಯ ಕಾರ್ಯಕ್ರಮದಲ್ಲಿ ಪ್ರಾರಂಭಿಸಿರುವ ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮದಲ್ಲಿ 2014–15ನೇ ಸಾಲಿಗೆ 701512 ಮಕ್ಕಳಿದ್ದು 353804 ಮಕ್ಕಳ ಆರೋಗ್ಯ ತಪಾಸಣೆ ನಡೆಸಿ ನ್ಯೂನತೆ ಇರುವ 22732 ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದ್ದು 28 ಮಕ್ಕಳನ್ನು, 2015–16ನೇ ಸಾಲಿಗೆ 181690 ಮಕ್ಕಳಿದ್ದು 20066 ಮಕ್ಕಳ ಆರೋಗ್ಯ ತಪಾಸಣೆ ನಡೆಸಿ ನ್ಯೂನತೆ ಇರುವ 12897ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದ್ದು, ರಾಜ್ಯ ಮಟ್ಟದ ಆಸ್ಪತ್ರೆಗೆ ನಿರ್ದೇಶಿಸಲಾಗಿದೆ. 2016–17ನೇ ಸಾಲಿಗೆ 208560 ಮಕ್ಕಳಿದ್ದು 155239 ಮಕ್ಕಳ ಆರೋಗ್ಯ ತಪಾಸಣೆ ನಡೆಸಿ ನ್ಯೂನತೆ ಇರುವ 23660 ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದ್ದು, ಹೆಚ್ಚುವರಿ ಚಿಕಿತ್ಸೆಗಾಗಿ 13955 ಮಕ್ಕಳನ್ನು ರಾಜ್ಯ ಮಟ್ಟದ ಆಸ್ಪತ್ರೆಗೆ ನಿರ್ದೇಶಿಸಲಾಗಿದೆ. 2017–18 ನೇ ಸಾಲಿಗೆ 227504 ಮಕ್ಕಳಿದ್ದು, 169974 ಮಕ್ಕಳ ಆರೋಗ್ಯ ತಪಾಸಣೆ ನಡೆಸಿ ನ್ಯೂನತೆ ಇರುವ 26848 ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದ್ದು, ಹೆಚ್ಚುವರಿ ಚಿಕಿತ್ಸೆಗಾಗಿ 14860 ಮಕ್ಕಳನ್ನು ರಾಜ್ಯ ಮಟ್ಟದ ಆಸ್ಪತ್ರೆಗೆ ನಿರ್ದೇಶಿಸಲಾಗಿದೆ.

ಹದಿಹರೆಯ ಮತ್ತು ಸಂತಾನೋತ್ಪತ್ತಿ ವಿನೂತನ ಕಾರ್ಯಕ್ರಮದ ಮುಖಾಂತರ, ಜಿಲ್ಲೆಯಲ್ಲಿರುವ ಎಲ್ಲಾ ಕಿಶೋರ–ಕಿಶೋರಿಯರಿಗೆ ಹದಿಹರೆಯದ ಆರೋಗ್ಯ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಹಾಗೂ ಪ್ರತಿ ಗುರುವಾರ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹದಿಹರೆಯದ ಸಮಸ್ಯೆಗಳಿಗೆ ಚಿಕಿತ್ಸೆ ನೀಡುವ ಸಲುವಾಗಿ **"ಸ್ನೇಹ ಕ್ಲಿನಿಕ್"** ಪ್ರಾರಂಭಿಸಲಾಗಿದೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿಯಲ್ಲಿ ಜಿಲ್ಲೆಯಲ್ಲಿ 810 ಆಶಾ ಕಾರ್ಯಕರ್ತೆಯರನ್ನು ಗುರುತಿಸಿ ತರಬೇತಿ ನೀಡುವ ಗುರಿ ಹೊಂದಲಾಗಿದ್ದು ಸುಮಾರು 180 ಆಶಾ ಕಾರ್ಯಕರ್ತೆಯರಿಗೆ ತರಬೇತಿ ನೀಡಿ ಕ್ಷೇತ್ರಮಟ್ಟದಲ್ಲಿ ಕಾರ್ಯ ನಿರ್ವಹಿಸಲು ನಿಯೋಜಿಸಲಾಗಿತ್ತು.ಸದರಿ ಸಾಲಿನಲ್ಲಿ ಒಟ್ಟು 740ಆಶಾ ಕಾರ್ಯಕರ್ತೆಯರು ಮಾತ್ರ ಕಾರ್ಯನಿರ್ವಹಿಸುತ್ತಿರುತ್ತಾರೆ.

ಆರೋಗ್ಯ ರಕ್ಷಾ ಕವಚ ಕಾರ್ಯಕ್ರಮದ ಅಡಿಯಲ್ಲಿ 12 **"108"** ತುರ್ತು ವಾಹನಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. 2014–15 ನೇ ಸಾಲಿನಲ್ಲಿ 15263 ಫಲಾನುಭವಿಗಳಿಗೆ, 2015–16 ನೇ ಸಾಲಿನಲ್ಲಿ 15247 ಫಲಾನುಭವಿಗಳಿಗೆ ಹಾಗೂ 2016–17 ನೇ ಸಾಲಿನಲ್ಲಿ 17839 ಫಲಾನುಭವಿಗಳಿಗೆ ಈ ಸೇವೆಯನ್ನು ಒದಗಿಸಲಾಗಿದೆ.

2017–18ನೇ ಸಾಲಿನಲ್ಲಿ ರಾಷ್ಟ್ರೀಯ ಲಸಿಕಾ ಕಾರ್ಯಕ್ರಮದಡಿಯಲ್ಲಿ 6 ಮಾರಕ ಕಾಯಿಲೆಗಳಿಗೆ ನೀಡಿದ ಲಸಿಕೆಗಳ ವಿವರ

ಕ್ರ:ಸಂ:	ಲಸಿಕೆಗಳ ಹೆಸರು	ಗುರಿ	2017–18
1	ಬಿ.ಸಿ.ಜಿ.	13153	10469
2	ಪೆಂಟಾ	13153	13247
3	ಪೋಲಿಯೋ	13153	13247
4	ದಡಾರ	13153	13024
5	ಟಿಟಿ ಕಾರ್ಯಕ್ರಮ	15036	14343
6	ವಿಟಮಿನ್ ಎ	13153	13559

2017–18 ನೇ ಸಾಲಿನಲ್ಲಿ ಎನ್.ಹೆಚ್.ಎಂ. ಯೋಜನೆಯಡಿಯಲ್ಲಿ ವಿವಿಧ ಕಾರ್ಯಕ್ರಮದಡಿಯಲ್ಲಿನ ಫನಾನುಭವಿಗಳ ವಿವರಗಳು

ಕ್ರ:ಸಂ:	ಕಾರ್ಯಕ್ರಮಗಳು	ಫಲಾನುಭವಿಗಳು	ಖರ್ಚಾದ ಹಣ(ರೂ.ಲಕ್ಷಗಳಲ್ಲಿ)
1	ಜನನಿ ಸುರಕ್ಷಾ ಯೋಜನೆ	6299	53.52
2	ಪ್ರಸೂತಿ ಯೋಜನೆ	5094	45.42
3	ತಾಯಿ ಭಾಗ್ಯ ಪ್ಲಸ್	0	0
4	ಮಡಿಲು ಕಿಟ್	1305	–

2017–18 ನೇ ಸಾಲಿನ ಸುವರ್ಣ ಆರೋಗ್ಯ ಕಾರ್ಯಕ್ರಮ ಅಭಿಯಾನ ಕಾರ್ಯಕ್ರಮದ ಪ್ರಗತಿ ವಿವರ

ಕ್ರ:ಸಂ	ವಿವರಗಳು	ಪ್ರಗತಿ
1	ಅಂಗನವಾಡಿಗಳು	1543
2	ಮಕ್ಕಳ ಸಂಖ್ಯೆ	86042
3	ಶಾಲೆಗಳು	1769
4	ಮಕ್ಕಳ ಸಂಖ್ಯೆ	141462
5	ತಪಾಸಣೆ ನಡೆಸಿದ ಮಕ್ಕಳು	169974
6	ನ್ಯೂನ್ಯತೆ ಇರುವ ಮಕ್ಕಳು	26848
7	ಹೆಚ್ಚುವರಿ ಚಿಕಿತ್ಸೆಗಾಗಿ ಕಳುಹಿಸಿದ ಮಕ್ಕಳು	14860

ರಾಮನಗರ ಜಿಲ್ಲೆಯಲ್ಲಿ ಆರ್.ಸಿ.ಹೆಚ್. ಕಾರ್ಯಕ್ರಮದಡಿಯಲ್ಲಿ ಇರುವ ಆರೋಗ್ಯ ಮಾಹಿತಿಗಳ ವಿವರಗಳು

ಕ್ರ. ಸಂ	ಆರೋಗ್ಯ ಕಾರ್ಯಕ್ರಮಗಳು	2014–2015	2015–2016	2016–17	2017–18
1	ತಾಯಂದಿರ ಮರಣ	5	5	7	11
2	ಶಿಶು ಮರಣ	88	105	158	181
3	ಸಂತಾನಹರಣ ಶಸ್ತ್ರ ಚಿಕಿತ್ಸೆ	4672	3724	3700	3602
4	ವಂಕಿ ಅಳವಡಿಕೆ	2470	2278	2186	2771
5	ನುಂಗುವ ಮಾತ್ರೆ	2134	2134	3590	2100
6	ನಿರೋದ್ ವಿತರಣೆ	4913	4808	4450	4900
7	ಮಕ್ಕಳಿಗೆ ಅತಿಸಾರ ಬೇದಿಗೆ ಚಿಕಿತ್ಸೆ	3066	186077	48675	69016

ಆರೋಗ್ಯ ರಕ್ಷಾ ಕವಚ (108)

ಕ್ರ. ಸಂ.	ಆರೋಗ್ಯ ರಕ್ಷಾ ಕವಚ ಕಾರ್ಯಕ್ರಮ	2012–13	2013–14	2014–15	2015–16	2016–17
1	ಫಲಾನುಭವಿಗಳು	12330	12761	15263	15247	17839

2017–18 ನೇ ಸಾಲಿನ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ ವರದಿ

ರಾಮನಗರ ಜಿಲ್ಲೆಯಲ್ಲಿ ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ (ಆರ್.ಎನ್.ಟಿ.ಸಿ.ಪಿ.) ಕಾರ್ಯಕ್ರಮವು 01 ಜನವರಿ 2008 ರಂದು ಜಾರಿಗೆ ಬಂದಿರುತ್ತದೆ.

ಪ್ರಸ್ತುತ 05 ಕ್ಷಯರೋಗ ಘಟಕಗಳು ರಾಮನಗರ, ಕನಕಪುರ, ಚನನಪಟ್ಟಣ, ಮಾಗಡಿ ಮತ್ತು ಹಾರೋಹಳ್ಳಿ ಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು ಇವುಗಳ ವ್ಯಾಪ್ತಿಯಲ್ಲಿ 12 ಡಿಎಂಸಿಗಳಿದ್ದು

ರಾಮನಗರ ಜಿಲ್ಲೆಯ ಕ್ಷಯ ರೋಗ ಘಟಕದ ಅಡಿಯಲ್ಲಿ 12 ಡಿಎಂಸಿಗಳು ಈ ಕೆಳಕಂಡಂತಿದೆ.

- **ರಾಮನಗರ ಕ್ಷಯ ರೋಗ ಘಟಕ (ಡಿ.ಎಂ.ಸಿ)**

1. ರಾಮನಗರ – ಸಾರ್ವಜನಿಕ ಆಸ್ಪತ್ರೆ
2. ಬಿಡದಿ – ಸಮುದಾಯ ಆರೋಗ್ಯ ಕೇಂದ್ರ
3, ಜಾಲಮಂಗಲ – ಪ್ರಾಥಮಿಕ ಆರೋಗ್ಯ ಕೇಂದ್ರ

- **ಕನಕಪುರ ಕ್ಷಯ ರೋಗ ಘಟಕ**

1. ಕನಕಪುರ – ಸಾರ್ವಜನಿಕ ಆಸ್ಪತ್ರೆ.
2. ಸಾತನೂರು – ಸಮುದಾಯ ಆರೋಗ್ಯ ಕೇಂದ್ರ

- **ಚನ್ನಪಟ್ಟಣ ಕ್ಷಯ ರೋಗ ಘಟಕ**

1. ಚನ್ನಪಟ್ಟಣ – ಸಾರ್ವಜನಿಕ ಆಸ್ಪತ್ರೆ.
2. ಕೋಡಂಬಳ್ಳಿ – ಪ್ರಾಥಮಿಕ ಆರೋಗ್ಯ ಕೇಂದ್ರ

- **ಮಾಗಡಿ ಕ್ಷಯ ರೋಗ ಘಟಕ**

1. ಮಾಗಡಿ – ಸಾರ್ವಜನಿಕ ಆಸ್ಪತ್ರೆ
2. ಕುದೂರು – ಪ್ರಾಥಮಿಕ ಆರೋಗ್ಯ ಕೇಂದ್ರ
3. ಸೋಲೂರು – ಸಮುದಾಯ ಆರೋಗ್ಯ ಕೇಂದ್ರ

- **ಹಾರೋಹಳ್ಳಿ ಕ್ಷಯ ರೋಗ ಘಟಕ**

1. ಹಾರೋಹಳ್ಳಿ – ಸಮುದಾಯ ಆರೋಗ್ಯ ಕೇಂದ್ರ
2. ಕೋಡಿಹಳ್ಳಿ – ಪ್ರಾಥಮಿಕ ಆರೋಗ್ಯ ಕೇಂದ್ರ

2017–18 ರಲ್ಲಿ ಸದರಿ ಕಾರ್ಯಕ್ರಮದಲ್ಲಿ 16211 ಜನರಿಗೆ ಕಫ ಪರೀಕ್ಷೆ ಮಾಡಿ 660 ರೋಗಿಗಳನ್ನು ಪತ್ತೆ ಹಚ್ಚಲಾಗಿದೆ.

REPORT for 4 Years

ವರ್ಷ	ಜನಸಂಖ್ಯೆ	ಎನ್ ಎಸ್ ಪಿ	ಗುಣಮುಖರಾದ ಕ್ಷಯ ರೋಗಿಗಳು	ಕಫ ಪರೀಕ್ಷೆ
2014–2015	1140749	546	86%	10848
2015–2016	1155271	484	85%	11512
2016–2017	1180571	482	87%	13084
2017–2018	1184359	660	86%	16211

ಜಿಲ್ಲಾ ಹೆಚ್.ಐ.ವಿ/ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕ.

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಬೆಂಗಳೂರು, ಇವರ ವತಿಯಿಂದ, ರಾಮನಗರ ಜಿಲ್ಲೆಯಲ್ಲಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ, ಜಿಲ್ಲಾ ಹೆಚ್.ಐ.ವಿ/ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕವು ಸ್ಥಾಪನೆಗೊಂಡಿದ್ದು, ಈ ಘಟಕದ ಅಡಿಯಲ್ಲಿ

08 ಐಸಿಟಿಸಿ (ಸಮಗ್ರ ಆಪ್ತಸಮಾಲೋಚನಾ ಮತ್ತು ಪರೀಕ್ಷಾ ಕೇಂದ್ರ) ಕೇಂದ್ರಗಳು ಜಿಲ್ಲಾದ್ಯಂತ ಕಾರ್ಯನಿರ್ವಹಿಸುತ್ತಿವೆ. ಅವುಗಳೆಂದರೆ:

- ರಾಮನಗರ – ಜಿಲ್ಲಾ ಆಸ್ಪತ್ರೆ
- ಕನಕಪುರ – ಸಾರ್ವಜನಿಕ ಆಸ್ಪತ್ರೆ
- ಚನ್ನಪಟ್ಟಣ – ಸಾರ್ವಜನಿಕ ಆಸ್ಪತ್ರೆ
- ಮಾಗಡಿ – ಸಾರ್ವಜನಿಕ ಆಸ್ಪತ್ರೆ
- ಹಾರೋಹಳ್ಳಿ – ಸಮುದಾಯ ಆರೋಗ್ಯ ಕೇಂದ್ರ
- ಬಿಡದಿ – ಸಮುದಾಯ ಆರೋಗ್ಯ ಕೇಂದ್ರ
- ಸೋಲೂರು – ಸಮುದಾಯ ಆರೋಗ್ಯ ಕೇಂದ್ರ
- ಸಾತನೂರು –ಸಮುದಾಯ ಆರೋಗ್ಯ ಕೇಂದ್ರ

ಈ ಮೇಲ್ಕಂಡ 8 ಕೇಂದ್ರದಲ್ಲಿ ನುರಿತ ಆಪ್ತಸಮಾಲೋಚಕರು ಮತ್ತು ಪ್ರಯೋಗಶಾಲಾ ತಂತ್ರಜ್ಞರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಕೇಂದ್ರದಲ್ಲಿ ಸ್ವಯಂಪ್ರೇರಿತವಾಗಿ/ವೈದ್ಯಾಧಿಕಾರಿಗಳು ಶಿಫಾರಸ್ಸು ಮಾಡಿದ ಅಥವಾ ಸ್ವಯಂ ಸೇವಾ ಸಂಸ್ಥೆಗಳು ಶಿಫಾರಸ್ಸು ಮಾಡಿದ ಹೆಚ್.ಐ.ವಿ ಸೋಂಕು ತಗಲುವ ಅಪಾಯದ ಅಂಚಿನಲ್ಲಿರುವ ಅಭ್ಯರ್ಥಿಗಳಿಗೆ ಹಾಗೂ ಗರ್ಭಿಣಿಯರಿಗೆ ಆಪ್ತ ಸಮಾಲೋಚನೆ ನೀಡಿ ಒಪ್ಪಿದವರಿಗೆ ಹೆಚ್.ಐ.ವಿ ಪರೀಕ್ಷೆ ನಡೆಸಲಾಗುತ್ತದೆ. ಹೆಚ್.ಐ.ವಿ ಸೋಂಕಿತರಿಗೆ ಉಚಿತವಾಗಿ ಎ.ಆರ್.ಟಿ.ಚಿಕಿತ್ಸೆಯನ್ನು ರಾಮನಗರ ಜಿಲ್ಲಾಸ್ಪತ್ರೆಯ ಎ.ಆರ್.ಟಿ. ಕೇಂದ್ರದಲ್ಲಿ ನೀಡಲಾಗುತ್ತಿದೆ.

ಹಾಗೆಯೇ ರಾಮನಗರ ಜಿಲ್ಲಾದ್ಯಂತ ಇರುವ ಎಲ್ಲಾ 24/7 ಪ್ರಾಥಮಿಕ ಆರೋಗ್ಯ ಕೇಂದ್ರಗಳು,ನಗರ ಆರೋಗ್ಯ ಕೇಂದ್ರಗಳು ಹಾಗೂ ಕೆಲವು ಖಾಸಗಿ ಆಸ್ಪತ್ರೆಗಳಲ್ಲೂ ಸಹ ಹೆಚ್.ಐ.ವಿ ಸ್ಕ್ರೀನಿಂಗ್ ಸೇವೆಗಳ ವಿಸ್ತರಣೆಯಾಗಿದ್ದು, ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಶುಶ್ರೂಷಕ/ ಶುಶ್ರೂಷಕಿಯರು ಆಪ್ತ ಸಮಾಲೋಚನೆಯ ಹೊಣೆ ಹೊತ್ತಿದ್ದು, ಹೆಚ್.ಐ.ವಿ ಪರೀಕ್ಷೆಯನ್ನು ಅಲ್ಲಿಯ ಸಾಮಾನ್ಯ ಪ್ರಯೋಗ ಶಾಲಾ ತಂತ್ರಜರು ಅಥವಾ ಆರೋಗ್ಯ ಸಿಬ್ಬಂದಿ ನಿರ್ವಹಿಸುತ್ತಿದ್ದಾರೆ.

ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕ ರಾಮನಗರ ಜಿಲ್ಲೆಯ 2017–18ನೇ ಸಾಲಿನ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ವರದಿ.

2017–18ನೇ ಸಾಲಿನ ಸಾಂಕ್ರಾಮಿಕ ರೋಗಗಳ ಕಾರ್ಯಕ್ರಮದ ವರದಿ

1	ಸಂಗ್ರಹಣೆಯಾದ ರಕ್ತದ ಯೂನಿಟ್‌ನ ಸಂಖ್ಯೆ	744 (ಏಪ್ರಿಲ್ ರಿಂದ ಜೂನ್ 2017–18) ನಂತರದಲ್ಲಿ ರಕ್ತನಿಧಿ ಕೇಂದ್ರವು ಶಿಬಿರಗಳನ್ನು ಆಯೋಜಿಸಿರುವುದಿಲ್ಲ.
2	ಸಮಗ್ರ ಆಪ್ತ ಸಮಾಲೋಚನೆ ಮತ್ತು ಪರೀಕ್ಷಾ ಕೇಂದ್ರಗಳ ಸಂಖ್ಯೆ(ಸ್ಟ್ಯಾಂಡ್–ಅಲೋನ್)	8
4	ಒಟ್ಟು ಆಪ್ತಸಮಾಲೋಚನೆಯಾಗಿರುವ ಗರ್ಭಿಣಿಯರ ಸಂಖ್ಯೆ	17866
5	ಒಟ್ಟು ಹೆಚ್.ಐ.ವಿ ಪರೀಕ್ಷೆಗೆ ಒಳಪಟ್ಟ ಗರ್ಭಿಣಿಯರ ಸಂಖ್ಯೆ	17836
6	ಅದರಲ್ಲಿ ಕಂಡುಬಂದ ಸೋಂಕಿತರ ಸಂಖ್ಯೆ	13
7	ಜಿಲ್ಲೆಯಲ್ಲಿ ಹೆರಿಗೆಯಾದ ಸೋಂಕಿತ ಗರ್ಭಿಣಿಯರ ಸಂಖ್ಯೆ	04
8	ಜಿಲ್ಲೆಯ ಹೊರಗೆ ಹೆರಿಗೆಯಾದ ಸೋಂಕಿತ ಗರ್ಭಿಣಿಯರ ಸಂಖ್ಯೆ	04

9	ಎ.ಆರ್.ವಿ ಚಿಕಿತ್ಸೆಗೆ ಒಳಪಟ್ಟ ಹೆರಿಗೆಯಾದ ಗರ್ಭಿಣಿಯರ ಸಂಖ್ಯೆ	08
10	ಸರ್ಕಾರಿ ಎಸ್.ಟಿ.ಡಿ ಚಿಕಿತ್ಸಾ ಕೇಂದ್ರಗಳ ಸಂಖ್ಯೆ	01
11	ಸರ್ಕಾರೇತರ ಎಸ್.ಟಿ.ಡಿ ಚಿಕಿತ್ಸಾ ಕೇಂದ್ರಗಳ ಸಂಖ್ಯೆ	0
12	ಲೈಂಗಿಕ ಸಂಪರ್ಕದ ಸೋಂಕುಗಳಿಂದಾಗಿ ಚಿಕಿತ್ಸೆಗೆ ಒಳಪಟ್ಟಿರುವವರ ಸಂಖ್ಯೆ (ಸರ್ಕಾರಿ ಹಂತದಲ್ಲಿ)	14
13	ಲೈಂಗಿಕ ಸಂಪರ್ಕದ ಸೋಂಕುಗಳಿಂದಾಗಿ ಚಿಕಿತ್ಸೆಗೆ ಒಳಪಟ್ಟಿರುವವರ ಸಂಖ್ಯೆ (ಸರ್ಕಾರೇತರ ಸಂಸ್ಥೆಗಳಿಂದ)	0
14	ಸರ್ಕಾರಿ ಹಂತದ ಆರೈಕೆ ಮತ್ತು ಬೆಂಬಲ ಕೇಂದ್ರಗಳ ಸಂಖ್ಯೆ	1
15	ಸಕಾರೇತರ ಹಂತದ ಆರೈಕೆ ಮತ್ತು ಬೆಂಬಲ ಕೇಂದ್ರಗಳ ಸಂಖ್ಯೆ	0
16	ಎಷ್ಟು ಮಂದಿ ಹೊಸ ಸೋಂಕಿತ ಅಭ್ಯರ್ಥಿಗಳು ಆರೈಕೆ ಮತ್ತು ಬೆಂಬಲ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ	181–(ಸಾಮಾನ್ಯ ಹಾಗೂ ಗರ್ಭಿಣಿ ಅರ್ಥಿಗಳು)
17	ಅ್ಯಂಟಿ–ರೆಟ್ರೋವ್ಯೆರಲ್ ಚಿಕಿತ್ಸೆಯು ಉಚಿತವಾಗಿ ಲಭ್ಯವಿದೆಯೇ?	ಹೌದು
18	ಒಟ್ಟು ಜಿಲ್ಲೆಯಲ್ಲಿ ಎಷ್ಟು ಐಸಿಟಿಸಿ–ಎಫ್–ಐಸಿಟಿಸಿ ಕೇಂದ್ರಗಳು ಲಭ್ಯವಿದೆ.	83

ಜಿಲ್ಲೆಯಲ್ಲಿ ಯಾವುದೇ ರ್ಯಾಬೀಸ್ ಪ್ರಕರಣ ಕಂಡು ಬಂದಿರುವುದಿಲ್ಲ ಹಾಗೂ ಎಲ್ಲಾ ಪ್ರಾ.ಆ.ಕೇಂದ್ರದಲ್ಲಿ ಎಎಸ್‌ವಿ ಮತ್ತು ಎಆರ್‌ವಿ ಲಸಿಕೆಗಳು ದೊರೆಯುವಂತೆ ವ್ಯವಸ್ಥೆ ಮಾಡಲಾಗಿದೆ. ವಿಷಮ ಶೀತ ಜ್ವರ, ಅರಿಶಿನ ಕಾಮಾಲೆ ಪ್ರಕರಣಗಳು ಅತಿ ಕಡಿಮೆ ಪ್ರಮಾಣದಲ್ಲಿ ಕಂಡು ಬಂದಿದ್ದು ಯಾವುದೇ ಸಾವಿನ ಬಗ್ಗೆ ದಾಖಲಾಗಿರುವುದಿಲ್ಲ. ಒಟ್ಟಾರೆ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಶಿಕ್ಷಣ ಇಲಾಖೆ, ಸ್ತ್ರೀ ಸ್ವಸಹಾಯ ಸಂಘಗಳು ಆರೋಗ್ಯ ನೈರ್ಮಲ್ಯ ಸಮಿತಿಗಳ ಸಹಯೋಗದೊಂದಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಾಂಕ್ರಾಮಿಕ ರೋಗಗಳು ಹರಡದಂತೆ ನಿಗಾವಹಿಸಲಾಗಿದೆ.

2017–18 ನೇ ಸಾಲಿನ ಮಲೇರಿಯಾ ನಿಯಂತ್ರಣ ಕಾರ್ಯಕ್ರಮದ ವರದಿ

ಮಲೇರಿಯಾ ರೋಗವು ಒಂದು ಸಾಂಕ್ರಾಮಿಕ ರೋಗ, ಇದು **"ಪ್ಲಾಸ್ಮೋಡಿಯಂ"** ಎಂಬ ಪರೋಪಜೀವಿಯಿಂದ ಬರುತ್ತದೆ. ಆರೋಗ್ಯವಂತ ಮನುಷ್ಯನಿಗೆ ಮಲೇರಿಯ ರೋಗವು ಸೋಂಕು ತಗುಲಿದ ಅನಾಫಿಲೀಸ್ ಎಂಬ ಹೆಣ್ಣು ಸೊಳ್ಳೆಯ ಮೂಲಕ ಹರಡುತ್ತದೆ. ಈ ರೋಗವನ್ನು ತಡೆಗಟ್ಟಬೇಕಾದರೆ ಮೊದಲಿಗೆ ರೋಗ ಹರಡುವ ಸೊಳ್ಳೆಗಳ ಉತ್ಪತ್ತಿಯನ್ನು ನಿಯಂತ್ರಿಸುವುದು. ಹಾಗೂ ಸೊಳ್ಳೆಗಳನ್ನು ನಾಶಪಡಿಸುವುದು. ಸೋಂಕಿತ ವ್ಯಕ್ತಿಗೆ ಸೂಕ್ತ ಚಿಕಿತ್ಸೆ ನೀಡಿ ರೋಗ ಮುಕ್ತನನ್ನಾಗಿ ಮಾಡುವುದು ಆಧ್ಯ ಕರ್ತವ್ಯ.

ಈ ನಿಟ್ಟಿನಲ್ಲಿ ಆರೋಗ್ಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆರೋಗ್ಯ ಸಹಾಯಕರು ಮನೆ–ಮನೆ ಭೇಟಿ ನೀಡಿ ಜ್ವರ ಸಮೀಕ್ಷೆ ಮಾಡಿ ಎಲ್ಲಾ ಜ್ವರದ ಪ್ರಕರಣಗಳಿಗೆ ರಕ್ತಲೇಪನ ಸಂಗ್ರಹಿಸಿ ಮಲೇರಿಯ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಅಲ್ಲದೆ ಉಚಿತವಾಗಿ ಪೂರ್ವಬಾವಿ ಮತ್ತು ತೀವ್ರ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ರಾಮನಗರ ಜಿಲ್ಲೆಯ 4 ತಾಲ್ಲೂಕುಗಳ ವ್ಯಾಪ್ತಿಗೆ ಒಳಪಡುವ ಎಲ್ಲಾ ಗ್ರಾಮಗಳಲ್ಲಿ ಜ್ವರ ಸಮೀಕ್ಷೆ ನಡೆಸಲಾಗುತ್ತಿದೆ. ಜನಸಂಖ್ಯೆಗೆ ಅನುಗುಣವಾಗಿ ಶೇ 1 ರಂತೆ ಸಕ್ರಿಯ ರಕ್ತಲೇಪನದ ಗುರಿ ನಿರ್ಧರಿಸಲಾಗಿದ್ದು, ಆಸ್ಪತ್ರೆಗಳಲ್ಲಿ ಜ್ವರದ ಚಿಕಿತ್ಸೆಗಾಗಿ ಬಂದ ಹೊಸ ಹೊರರೋಗಿಗಳಿಂದ ಶೇ 15 ರಂತೆ ಸ್ಥಿತ ರಕ್ತ ಲೇಪನ ಸಂಗ್ರಹಿಸುವ ಗುರಿ ನಿರ್ಧರಿಸಲಾಗಿದೆ.

ಜನವರಿ–2017 ರಿಂದ ಡಿಸೆಂಬರ್–2017 ವರೆಗೆ 234743 ರಕ್ತಲೇಪನಗಳನ್ನು ಸಂಗ್ರಹಿಸಲಾಗಿದ್ದು 6 ಮಲೇರಿಯ ಪ್ರಕರಣಗಳು ವರದಿಯಾಗಿರುತ್ತದೆ. ಅದರಲ್ಲಿ 5 ಪಿವಿ ಪ್ರಕರಣಗಳು 1 ಪಿಎಫ್ ಪ್ರಕರಣ ವರದಿಯಾಗಿದ್ದು, ಎಲ್ಲಾ ಪ್ರಕರಣಗಳಿಗೆ ತೀವ್ರ ಚಿಕಿತ್ಸೆಯನ್ನು ನೀಡಲಾಗಿದೆ.

ಜನವರಿ–2017 ರಿಂದ ಡಿಸೆಂಬರ್–2017 ವರೆಗೆ 116 ಡೆಂಗಿ ಹಾಗೂ 95 ಚಿಕೂನ್‌ಗುನ್ಯಾ ಪ್ರಕರಣಗಳು ವರದಿಯಾಗಿದ್ದು, ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಕರಣಗಳು ಉಲ್ಬಣಗೊಳದಂತೆ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದರ

ಜೊತೆಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ದಿನಾಂಕ: 21–06–2017 ರಂದು ಜಿಲ್ಲಾ ಮಟ್ಟದ ರಾಷ್ಟ್ರೀಯ ಡೆಂಗಿ ದಿನಾಚರಣೆ–2017 ಯನ್ನು ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಂಡು ಶಾಲಾ ಕಾಲೇಜು ವಿದ್ಯಾರ್ಥಿಗಳಿಂದ ಸಾರ್ವಜನಿಕರಿಗೆ ಜಾಗೃತಿ ಜಾಥಾ ಮೂಲಕ ಅರಿವು ಮೂಡಿಸಲಾಗಿದೆ. ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ. ಅಲ್ಲದೆ ಕ್ಷೇತ್ರ ಸಿಬ್ಬಂದಿ ವರ್ಗದವರು ನಿಗಧಿತ ಪ್ರವಾಸ ವೇಳೆಯಲ್ಲಿ ಈಡೀಸ್ ಲಾರ್ವಾ ಸಮೀಕ್ಷೆ/ಜ್ವರ ಸಮೀಕ್ಷೆ ಮತ್ತು ಆರೋಗ್ಯ ಶಿಕ್ಷಣ ನೀಡುವುದರ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗಿದೆ. ಉಪಕೇಂದ್ರಗಳ ಮಟ್ಟದಲ್ಲಿ ಸ್ಥಳೀಯ ಜನಪ್ರತಿನಿಧಿಗಳು, ಸ್ತ್ರೀಶಕ್ತಿ ಸದಸ್ಯರು, ಸ್ವಸಹಾಯ ಸಂಘದ ಸದಸ್ಯರು, ಯುವಕ/ಯುವತಿ ಮಂಡಳಿ ಸದಸ್ಯರು, ಗ್ರಾಮದ ಮುಖಂಡರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ಸಹಕಾರದೊಂದಿಗೆ ಗುಂಪು ಸಭೆಗಳನ್ನು ಏರ್ಪಡಿಸಿ ಡೆಂಗಿ ಜ್ವರದ ಬಗ್ಗೆ ಅರಿವು ಮೂಡಿಸಲಾಗಿದೆ. ಡೆಂಗಿ/ ಚಿಕುಂಗುನ್ಯಾ ರೋಗಗಳ ಕರಪತ್ರಗಳನ್ನು ಮುದ್ರಿಸಿ ಸಾರ್ವಜನಿಕರಿಗೆ ವಿತರಿಸುವ ಮೂಲಕ ಅರಿವು ಮೂಡಿಸಲಾಗಿದೆ. ವಿವಿಧ ಇಲಾಖೆಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಭೆ ಏರ್ಪಡಿಸಿ ಡೆಂಗಿ/ಚಿಕುಂಗುನ್ಯಾ ರೋಗಗಳು ಮತ್ತು ನಿಯಂತ್ರಣ ಕ್ರಮಗಳ ಬ್ಗಗೆ ಚರ್ಚಿಸಿ ಸಂಪೂರ್ಣ ಸಹಕಾರ ನೀಡಲು ಕೋರಲಾಗಿತ್ತು. ವಾರ್ತಾ ಮತ್ತು ಪ್ರಚಾರ ಇಲಾಖೆಯಿಂದ ಸ್ಥಳೀಯ ಖಾಸಗಿ ಚಾನಲ್‌ಗಳು/ಪತ್ರಿಕಾ ವರದಿಗಾರರು/ಮಾಧ್ಯಮ ಪ್ರತಿನಿಧಿಗಳ ಸಭೆ ಕರೆದು ಈ ರೋಗಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡಿ ಚರ್ಚಿಸಿ ಮಾಧ್ಯಮಗಳಲ್ಲಿ ಜಾಗೃತಿ ಮೂಡಿಸುವ ಮೂಲಕ ಸಹಕಾರ ನೀಡಲು ಕೋರಲಾಗಿತ್ತು. ಜಿಲ್ಲೆಯ ವ್ಯಾಪ್ತಿಯಲ್ಲಿ ಎಲ್ಲಾ ಗ್ರಾಮ ಪಂಚಾಯತಿ/ ನಗರ ಸಭೆ/ಪುರಸಭೆಗಳ ವ್ಯಾಪ್ತಿಗಳಲ್ಲಿ ಡೆಂಗಿ/ಚಿಕುಂಗುನ್ಯಾ ಪ್ರಕರಣಗಳು ಉಲ್ಬಣಗೊಳ್ಳದಂತೆ ಮುಂಜಾಗೃತಾ ಕ್ರಮವಾಗಿ ಘನ ತ್ಯಾಜ್ಯಾ ವಿಲೇವಾರಿ/ಚರಂಡಿಗಳ ಸ್ವಚ್ಚತೆ/ಪರಿಸರ ನೈರ್ಮಲ್ಯದ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ಪತ್ರ ವ್ಯವಹರಿಸಿ ಸಹಕಾರ ನೀಡಲು ಕೋರಲಾಗಿತ್ತು.

Annual Target of Blood Smear collection for the year 2017-18 for Ramanagara District.

Population 2017-18	Annul Target of B/S Collection			Monthly Target of B/S Collection		
	Active	Passive	Total	Active	Passive	Total
1146172	129967	104776	234743	10830	8731	19561

2017–18 ನೇ ಸಾಲಿನ ಅಂಧತ್ವ ನಿವಾರಣಾ ಕಾರ್ಯಕ್ರಮದ ವರದಿ

ಸದರಿ ಕಾರ್ಯಕ್ರಮದಲ್ಲಿ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಗೆ ಐ.ಓ.ಎಲ್. ಅಳವಡಿಕೆಯ ಸುಲಭ ಮತ್ತು ಸುರಕ್ಷಿತ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ರಾಮನಗರ ಜಲ್ಲೆಯಲ್ಲಿ 5 ರಿಂದ 10 ನೇ ತರಗತಿಯಲ್ಲಿ ಓದುತ್ತಿರುವ ಮಕ್ಕಳಿಗೆ ಕಣ್ಣಿನ ತಪಾಸಣೆಯನ್ನು ಮಾಡಲಾಗಿದೆ. ಈ ಸಾಲಿನಲ್ಲಿ ನೂನ್ಯತೆ ಇರುವ 350 ಮಕ್ಕಳಿಗೆ ಮತ್ತು 350 ವಯೋವೃದ್ದರಿಗೆ ಉಚಿತವಾಗಿ ಕನ್ನಡಕಗಳನ್ನು ವಿತರಿಸಲಾಗಿರುತ್ತದೆ.

ಗ್ರಾಮೀಣ ಮಟ್ಟದಲ್ಲಿ ಕಣ್ಣಿನ ಪೊರೆ ಇರುವ ಫಲಾನುಭವಿಗಳಿಗೆ ಉಚಿತವಾಗಿ ತಪಾಸಣೆಯನ್ನು ಮಾಡಿಸಿ ಬೆಂಗಳೂರಿನಲ್ಲಿರುವ ಉನ್ನತ ಕಣ್ಣಿನ ಆಸ್ಪತ್ರೆಗಳಲ್ಲಿ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಯನ್ನು ನಿಗದಿ ಪಡಿಸಲಾಗಿರುವ ದಿನಾಂಕಗಳಂದು ಸರ್ಕಾರೇತರ ಸಂಸ್ಥೆಯವರ ಸಹಯೋಗದೊಂದಿಗೆ 2471 ಜನಗಳಿಗೆ ಶಸ್ತ್ರ ಚಿಕಿತ್ಸೆಯನ್ನು ಮಾಡಲಾಗಿದೆ.

ಇದೇ ಸಾಲಿನಲ್ಲಿ ಜಿಲ್ಲೆಗೆ 7166 ಗುರಿ ನಿಗದಿಯಾಗಿದ್ದು, 5970 ಫಲಾನುಭವಿಗಳಿಗೆ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಯನ್ನು ಮಾಡಲಾಗಿರುತ್ತದೆ. ಹಾಗೂ ನಮಗೆ ನೀಡಲಾಗಿರುವ ಕಣ್ಣುಗಳ ಶೇಖರಣ ಕಾರ್ಯಕ್ರಮದಲ್ಲಿ ಗುರಿ 50 ಇದ್ದು, ನಾವು 18 ಕಣ್ಣುಗಳನ್ನು ಶೇಖರಣೆ ಮಾಡಲಾಗಿದೆ

2017–18 ನೇ ಸಾಲಿನ ಮಾನಸಿಕ ಆರೋಗ್ಯ ಕಾರ್ಯಕ್ರಮದ ವರದಿ

ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿಯಲ್ಲಿ 2017–18 ನೇ ಸಾಲಿನಲ್ಲಿ ಜಿಲ್ಲಾ ಮಟ್ಟದಲ್ಲಿ ಮಾನಸಿಕ ಆರೋಗ್ಯ ಕಾರ್ಯಕ್ರಮದ ಶಿಬಿರಗಳನ್ನು 4 ತಾಲ್ಲೂಕು ಆಸ್ಪತ್ರೆಗಳಲ್ಲಿ (ಪ್ರತಿ ಮಂಗಳವಾರ ಮನೋಚೈತನ್ಯ ಕ್ಲಿನಿಕ್) ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಶಿಬಿರಗಳನ್ನು ಹಮ್ಮಿಕೊಂಡು ಒಟ್ಟು 4665 ಮಾನಸಿಕ ರೋಗಿಗಳಿಗೆ ಮಾನಸಿಕ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಸೇವೆಯನ್ನು ನಿರಂತರವಾಗಿ ನೀಡಲಾಗಿದೆ.

ಅದೇ ರೀತಿ ರಾಮನಗರ ಜಿಲ್ಲೆಯಲ್ಲಿರುವ ಶಾಲಾ ಕಾಲೇಜುಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಜೀವನ ಕೌಶಲ್ಯಗಳ ತರಬೇತಿ ಮತ್ತು ಮಾನಸಿಕ ಆರೋಗ್ಯದ ಬಗ್ಗೆ ಅರಿವು ಹಾಗೂ ತಿಳುವಳಿಕೆಯನ್ನು ನೀಡಲಾಗಿರುತ್ತದೆ. ಅಲ್ಲದೆ ಕೊಳಚೆ ಪ್ರದೇಶಗಳಿಗೆ ಹಾಗೂ ಕಾರ್ಮಿಕರು ಕರ್ತವ್ಯ ನಿರ್ವಹಿಸುವ ಕಾರ್ಖಾನೆಗಳಿಗೆ ಭೇಟಿ ನೀಡಿ ಅವರುಗಳಿಗೆ ಮಾನಸಿಕ ಆರೋಗ್ಯದ ಬಗ್ಗೆ ತಿಳುವಳಿಕೆಯನ್ನು ಮತ್ತು ಸಮಾಲೋಚನೆಯನ್ನು ಮಾಡಲಾಗಿರುತ್ತದೆ.

2017–18 ನೇ ಸಾಲಿನ ಕುಷ್ಟ ರೋಗ ನಿವಾರಣ ಕಾರ್ಯಕ್ರಮದ ವರದಿ

ಕುಷ್ಟರೋಗ ನಿರ್ಮೂಲನ ಕಾರ್ಯಕ್ರಮದಲ್ಲಿ ಮಾರ್ಪಾಡಿತ ಕುಷ್ಟರೋಗ ನಿವಾರಣಾ ಆಂದೋಲನದಲ್ಲಿ ರೋಗಿಗಳು ಸ್ವಯಂ ಪ್ರೇರಿತರಾಗಿ ವರದಿ ಕೇಂದ್ರಗಳಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ, ಇದೇ ಸಾಲಿನಲ್ಲಿ ಹೊಸದಾಗಿ 33 ರೋಗಿಗಳನ್ನು ಪತ್ತೆ ಹಚ್ಚಲಾಗಿದ್ದು, ಈ ಸಾಲಿನಲ್ಲಿ 30 ರೋಗಿಗಳನ್ನು ಗುಣ ಪಡಿಸಲಾಗಿದೆ. ಹಾಗೂ ನಮ್ಮಲ್ಲಿ 27 ರೋಗಿಗಳು ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ಹಾಗೂ ಕುಷ್ಟರೋಗಕ್ಕೆ ಸಂಬಂಧಿಸಿದ ಹಾಗೆ ಹೆಚ್ಚಿನ ಪ್ರಮಾಣದ ಚಿಕಿತ್ಸೆಯು ಬೇಕಾದ್ದಲ್ಲಿ ಬೆಂಗಳೂರಿನ ಆಸ್ಪತ್ರೆಗೆ ಕಳುಹಿಸುವ ವ್ಯವಸ್ಥೆ ಮಾಡಲಾಗುತ್ತದೆ.

ರಾಮನಗರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ

ಸಂಕ್ಷಿಪ್ತ ವಿವರಣೆ

ಕ್ರ.ಸ	ಆರೋಗ್ಯ ಸಂಸ್ಥೆಗಳ ವಿವರ	ಆರೋಗ್ಯ ಸಂಸ್ಥೆಗಳ ಸಂಖ್ಯೆ
1	ಜಿಲ್ಲಾ ಆಸ್ಪತ್ರೆ	1
2	ಸಾರ್ವಜನಿಕ ಆಸ್ಪತ್ರೆ	3
3	ಸಮುದಾಯ ಆರೋಗ್ಯ ಕೇಂದ್ರಗಳು	4
4	ಪ್ರಾಥಮಿಕ ಆರೋಗ್ಯ ಕೇಂದ್ರಗಳು	61
5	ಉಪ–ಕೇಂದ್ರಗಳು	240
6	ನಗರ ಆರೋಗ್ಯ ಕೇಂದ್ರ	04

ರಾಮನಗರ ಜಿಲ್ಲೆಯ ವಿವಿಧ ವೃಂದಗಳ ವೈದ್ಯಾಧಿಕಾರಿಗಳ ವಿವರ

ಹುದ್ದೆಗಳ ವಿವರ	ಮಂಜೂರಾತಿ	ಕಾರ್ಯನಿರ್ವಹಣೆ	ಖಾಲಿ
ಜಿಲ್ಲಾ ಆರೋಗ್ಯ ಮತ್ತು ಕುಟಂಬ ಕಲ್ಯಾಣಾಧಿಕಾರಿ	1	1	0
ಕಾರ್ಯಕ್ರಮಾಧಿಕಾರಿಗಳು	4	3	1
ತಜ್ಞ ವೈದ್ಯರು	42	34	08
ದಂತ ವೈದ್ಯರು	8	8	0
ತಾಲ್ಲೂಕು ಆರೋಗ್ಯಾಧಿಕಾರಿ	4	4	0
ರಜೆ ಮೀಸಲು ವೈದ್ಯರು	–	–	–
ಸಾಮಾನ್ಯ ಕರ್ತವ್ಯ ವೈದ್ಯರು	61	45	16

ರಾಮನಗರ ಜಿಲ್ಲೆಯಲ್ಲಿ 24/7 ಪ್ರಾ.ಆ.ಕೇಂದ್ರ ಗುರುತಿಸಿದ್ದು, ಸದರಿ 24/7 ಘಂಟೆಗಳಲ್ಲಿ ಕರ್ತವ್ಯ ನಿರ್ವಹಿಸುವ 11 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಗುರುತಿಸಲಾಗಿದೆ.

2017–18 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯುಮೆಂಟ್‌ನಲ್ಲಿ ನಿಗದಿ ಪಡಿಸಿರುವ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಡಿಯಲ್ಲಿ ನಿಗಧಿ ಪಡಿಸಿರುವ ಒಟ್ಟಾರೆ ಅನುದಾನದ ವಿವರ (ಲಕ್ಷ ರೂ.ಗಳಲ್ಲಿ) ಈ ಕೆಳಕಂಡಂತಿದೆ.

ಮುಖ್ಯ ಲೆಕ್ಕ ಶೀರ್ಷಿಕೆ	ನಿಗದಿಯಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ
2210– ರಾಜ್ಯ ಯೋಜನೆ	260.00	260.00	228.06
2211–ರಾಜ್ಯಯೋಜನೆ	23.00	23.00	11.00
2210–ತಾಲ್ಲೂಕು ಪಂಚಾಯತ್ ಅನುದಾನ	43.77	77.19	51.90
2211–ಕೇಂದ್ರ ಪುರಷ್ಕೃತ ಯೋಜನೆ	771.05	2292.87	834.55
2210–ಜಿ.ಪಂ.ಅನುದಾನ	2077.70	2526.55	2416.67

2016–17ನೇ ಸಾಲಿನಲ್ಲಿ ಖರೀದಿಸಲಾದ ಔಷಧಿ ಮತ್ತು ರಾಸಾಯನಿಕಗಳ ಖರೀದಿ ವಿವರ

ಕ್ರ.ಸ	ಲೆಕ್ಕ ಶೀರ್ಷಿಕೆ	ನಿಗಧಿಯಾದ ಅನುದಾನ (ಲಕ್ಷ ರೂ. ಗಳಲ್ಲಿ)	ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)	ವೆಚ್ಚ (ರೂ.ಲಕ್ಷಗಳಲ್ಲಿ)
1	2210–036–103–0–74 ಯೋಜನೇತರ ಶೇ.60ರಡಿಯಲ್ಲಿ ಔಷಧಿ ಮತ್ತು ರಾಸಾಯನಿಕಗಳ ಖರೀದಿ	–	–	–
2	2210–00–101–0–27 ಯೋಜನೆ ರೋಗಗಳ ನಿವಾರಣೆ ಮತ್ತು ನಿಯಂತ್ರಣದಡಿಯಲ್ಲಿ ಮಾನಸಿಕ ಆರೋಗ್ಯ ತಪಾಸಣಾ ಶಿಬಿರಗಳಿಗೆ ಔಷಧ ಪೂರೈಕೆ.	–	–	–
3	2210–00–106–0–53 ಯೋಜನೆ ಕುಟುಂಬ ಕಲ್ಯಾಣ ಕಾರ್ಯಕ್ರಮಕ್ಕೆ ಔಷಧಿ ಪೂರೈಕೆಮತ್ತು ಪಲ್ಸ್ ಪೋಲಿಯೋ ಕಾರ್ಯಕ್ರಮ	7.00	7.00	3.28
4	2210–00–103–0–43 ಯೋಜನೆ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ವೈದ್ಯಕೀಯ ಚಿಕಿತ್ಸೆ,ಉಪಕರಣಗಳು/ಸಲಕರಣೆಗಳ ಖರೀದಿ	7.00	7.00	6.98
5	2210–00–103–0–45 ಯೋಜನೆ ತಾಲ್ಲೂಕು ಆಸ್ಪತ್ರೆಗಳಿಗೆ ಕ್ಷ–ಕಿರಣ ಸೌಲಭ್ಯ	10.00	10.00	1.98
6	2210–00–102–0–40 ಸಲಕರಣೆಗಳ ದುರಸ್ಥಿ	7.00	7.00	7.00

ರಾಮನಗರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ಮಾಹಿತಿ, ಶಿಕ್ಷಣ, ಸಂವಹನ ವಿಭಾಗದ ವತಿಯಿಂದ ಈ ಮುಂದೆ ಹೇಳಲಾದ ಸಮೂಹ ಶಿಕ್ಷಣ ಮಾಧ್ಯಮ ಕಾರ್ಯ ಚಟುಟಿಕೆಗಳನ್ನು ಪ್ರಸಕ್ತ ಸಾಲಿಗೆ ಕೈಗೊಳ್ಳಲಾಗಿದೆ

1. **ರಾಷ್ಟ್ರೀಯ ಆರೋಗ್ಯ ದಿನಾಚರಣೆಗಳು:**– ಪ್ರಸಕ್ತ ವರ್ಷದಲ್ಲಿ ಜರುಗುವ ರಾಷ್ಟ್ರೀಯ ಆರೋಗ್ಯ ದಿನಾಚರಣೆಗಳನ್ನು ಜಿಲ್ಲಾ ಮಟ್ಟದಲ್ಲಿ ತಾಲ್ಲೂಕು ಪ್ರಾಥಮಿಕ ಆರೋಗ್ಯ ಕೇಂದ್ರ, ಉಪ ಕೇಂದ್ರಗಳ ಮಟ್ಟದಲ್ಲಿ ಆಚರಿಸಿ ದಿನಾಚರಣೆ ಉದ್ದೇಶ ಮತ್ತು ಸಮುದಾಯದ ಸಹಭಾಗಿತ್ವದ ಬಗ್ಗೆ ಅರಿವು ಮೂಡಿಸಲಾಗಿದೆ.
2. **ಸರ್ಕಾರೇತರ ಸಂಸ್ಥೆಗಳ ನೆರವಿನೊಂದಿಗೆ ಆರೋಗ್ಯ ಶಿಬಿರ:**– ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರೇತರ ಸಂಘ ಸಂಸ್ಥೆಗಳ ನೆರವಿನೊಂದಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ, ನೇತ್ರ ತಪಾಸಣೆ ಶಿಬಿರ, ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಮುಂತಾದ ಜನೋಪಯೋಗಿ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ.
3. **ಆರೋಗ್ಯ ದಿನಾಚರಣೆ:**– ಪ್ರತಿ ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿ, ಬಾಣಂತಿಯರು, ತಾಯಂದಿರು, ಸ್ತ್ರೀಶಕ್ತಿ ಗುಂಪು ಮತ್ತು ಜನಪ್ರತಿನಿಧಿಗಳನ್ನೊಳಗೊಂಡಂತೆ ಸಭೆ ಏರ್ಪಡಿಸಿ ಆರೋಗ್ಯದ ಬಗ್ಗೆ ಮಾಹಿತಿಗಳನ್ನು ನೀಡಿ ಸಮುದಾಯದಲ್ಲಿ ಅರಿವು ಮೂಡಿಸಲು ಆರೋಗ್ಯ ದಿನಾಚರಣೆ ಆಚರಿಸಲಾಗಿದೆ.
4. **ಸಮುದಾಯ ಆರೋಗ್ಯ ದಿನಾಚರಣೆ:**– ನಿರ್ದೇಶನಾಲಯದ ಆದೇಶದ ಮೇರೆಗೆ ಪ್ರತಿ ಮೂರು ತಿಂಗಳಿಗೊಮ್ಮೆ ಆರೋಗ್ಯ ಕೇಂದ್ರಗಳಲ್ಲಿ ಜನಪ್ರತಿನಿಧಿಗಳು, ಸ್ತ್ರೀಶಕ್ತಿ ಗುಂಪುಗಳು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸುತ್ತಮುತ್ತಲ ಗ್ರಾಮಸ್ಥರ ಸಭೆ ಏರ್ಪಡಿಸಿ ಆರೋಗ್ಯ ಕಾರ್ಯ ಕ್ರಮಗಳ ಬಗ್ಗೆ ಮಾಹಿತಿ ನೀಡಿ ಆರೋಗ್ಯ ಕೇಂದ್ರದ ಅಭಿವೃದ್ಧಿಗೆ ಸಮುದಾಯದ ಸಹ ಭಾಗಿತ್ವ ಕೋರಲಾಗಿದೆ.
5. **ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮ:**– ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಅಡಿಯಲ್ಲಿ ಕೈಗೊಂಡಿರುವ 1 ರಿಂದ 10ನೇ ತರಗತಿವರೆಗಿನ ಎಲ್ಲಾ ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆ ಶಿಬಿರ ಏರ್ಪಡಿಸಿದ್ದು ಹೆಚ್ಚಿನ ತಪಾಸಣೆ ಹಾಗೂ ಸೇವೆಯ ಅಗತ್ಯವಿದ್ದಲ್ಲಿ ಅಂತಹ ಮಕ್ಕಳನ್ನು ಉನ್ನತ ಮಟ್ಟದ ಆಸ್ಪತ್ರೆಗೆ ನಿರ್ದೇಶಿಸಲಾಗುವುದು ಹಾಗೂ ಶಾಲಾ ಮಕ್ಕಳಿಗೆ ಆರೋಗ್ಯ ರಕ್ಷಣೆ ಕುರಿತು ಆರೋಗ್ಯ ಶಿಕ್ಷಣ ನೀಡಲಾಗಿದೆ.

6. **ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಶೈಕ್ಷಣಿಕ ಕಾರ್ಯಕ್ರಮ (ಐ.ಇ.ಸಿ):–** ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ ಕುರಿತಂತೆ ಹಾಗೂ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿ ಜಾರಿಗೆ ಬಂದಿರುವ ಜನನಿ ಸುರಕ್ಷಾ ಯೋಜನೆ, ಪ್ರಸೂತಿ, ಮಡಿಲು, ಜನನಿ ಶಿಶು ಸುರಕ್ಷಾ, ತಾಯಿ ಭಾಗ್ಯ ಪ್ಲಸ್ ಮುಂತಾದ ಕಾರ್ಯಕ್ರಮಗಳ ಬಗ್ಗೆ ಸಮುದಾಯದಲ್ಲಿ ಮಾಹಿತಿ ನೀಡಿ ಜಾಗೃತಿ ಮೂಡಿಸುವ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವುದು ಮತ್ತು ಮೇಲ್ವಿಚಾರಣೆ ನಡೆಸಿ ಮಾರ್ಗದರ್ಶನ ನೀಡಲಾಗಿದೆ

   ಎ. **ಆರೋಗ್ಯ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಶೈಕ್ಷಣಿಕ ಸಾಮಗ್ರಿಗಳ ವಿತರಣೆ:–** ನಿರ್ದೇಶನಾಲಯದಿಂದ ಪೂರೈಕೆಯಾದ ಭಿತ್ತಿಪತ್ರ, ಕರಪತ್ರ ಕಿರುಹೊತ್ತಿಗೆ ಮುಂತಾದ ಶೈಕ್ಷಣಿಕ ಸಾಮಗ್ರಿಗಳನ್ನು ಸ್ವೀಕರಿಸಿ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸಲು ಎಲ್ಲಾ ಆರೋಗ್ಯ ಸಂಸ್ಥೆಗಳಿಗೆ ವಿತರಿಸಿ ಮೇಲ್ವಿಚಾರಣೆ ನಡೆಸಲಾಗಿದೆ.

   ಬಿ. ಕಾರ್ಯಕ್ರಮಗಳ ಯಶಸ್ವಿಗಾಗಿ ಜಿಲ್ಲೆಯಲ್ಲಿನ ಸರ್ಕಾರೇತರ ಸಂಘ ಸಂಸ್ಥೆಗಳು ಮತ್ತು ಸಮುದಾಯದ ನೆರವನ್ನು ಪಡೆದುಕೊಳ್ಳಲಾಗಿದೆ.

   ಸಿ. ಎಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳೊಡನೆ ಸಹಭಾಗಿತ್ವ ಮತ್ತು ಸಹಕಾರದೊಡನೆ ಆರೋಗ್ಯ ಕಾರ್ಯಕ್ರಮಗಳನ್ನು ನಿರ್ವಹಿಸಲಾಗುವುದು.

   ಡಿ. ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಜೊತೆಗೆ ಹೆಣ್ಣು ಶಿಶು ಸಂರಕ್ಷಣೆ, ಗರ್ಭೋತ್ತರ ಮತ್ತು ಪ್ರಸವಪೂರ್ವ ಲಿಂಗ ಪತ್ತೆ ನಿಷೇಧ ಪುರುಷರ ಸಂತಾನ ಹರಣ ಶಸ್ತ್ರಚಿಕಿತ್ಸೆಯಲ್ಲಿ ಪ್ರಗತಿ ಸಾಧಿಸುವಲ್ಲಿ ಜನನಾಂಗ ಮಾರ್ಗದ ಸೋಂಕು, ಲೈಂಗಿಕ ರೋಗಗಳು ಹೆಚ್.ಐ.ವಿ/ಏಡ್ಸ್ ನಿಯಂತ್ರಣ ಕುರಿತಂತೆ ಸರ್ಕಾರೇತರ ಸಂಘ ಸಂಸ್ಥೆಗಳ ನೆರವಿನೊಂದಿಗೆ ಸಮುದಾಯದಲ್ಲಿ ಮಾಹಿತಿ ವಿನಿಮಯದ ಮೂಲಕ ಜಾಗೃತಿ ಮೂಡಿಸುವುದರ ಮೂಲಕ ಎಲ್ಲಾ ಆರೋಗ್ಯ ಕಾರ್ಯಕ್ರಮಗಳಲ್ಲಿ ಕೈಗೊಂಡಿರುವ ಗುರಿಯನ್ನು ತಲುಪಲಾಗುವುದು.

   ಇ ಕಬ್ಬಿಣಾಂಶದ ಮಾತ್ರೆ ನೀಡುವ ಕಾರ್ಯಕ್ರಮ (WIFS): 2013–14ನೇ ಸಾಲಿನಿಂದ ಘಖಈಖ ಕಾರ್ಯಕ್ರಮ ಜಾರಿಯಲ್ಲಿದ್ದು. ಸದರಿ ಕಾರ್ಯಕ್ರಮದ ಉದ್ದೇಶ 10–19 ವಯಸ್ಸಿನವರಲ್ಲಿ ಕಂಡು ಬರುವ ರಕ್ತಹೀನತೆ ಪ್ರಮಾಣ ನಿಯಂತ್ರಿಸುವುದು ಹಾಗೂ ಕಡಿಮೆ ಮಾಡುವುದು. ಈ ಕಾರ್ಯಕ್ರಮದ ಗುರಿ 6 ರಿಂದ 10ನೇ ತರಗತಿಯಲ್ಲಿ ಓದುತ್ತಿರುವ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಗಂಡು ಹಾಗೂ ಹೆಣ್ಣು ಮಕ್ಕಳು ಹಾಗೂ ಶಾಲೆಯಿಂದ ಹೊರಗುಳಿದ ಹದಿಹರೆಯದ ಹೆಣ್ಣು ಮಕ್ಕಳಿಗೆ IFA ಮಾತ್ರೆ ಹಾಗೂ 6 ತಿಂಗಳಿಗೊಮ್ಮೆ ಒಂದು Albendazole 400mg ಮಾತ್ರೆ ಕೊಡುವುದು ಮತ್ತು ಸರಿಯಾಗಿ ಸಮತೋಲನ/ಪೌಷ್ಟಿಕ ಆಹಾರ ಸೇವನೆ ಹಾಗೂ ಮಾತ್ರೆಗಳ ಸೇವನೆಗಾಗಿ ಆಪ್ತಸಲಹೆ ಮತ್ತು ಸಮಾಲೋಚನೆ ನಡೆಸಲಾಗುತ್ತಿದೆ.

ಜಿಲ್ಲಾ ಆಯುಷ್ ಇಲಾಖೆ



ಆಯುಷ್ ಇಲಾಖೆಯು ಆಯುರ್ವೇದ, ಯೋಗ ಮತ್ತು ಪ್ರಕೃತಿ ಚಿಕಿತ್ಸೆ, ಯುನಾನಿ, ಹೋಮಿಯೋಪತಿ, ಪದ್ದತಿಗಳನ್ನು ಒಳಗೊಂಡಿರುತ್ತದೆ. ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರಲ್ಲಿ ಕೆಲವು ಇಂಗ್ಲೀಷ್ ಔಷಧಿಗಳಿಂದ ಉಂಟಾಗುವ ಯಾವುದೇ ಅಡ್ಡ ಪರಿಣಾಮಗಳು ಈ ಪದ್ದತಿಯು ಬೀರುವುದಿಲ್ಲ ಎಂದು ಮನವರಿಕೆಯಾಗಿರುತ್ತದೆ. ಈ ಚಿಕಿತ್ಸೆಯು ಸರಳ ಹಾಗೂ ಕಡಿಮೆ ವೆಚ್ಚದಲ್ಲಿ ಸುಲಭವಾಗಿ ದೊರೆಯುವುದರಿಂದ ಸಾರ್ವಜನಿಕರು ಇತ್ತೀಚಿನ ದಿನಗಳಲ್ಲಿ ಈ ಪದ್ದತಿಗೆ ಹೆಚ್ಚಾಗಿ ಮೊರೆಹೋಗುತ್ತಿದ್ದಾರೆ. ಆಯುಷ್ ಪದ್ದತಿಗಳಲ್ಲಿ ಆರೋಗ್ಯವಂತ ಮಾನವನು ಆರೋಗ್ಯ ಕಾಪಾಡಿಕೊಳ್ಳಲು ಮತ್ತು ರೋಗಗಳು ಬಾರದಂತೆ ತಡೆಗಟ್ಟಲು ಹಾಗೂ ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ಈ ಪದ್ದತಿಗಳಲ್ಲಿ ಉತ್ತಮ ಕ್ರಮಗಳಿವೆ. ಇದಲ್ಲದೆ ಅತೀ ಕಡಿಮೆ ಖರ್ಚಿನಲ್ಲಿ ಆಥವಾ ಖರ್ಚಿಲ್ಲದೆ ಆಯುಷ್ ಪದ್ದತಿಗಳನ್ನು ಅಳವಡಿಸಿಕೊಳ್ಳಬಹುದಾಗಿದೆ. ಈ ಪದ್ದತಿಗಳಿಂದ ಯಾವುದೇ ಅಡ್ಡ ಪರಿಣಾಮಗಳಿರುವುದಿಲ್ಲ. ಆದುದರಿಂದ ಉತ್ತಮ ಆರೋಗ್ಯ ಸೌಲಭ್ಯವನ್ನು ಜನತೆಗೆ ನೀಡಲು ಸಹಾಯಕವಾಗುತ್ತದೆ. ಆಯುರ್ವೇದದ ಉಪಯೋಗ ಆರೋಗ್ಯದ ವಿಕಾಸ ಎಂಬಂತೆ ಆಯುಷ್ ಪದ್ದತಿಯ ಚಿಕಿತ್ಸೆಯಲ್ಲಿ ವಿಶೇಷವಾಗಿ ಕಾಮಾಲೆ, ಚರ್ಮರೋಗ, ಅಸ್ತಮಾ, ಸೈನುಸೈಟೀಸ್, ಮೈಗ್ರೇನ್, ಆರ್ಥ್ರೈಟಿಸ್ (ಸಂಧಿಶೂಲ), ಪಕ್ಷಪಾತ, ಸ್ತ್ರೀ ರೋಗ, ಇತ್ಯಾದಿ ರೋಗಗಳಿಗೆ ಉತ್ತಮ ಚಿಕಿತ್ಸೆ ಇದೆ ಎಂಬುವುದರ ಬಗ್ಗೆ ಮನವರಿಕೆಯಾಗಿರುತ್ತದೆ. ಆಯುಷ್ ಪದ್ದತಿಯು ಹೆಸರೇ ಹೇಳುವಂತೆ ಜನರ ಆಯಸ್ಸನ್ನು ಹೆಚ್ಚಿಸುವಲ್ಲಿ ಬಹಳ ಪ್ರಯೋಜನಕಾರಿಯಾಗಿರುತ್ತದೆ. ಈ ಪದ್ದತಿಯಿಂದ ಜನರಿಗೆ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವಲ್ಲಿ ಬಹಳ ಸಹಕಾರಿಯಾಗಿದೆ. ಹಾಗೂ ಕೆಲವು ದೀರ್ಘಕಾಲಿಕ ಖಾಯಿಲೆಗಳಿಗೆ ಪರಿಣಾಮಕಾರಿ ಚಿಕಿತ್ಸೆ ನೀಡುವಲ್ಲಿ ಸಫಲವಾಗಿದೆ. ರಾಮನಗರ ಜಿಲ್ಲೆಯಲ್ಲಿ ಆಯುರ್ವೇದ, ಯೋಗ, ಯುನಾನಿ, ಸಿದ್ಧ ಮತ್ತು ಹೋಮಿಯೋಪತಿ ಚಿಕಿತ್ಸೆಗಳನ್ನು ಸಾರ್ವಜನಿಕರಿಗೆ ನೀಡುವಂತೆ 4 ತಾಲ್ಲೂಕುಗಳಲ್ಲಿ 1 ಯುನಾನಿ ಆಸ್ಪತ್ರೆ, 2 ಆಯುರ್ವೇದ ಆಸ್ಪತ್ರೆ, ಹಾಗೂ 9 ಆಯುರ್ವೇದ/ಯುನಾನಿ ಚಿಕಿತ್ಸಾಯಗಳು ಕಾರ್ಯನಿರ್ವಹಿಸುತ್ತಿದೆ. ಹಾಗೂ ಪಿ.ಪಿ.ಪಿ. ಅಡಿಯಲ್ಲಿ ಒಂದು ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರ ಕಾರ್ಯನಿರ್ವಹಿಸುತ್ತಿದೆ. ಹಾಗೂ ಮಾಗಡಿ ತಾಲ್ಲೂಕಿನ ಸೋಲೂರು ಇಲ್ಲಿ ಹೊಸದಾಗಿ ತಾಲ್ಲೂಕು ಮಟ್ಟದ ಸರ್ಕಾರಿ ಹೋಮಿಯೋಪತಿ ಆಸ್ಪತ್ರೆಯು ಸರ್ಕಾರದಿಂದ ಮಂಜೂರಾಗಿರುತ್ತದೆ.

ರಾಷ್ಟ್ರೀಯ ಕಾರ್ಯಕ್ರಮಗಳು:

ನಮ್ಮ ಇಲಾಖೆಯ ಎಲ್ಲಾ ಆಸ್ಪತ್ರೆಗಳ ಹಾಗೂ ಚಿಕಿತ್ಸಾಲಯಗಳ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂಧಿಗಳು ಎಲ್ಲಾ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಎಲ್ಲಾ ಸಮೀಪದ ಆರೋಗ್ಯ ಕೇಂದ್ರಗಳಿಗೆ ಹಾಗೂ ಸಾರ್ವಜನಿಕ ಆಸ್ಪತ್ರೆಗಳೊಂದಿಗೆ ಸಹಕರಿಸುತ್ತವೆ.

ಮಲೇರಿಯಾ ರೋಗವು ಆರೋಗ್ಯವಂತ ಮನುಷ್ಯನಿಗೆ ಸೋಂಕು ತಗಲುವ ಅನಾಫಿಲೀಸ್ ಎಂಬ ಹೆಣ್ಣು ಸೊಳ್ಳೆಯಿಂದ ಹರಡುತ್ತದೆ. ಈ ರೋಗವನ್ನು ತಡೆಗಟ್ಟಬೇಕಾದರೆ ಮೊದಲಿಗೆ ರೋಗ ಹರಡುವ ಸೊಳ್ಳೆಗಳ ಉತ್ಪತ್ತಿಯನ್ನು ನಿಯಂತ್ರಿಸುವುದು ಹಾಗೂ ಬೇವಿನ ಸೊಪ್ಪು ಹಾಗೂ ಧೂಪ ಹಾಕುವುದು ಮತ್ತು ನೀಲಗಿರಿ, ತುಳಸಿ, ಕಾಮಕಸ್ತೂರಿ, ಅಗ್ನಿಮಂಥ, ಪಾರಿಜಾತ ಚೆಂಡು ಹೂ ಮುಂತಾದ ಔಷಧಿ ಗಿಡಗಳನ್ನು ಬೆಳೆಸುವುದರಿಂದ ಸೊಳ್ಳೆಗಳನ್ನು ನಿಯಂತ್ರಿಸಲು ಆಯುಷ್ ಪದ್ದತಿಯಿಂದ ಸಹಕಾರಿಯಾಗುತ್ತದೆ ಎಂದು ಸಾರ್ವಜನಿಕರಿಗೆ ಮನೆಮದ್ದು ಮತ್ತು ಆರೋಗ್ಯ ಶಿಬಿರದ ಮುಖಾಂತರ ಮನದಟ್ಟು ಮಾಡಿಸುವುದು.

ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಮನೆ ಮನೆಗೆ ಮಲೇರಿಯಾ ಕಾರ್ಯಕರ್ತರೊಡನೆ ರಕ್ತ ಲೇಪನ ತೆಗೆಯುವುದು. ಮತ್ತು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿರುವ ಮಲೇರಿಯಾ, ಚಿಕೂನ್‌ಗೂನ್ಯಾ, ಡೆಂಗ್ಯೂ ಜ್ವರಗಳನ್ನು ನಿಯಂತ್ರಿಸಲು ಪಪ್ಪಾಯ (ಪರಂಗಿ) ಎಲೆಗಳ ರಸದ ಉಪಯುಕ್ತತೆಯಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಒದಗಿಸಿ, ಇಂತಹ ಖಾಯಿಲೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸೂಕ್ತ ಔಷಧಿಗಳನ್ನು ಆಯುರ್ವೇದ ಮತ್ತು ಯುನಾನಿ ಔಷಧಿಗಳು ಇಲಾಖೆಯಿಂದ ಉಚಿತವಾಗಿ ವಿತರಿಸಿ ಗ್ರಾಮಾಂತರಗಳಲ್ಲಿ ಈ ಖಾಯಿಲೆಯನ್ನು ನಿಯಂತ್ರಿಸುವ ಕಾರ್ಯಕ್ರಮದಲ್ಲಿ ಯಶಸ್ವಿಯಾಗಿರುತ್ತದೆ.

ಆಯುಷ್ ಆರೋಗ್ಯ ಮತ್ತು ಐ.ಇ.ಸಿ ತರಬೇತಿ ಕಾರ್ಯಕ್ರಮಗಳು:

1. ಮನೆಮದ್ದು, ಸ್ವಸ್ಥವೃತ್ತ ಮತ್ತು ಆಯುಷ್ ಅರಿವು ಕಾರ್ಯಕ್ರಮ :–

ಜನರನ್ನು ಪ್ರಾಥಮಿಕ ಆರೋಗ್ಯ ರಕ್ಷಣೆ ಮಾಡಿಕೊಳ್ಳುವಲ್ಲಿ ಸ್ವಾವಲಂಬಿಗಳಾಗಿಸುವುದು. ಆಯುಷ್ ಪದ್ಧತಿಯನ್ನು ಮನೆ ಮನೆಗೂ ತಲುಪಿಸುವುದು. ಸ್ಥಳೀಯವಾಗಿ ದೊರೆಯುವ ಔಷಧಿ ಸಸ್ಯಗಳು ಹಾಗೂ ಅಡಿಗೆ ಮನೆಯಲ್ಲಿ ದೊರೆಯುವ ಪದಾರ್ಥಗಳನ್ನು ಬಳಸಿ ಪ್ರಾಥಮಿಕ ಆರೋಗ್ಯ ರಕ್ಷಣೆ ಮಾಡಿಕೊಳ್ಳುವ ವಿಧಾನ ತಿಳಿಸುವುದು. ಮನೆಮದ್ದು ಮೂಲಕ ಆರೋಗ್ಯ ವಿಷಯಗಳ ಬಗ್ಗೆ ಆಸಕ್ತಿ ಮೂಡಿಸುವುದು. ಸುಲಭವಾಗಿ ಮತ್ತು ತಕ್ಷಣವೇ ಸಿಗುವ ಪದಾರ್ಥಗಳಿಗಳಿಂದ ಚಿಕಿತ್ಸೆ ಪಡೆಯುವ ಕ್ರಮ ಮತ್ತು ಪ್ರಾತ್ಯಕ್ಷಿಕವಾಗಿ ಔಷಧಿಗಳ ತಯಾರಿಕೆ ಮಾಡುವುದನ್ನು ಈ ಕಾರ್ಯಕ್ರಮಗಳಲ್ಲಿ ಮಾಹಿತಿ ನೀಡಲಾಗಿದೆ.

ಇತ್ತೀಚಿನ ದಿನಗಳಲ್ಲಿ ಮಾರಣಾಂತಿಕವಾಗಿ ಹೆಚ್ಚುತ್ತಿರುವ ಮಲೇರಿಯಾ, ಡೆಂಗ್ಯೂ, ಚಿಕ್ಕೂನ್ ಗುನಿಯಾ ಖಾಯಿಲೆಗಳು ಹರಡಲು ಕಾರಣವಾದ "ಸೊಳ್ಳೆಗಳ" ನಿಯಂತ್ರಣ ವಿಧಾನವನ್ನು ಆಯುಷ್ ಪದ್ಧತಿಯ ಮೂಲಕ ಗ್ರಾಮಗಳಲ್ಲಿ/ಕಾಲೋನಿಗಳಲ್ಲಿ ಸಾರ್ವಜನಿಕರಿಗೆ ಪ್ರಚಾರ ಮಾಡಲಾಗಿದೆ.

2. ಉಚಿತ ಆಯುಷ್ ಆರೋಗ್ಯ ಶಿಬಿರ :–

ಈ ಶಿಬಿರಗಳನ್ನು ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡಗಳು ಹೆಚ್ಚಾಗಿ ವಾಸಿಸುವ ಗ್ರಾಮಗಳು/ಕಾಲೋನಿಗಳಲ್ಲಿ ಆಯೋಜಿಸಲಾಗಿದೆ. ಇಲ್ಲಿ ಜನರಿಗೆ ಚಿಕಿತ್ಸೆಗಳನ್ನು ಉಚಿತವಾಗಿ ಏರ್ಪಡಿಸಲಾಗಿದೆ, ಹಾಗೂ ಅವರಿಗೆ ವಿಶೇಷ ಚಿಕಿತ್ಸೆಗಳ ಅರಿವು ಮೂಡಿಸಲಾಗಿದೆ.

3. ಆಯುಷ್ ಸೆಮಿನಾರ್‌ಗಳು/ತರಬೇತಿ :–

ಈ ಸೇಮಿನಾರ್/ತರಬೇತಿಗಳನ್ನು ಖಾಸಗಿ ವೈದ್ಯಾಧಿಕಾರಿಗಳಿಗೆ, ಎನ್.ಜಿ.ಓ ಗಳಿಗೆ ಅಂಗನವಾಡಿ ಕಾರ್ಯಕರ್ತೆಯರಿಗೆ, ಆಶಾ ಕಾರ್ಯಕರ್ತೆಯರಿಗೆ ಮತ್ತು ವಿದ್ಯಾರ್ಥಿಗಳಿಗೆ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ) ನಡೆಸಲಾಗುವುದು. ಈ ಆಯುಷ್ ಪದ್ಧತಿಯ ಬಗ್ಗೆ ಅರಿವು ಮೂಡಿಸಲಾಗಿದೆ. ರೋಗಗಳು ಬಾರದಂತೆ ಆರೋಗ್ಯ ಕಾಪಾಡಿಕೊಳ್ಳುವ ಬಗ್ಗೆ ಶಿಕ್ಷಣ ನೀಡಲಾಗಿದೆ.

4. ಅಂತರಾಷ್ಟ್ರೀಯ ಯೋಗ ಕಾರ್ಯಕ್ರಮ :–

ಜೂನ್–21 ಅಂತರಾಷ್ಟ್ರೀಯ ಯೋಗ ದಿನವಾದ್ದರಿಂದ ಪ್ರತಿ ವರ್ಷವು ಜೂನ್–21 ರಂದು ಜಿಲ್ಲಾ ಆಯುಷ್ ಕಛೇರಿ ವತಿಯಿಂದ ಅಂತರಾಷ್ಟ್ರೀಯ ಯೋಗ ಕಾರ್ಯಕ್ರಮವನ್ನು ಆಚರಿಸಲಾಗಿದೆ.

5. ರಾಷ್ಟ್ರೀಯ ಯುನಾನಿ ದಿನಾಚರಣೆ :–

ದಿನಾಂಕ: 11/02/2018ರಂದು ಡಾ॥ ಹಕೀಂ ಅಜ್ಮಲ್ ಖಾನ್, ಇವರ 150ನೇ ಜನ್ಮ ದಿನದ ಪ್ರಯುಕ್ತ ಸರ್ಕಾರಿ ಯುನಾನಿ ಆಸ್ಪತ್ರೆ, ರಾಮನಗರ ಇಲ್ಲಿ ರಾಷ್ಟ್ರೀಯ ಯುನಾನಿ ದಿನಾಚರಣೆ ಆಚರಿಸಿಲಾಗಿದೆ.

ರಾಮನಗರ ಜಿಲ್ಲೆ, ಆಯುಷ್ ಇಲಾಖೆಯ ವಿವಿಧ ವೃಂಧಗಳ ಅಧಿಕಾರಿ/ವೈದ್ಯರು ಮತ್ತು ಸಿಬ್ಬಂದಿ ವರ್ಗದವರುಗಳ ವಿವರ

ಕ್ರ.ಸಂ	ಹುದ್ದೆಯ ವಿವರ	ವೃಂದ	ಮಂಜೂರಾದ ಹುದ್ದೆ	ಭರ್ತಿಯಾದ ಹುದ್ದೆ	ಖಾಲಿ ಇರುವ ಹುದ್ದೆ
1	ಜಿಲ್ಲಾ ಆಯುಷ್ ಅಧಿಕಾರಿ	'ಎ'	1	1	–
2	ಕಛೇರಿ ಅಧೀಕ್ಷಕರು	'ಸಿ'	1	1	–
3	ಬೆರಳಚ್ಚುಗಾರರು	'ಸಿ'	1	–	1
4	ವೈದ್ಯಾಧಿಕಾರಿಗಳು	'ಎ'	16	16	–
5	ಶುಶ್ರೂಷಕಿಯರು	'ಸಿ'	5	1	4
6	ಔಷಧಿ ವಿತರಕರು	'ಸಿ'	8	1	7
7	ಪ್ರ.ದ.ಸ	'ಸಿ'	1	1	–
8	ದ್ವಿ.ದ.ಸ	'ಸಿ'	2	–	2
9	ಗ್ರೂಪ್ ಡಿ	'ಡಿ'	18	2	16
		ಒಟ್ಟು	**53**	**25**	**28**

ರಾಮನಗರ ಜಿಲ್ಲಾ ಆಯುಷ್ ಇಲಾಖೆಯ ಚಿಕಿತ್ಸಾಲಯಗಳು/ಆಸ್ಪತ್ರೆಗಳ ಸಂಕ್ಷಿಪ್ತ ವಿವರ:

1. ಸರ್ಕಾರಿ ಯುನಾನಿ ಆಸ್ಪತ್ರೆ, ರಾಮನಗರ,
2. ಸರ್ಕಾರಿ ಆಯುರ್ವೇದ ಆಸ್ಪತ್ರೆ, ಕನಕಪುರ
3. ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಆವರಣ, ರಾಮನಗರ.
4. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಹೊರಳಗಲ್ಲು, ಕನಕಪುರ ತಾಲ್ಲೂಕು
5. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ,
   ತುಂಬೇನಹಳ್ಳಿ, ರಾಮನಗರ ತಾಲ್ಲೂಕು.
6. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಯಲವಳ್ಳಿ, ಕನಕಪುರ ತಾಲ್ಲೂಕು
7. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ,
   ಹೊಸೂರು, ರಾಮನಗರ ತಾಲ್ಲೂಕು.
8. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ,
   ಬಿಜ್ಜಿಹಳ್ಳಿ, ಕನಕಪುರ ತಾಲ್ಲೂಕು.
9. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ,
   ಕೊಳಗೊಂಡನಹಳ್ಳಿ, ಕನಕಪುರ ತಾ॥
10. ಚಿಕಿತ್ಸಾ ಕೇಂದ್ರ, ಪಿ.ಪಿ.ಪಿ ಯೋಜನೆ, ಕನಕಪುರ
11. ಸರ್ಕಾರಿ ಆಯುರ್ವೇದ ಆಸ್ಪತ್ರೆ, ಯೋಗ ಮತ್ತು ಪ್ರಕೃತಿ ಮಾಗಡಿ,
12. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಮೋಟಗಾನಹಳ್ಳಿ. ಮಾಗಡಿ ತಾಲ್ಲೂಕು.
13. ಸರ್ಕಾರಿ ಹೋಮಿಯೋಪತಿ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ (ಸಿ.ಹೆಚ್.ಸಿ) ಸೋಲೂರು
14. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಚನ್ನಪಟ್ಟಣ ತಾ॥
15. ಸರ್ಕಾರಿ ಯುನಾನಿ ಚಿಕಿತ್ಸಾಲಯ, ಚನ್ನಪಟ್ಟಣ ತಾ॥

ಜಿಲ್ಲಾ ಆಯುಷ್ ಕಛೇರಿ, ರಾಮನಗರ ಜಿಲ್ಲೆ

ಅನುಬಂಧ – 2

ಜಿಲ್ಲಾ ಆಯುಷ್ ಕಛೇರಿ, ರಾಮನಗರ ಜಿಲ್ಲೆ ಮತ್ತು ಇದರ ಅಧೀನ ವ್ಯಾಪ್ತಿಯಲ್ಲಿ ಬರುವ ಆಯುಷ್ ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿನ ಹುದ್ದೆಗಳ ವಿವರ

ಕ್ರ. ಸಂ	ಸ್ಥಳ	ಹುದ್ದೆಗಳ ಪದನಾಮ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	ಜಿಲ್ಲಾ ಆಯುಷ್ ಕಛೇರಿ, ರಾಮನಗರ ಜಿಲ್ಲೆ	ಜಿಲ್ಲಾ ಆಯುಷ್ ಅಧಿಕಾರಿಗಳು	1	1	–
		ಕಛೇರಿ ಅಧೀಕ್ಷಕರು	1	1	–
		ಬೆರಳಚ್ಚುಗಾರರು	1	–	1
2	ಸರ್ಕಾರಿ ಯುನಾನಿ ಆಸ್ಪತ್ರೆ, ರಾಮನಗರ (10 ಹಾಸಿಗೆಯುಳ್ಳ ಆಸ್ಪತ್ರೆ)	ವೈದ್ಯಾಧಿಕಾರಿಗಳು	3	3	–
		ಶುಶ್ರೂಷಕಿ	2	–	2
		ಔಷಧಿವಿತರಕರು,	2	1	1
		ದ್ವಿ.ದ.ಸ	1	–	1
		ಗ್ರೂಪ್ ಡಿ	6	1	5
3	ಸರ್ಕಾರಿ ಆಯುರ್ವೇದ ಕಿತ್ಸಾಲಯ, ತುಂಬೇನಹಳ್ಳಿ ರಾಮನಗರ ತಾ॥	ವೈದ್ಯಾಧಿಕಾರಿಗಳು	1	1	–
		ಔಷಧಿವಿತರಕರು,	1	–	1
		ಗ್ರೂಪ್ ಡಿ	1	–	1
4	ಸರ್ಕಾರಿ ಆಯುರ್ವೇದ ಕಿತ್ಸಾಲಯ, ಹೊಸೂರು ರಾಮನಗರ ತಾ॥	ವೈದ್ಯಾಧಿಕಾರಿಗಳು	1	1	–
		ಔಷಧಿವಿತರಕರು,	1	–	1
		ಗ್ರೂಪ್ ಡಿ	1	–	1
5	ಸರ್ಕಾರಿ ಆಯುರ್ವೇದ ಕಿತ್ಸಾಲಯ, ಮೊಟಗಾನಹಳ್ಳಿ, ಮಾಗಡಿ ತಾ॥	ವೈದ್ಯಾಧಿಕಾರಿಗಳು	1	1	–
		ಔಷಧಿವಿತರಕರು,	1	–	1
		ಗ್ರೂಪ್ ಡಿ	1	–	1
6	ಸರ್ಕಾರಿ ಆಯುರ್ವೇದ ಆಸ್ಪತ್ರೆ, ಮಾಗಡಿ (10 ಹಾಸಿಗೆಯುಳ್ಳ ಆಸ್ಪತ್ರೆ)	ವೈದ್ಯಾಧಿಕಾರಿಗಳು	2	2	–
		ಪ್ರ.ದ.ಸ	1	1	–
		ಔಷಧಿವಿತರಕರು,	1	–	1
		ಶುಶ್ರೂಷಕಿ	2	1	1
		ಗ್ರೂಪ್ ಡಿ	2	–	2
7	ಸರ್ಕಾರಿ ಆಯುರ್ವೇದ ಆಸ್ಪತ್ರೆ, ಕನಕಪುರ (6 ಹಾಸಿಗೆಯುಳ್ಳ ಆಸ್ಪತ್ರೆ)	ವೈದ್ಯಾಧಿಕಾರಿಗಳು	2	2	–
		ಔಷಧಿವಿತರಕರು,	1	–	1
		ಶುಶ್ರೂಷಕಿ	1	–	1
		ದ್ವಿ.ದ.ಸ	1	–	1
		ಗ್ರೂಪ್ ಡಿ	2	1	1
8	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಹೊರಳಗಲ್ಲು, ಕನಕಪುರ ತಾ॥	ವೈದ್ಯಾಧಿಕಾರಿಗಳು	1	1	–
		ಗ್ರೂಪ್ ಡಿ	1	–	1
9	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಬಿಜ್ಜಿಹಳ್ಳಿ ಕನಕಪುರ ತಾ॥	ವೈದ್ಯಾಧಿಕಾರಿಗಳು	1	1	–
		ಗ್ರೂಪ್ ಡಿ	1	–	1

ಕ್ರ. ಸಂ	ಸ್ಥಳ	ಹುದ್ದೆಗಳ ಪದನಾಮ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
10	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಯಲವಳ್ಳಿ ಕನಕಪುರ ತಾ॥	ವೈದ್ಯಾಧಿಕಾರಿಗಳು	1	1	–
		ಗ್ರೂಪ್ ಡಿ	1	–	1
11	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಕೊಳಗೊಂಡನಹಳ್ಳಿ ಕನಕಪುರ ತಾ॥	ವೈದ್ಯಾಧಿಕಾರಿಗಳು	1	1	–
		ಗ್ರೂಪ್ ಡಿ	1	–	1
12	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಚನ್ನಪಟ್ಟಣ ಟೌನ್, ಚನ್ನಪಟ್ಟಣ ತಾ॥	ವೈದ್ಯಾಧಿಕಾರಿಗಳು	1	1	–
13	ಸರ್ಕಾರಿ ಯುನಾನಿ ಚಿಕಿತ್ಸಾಲಯ, ಚನ್ನಪಟ್ಟಣ ಟೌನ್, ಚನ್ನಪಟ್ಟಣ ತಾ॥	ವೈದ್ಯಾಧಿಕಾರಿಗಳು	1	1	–
		ಔಷಧಿವಿತರಕರು,	1	–	1
		ಗ್ರೂಪ್ ಡಿ	1	–	1
	ಒಟ್ಟು		**53**	**25**	**28**

2017–18 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯುಮೆಂಟ್‌ನಲ್ಲಿ ನಿಗಧಿಪಡಿಸಿರುವ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಡಿಯಲ್ಲಿ ನಿಗಧಿಪಡಿಸಿರುವ ಒಟ್ಟಾರೆ ಅನುದಾನದ ವಿವರ

ಕ್ರ.ಸಂ.	ಲೆಕ್ಕಶೀರ್ಷಿಕೆ	ನಿಗದಿಗೊಳಿಸಿದ ಅನುದಾನ	ಆರ್ಥಿಕ (ರೂ. ಲಕ್ಷಗಳಲ್ಲಿ)			ಭೌತಿಕ(ಸಂಖ್ಯೆಗಳಲ್ಲಿ)			ಪರಾ
			ಬಿಡುಗಡೆಯಾದ ಅನುದಾನ	ವೆಚ್ಚ	ಶೇಕಡ	ವಾರ್ಷಿಕ ಗುರಿ	ಸಾಧನೆ	ಶೇಕಡ	
1	2210–00–101–0–35 ಭಾ.ವೈ.ಪ. ಪದ್ದತಿ ಮತ್ತು ಹೋಮಿಯೋಪತಿ ಜಿಲ್ಲಾ ಖಾಸಗಿ ಆಸ್ಪತ್ರೆಗಳಿಗೆ ಸಹಾಯಧನ	40.03	40.02	37.86	95%	3	2	66%	
2	2210–00–101–0–41 ಯುನಾನಿ ಚಿಕಿತ್ಸಾಲಯಗಳ ಪ್ರಾರಂಭ ಮತ್ತು ನಿರ್ವಹಣೆ (ಆಯುರ್ವೇದ)	25.74	37.74	29.65	79%	4	3	75%	2017–18ನೇ ಸಾಲಿನಲ್ಲಿ ಅಧಿಕಾರಿಗಳು/ಸಿಬ್ಬಂದಿಗಳ ವೇತನಕ್ಕಾಗಿ ರೂ. 54.00 ಲಕ್ಷ ಹೆಚ್ಚುವರಿ ಅನುದಾನವನ್ನು ಬಿಡುಗಡೆಯಾಗಿರುತ್ತದೆ.
3	2210–00–101–0–29 ಆಯುಷ್ ಚಿಕಿತ್ಸಾಲಯಗಳು ಮತ್ತು ಆಸ್ಪತ್ರೆಗಳನ್ನು ತೆರೆಯುವುದು ಮತ್ತು ನಿರ್ವಹಣೆ	147.42	201.42	187.71	93%	46	19	41%	2017–18ನೇ ಸಾಲಿನಲ್ಲಿ ಅಧಿಕಾರಿಗಳು/ಸಿಬ್ಬಂದಿಗಳ ವೇತನಕ್ಕಾಗಿ ರೂ. 12.00 ಲಕ್ಷ ಹೆಚ್ಚುವರಿ ಅನುದಾನವನ್ನು ಬಿಡುಗಡೆಯಾಗಿರುತ್ತದೆ.
4	2210–00–101–0–37 ಆಯುಷ್ ಇಲಾಖೆಯ ಔಷಧಿ ಮತ್ತು ರಾಸಾಯನಿಕಗಳು	8.56	8.56	7.53	88%	12	12	100%	
5	2210–00–105–0–38 ಕಟ್ಟಡಗಳು, ಸಣ್ಣ ಕಾಮಗಾರಿಗಳು	15.00	15.00	15.00	100%	5	-	-	ಕಾಮಗಾರಿ ಪ್ರಗತಿಯಲ್ಲಿದೆ.
	ಒಟ್ಟು	**236.75**	**302.74**	**277.75**	**92%**	**70**	**36**	**51%**	

2017–18ನೇ ಸಾಲಿನಲ್ಲಿ ಖರೀದಿಸಲಾದ ಔಷಧಿ ರಾಸಾಯನಿಕಗಳ ಖರೀದಿ ವಿವರ :

2017–18ನೇ ಸಾಲಿನಲ್ಲಿ ಆಯುಷ್ ಇಲಾಖೆಗೆ ಔಷಧಿ ಹಾಗೂ ರಾಸಾಯನಿಕ ವಸ್ತುಗಳನ್ನು ಖರೀದಿಸುವ ಸಲುವಾಗಿ ಲಿಂಕ್ ಡಾಕ್ಯುಮೆಂಟ್‌ನಲ್ಲಿ ರೂ. 8.56 ಲಕ್ಷಗಳು ನಿಗಧಿಯಾಗಿದ್ದು, ಆಯುಷ್ ನಿರ್ದೇಶನಾಲಯದ ಆದೇಶದನ್ವಯ ಈ ಅನುದಾನದಲ್ಲಿ ಶೇ 60% ರಷ್ಟು ಔಷಧಿಗಳನ್ನು ಮೆ. ಹೆಚ್.ಎಲ್.ಎಲ್, ಲೈಫ್ ಕೇರ್, ತಿರುವನಂತಪುರ, ಕೇರಳ ಇವರಿಂದ ಹಾಗೂ ಶೇ 40% ರಷ್ಟು ಔಷಧಿಗಳನ್ನು ಸಹ ಮೆ. ಹೆಚ್.ಎಲ್.ಎಲ್, ಲೈಫ್ ಕೇರ್, ತಿರುವನಂತಪುರ, ಕೇರಳ ಇವರಿಂದ ಔಷಧಿಗಳನ್ನು ಖರೀದಿಸಿ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ.

ಹಾಗೂ 2017–18ನೇ ಸಾಲಿನಲ್ಲಿ ಜಿಲ್ಲಾ ಆಯುಷ್ ಕಛೇರಿ, ರಾಮನಗರ ವ್ಯಾಪ್ತಿಗೆ ಬರುವ 3 ಆಸ್ಪತ್ರೆ ಹಾಗೂ 9 ಚಿಕಿತ್ಸಾಲಯಗಳ ತಪಾಸಣೆಗಾಗಿ, ಆಯುಷ್ ಇಲಾಖೆ ವತಿಯಿಂದ ಹಮ್ಮಿಕೊಳ್ಳುವ ಆರೋಗ್ಯ ಶಿಬಿರಗಳಿಗೆ ಭೇಟಿ, ಖಾಸಗಿ ಚಿಕಿತ್ಸಾಲಯಗಳಿಗೆ ಭೇಟಿ, ಇತರೆ ಇಲಾಖೆಗಳ ಭೇಟಿಗಾಗಿ ಹಾಗೂ ಇನ್ನಿತರೆ ಕಛೇರಿ ಕೆಲಸಗಳಿಗಾಗಿ ಹೊರಗುತ್ತಿಗೆ ಆಧಾರದ ಮೇಲೆ ಟಾಟಾ ಇಂಡಿಕಾ ವಾಹನವನ್ನು ಪಡೆಯಲಾಗಿದೆ.

ಇತ್ತೀಚಿನ ದಿನಗಳಲ್ಲಿ ಆಯುಷ್ ಪದ್ದತಿಯು ಒಂದು ಉತ್ತಮ ರೋಗನಿರೋಧಕ ಶಕ್ತಿಯನ್ನು ಹೊಂದಿದೆ ಎಂಬುದಾಗಿ ಸಾರ್ವಜನಿಕರಲ್ಲಿ ಮನವರಿಕೆಯುಂಟಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಆಯುಷ್ ಪದ್ಧತಿಯ ಚಿಕಿತ್ಸೆಯನ್ನು ಪಡೆಯುವಲ್ಲಿ ಯಶಸ್ವಿಯಾಗಿರುತ್ತಾರೆ. ಈ ನಿಟ್ಟಿನಲ್ಲಿ ಸಾರ್ವಜನಿಕರ ಹಿತದೃಷ್ಟಿಯನ್ನು ಮನಗಂಡು ಆಯುಷ್ ಇಲಾಖೆಯಲ್ಲಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳು ಉತ್ತಮ ಬೆಳವಣಿಗೆಯಾಗಿರುತ್ತದೆ

ರೇಷ್ಮೆ ಇಲಾಖೆ

- ರೇಷ್ಮೆ ನಾಡು ಎಂದೇ ಪ್ರಖ್ಯಾತಿಯಾಗಿರುವ ರಾಮನಗರ ಜಿಲ್ಲೆಯಲ್ಲಿ ರೇಷ್ಮೆ ವ್ಯವಸಾಯ ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಜಿಲ್ಲೆಯಲ್ಲಿ ಕನಕಪುರ, ಚನ್ನಪಟ್ಟಣ, ರಾಮನಗರ, ಮಾಗಡಿ 4 ತಾಲ್ಲೂಕುಗಳಿದ್ದು, ಇದರ ಪೈಕಿ 3 ತಾಲ್ಲೂಕುಗಳಲ್ಲಿ ರೇಷ್ಮೆ ಬೆಳೆಯು ವಾಣಿಜ್ಯ ಬೆಳೆಯಾಗಿರುತ್ತದೆ. ಮಾಗಡಿ ತಾಲ್ಲೂಕು ಬಿತ್ತನೆ ಪ್ರದೇಶವಾಗಿದ್ದು, ಇಲ್ಲಿ ಮೈಸೂರು ಶುದ್ದ ತಳಿ ರೇಷ್ಮೆ ಗೂಡುಗಳನ್ನು ಬೀಜೋತ್ಪಾದನೆಗೆ ಉತ್ಪಾದಿಸಲಾಗುತ್ತಿದೆ.
- ರಾಮನಗರ ಜಿಲ್ಲೆಯ 3 ತಾಲ್ಲೂಕುಗಳಲ್ಲಿ 95 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ 1148 ಗ್ರಾಮಗಳಲ್ಲಿ ಒಟ್ಟು 17445.96 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ವಿಸ್ತೀರ್ಣವಿದ್ದು, 26012 ರೇಷ್ಮೆ ಬೆಳೆಗಾರರಿದ್ದಾರೆ. ಇವರ ಪೈಕಿ 1692 ಪರಿಶಿಷ್ಟ ಜಾತಿ, 121 ಪರಿಶಿಷ್ಟ ಪಂಗಡ, 121 ಅಲ್ಪಸಂಖ್ಯಾತರು ಮತ್ತು 24078 ಇತರೆ ಹಾಗೂ 2068 ಮಹಿಳಾ ರೇಷ್ಮೆ ಬೆಳೆಗಾರರು ನಿರಂತರವಾಗಿ ರೇಷ್ಮೆ ಕೃಷಿಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಜಿಲ್ಲೆಯಲ್ಲಿ 214.88 ಲಕ್ಷಗಳ ಮೊಟ್ಟೆಗಳನ್ನು ಚಾಕಿ ಮಾಡಿ 14645.17 ಮೆ.ಟನ್ ರೇಷ್ಮೆ ಗೂಡನ್ನು ಉತ್ಪಾದಿಸಲಾಗಿದೆ.
- ಮೈಸೂರು ತಳಿ ಬಿತ್ತನೆ ಪ್ರದೇಶವಾದ ಮಾಗಡಿ ತಾಲ್ಲೂಕಿನಲ್ಲಿ 308.94 ಹೆಕ್ಟೇರ್ ಹಿಪ್ಪುನೇರಳೆ ಪ್ರದೇಶವಿದ್ದು, ಒಟ್ಟು 1412 ರೇಷ್ಮೆ ಬೆಳೆಗಾರರು ಬಿತ್ತನೆ ಗೂಡು ಉತ್ಪಾದನೆ ಚಟುವಟಿಕೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುತ್ತಾರೆ.
- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹಿಪ್ಪುನೇರಳೆ ನರ್ಸರಿ, ಹಿಪ್ಪುನೇರಳೆ ನಾಟಿ ಹಾಗೂ ಹಿಪ್ಪುನೇರಳೆ ತೋಟಗಳ ನಿರ್ವಹಣೆ ಕಾರ್ಯಕ್ರಮಗಳಲ್ಲಿ 1886 ಕಾಮಗಾರಿಗಳನ್ನು ಪ್ರಾರಂಭಿಸಿ 871.52 ಲಕ್ಷಗಳನ್ನು ಖರ್ಚು ಮಾಡಿ 328200 ಮಾನವ ದಿನಗಳನ್ನು ಸೃಜಿಸಲಾಗಿದೆ.
- ಜಿಲ್ಲೆಯಲ್ಲಿ ಒಟ್ಟು 1197 ನೂಲು ಬಿಚ್ಚಾಣಿಕೆದಾರರಿದ್ದು, ಇದರಲ್ಲಿ 1058 ಅಲ್ಪಸಂಖ್ಯಾತರು, 60 ಪರಿಶಿಷ್ಟ ಜಾತಿ ಹಾಗೂ 79 ಇತರೆ ವರ್ಗದವರಿದ್ದು, 152 ಡ್ಯೂಪಿಯನ್ ಚರಕ, 949 ಕಾಟೇಜ್ ಬೇಸಿನ್ ರೀಲಿಂಗ್ ಘಟಕ, 86 ಮಲ್ಟಿಯಂಡ್ ರೀಲಿಂಗ್ ಘಟಕ ಹಾಗೂ 08 ಸ್ವಯಂ ಚಾಲಿತ ರೀಲಿಂಗ್ ಘಟಕಗಳು ಹಾಗೂ 02 ಸ್ವಯಂ ಚಾಲಿತ ಡ್ಯೂಪಿಯಾನ್ ರೀಲಿಂಗ್ ಘಟಕಗಳಿರುತ್ತವೆ. ಜಿಲ್ಲೆಯಲ್ಲಿ ಪ್ರತಿ ದಿನ ಸುಮಾರು 7000 ಕೆ.ಜಿ ಗಳಷ್ಟು ಕಚ್ಚಾ ರೇಷ್ಮೆ ಉತ್ಪಾದನೆಯಾಗುತ್ತಿದೆ.

ಜಿಲ್ಲೆಯ ಮಳೆ ವರದಿ

ಕ್ರ.ಸಂ	ತಾಲ್ಲೂಕು	ವಾಡಿಕೆ ಮಳೆ	ಪ್ರತ್ಯಕ್ಷ ಮಳೆ			
			2017	%	2016	%
1	ಕನಕಪುರ	783	1259	160	519	66
2	ಚನ್ನಪಟ್ಟಣ	844	1204	142	546	65
3	ರಾಮನಗರ	908	1238	136	598	66
4	ಮಾಗಡಿ	948	1106	116	592	62
	ಒಟ್ಟು	**870**	**1201**	**138**	**576**	**66**

ಜಿಲ್ಲೆಯ ರೇಷ್ಮೆ ಬೆಳೆಗಾರರ ವಿವರ

ಕ್ರ.ಸಂ	ತಾಲ್ಲೂಕು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಅಲ್ಪ ಸಂಖ್ಯಾತರು	ಇತರೆ	ಒಟ್ಟು	ಮಹಿಳೆಯರು
1	ಕನಕಪುರ	1181	69	98	14438	15786	1216
2	ಚನ್ನಪಟ್ಟಣ	228	1	17	5724	5970	565
3	ರಾಮನಗರ	283	51	6	3916	4256	287
	ಒಟ್ಟು	**1692**	**121**	**121**	**24078**	**26012**	**2068**

ಜಿಲ್ಲೆಯ ಹಿಪ್ಪುನೇರಳೆ ವಿಸ್ತೀರ್ಣದ ವಿವರಗಳು (ಹೆಕ್ಟೇರುಗಳಲ್ಲಿ)

ಕ್ರ ಸಂ	ತಾಲ್ಲೂಕು	ಎಂ5	ವಿ1	ಇತರೆ	ಒಟ್ಟು
1	ಕನಕಪುರ	1192.36	9196.75	15.10	10404.21
2	ಚನ್ನಪಟ್ಟಣ	225.73	3737.67	1.00	3964.40
3	ರಾಮನಗರ	395.71	2675.64	6.00	3077.35
	ಒಟ್ಟು	**1813.80**	**15610.06**	**22.10**	**17445.96**

ಜಿಲ್ಲೆಯ ಚಾಕಿ ಮತ್ತು ರೇಷ್ಮೆ ಗೂಡಿನ ಉತ್ಪಾದನೆಯ ವಿವರಗಳು

ಕ್ರ ಸಂ	ವಿವರಗಳು	ತಳಿ	ಗುರಿ	ಸಾದನೆ	%
1	ಚಾಕಿಯಾದ ಮೊಟ್ಟೆಗಳು (ಲಕ್ಷಗಳಲ್ಲಿ)	ಮಿಶ್ರತಳಿ	229.660	204.737	89
		ದ್ವಿತಳಿ	12.350	10.143	82
		ಒಟ್ಟು	242.010	214.880	89
2	ರೇಷ್ಮೆ ಗೂಡಿನ ಉತ್ಪಾದನೆ (ಮೆ.ಟನ್‌ಗಳಲ್ಲಿ)	ಮಿಶ್ರತಳಿ	14927.710	13986.999	94
		ದ್ವಿತಳಿ	797.550	658.173	82
		ಒಟ್ಟು	15725.260	14645.172	93
3	ಕಚ್ಚಾ ರೇಷ್ಮೆ ಉತ್ಪಾದನೆ	ಮಿಶ್ರತಳಿ	2073.29	1947.76	94
		ದ್ವಿತಳಿ	123.50	101.42	82
		ಒಟ್ಟು	2196.79	2049.18	93

2017–18ನೇ ಸಾಲಿನ ರಾಮನಗರ ಜಿಲ್ಲೆಯ ರೇಷ್ಮೆ ಇಲಾಖೆಯ ವಿವಿಧ ಯೋಜನೆಗಳ ಪ್ರಗತಿ ವರದಿ

ರಾಜ್ಯ ವಲಯ ಯೋಜನೆಗಳು

ರೂ.ಲಕ್ಷಗಳಲ್ಲಿ

ಕ್ರ. ಸಂ	ಯೋಜನೆ	ಕಾರ್ಯಕ್ರಮ	ವಾರ್ಷಿಕ ಗುರಿ		ಬಿಡುಗಡೆ	ಸಾಧನೆ		ಫಲಾನುಭವಿಗಳ ಸಂಖ್ಯೆ
			ಬೌತಿಕ	ಆರ್ಥಿಕ		ಬೌತಿಕ	ಆರ್ಥಿಕ	
1	ರೇಷ್ಮೆ ಅಭಿವೃದ್ದಿ ಯೋಜನೆ 2851–00–107–1–35(106)	ಹುಳು ಸಾಕಾಣಿಕೆ ಮನೆ	190	261.250	339.097	337	339.088	337
		ಸಲಕರಣೆಗೆ ಸಹಾಯಧನ	1000	187.500	140.000	1023	137.620	1023
		ಚಂದ್ರಿಕೆ ಮನೆ	50	25.000	8.000	17	7.065	17
		ಸೋಂಕು ನಿವಾರಕ	1100	41.250	0.000			
		ಚಾಕಿ ಸಾಕಾಣಿಕಾ ಕೇಂದ್ರ	1	4.200	0.000	1	3.276	1
		ರೋಟರಿ ಚಂದ್ರಿಕೆ	7760	57.424	57.424	5570	57.128	135
		ಒಟ್ಟು	**10101**	**576.624**	**544.521**	**6948**	**544.177**	**1513**
2	ನೂತನ ಕತೃತ್ವ ಶಕ್ತಿ ಹಾಗೂ ಭಾಗೀದಾರರಿಗೆ ಸವಲತ್ತು 2851–00–107–1–48(106)	ರೇಷ್ಮೆ ಗೂಡಿಗೆ ಪ್ರೋತ್ಸಾಹಧನ	2200	1035.50	1035.50	4047	1034.90	53746
		ಚಾಕಿ ಸಾಕಾಣಿಕೆಗೆ ಸಹಾಯಧನ	585800	59.700	131.100	1247475	124.747	11412
		ಹುಳು ಸಾಕಾಣಿಕೆ ಮನೆ	371	428.469	459.627	397	465.375	397
		ಒಟ್ಟು	**588371**	**1523.669**	**1626.227**	**1251919**	**1625.018**	**65555**
3	ರೇಷ್ಮೆ ಅಭಿವೃದ್ದಿ ಯೋಜನೆ ವಿಶೆಷ ಘಟಕ ಯೋಜನೆ 2851–00–107–1–35(422)	ಹುಳು ಸಾಕಾಣಿಕೆ ಮನೆ	29	45.675	126.000	71	126.499	71
		ಸಲಕರಣೆಗೆ ಸಹಾಯಧನ	90	20.250	35.676	186	35.133	186
		ಚಂದ್ರಿಕೆ ಮನೆ	10	5.000	5.000	9	3.843	9
		ಸೋಂಕು ನಿವಾರಕ	70	3.150	2.250	50	2.249	50
		ಒಟ್ಟು	**199**	**74.075**	**168.926**	**316**	**167.724**	**316**

ಕ್ರ. ಸಂ	ಯೋಜನೆ	ಕಾರ್ಯಕ್ರಮ	ವಾರ್ಷಿಕ ಗುರಿ		ಬಿಡುಗಡೆ	ಸಾಧನೆ		ಫಲಾನುಭವಿಗಳ ಸಂಖ್ಯೆ
			ಭೌತಿಕ	ಆರ್ಥಿಕ		ಭೌತಿಕ	ಆರ್ಥಿಕ	
4	ರೇಷ್ಮೆ ಅಭಿವೃದ್ಧಿ ಯೋಜನೆ ಗಿಜನ ಉಪಯೋಜನೆ 2851–00–107–1–35(423)	ಹುಳು ಸಾಕಾಣಿಕೆ ಮನೆ	40	63.00	20.520	14	21.371	14
		ಸಲಕರಣೆ	100	22.50	9.450	64	12.982	64
		ಚಂದ್ರಿಕೆ ಮನೆ	10	5.00	5.000	1	0.400	1
		ಸೋಂಕು ನಿವಾರಕ	140	6.30	1.350	30	1.350	30
		ಒಟ್ಟು	**290**	**96.80**	**36.320**	**109**	**36.103**	**109**
5	ಕಾಯದೆ 2013 ವಿಶೆಷ ಘಟಕ ಯೋಜನೆ 2851–00–107–1–50(422)	ಸಲಕರಣೆಗೆ ಸಹಾಯಧನ	200	45.00	33.550	169	33.411	169
6	ಕಾಯದೆ 2013 ಗಿರಿಜನ ಉಪಯೋಜನೆ 2851–00–107–1–50(423) ಕೇಂದ್ರ ವಲಯ ಯೋಜನೆಗಳು	ಸಲಕರಣೆಗೆ ಸಹಾಯಧನ	0	0.00	1.125	6	1.116	6
		ಕೇಂದ್ರ ವಲಯ ಯೋಜನೆಗಳು						
7	ಪ್ರದಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ 2851–00–107–1–49(106)	ಹನಿ ನೀರಾವಿರಿಗೆ ಸಹಾಯಧನ	487	428.00	533.174	597.51	532.689	901
8	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ 2401–00–800–1–57 1) ಗುಣಮಟ್ಟದ ಉತ್ಪಾದನೆಗಾಗಿ ಮಣ್ಣಿನ ಫಲವತ್ತತೆ ಸಮೃದ್ಧಿಗೆ ಪ್ಯಾಕೇಜ್	ಸಾಮಾನ್ಯ (106)	631	39.520	11.273	184	11.216	184
		ವಿಶೇಷ ಘಟಕ ಯೋಜನೆ (422)	373	23.361	37.829	616	37.810	616
		ಗಿರಿಜನ ಉಪ ಯೋಜನೆ (423)	143	8.956	6.012	98	5.996	98
		ಒಟ್ಟು	**1147**	**71.837**	**55.114**	**898**	**55.022**	**898**
	2) ಡ್ರಮ್ ಕಿಟ್ ಅಳವಡಿಕೆಗೆ ಸಹಾಯಧನ	ಸಾಮಾನ್ಯ (106)	5	0.775	1.560	10	1.545	10

ಕ್ರ. ಸಂ	ಯೋಜನೆ	ಕಾರ್ಯಕ್ರಮ	ವಾರ್ಷಿಕ ಗುರಿ		ಬಿಡುಗಡೆ	ಸಾಧನೆ		ಫಲಾನುಭವಿಗಳ ಸಂಖ್ಯೆ
			ಭೌತಿಕ	ಆರ್ಥಿಕ		ಭೌತಿಕ	ಆರ್ಥಿಕ	
9	ರೇಷ್ಮೆ ವ್ಯವಸಾಯ ಯೋಜನೆ 2851–00–107–1–80(059) ಜಿಲ್ಲಾ ವಲಯ ಕಾರ್ಯಕ್ರಮಗಳು	ಕ್ಲಸ್ಟರ್ ತರಬೇತಿ ಕಾರ್ಯಕ್ರಮ	20	3.000	3.000	20	2.988	
		ಸಲಕರಣೆಗಳಿಗೆ ಸಹಾಯಧನ	340	64.000	64.000	468	63.640	468
		ಸೋಂಕು ನಿವಾರಕ	0	0.000	15.000		15.000	
		ಒಟ್ಟು	**365**	**67.775**	**83.560**	**498**	**83.173**	**478**
		ಜಿಲ್ಲಾ ವಲಯ ಕಾರ್ಯಕ್ರಮಗಳು						
10	ಜಿಲ್ಲಾ ಪಂಚಾಯತ್ ಕಾರ್ಯಕ್ರಮ ರೇಷ್ಮೆ ಬೆಳೆಗಾರರಿಗೆ ಸಹಾಯ 2851–00–104–0–30	ಸಾಮಾನ್ಯ (100)	2750	11.00	11.00	2725	10.90	2725
		ವಿಶೇಷ ಘಟಕ ಯೋಜನೆ (422)	4000	16.00	16.00	3958	15.83	3958
		ಗಿರಿಜನ ಉಪ ಯೋಜನೆ (423)	2000	8.00	8.00	1988	7.95	1988
		ಒಟ್ಟು	8750	35.00	35.00	8671	34.68	8671
11	ತಾಲ್ಲೂಕು ಪಂಚಾಯತ್ ಕಾರ್ಯಕ್ರಮ 2851–00–104–0–61(100)	ರೇಷ್ಮೆ ಬೆಳೆಗಾರರಿಗೆ ಉತ್ಪಾದನೆ/ ಉತ್ಪಾದಕತೆ ಆಧಾರಿತ ಪ್ರೋತ್ಸಾಹಧನ	400	10.00	7.50	242	9.98	242
		ಎಲ್ಲಾ ಒಟ್ಟು	**610310**	**2928.780**	**3128.642**	**1270380**	**3124.209**	**79858**

ರೇಷ್ಮೆ ಗೂಡಿನ ನಂತರದ ಚಟುವಟಿಕೆಗಳ ಪ್ರಗತಿಯ ವರದಿ

ಕ್ರ. ಸಂ	ಯೋಜನೆ	ಕಾರ್ಯಕ್ರಮ	ವಾರ್ಷಿಕ ಗುರಿ		ಬಿಡುಗಡೆ	ಸಾಧನೆ		ಫಲಾನುಭವಿಗಳ ಸಂಖ್ಯೆ
			ಬೌತಿಕ	ಆರ್ಥಿಕ		ಬೌತಿಕ	ಆರ್ಥಿಕ	
1	**ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕತೃತ್ವ ಶಕ್ತಿ ಹಾಗೂ ಭಾಗೀದಾರರಿಗೆ ಸವಲತ್ತು 2851-00-107-1-48(106)**	ರೀಲಿಂಗ್ ಶೆಡ್ ಗೆ ಸಹಾಯಧನ 600 ಚ.ಅ ಮೇಲ್ಪಟ್ಟು	3	4.95	20.163	15	20.163	15
		ಸುಧಾರಿತ ಕಾಟೇಜ್ ಬೇಸಿನ್ ಅಳವಡಿಕೆಗೆ ಸಹಾಯಧನ	5	14.74	11.776	4	11.776	4
		5 ಕೆ.ವಿ ಜನರೇಟರ್ ಯಂತ್ರ ಅಳವಡಿಕೆಗೆ ಸಹಾಯಧನ	3	2.925	114.84	116	114.84	116
		ಸೋಲಾರ್ ವಾಟರ್ ಹೀಟರ್ ಅಳವಡಿಕೆಗೆ ಸಹಾಯಧನ	3	5.715	41.882	39	41.882	39
		ಸ್ವಯಂ ಚಾಲಿತ ರೀಲಿಂಗ್ ಘಟಕ (400 ತುದಿಗಳು)	4	342.88	384.603	2	192.30	2
		ಹೀಟ್ ರಿಕವರಿ ಘಟಕ	13	2.44	2.438	13	2.438	13
		ಸ್ವಯಂ ಚಾಲಿತ ದ್ವಿತಳಿ ರೇಷ್ಮೆಗೆ ಪ್ರೋತ್ಸಾಹಧನ	33.33	50.00	151.298	5	151.298	5
		2017-18 ಮತ್ತು 2016-17ನೇ ಸಾಲಿನ ಬಾಕಿ ಇರುವ ಮಲ್ಟಿ ಎಂಡ್/ ಫಿಲೇಚರ್ ಮಿಶ್ರತಳಿ/ದ್ವಿತಳಿ ಕಚ್ಚಾ ರೇಷ್ಮೆಗೆ ಪ್ರೋತ್ಸಾಹಧನ	358.21	250.752	40.746	198	39.201	198
		ಚಿಟ್ಟೆ ಕೊರೆದ ಗೂಡುಗಳಿಗೆ ಸಹಾಯಧನ ರೀಲಿಂಗ್ ಶೆಡ್ ಗೆ ಸಹಾಯಧನ 600	0	0	0	1	0.108	1
		ಚ.ಅ ಮೇಲ್ಪಟ್ಟು	1	3.24	10.388	3	10.427	3
		ಒಟ್ಟು	**422.54**	**674.402**	**767.746**	**393**	**574.006**	**393**
2	**ರೇಷ್ಮೆ ಅಭಿವೃದ್ಧಿ ಯೋಜನೆ / ವಿಶೇಷ ಘಟಕ ಯೋಜನೆ 2851-00-107-1-35(422)**	ಸುಧಾರಿತ ಕಾಟೇಜ್ ಬೇಸಿನ್ ಅಳವಡಿಕೆಗೆ ಸಹಾಯಧನ	5	17.685	14.110	4	14.131	4
		5 ಕೆ.ವಿ ಜನರೇಟರ್ ಯಂತ್ರ ಅಳವಡಿಕೆಗೆ ಸಹಾಯಧನ	10	11.70	14.170	12	14.256	12
		ಸೋಲಾರ್ ವಾಟರ್ ಹೀಟರ್ ಅಳವಡಿಕೆಗೆ ಸಹಾಯಧನ	2	4.572	6.822	6	6.727	6
		ಹೀಟ್ ರಿಕವರಿ ಘಟಕ	9	2.025	1.125	4	0.90	4
		ಸ್ವಯಂ ಚಾಲಿತ ರೀಲಿಂಗ್ ಘಟಕ (400ತುದಿಗಳು)	1	115.38	230.76	2	230.76	2
		ಕಚ್ಚಾ ರೇಷ್ಮೆಗೆ ಪ್ರೋತ್ಸಾಹಧನ	70	70.00	22.225	36	22.221	36
		ಒಟ್ಟು	**98**	**224.602**	**299.600**	**67**	**299.422**	**67**

ಸಾರ್ವಜನಿಕ ಶಿಕ್ಷಣ ಇಲಾಖೆ

ಮಧ್ಯಾಹ್ನದ ಉಪಾಹಾರ ಯೋಜನೆ:

ಈ ಯೋಜನೆಯ ಮುಖ್ಯ ಉದ್ದೇಶವೆನೇಂದರೆ ಮಕ್ಕಳಲ್ಲಿ ಅಪೌಷ್ಟಿಕತೆಯನ್ನು ಹೋಗಲಾಡಿಸಿ ಪೌಷ್ಟಿಕಾಂಶವನ್ನು ಹೆಚ್ಚಿಸುವುದರ ಮೂಲಕ ಅವರುಗಳ ಆರೋಗ್ಯ ಹಾಗೂ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವುದಾಗಿರುತ್ತದೆ. ಮುಖ್ಯವಾಗಿ 6 ರಿಂದ 14 ವರ್ಷದ ಎಲ್ಲಾ ಮಕ್ಕಳಿಗೂ ಶಾಲೆಗೆ ತಪ್ಪದೇ ಹಾಜರಾಗುವಂತೆ ಮಾಡುವುದು ಹಾಗೂ ಸಮಾನತೆಯನ್ನು ಮೂಡಿಸುವ ಉದ್ದೇಶವಾಗಿರುತ್ತದೆ. ಈ ಕಾರ್ಯಕ್ರಮದಡಿಯಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರತಿ ದಿನ ನೀಡಬಹುದಾದ ಆಹಾರ ಪದಾರ್ಥಗಳ ವಿವರ ಈ ರೀತಿ ಇರುತ್ತದೆ. ಪ್ರಾಥಮಿಕ ಶಾಲಾ ವಿಭಾಗಕ್ಕೆ ಅಕ್ಕಿ 100 ಗ್ರಾಂ, ಬೇಳೆ 20 ಗ್ರಾ, ತರಕಾರಿ 50 ಗ್ರಾಂ, ಉಪ್ಪು 2 ಗ್ರಾಂ, ಎಣ್ಣೆ 5 ಗ್ರಾಂ, ಇರುತ್ತದೆ. ಅದರಂತೆ ಪ್ರೌಢಶಾಲಾ ವಿಭಾಗಕ್ಕೆ ಅಕ್ಕಿ 150 ಗ್ರಾಂ, ಬೇಳೆ 30 ಗ್ರಾಂ, ತರಕಾರಿ 75 ಗ್ರಾಂ, ಉಪ್ಪು 4 ಗ್ರಾಂ, ಎಣ್ಣೆ 7.5 ಗ್ರಾಂ ನೀಡಲಾಗುತ್ತಿದೆ.

ಇದರ ಜೊತೆ ಹೆಚ್ಚುವರಿ ಪೌಷ್ಟಿಕಾಂಶಗಳಾದ ವಿಟಮಿನ್ 'ಎ' ಮಾತ್ರೆ 6 ತಿಂಗಳಿಗೆ ಒಂದರಂತೆ ವರ್ಷಕ್ಕೆ 2 ಮಾತ್ರೆಗಳು, ಕಬ್ಬಿಣಾಂಶ ಮಾತ್ರೆಗಳು ವಾರಕ್ಕೆ ಒಂದು ದಿನ ಹಾಗೂ 6 ತಿಂಗಳಿಗೆ ಒಂದರಂತೆ ವರ್ಷಕ್ಕೆ 2 ಜಂತು ನಿವಾರಣಾ ಮಾತ್ರೆಗಳನ್ನು ನೀಡಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 80,208 ಫಲಾನುಭವಿಗಳು ಸೌಲಭ್ಯವನ್ನು ಪಡೆಯುತ್ತಿರುತ್ತಾರೆ. ಒಟ್ಟು 2534 ಅಡುಗೆ ಕೇಂದ್ರಗಳಿದ್ದು, 2430 ಅಡುಗೆ ಸಿಬ್ಬಂದಿ ವರ್ಗದವರು ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಕ್ಷೀರಭಾಗ್ಯ ಯೋಜನೆ ಕಾರ್ಯಕ್ರಮ:

ಜಿಲ್ಲೆಯಲ್ಲಿನ 01 ರಿಂದ 10ನೇ ತರಗತಿಗಳ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಮತ್ತು ಪ್ರೌಡಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಒಟ್ಟು 80,208 ವಿದ್ಯಾರ್ಥಿಗಳಿಗೆ ವಾರದಲ್ಲಿ 05 ದಿವಸ ಕೆನೆಭರಿತ ಹಾಲನ್ನು ನೀಡಿ ಮಕ್ಕಳಲ್ಲಿ ಪೌಷ್ಠಿಂಕಾಂಶವನ್ನು ಹೆಚ್ಚಿಸಲು ಸಹಕಾರಿಯಾಗಿದೆ

2018ರ ಏಪ್ರಿಲ್ ಮಾಹೆಯಲ್ಲಿ ರಾಮನಗರ ಜಿಲ್ಲೆಯಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾದ ಹಾಗೂ ಉತ್ತೀರ್ಣರಾದ ವಿದ್ಯಾರ್ಥಿಗಳ ಫಲಿತಾಂಶದ ವಿವರ:

ಜಿಲ್ಲೆಯಲ್ಲಿ 2017–18ನೇ ಸಾಲಿನಲ್ಲಿ ಒಟ್ಟು 12349 ವಿದ್ಯಾರ್ಥಿಗಳು ಹಾಜರಾಗಿದ್ದು, 10,078 ವಿದ್ಯಾರ್ಥಿಗಳು ತೇರ್ಗಡೆ ಹೊಂದಿ ಶೇಕಡ 80.78% ರಷ್ಟು ಫಲಿತಾಂಶ ಬಂದಿರುತ್ತದೆ.

ಕ್ರ ಸ	ತಾಲ್ಲೂಕು	ಪರೀಕ್ಷೆಗೆ ಕುಳಿತವರ ಸಂಖ್ಯೆ	ಉತ್ತೀರ್ಣ	ಶೇಕಡ
01	ಚನ್ನಪಟ್ಟಣ	2693	2130	79.09
02	ಕನಕಪುರ	3592	2913	81.10
03	ಮಾಗಡಿ	2379	1955	82.17
04	ರಾಮನಗರ	2977	2406	80.82
	ಒಟ್ಟು	**12349**	**10078**	**80.78**

ಸೈಕಲ್ ಸರಬರಾಜು ಮತ್ತು ವಿತರಣೆ:

ಸರ್ಕಾರವು ಸರ್ಕಾರಿ/ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಬೈಸಿಕಲ್ ವಿತರಿಸಲು ಆದೇಶ ಮಾಡಿದೆ. 2017–18ನೇ ಸಾಲಿನಲ್ಲಿ ಕೆಳಕಂಡಂತೆ ಬೈಸಿಕಲ್ ವಿತರಣೆ ಮಾಡಲಾಗಿದೆ.

ಕ್ರ.ಸಂ.	ತಾಲ್ಲೂಕು	ಬೇಡಿಕೆ	ಷರಾ
1	ಚನ್ನಪಟ್ಟಣ	1849	2017–18ನೇ ಸಾಲಿನಲ್ಲಿ ಒಟ್ಟು 8369 ಬೈಸಿಕಲ್‌ಗಳು ಸರಬರಾಜಾಗಿದ್ದು, ಹಿಂದಿನ ಸಾಲಿನ ಉಳಿಕೆ 51 ಬೈಸಿಕಲ್‌ಗಳು ಸೇರಿ ಒಟ್ಟು 8411 ಬೈಸಿಕಲ್‌ಗಳನ್ನು ವಿತರಣೆ ಮಾಡಲಾಗಿದೆ.
2	ಕನಕಪುರ	2660	
3	ಮಾಗಡಿ	1797	
4	ರಾಮನಗರ	2063	
	ಒಟ್ಟು	**8369**	

ಅಥಿತಿ ಶಿಕ್ಷಕರ ಬಗ್ಗೆ:

ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರುಗಳ ಕೊರತೆಯಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ತಾತ್ಕಾಲಿಕವಾಗಿ ವರ್ಷದ ಅಂತ್ಯದವರಗೆ ಅಥವಾ ಹೊಸ ನೇಮಕಾತಿಯಾಗುವವರಗೆ ಅತಿಥಿ ಶಿಕ್ಷಕರುಗಳನ್ನು ತೆಗೆದುಕೊಳ್ಳಲು ಸರ್ಕಾರವು ಆದೇಶ ಮಾಡಿರುತ್ತದೆ. ಪ್ರಾಥಮಿಕ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುವ ಶಿಕ್ಷಕರುಗಳಿಗೆ 7,500/– ರಂತೆ ಹಾಗೂ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುವ ಶಿಕ್ಷಕರುಗಳಿಗೆ ರೂ 8,000/– ರಂತೆ ಗೌರವ ಸಂಭಾವನೆಯನ್ನು ನೀಡಲಾಗುತ್ತಿದೆ. ಈ ಸಂಬಂಧ 272 ಪ್ರಾಥಮಿಕ ಶಾಲಾ ಶಿಕ್ಷಕರುಗಳು ಹಾಗೂ 32 ಪ್ರೌಡಶಾಲಾ ಶಿಕ್ಷಕರುಗಳನ್ನು ಅತಿಥಿ ಶಿಕ್ಷಕರಾಗಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲಾಗಿದೆ.

ಶುಲ್ಕ ಮರು ಪಾವತಿ:

ಸರ್ಕಾರವು ಪ್ರತಿ ವರ್ಷ 6, 7 ಮತ್ತು 8, 9, 10ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ಎಸ್.ಸಿ/ಎಸ್.ಟಿ. ಗಂಡು ಮತ್ತು ಹೆಣ್ಣು ಮಕ್ಕಳು ಹಾಗೂ ಇತರೆ ವರ್ಗದ ಹೆಣ್ಣು ಮಕ್ಕಳಿಗೆ ಶುಲ್ಕ ಮರು ಪಾವತಿ ನೀಡುತ್ತಿದೆ. 2017–18ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಕಾರ್ಯಕ್ರಮ, ಶುಲ್ಕ ಮರುಪಾವತಿಯಡಿ 8,9,10ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ಎಸ್.ಸಿ ಹಾಗೂ ಎಸ್.ಟಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಮರುಪಾವತಿಗಾಗಿ ರೂ.39.42 ಲಕ್ಷಗಳು ನಿಗಧಿಯಾಗಿದ್ದು, ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಹಂಚಿಕೆ ಮಾಡಿ ಪಾವತಿ ಮಾಡಲಾಗಿದೆ. ವಿವರ ಕೆಳಕಂಡಂತಿದೆ.

ಕ್ರ.ಸಂ	ತಾಲ್ಲೂಕು	ಹಂಚಿಕೆ/ಪಾವತಿ ಮಾಡಿರುವ ಕಛೇರಿಯ ವಿಳಾಸ	ಪಾವತಿ ಮಾಡಿರುವ ಮೊತ್ತ
01	–	ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು	20,93,695/–
02	ಚನ್ನಪಟ್ಟಣ	ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಚನ್ನಪಟ್ಟಣ ತಾಲ್ಲೂಕು	3,28,557/–
03	ರಾಮನಗರ	ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ರಾಮನಗರ ತಾಲ್ಲೂಕು	5,66,573/–
04	ಮಾಗಡಿ	ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಮಾಗಡಿ ತಾಲ್ಲೂಕು	3,50,822/–
05	ಕನಕಪುರ	ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಕನಕಪುರ ತಾಲ್ಲೂಕು	6,02,353/–
		ಒಟ್ಟು	**39,42,000**/–

ಕುವೆಂಪು ಮಾದರಿ ಶಾಲೆ:

ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕು ಶೆಟ್ಟಿಹಳ್ಳಿಯಲ್ಲಿ ರಾಜ್ಯ ಸರ್ಕಾರದ ವತಿಯಿಂದ ಕುವೆಂಪು ಮಾದರಿ ಶಾಲೆಯನ್ನು ಪ್ರಾರಂಭಿಸಿದ್ದು, 1 ರಿಂದ 7 ನೇ ತರಗತಿಯ ವರೆಗೆ ನಡೆಸಲಾಗುತ್ತಿದೆ.

ಉಚಿತ ಸಮವಸ್ತ್ರ ಸರಬರಾಜು:

2018–19ನೇ ಸಾಲಿಗೆ ರಾಮನಗರ ಜಿಲ್ಲೆಯಲ್ಲಿ ನಡೆಯುತ್ತಿರುವ 1 ರಿಂದ 10ನೇ ತರಗತಿವರೆಗೆ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಗೆ ಒಟ್ಟು 62300 ಸಮವಸ್ತ್ರಗಳು ಸರಬರಾಜಗಿದ್ದು ಸಂಪೂರ್ಣವಾಗಿ ವಿತರಣೆ ಮಾಡಲಾಗಿದೆ.

ತಾಲ್ಲೂಕು	ಸರಬರಾಜು ಆಗಿರುವ ಸಮವಸ್ತ್ರಗಳು	ವಿತರಣೆಯಾಗಿರುವ ಸಮವಸ್ತ್ರಗಳು
ಚನ್ನಪಟ್ಟಣ	15202	15202
ಕನಕಪುರ	19092	19092
ಮಾಗಡಿ	12773	12773
ರಾಮನಗರ	15233	15233
ಒಟ್ಟು	**62300**	**62300**

ಉಚಿತ ಪಠ್ಯಪುಸ್ತಕ:

2018–19 ನೇ ಸಾಲಿನಲ್ಲಿ ರಾಮನಗರ ಜಿಲ್ಲಾ ವ್ಯಾಪ್ತಿಗೆ 574,570 ಉಚಿತ ಪಠ್ಯಪುಸ್ತಕಗಳು ಹಾಗೂ 371,384 ಮಾರಾಟ ಪಠ್ಯಪುಸ್ತಕಗಳು ಒಟು 945,954 ಪಠ್ಯ ಪುಸ್ತಕಗಳನ್ನು ಅವಶ್ಯಕತೆಗಳಿಗನುಗುಣವಾಗಿ ಸಂಪೂರ್ಣ ಸರಬರಾಜಾಗಿರುತ್ತದೆ. ಹಾಗೂ ಸ್ವೀಕರಿಸಿರುವ ಎಲ್ಲಾ ಪಠ್ಯಪುಸ್ತಕಗಳನ್ನು ಜಿಲ್ಲೆಯ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಿಗೆ ಸರಬರಾಜು ಮಾಡಲಾಗಿರುತ್ತದೆ.

ಪ್ರತಿಭಾ ಕಾರಂಜಿ ಕಾರ್ಯಕ್ರಮಗಳು:

ಪ್ರಾಥಮಿಕ 1 ರಿಂದ 7ನೇ ತರಗತಿ ಹಾಗೂ ಪ್ರೌಢಶಾಲಾ 8 ರಿಂದ 10ನೇ ತರಗತಿಯವರೆಗಿನ ಮಕ್ಕಳಿಗೆ ವಿವಿಧ ರೀತಿಯ ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸಿ ಮಕ್ಕಳಲ್ಲಿ ಹುದುಗಿರುವ ಪ್ರತಿಭೆಯನ್ನು ಹೊರಹೊಮ್ಮಲು ಅವಕಾಶ ಕಲ್ಪಿಸುವ ಕಾರ್ಯಕ್ರಮವಾಗಿರುತ್ತದೆ. ಈ ಸಂಬಂಧ ನೂತನವಾಗಿ ರಚನೆಗೊಂಡು ಅಸ್ತಿತ್ವಕ್ಕೆ ಬಂದಿರುವ ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಜಿಲ್ಲಾ ಮಟ್ಟದ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳ ವಿವಿಧ ಸಾಂಸ್ಕೃತಿಕ ಸ್ಪರ್ದೆಗಳ **"ಪ್ರತಿಭಾ ಕಾರಂಜಿ"** ಕಾರ್ಯಕ್ರಮವನ್ನು ಶಾಲಾ ಮಟ್ಟದಿಂದ ಪ್ರಾರಂಭವಾಗಿ ರಾಜ್ಯ ಮಟ್ಟದವರೆಗೆ ನಡೆಸಲಾಗುವುದು.

ಈ ಕಾರ್ಯಕ್ರಮವು 2018–19ನೇ ಸಾಲಿನಲ್ಲಿ ತಾಲ್ಲೂಕು ಮಟ್ಟದ ಕಾರ್ಯಕ್ರಮಕ್ಕೆ 04 ತಾಲ್ಲೂಕುಗಳಿಗೆ ಹಾಗೂ ಜಿಲ್ಲಾ ಮಟ್ಟದ ಕಾರ್ಯಕ್ರಮಕ್ಕೆ ಸೇರಿ ರೂ. 15,15,500/– ಲಕ್ಷಗಳು ನಿಗಧಿಯಾಗಿದ್ದು, ಕ್ಲಸ್ಟರ್ ಮತ್ತು ತಾಲ್ಲೂಕು ಮಟ್ಟದ ಕಾರ್ಯಕ್ರಮಗಳು ಮುಗಿದಿದ್ದು, ಜಿಲ್ಲಾ ಮಟ್ಟದ ಕಾರ್ಯಕ್ರಮ ಪ್ರಗತಿಯಲ್ಲಿದೆ.

ವಿಜ್ಞಾನ ಪ್ರಶಸ್ತಿ:

ವಿಜ್ಞಾನ ಮತ್ತು ತಂತ್ರಜ್ಞಾನ ಯೋಜನೆಯಡಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ರಾಜ್ಯದ ವಿದ್ಯಾರ್ಥಿ ಸಮುದಾಯದಲ್ಲಿ ವೈಜ್ಞಾನಿಕ ವೃತ್ತಿಪರತೆಯನ್ನು ಉತ್ತೇಜಿಸಿ ಪ್ರೋತ್ಸಾಹಿಸುವ ಮತ್ತು ಗುರುತಿಸುವಲ್ಲಿ ವಿಜ್ಞಾನ ಪ್ರಶಸ್ತಿ ಸ್ಥಾಪಿಸಲಾಗಿದೆ. ಈ ಪ್ರಶಸ್ತಿಗೆ ಅರ್ಹ ಅಭ್ಯರ್ಥಿಗಳು 15–18 ವರ್ಷದ ಪ್ರೌಢಶಾಲಾ / ಪದವಿ ಪೂರ್ವ ವಿದ್ಯಾರ್ಥಿಗಳಾಗಿರಬೇಕು ಮತ್ತು ವಯೋಮಿತಿ 10 ರಿಂದ 18 ವರ್ಷಗಳನ್ನು ಮೀರಿರಬಾರದು. ವಿಜ್ಞಾನ ನಾಟಕ, ಪ್ರತಿಭಾ ಕಾರಂಜಿ, ವಿಷಯಗಳಲ್ಲಿ ಪಡೆದ ಅಂಕಗಳನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆಗೊಳಿಸಲಾಗುವುದು.

ಸೇರ್ಪಡೆ ಮತ್ತು ಮಾರ್ಪಾಡು ಕಾರ್ಯಕ್ರಮ:

2017–18ರಲ್ಲಿ ಸೇರ್ಪಡೆ ಮತ್ತು ಮಾರ್ಪಾಡು ಕಾರ್ಯಕ್ರಮದಡಿ ಜಿಲ್ಲೆಯಲ್ಲಿನ ಒಟ್ಟು 22 ಸರ್ಕಾರಿ ಪ್ರೌಡಶಾಲೆಗಳ ದುರಸ್ಥಿಯ ಕಾಮಗಾರಿಯನ್ನು 20.00 ಲಕ್ಷಗಳ ವೆಚ್ಚದಲ್ಲಿ ಹಾಗೂ 19 ಸರ್ಕಾರಿ ಪ್ರಾಥಮಿಕ ಶಾಲೆಗಳ ದುರಸ್ಥಿಯನ್ನು ರೂ 20.00 ಲಕ್ಷಗಳ ವೆಚ್ಚದಲ್ಲಿ ದುರಸ್ಥಿಯನ್ನು ಮಾಡಿ ವಿದ್ಯಾರ್ಥಿಗಳಿಗೆ ಕಲಿಕೆಗೆ ಸಂಬಂಧಿಸಿದಂತೆ ಅನುಕೂಲವನ್ನು ಮಾಡಲಾಗಿದೆ.

ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ(ಆರ್.ಟಿ.ಇ):–

ಕಡ್ಡಾಯ ಶಿಕ್ಷಣ ಕಾಯಿದೆ(ಆರ್.ಟಿ.ಇ) ಯಡಿ ಅರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಅನುದಾನಿತ ಶಾಲೆಗಳಲ್ಲಿ ಉಚಿತವಾಗಿ ವ್ಯಾಸಂಗ ಮಾಡಲು ಪ್ರತಿ ಖಾಸಗಿ ಶಾಲೆಯಲ್ಲಿ ಶೇಕಡ 25%ರಷ್ಟು ಸೀಟುಗಳನ್ನು ಮೀಸಲಿಟ್ಟಿ ವಿದ್ಯಾಭ್ಯಾಸವನ್ನು ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ. 2017–18ನೇ ಸಾಲಿಗೆ ಒಟ್ಟು ಈ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 1607 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ರೂ 974.14 ಲಕ್ಷಗಳ ಅನುದಾನವನ್ನು ಸಂಬಂಧಿಸಿದ ಶಾಲೆಗಳಿಗೆ ಶುಲ್ಕದ ರೂಪದಲ್ಲಿ ನೀಡಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಟಾನಗೊಳಿಸಲಾಗಿದೆ.

ಕರ್ನಾಟಕ ದರ್ಶನ ಕಾರ್ಯಕ್ರಮ:

2017–18ನೇ ಸಾಲಿನಲ್ಲಿ ಅರ್ಥಿಕವಾಗಿ ಹಿಂದುಳಿದ/ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರ ವಿದ್ಯಾರ್ಥಿಗಳಿಗೆ ಕರ್ನಾಟಕದಲ್ಲಿ ಶೈಕ್ಷಣಿಕ ಸ್ಥಳಗಳನ್ನು ನೋಡಲು ಪ್ರತಿ ವಿದ್ಯಾರ್ಥಿಗೆ ರೂ 3500/–ರಂತೆ ನಿಗಧಿ ಮಾಡಿ ಸರ್ಕಾರದ ವತಿಯಿಂದ ಅನುದಾನ ಬಿಡುಗಡೆ ಮಾಡಿ ಅವಕಾಶವನ್ನು ಕಲ್ಪಿಸಲಾಗಿದೆ.

ಕ್ರ ಸಂ	ಲೆಕ್ಕಶೀರ್ಷಿಕೆ ಮತ್ತು ಕಾರ್ಯಕ್ರಮದ ಹೆಸರು	ಬಿಡುಗಡೆ ಮಾಡಿರುವ ಅನುದಾನ	ಕರ್ನಾಟಕ ದರ್ಶನ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ	ಷರಾ
01	3452–80–104–0–01–133 ಹಿಂದುಳಿದ ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಕಾರ್ಯಕ್ರಮ	15.75 ಲಕ್ಷಗಳು	450 ವಿದ್ಯಾರ್ಥಿಗಳು	ಜಿಲ್ಲೆಯಲ್ಲಿನ ಒಟ್ಟು 450 ಹಿಂದುಳಿದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಒಬ್ಬ ವಿದ್ಯಾರ್ಥಿಗೆ ರೂ 3,500/–ರ ವೆಚ್ಚದಲ್ಲಿ ಕರ್ನಾಟಕದ ಶೈಕ್ಷಣಿಕ ಸ್ಥಳಗಳಿಗೆ ವೀಕ್ಷಣೆ ಮಾಡಲು ಅವಕಾಶವನ್ನು ಕಲ್ಪಿಸಲಾಗಿತ್ತು
02	5452–01–800–0–14–422 ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಕಾರ್ಯಕ್ರಮ	13.86 ಲಕ್ಷಗಳು	396 ವಿದ್ಯಾರ್ಥಿಗಳು	ಜಿಲ್ಲೆಯಲ್ಲಿನ ಒಟ್ಟು 396 ಪರಿಶಿಷ್ಟ ಜಾತಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಒಬ್ಬ ವಿದ್ಯಾರ್ಥಿಗೆ ರೂ 3,500/–ರ ವೆಚ್ಚದಲ್ಲಿ ಕರ್ನಾಟಕದ ಶೈಕ್ಷಣಿಕ ಸ್ಥಳಗಳಿಗೆ ವೀಕ್ಷಣೆ ಮಾಡಲು ಅವಕಾಶವನ್ನು ಕಲ್ಪಿಸಲಾಗಿತ್ತು
03	3452–80–104–0–01–423 ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಕಾರ್ಯಕ್ರಮ	5.25 ಲಕ್ಷಗಳು	150 ವಿದ್ಯಾರ್ಥಿಗಳು	ಜಿಲ್ಲೆಯಲ್ಲಿನ ಒಟ್ಟು 150 ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಒಬ್ಬ ವಿದ್ಯಾರ್ಥಿಗೆ ರೂ 3,500/–ರ ವೆಚ್ಚದಲ್ಲಿ ಕರ್ನಾಟಕದ ಶೈಕ್ಷಣಿಕ ಸ್ಥಳಗಳಿಗೆ ವೀಕ್ಷಣೆ ಮಾಡಲು ಅವಕಾಶವನ್ನು ಕಲ್ಪಿಸಲಾಗಿತ್ತು

ಕರ್ನಾಟಕ ಪಬ್ಲಿಕ್ ಶಾಲೆ:–

2018–19ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ತಾಲ್ಲೂಕಿಗೆ ಒಂದರಂತೆ ನಾಲ್ಕು ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳೆಂದು ಗುರುತಿಸಲಾಗಿದೆ. ಈ ಶಾಲೆಯಲ್ಲಿ 01ನೇ ತರಗತಿಗೆ ದಾಖಲಾದ ಮಕ್ಕಳು 12ನೇ ತರಗತಿವರೆಗೂ ಅಭ್ಯಾಸ ಮಾಡಲು ಅವಕಾಶ ಕಲ್ಪಿಸಲಾಗಿದೆ. ಈ ಶಾಲೆಗಳಲ್ಲಿ ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡಿ ಗುಣಮಟ್ಟದ ಶಿಕ್ಷಣವನ್ನು ನೀಡಲು ಉದ್ದೇಶಿಸಲಾಗಿದೆ. ಶಾಲೆಗಳ ವಿವರ ಕೆಳಕಂಡಂತಿದೆ.

ಕ್ರ.ಸಂ	ತಾಲ್ಲೂಕು	ಶಾಲೆಯ ಹೆಸರು ಮತ್ತು ವಿಳಾಸ
01	ಚನ್ನಪಟ್ಟಣ	ಸರ್ಕಾರಿ ಪದವಿ ಪೂರ್ವ ಕಾಲೇಜು, ಸರ್ಕಾರಿ ಪ್ರೌಢಶಾಲೆ ಮತ್ತು ಸರ್ಕಾರಿ ಪ್ರಾಥಮಿಕ ಶಾಲೆ ಅರಳಾಳುಸಂದ್ರ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ
02	ಕನಕಪುರ	ಸರ್ಕಾರಿ ಪದವಿ ಪೂರ್ವ ಕಾಲೇಜು, ಸರ್ಕಾರಿ ಪ್ರೌಢಶಾಲೆ ಮತ್ತು ಸರ್ಕಾರಿ ಪ್ರಾಥಮಿಕ ಶಾಲೆ ದೊಡ್ಡಾಲಹಳ್ಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ
03	ಮಾಗಡಿ ಪದವಿ ಪೂರ್ವ ಕಾಲೇಜು,	ಸರ್ಕಾರಿ ಸರ್ಕಾರಿ ಪ್ರೌಢಶಾಲೆ ಮತ್ತು ಸರ್ಕಾರಿ ಪ್ರಾಥಮಿಕ ಶಾಲೆ ಕುದೂರು, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ
04	ರಾಮನಗರ	ಸರ್ಕಾರಿ ಪದವಿ ಪೂರ್ವ ಕಾಲೇಜು, ಸರ್ಕಾರಿ ಪ್ರೌಢಶಾಲೆ ಮತ್ತು ಸರ್ಕಾರಿ ಪ್ರಾಥಮಿಕ ಶಾಲೆ ಅವ್ವೇರಹಳ್ಳಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ

ವಿಶ್ವಾಸ ಕಿರಣ:–

2017–18ನೇ ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದ, ಎಸ್.ಸಿ/ಎಸ್.ಟಿ ಮತ್ತು ಇತರೆ ವರ್ಗದ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪ್ರತಿ ತಾಲ್ಲೂಕಿಗೆ 03 ಕೇಂದ್ರಗಳಂತೆ ಒಟ್ಟು 12 ಕೇಂದ್ರಗಳನ್ನು ರಚಿಸಿ ಅಕ್ಟೋಬರ್ 11, 2017 ರಿಂದ ಜನವರಿ 21, 2018 ರವರೆಗೆ (ಎಲ್ಲಾ ರಜಾದಿನಗಳಲ್ಲಿ) ಒಟ್ಟು 25 ದಿನಗಳು ನಡೆಸಲಾಗಿರುತ್ತದೆ. ಜಿಲ್ಲೆಯ ಒಟ್ಟು 2566 ಮಕ್ಕಳು ಇಂಗ್ಲಿಷ್, ಗಣಿತ ಮತ್ತು ವಿಜ್ಞಾನ ವಿಷಯಗಳ ಪರಿಹಾರ ಬೋಧನಾ ತರಗತಿಗಳಲ್ಲಿ ಭಾಗವಹಿಸಿರುತ್ತಾರೆ. ಸದರಿ ಕಾರ್ಯಕ್ರಮಕ್ಕೆ 4.45 ಲಕ್ಷ ಅನುದಾನ ಬಿಡುಯಾಗಿದ್ದು, ಬಳಸಲಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಜಿಲ್ಲಾ ಪಂಚಾಯತ್ ಕಾರ್ಯಕ್ರಮ:–

ನಿರ್ಗತಿಕ ಮಕ್ಕಳ ಕುಟೀರ:– ಲೆಕ್ಕ ಶೀರ್ಷಿಕೆ:–2211–00–102–0–26 ಯೋಜನೇತರ

ನಿರ್ಗತಿಕ ಮಕ್ಕಳ ಪಾಲನೆ, ಪೋಷಣೆ, ರಕ್ಷಣೆ ಹಾಗೂ ಪುನರ್ವಸತಿ ಹಾಗೂ ಅವರಿಗೆ ಕೌಟುಂಬಿಕ ವಾತಾವರಣ ಕಲ್ಪಿಸುವುದು, ಸಮಾಜದಲ್ಲಿ ಅವರ ಆರ್ಥಿಕ ಹಾಗೂ ಜೀವನ ಮಟ್ಟವನ್ನು ಸುಧಾರಿಸಿ, ಉತ್ತಮ ಪ್ರಜೆಗಳನ್ನಾಗಿ ರೂಪಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಸ್ವಯಂ ಸೇವಾ ಸಂಸ್ಥೆ, ಮಕ್ಕಳ ಕ್ಷೇತ್ರದಲ್ಲಿ ಕನಿಷ್ಟ ಮೂರು ವರ್ಷಗಳ ಅನುಭವ ಹೊಂದಿರುವ ನೊಂದಾಯಿತ ಸಂಸ್ಥೆಗಳು ನಿರ್ಗತಿಕ ಮಕ್ಕಳ ಪಾಲನೆ ಪೋಷಣೆಗಾಗಿ ಕುಟೀರವನ್ನು ತೆರೆಯಲು ಅರ್ಹತೆ ಪಡೆದಿರುತ್ತದೆ.

ಮಕ್ಕಳು:– ತಾಯಿ ತಂದೆ ಇಬ್ಬರೂ ಇಲ್ಲದ ಅಥವಾ ತಾಯಿ/ತಂದೆ/ಏಕಪೋಷಕತ್ವ ಹೊಂದಿದ್ದು ಮಾಸಿಕ 500/– ರೂ ಹಾಗೂ ಅದಕ್ಕು ಕಡಿಮೆ ಆದಾಯವನ್ನು ಹೊಂದಿರುವ 18 ವರ್ಷದ ಒಳಗಿನ ಮಕ್ಕಳು ಈ ಯೋಜನೆಯ ಪ್ರಯೋಜನವನ್ನು ಪಡೆಯಲು ಅರ್ಹರಿರುತ್ತಾರೆ. ಸದರಿ ಮಕ್ಕಳನ್ನು ನಿರ್ಗತಿಕರೆಂದು ದೃಡೀಕರಿಸಲು ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ರವರಿಂದ ಪ್ರಮಾಣ ಪತ್ರವನ್ನು ಒದಗಿಸಬೇಕಾಗುತ್ತದೆ. ಆದೇಶ ಸಂಖ್ಯೆ: ಮಮಇ/124/ಮಬಬ/2016 ಬೆಂಗಳೂರು ದಿ: 26–07–2016ರನ್ವಯ ಪ್ರತಿ ಮಗುವಿನ ಘಟಕ ವೆಚ್ಚ ಮಾಸಿಕ ರೂ: 400/– ರಿಂದ ರೂ: 1000/–ಗಳಿಗೆ ಹೆಚ್ಚಿಸಲಾಗಿರುತ್ತದೆ.

ರಾಮನಗರ ಜಿಲ್ಲೆಯಲ್ಲಿ ಈ ಯೋಜನೆಯಡಿಯಲ್ಲಿ ಮೂರು ಸಂಸ್ಥೆಗಳಿಂದ ಒಟ್ಟು 10 ಕುಟೀರಗಳಿಂದ 250 ಮಕ್ಕಳು ಸೌಲಭ್ಯ ಪಡೆದಿರುತ್ತಾರೆ.

ಮಾಗಡಿ ತಾಲ್ಲೂಕಿನ ಕಂಚುಗಲ್ ಬಂಡೇಮಠ ಗ್ರಾಮದ ಶ್ರೀ ಮಹಾಲಿಂಗೇಶ್ವರ ವಿಧ್ಯಾಸಂಸ್ಥೆಯು 2 ನಿರ್ಗತಿಕ ಮಕ್ಕಳ ಕುಟೀರಗಳನ್ನು 50 ನಿರ್ಗತಿಕ ಮಕ್ಕಳಿಗಾಗಿ, ಕನಕಪುರ ತಾಲ್ಲೂಕಿನ ಶ್ರೀ ಮರಳೇಗವಿ ಮಠ ಸಂಸ್ಥೆಯು 75 ಮಕ್ಕಳಿಗಾಗಿ ಮೂರು ಕುಟೀರಗಳನ್ನು ಹಾಗೂ ಶ್ರೀ ದೇಗುಲ ಮಠ ಸಂಸ್ಥೆಯು 125 ಮಕ್ಕಳಿಗಾಗಿ 5 ಕುಟೀರಗಳನ್ನು ಜಿಲ್ಲಾ ಪಂಚಾಯತ್ ಅನುದಾನದಿಂದ ನಡೆಸಲಾಗುತ್ತಿದೆ.

2017–18ನೇ ಸಾಲಿಗೆ ಒಟ್ಟು ರೂ:32.10 ಲಕ್ಷಗಳ ಅನುದಾನ ನಿಗದಿಯಾಗಿದ್ದು ಇದರಲ್ಲಿ ರೂ: 32.09ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ: 26.82 ಲಕ್ಷಗಳ ವೆಚ್ಚಭರಿಸಲಾಗಿದೆ.

ಜಿಲ್ಲಾ ಕಚೇರಿ ಕಾರ್ಯಕಾರಿ ಸಿಬ್ಬಂದಿ ಹಾಗೂ ಆಡಳಿತ ಮತ್ತು ನಿರ್ದೇಶನ: ಲೆಕ್ಕ ಶೀರ್ಷಿಕೆ:–2235–00–101–0–27 (ಯೋಜನೇತರ)

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿ ವರ್ಗದವರಾದ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳು ಸೇರಿದಂತೆ 04 ಸಿಬ್ಬಂದಿಗಳಿಗೆ ವೇತನ ಭತ್ಯೆ ಹಾಗೂ ಆಡಳಿತಾತ್ಮಕ ವೆಚ್ಚಗಳಿಗೆ 2017–18ನೇ ಸಾಲಿಗೆ ವಾರ್ಷಿಕ ರೂ: 21.76 ಲಕ್ಷಗಳ ಗುರಿ ನಿಗದಿಪಡಿಸಿದ್ದು, ರೂ: 20.70 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ: 15.46 ಲಕ್ಷಗಳ ಮೊತ್ತ ವೆಚ್ಚ ಮಾಡಲಾಗಿದೆ. ಉಪನಿರ್ದೇಶಕರು, ಮಹಿಳಾ ಮತ್ತು ಅಭಿವೃದ್ಧಿ ಅಧಿಕಾರಿ ಹಾಗೂ 3 (2 ಪ್ರದಸ.1 ವಾಹನ ಚಾಲಕ) ಸಿಬ್ಬಂದಿಗಳ ಹುದ್ದೆ ಖಾಲಿ ಇರುತ್ತದೆ.

ಜಿಲ್ಲಾ ಐಸಿಡಿಎಸ್ ಕೋಶದ ನಿರ್ವಹಣೆ:ಲೆಕ್ಕ ಶೀರ್ಷಿಕೆ:–2211–00–102–0–02 (ಯೋಜನೆ)

ಉಪನಿರ್ದೇಶಕರ ಕಚೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಈ ಕಚೇರಿಯ ನಿರೂಪಣಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರ ವೇತನ ಹಾಗೂ ಇತರೆ ಖರ್ಚುಗಳಿಗಾಗಿ ಭರಿಸಲಾಗುತ್ತಿದೆ. 2017–18ನೇ ಸಾಲಿನಲ್ಲಿ ವಾರ್ಷಿಕ ರೂ: 24.90 ಲಕ್ಷಗಳು ನಿಗದಿಗೊಳಿಸಿದ್ದು ಇದರಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಗಳ ವೇತನಾಂಶದ ಸಲುವಾಗಿ ರೂ:24.90 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ: 5.91 ಲಕ್ಷಗಳ ವೆಚ್ಚ ಭರಿಸಲಾಗಿದೆ. ಇದರಲ್ಲಿ ಜಿಲ್ಲಾ ಐಸಿಡಿಎಸ್ ಕೋಶದ ನಿರೂಪಣಾಧಿಕಾರಿಗಳ ಹುದ್ದೆ ಹಾಗೂ 3 ಪ್ರ.ದ.ಸ ಹಾಗೂ 1 ದ್ವಿ.ದ.ಸ ಹುದ್ದೆಗಳು ಖಾಲಿ ಇರುತ್ತದೆ.

ತಾಲ್ಲೂಕು ಪಂಚಾಯತ್ ಕಾರ್ಯಕ್ರಮ:–

ಸಮಗ್ರ ಶಿಶು ಅಭಿವೃದ್ಧಿ ಸೇವೆಗಳ ಯೋಜನೆ (ಐಸಿಡಿಎಸ್)
ಫಲಾನುಭವಿಗಳ ಕ್ರೂಡೀಕೃತ ವಿವರ

6 ತಿ–1 ವರ್ಷ	1–2 ವರ್ಷ	2–3 ವರ್ಷ	3–5 ವರ್ಷ	5–6 ವರ್ಷ	ಗರ್ಭಿಣಿಯರು	ಬಾಣಂತಿಯರು	ಕಿಶೋರಿಯರು	ಅಂಕಾ.ಅಂಸ	ಒಟ್ಟು	ಶೇ ಸಾಧನೆ
7672	12305	12613	17373	3548	3516	3819	3086	2746	66678	85%

ಉದ್ದೇಶಗಳು:–

- ಮಕ್ಕಳ ಪೌಷ್ಟಿಕತೆಯ ಮಟ್ಟವನ್ನುಮತ್ತು ಆರೋಗ್ಯ ಸ್ಥಿತಿಯನ್ನು ಸುಧಾರಿಸುವುದು.
- ಮಗುವಿನ ಸರ್ವತೋಮುಖ ಬೆಳವಣಿಗೆಗೆ ಬುನಾದಿ ಹಾಕುವುದು.
- ಶಿಶು ಮರಣ ದರ, ಅಪೌಷ್ಟಿಕತೆ, ಖಾಯಿಲೆ ಪ್ರಮಾಣ ಹಾಗೂ ಮಕ್ಕಳ ಶಾಲೆ ಬಿಡುವಿಕೆಯನ್ನು ಕಡಿಮೆ ಮಾಡುವುದು.
- ಮಗುವಿನ ಸರ್ವಾಂಗೀಣ ಅಭಿವೃದ್ದಿಗೆ ಇತರೆ ಇಲಾಖೆಗಳೊಂದಿಗೆ ಪರಿಣಾಮಕಾರಿಯಾದ ಬಗ್ಗೆ ಸಮನ್ವಯತೆಯನ್ನು ಸಾಧಿಸುವುದು.
- ಪೌಷ್ಟಿಕಾಂಶ ಮತ್ತು ಆರೋಗ್ಯ ಶಿಕ್ಷಣ ನೀಡುವುದರ ಮೂಲಕ ಮಕ್ಕಳ ಆರೋಗ್ಯ ಹೆಚ್ಚಿಸಲು ತಾಯಂದಿರ ಸಾಮರ್ಥ್ಯ ಹೆಚ್ಚಿಸುವುದು.

ಸೇವೆಗಳು:–

- ಗರ್ಭಿಣಿ ಮತ್ತು ಬಾಣಂತಿಯರಿಗೆ ಪೂರಕ ಪೌಷ್ಟಿಕ ಆಹಾರ ನೀಡುವುದು.
- 3 ರಿಂದ 6 ವರ್ಷದ ಮಕ್ಕಳಿಗೆ ಶಾಲಾ ಪೂರ್ವ ಶಿಕ್ಷಣ ನೀಡುವುದು.
- ಮಕ್ಕಳಿಗೆ ಹಾಗೂ ತಾಯಂದಿರಿಗೆ ರೋಗ ನಿರೋದಕ ಚುಚ್ಚುಮದ್ದು.
- ಆರೋಗ್ಯ ತಪಾಸಣೆ.
- ಸಲಹಾ ಸೇವೆಗಳು
- ಮಹಿಳೆಯರಿಗೆ ಆರೋಗ್ಯ ಮತ್ತು ಪೌಷ್ಟಿಕ ಆಹಾರ ಶಿಕ್ಷಣ ನೀಡುವುದು.

ಐಸಿಡಿಎಸ್ ಯೋಜನೆಯನ್ನು ಜಿಲ್ಲೆಯ 5 ಶಿಶು ಅಭಿವೃದ್ದಿ ಯೋಜನೆಗಳಲ್ಲಿ ಸ್ಥಾಪಿಸಿರುವ 1301 ಮುಖ್ಯ ಅಂಗನವಾಡಿ ಕೇಂದ್ರಗಳು, 242 ಮಿನಿ ಅಂಗನವಾಡಿ ಕೇಂದ್ರಗಳ ಮೂಲಕ ಒಟ್ಟು 1543 ಅಂಗನವಾಡಿ ಕೇಂದ್ರಗಳನ್ನು ಅನುಷ್ಟಾನಗೊಳಿಸಲಾಗುತ್ತಿದೆ. ತಾಲ್ಲೂಕು ಪಂಚಾಯತ್ ಕಾರ್ಯಕ್ರಮದ ಈ ಯೋಜನೆಯಡಿ ಪೌಷ್ಟಿಕ ಆಹಾರ ವಿತರಣೆಗೆ, ಆಡಳಿತ ವೆಚ್ಚ, ಅಂಗನವಾಡಿ ಕಟ್ಟಡಗಳ ನಿರ್ಮಾಣಗಳಿಗೆ ತಾಲ್ಲೂಕು ಪಂಚಾಯತ್ ಮೂಲಕ ಅನುದಾನ ಬಿಡುಗಡೆಯಾಗುತ್ತದೆ.

1. ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮ:–2235–00–101–0–61

ಸಮಗ್ರ ಬಾಲವಿಕಾಸ ಯೋಜನೆಯಡಿ ನಡೆಸಲಾಗುತ್ತಿರುವ ಈ ಕಾರ್ಯಕ್ರಮದ ಪೂರ್ಣ ವೆಚ್ಚದ ಅರ್ಧಭಾಗವನ್ನು ಕೇಂದ್ರ ಸರ್ಕಾರವು ಭರಿಸುತ್ತದೆ. 6 ವರ್ಷದೊಳಪಟ್ಟ ಮಕ್ಕಳು, ಗರ್ಭಿಣಿ, ಬಾಣಂತಿಯರಿಗೆ ಪೂರಕ ಪೌಷ್ಟಿಕ ಆಹಾರ ಮಟ್ಟವನ್ನು ಸುಧಾರಿಸುದು ಹಾಗೂ ಈ ವರ್ಗಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಅಪೌಷ್ಟಿಕತೆಯನ್ನು ಹೋಗಲಾಡಿಸುವುದು. ವಾರದ 6 ದಿನಗಳಲ್ಲಿ:–

6 ತಿಂಗಳಿಂದ 3 ವರ್ಷದ ಮಕ್ಕಳಿಗೆ ಪ್ರತಿ ದಿನ ರೂ:–6.00 ಮೌಲ್ಯದ ಆಹಾರ ನೀಡುವುದು ತಿಂಗಳಲ್ಲಿ 13 ದಿನ ಗೋಧಿ , ಹೆಸರುಬೇಳೆ, ಬೆಲ್ಲ/ಸಕ್ಕರೆ, ಕಡಲೆಬೇಳೆ ಮಿಶ್ರಣ ಹಾಗೂ 12 ದಿನ ಅಕ್ಕಿ ಖೀರು,(ಅಕ್ಕಿ, ಹೆಸರುಬೇಳೆ, ಬೆಲ್ಲ/ಸಕ್ಕರೆ) ಮಿಶ್ರಣವನ್ನು ಪುಡಿಯ ರೂಪದಲ್ಲಿ ವಿತರಿಸಿ ಮನೆಗೆ ತೆಗೆದುಕೊಂಡು ಹೋಗಲು ವಿತರಿಸಲಾಗುತ್ತಿದೆ.

3 ವರ್ಷದಿಂದ 6 ವರ್ಷದ ಮಕ್ಕಳಿಗೆ ಪ್ರತಿ ದಿನ ಘಟಕ ವೆಚ್ಚ ರೂ: 6/– ಮೌಲ್ಯದ ಆಹಾರ ನೀಡುವುದು, ವಾರಕ್ಕೆ 2 ಬಾರಿ ಬೆಳಿಗ್ಗೆ ಕಡಲೆ ಬೀಜ, ಬೆಲ್ಲದ ಬಿಕ್ಕಿ, ಮೊಳಕೆಭರಿಸಿದ ಹೆಸರುಕಾಳು ಹಾಗೂ ಮಧ್ಯಾಹ್ನ ವಾರದಲ್ಲಿ 3 ಭಾರಿ ಚಿತ್ರಾನ್ನ ಹಾಗೂ ಸಿಹಿಪೊಂಗಲ್ ಅನ್ನು ಅಂಗನವಾಡಿ ಕೇಂದ್ರಗಳಲ್ಲಿ ತಯಾರಿಸಿ ನೀಡಲಾಗುತ್ತಿದೆ. ಗರ್ಬಿಣಿ, ಬಾಣಂತಿ, ಕಿಶೋರಿಯರಿಗೆ, ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರಿಗೆ ಪ್ರತಿ ದಿನ 5.75 ರೂ ಮೌಲ್ಯದ ಆಹಾರ ನೀಡುವುದು, ವಾರದಲ್ಲಿ 3 ಬಾರಿ ಗೋಧಿ ಮತ್ತು ಹೆಸರುಕಾಳು ಹಾಗೂ 3 ಬಾರಿ ಅಕ್ಕಿ ಮತ್ತು ಹೆಸರುಕಾಳು ವಿತರಿಸಿ ಮನೆಗೆ ತೆಗೆದುಕೊಂಡ ಹೋಗಲು ನೀಡಲಾಗುತ್ತಿದೆ. ಅಕ್ಕಿ ಕೊರತೆ ಇದ್ದಾಗ ವಾರದಲ್ಲಿ 6 ದಿನಗಳು ಸಹ ಗೋದಿ ಮತ್ತು ಹೆಸರುಕಾಳು ವಿತರಿಸಲಾಗುತ್ತಿದೆ.

2017–18ನೇ ಸಾಲಿಗೆ ಕಾರ್ಯಕ್ರಮದಡಿ ವಾರ್ಷಿಕ ಗುರಿ ರೂ: 1891.20 ಲಕ್ಷ ನಿಗಧಿಪಡಿಸಿದ್ದು ರೂ: 1796.02 ಲಕ್ಷ ಬಿಡುಗಡೆಯಾಗಿದ್ದು ರೂ: 1752.95 ಲಕ್ಷಗಳ ವೆಚ್ಚ ಭರಿಸಿ ಶೇ 97% ರಷ್ಟು ಗುರಿ ಸಾಧಿಸಲಾಗಿದೆ.

2. ಆಡಳಿತ ವೆಚ್ಚ:–ಲೆಕ್ಕ ಶೀರ್ಷಿಕೆ:–2211–00–102–0–22 (ಯೋಜನೆ)

ಸಮಗ್ರ ಶಿಶು ಅಭಿವೃದ್ದಿ ಯೋಜನೆಯಡಿ ತಾಲ್ಲೂಕು ಮಟ್ಟದ ಶಿಶು ಅಭಿವೃದ್ದಿ ಯೋಜನಾಧಿಕಾರಿಗಳ ಕಚೇರಿಯ ಅಧಿಕಾರಿ ಸಿಬ್ಬಂದಿ ವರ್ಗದವರಿಗೆ, ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ಗೌರವಧನ ಹಾಗೂ ಕಚೇರಿ ಸಾದಿಲ್ವಾರು ವೆಚ್ಚವನ್ನು ಇದರಡಿಯಲ್ಲಿ ಭರಿಸಲಾಗುತ್ತಿದೆ. ಈ ಕಾರ್ಯಕ್ರಮವು ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ. 2017–18ನೇ ಸಾಲಿನಲ್ಲಿ ರೂ:–2170.35ಲಕ್ಷಗಳ ವಾರ್ಷಿಕ ಗುರಿ ನಿಗಧಿಯಾಗಿದ್ದು ಹೆಚ್ಚುವರಿ ಬಿಡುಗಡೆ ಅನುದಾನ ರೂ: 68.05 ಲಕ್ಷಗಳ ಒಳಗೊಂಡಂತೆ ಒಟ್ಟು ರೂ: 2238.40 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಈ ಪೈಕಿ ರೂ: 2129.92 ಲಕ್ಷ ವೆಚ್ಚವಾಗಿದ್ದು ಶೇ 95% ರಷ್ಟು ಪ್ರಗತಿ ಸಾಧಿಲಾಗಿದೆ.

3. ಅಂಗನವಾಡಿ ಕಟ್ಟಡ ನಿರ್ವಹಣೆ:– ಲೆಕ್ಕ ಶೀರ್ಷಿಕೆ:–2211–00–102–0–61 (ಯೋಜನೆ)

ಅಂಗನವಾಡಿ ಕೇಂದ್ರಗಳಿಗೆ ಬರುವ ಮಕ್ಕಳಿಗೆ ಶಾಲಾಪೂರ್ವ ಶಿಕ್ಷಣ ನಡೆಸಲು, ಮಕ್ಕಳಿಗೆ ಸುರಕ್ಷತೆ ಒದಗಿಸಲು ಹಾಗೂ ಮಳೆ ಗಾಳಿ ಬಿಸಿಲಿನಿಂದ ರಕ್ಷಣೆ ನೀಡಲು ಅಂಗನವಾಡಿ ಕಟ್ಟಡದ ಅವಶ್ಯಕತೆ ಇದೆ ಅಲ್ಲದೆ ಕೇಂದ್ರಗಳಿಗೆ ವಿತರಿಸುವ ಆಹಾರ ಸಾಮಾಗ್ರಿಗಳನ್ನು ಸುಭದ್ರವಾಗಿ ಶೇಖರಿಸಲು ಕಟ್ಟಡದ ಅವಶ್ಯಕತೆ ಇದೆ.

ಇದು ತಾಲ್ಲೂಕು ಪಂಚಾಯತ್ ಕಾರ್ಯಕ್ರಮವಾಗಿದ್ದು ಜಿಲ್ಲೆಯಲ್ಲಿ 1301 ಅಂಗನವಾಡಿ ಕೇಂದ್ರಗಳು 242 ಮಿನಿ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ಮಾರ್ಚ್–2018ರ ಅಂತ್ಯಕ್ಕೆ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಡಿ 17 ಗ್ರಾಮಗಳಲ್ಲಿ ಅಂಗನವಾಡಿ ಕಟ್ಟಡ ನಿರ್ಮಿಸಲಾಗಿದೆ. ಜಿಲ್ಲಾ ಪಂಚಾಯತ್ ವತಿಯಿಂದ ರೂ:50.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಇದರಲ್ಲಿ ರೂ:43.39 ಲಕ್ಷಗಳನ್ನು ತಾಲ್ಲೂಕು ಪಂಚಾಯತ್ ಮೂಲಕ ವೆಚ್ಚ ಮಾಡಲಾಗಿದೆ.

ಶಿಶುಪಾಲನಾ ಕೇಂದ್ರಗಳು:–ಲೆಕ್ಕ ಶೀರ್ಷಿಕೆ:–2211–00–102–0–63 (ಯೋಜನೇತರ)

ಇದು ತಾಲ್ಲೂಕು ಪಂಚಾಯತ್ ಕಾರ್ಯಕ್ರಮವಾಗಿದ್ದು ಸದರಿ ಸ್ವಯಂ ಸೇವಾ ಸಂಸ್ಥೆಗಳನ್ನು ಸ್ಥಳೀಯ ಅಂಗನವಾಡಿ ಕೇಂದ್ರಗಳೊಂದಿಗೆ ವಿಲೀನಗೊಳಿಸಿರುವುದರಿಂದ ರಾಮನಗರ ಜಿಲ್ಲೆಯಲ್ಲಿ 2014–15ನೇ ಸಾಲಿನಿಂದ ಯಾವುದೇ ಶಿಶು ಪಾಲನಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ. 2017–18ನೇ ಸಾಲಿಗೆ ರೂ: 2.14 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಖಜಾನೆಯಿಂದ ಸೆಳೆದಿರುವುದಿಲ್ಲ.

ಅ. ಕಿಶೋರಿ ಶಕ್ತಿ ಯೋಜನೆ :–

ಬಡತನ ರೇಖೆಗಿಂತ ಕೆಳಗಿರುವ ಶಾಲೆ ಬಿಟ್ಟ, ಪೌಷ್ಟಿಕ ಆಹಾರ ಕೊರತೆಯಿಂದ ಮತ್ತು ಅನಾರೋಗ್ಯದಿಂದ ಬಳಲುತ್ತಿರುವ 11 ರಿಂದ 18 ವರ್ಷದ ಪ್ರಾಯ ಪೂರ್ವ ಬಾಲಕಿಯರನ್ನು ಪ್ರತಿ ಅಂಗನವಾಡಿ ಕೇಂದ್ರಕ್ಕೆ ಇಬ್ಬರಂತೆ ಆಯ್ಕೆ ಮಾಡಿ ಮತ್ತು ಪೂರಕ ಪೌಷ್ಟಿಕ ಆಹಾರ ಮತ್ತು ಆರೋಗ್ಯ ಶಿಕ್ಷಣವನ್ನು ನೀಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಈ ಯೋಜನೆಯಡಿ 2017–18ನೇ ಸಾಲಿಗೆ ರೂ: 3.58 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ: 3.53 ಲಕ್ಷಗಳ ಅನುದಾನ ವೆಚ್ಚ ಭರಿಸಲಾಗಿದೆ.

ರಾಜ್ಯ ವಲಯ ಕಾರ್ಯಕ್ರಮಗಳು :–

ಅ. ಸಾಂತ್ವನ ಯೋಜನೆ :–

ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರ, ಲೈಂಗಿಕ ಕಿರುಕುಳ ಮತ್ತು ವರದಕ್ಷಿಣೆ ಕಿರುಕುಳಗಳಿಗೆ ಸಿಲುಕಿರುವ ಮಹಿಳೆಯರಿಗೆ ಈ ಯೋಜನೆಯಡಿ ರಕ್ಷಣೆ ನೆರವು ನೀಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಜಿಲ್ಲೆಯಲ್ಲಿ ನಾಲ್ಕು ಮಹಿಳಾ ಸಾಂತ್ವನಾ ಕೇಂದ್ರಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. 2017–18ನೇ ಸಾಲಿನಲ್ಲಿ ರೂ: 16.80 ಲಕ್ಷಗಳ ಬಿಡುಗಡೆಯಾಗಿದ್ದು, ಇದರಲ್ಲಿ ರೂ: 16.80 ಲಕ್ಷಗಳ ವೆಚ್ಚ ಭರಿಸಲಾಗಿದೆ.

ಆ. ಸ್ವಾಧಾರ ಯೋಜನೆ (ಕೇಂದ್ರ ಯೋಜನೆ) :–

ಈ ಯೋಜನೆಯಡಿಯಲ್ಲಿ ವಿಧವೆಯರಿಗೆ, ನಿರ್ಗತಿಕ ಹೆಣ್ಣು ಮಕ್ಕಳಿಗೆ ಶಿಕ್ಷೆಗೆ ಒಳಗಾದ ಮಹಿಳೆಯರಿಗೆ, ಅಲೆಮಾರಿ ಮಹಿಳೆಯರಿಗೆ, ಪರಿತ್ಯಕ್ತತೆಯರಿಗೆ ತಾತ್ಕಾಲಿಕ ವಸತಿ, ವೃತ್ತಿ ಪರ ತರಬೇತಿ ನೀಡಿ ಸ್ವಾವಲಾಂಭಿಗಳಾಗಲು ಸಹಾಯ ಮಾಡುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿರುತ್ತದೆ. ಇದಕ್ಕಾಗಿ ಸ್ವಯಂ ಸೇವಾ ಸಂಸ್ಥೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. 2017–18ನೇ ಸಾಲಿಗೆ ರೂ: 9.27 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಸಂಪೂರ್ಣ ವೆಚ್ಚ ಮಾಡಲಾಗಿದೆ.

ಇ. ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ :–

ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ–2005 ನಿಯಮ–2006ರ ಅನುಷ್ಠಾನದ ಸಂಬಂಧ ಮಹಿಳೆಯರಿಗೆ ಕುಟುಂಬದಲ್ಲಿ ನಡೆಯುವ ಮಾನಸಿಕ ಹಾಗೂ ದೈಹಿಕ ದೌರ್ಜನ್ಯಗಳಿಂದ ರಕ್ಷಣೆ ನೀಡಲು ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಸಂಬಂಧ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಸಂರಕ್ಷಣಾಧಿಕಾರಿಗಳಿಂದ ರಕ್ಷಣೆ ಹಾಗೂ ಕಾನೂನು ಸಲಹೆ ಪಡೆಯಬಹುದಾಗಿದೆ. 2017–18ನೇ ಸಾಲಿಗೆ ಈ ಯೋಜನೆಯಲ್ಲಿ ಜಿಲ್ಲೆಗೆ ರೂ: 8.70 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ರೂ: 8.03 ಲಕ್ಷಗಳ ವೆಚ್ಚ ಭರಿಸಲಾಗಿದೆ.

ಈ. ಸ್ತ್ರೀ ಶಕ್ತಿ ಯೋಜನೆ :–

ಮಹಿಳೆಯರಲ್ಲಿ ಸ್ವಾವಲಂಭನೆ, ಆರ್ಥಿಕ ಸಬಲೀಕರಣ ಹೆಚ್ಚಿಸಿ ಆತ್ಮ ವಿಶ್ವಾಸವನ್ನು ಉಂಟು ಮಾಡುವ ಉದ್ದೇಶದಿಂದ ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಲಾಗಿರುತ್ತದೆ. ಸ್ತ್ರೀಶಕ್ತಿ ಗುಂಪುಗಳಲ್ಲಿ 18 ವರ್ಷ ಮೇಲ್ಪಟ್ಟ 15 ರಿಂದ 20 ಜನ ಸದಸ್ಯರಿರುತ್ತಾರೆ. ಜಿಲ್ಲೆಯಲ್ಲಿ ಒಟ್ಟು 5052 ಗುಂಪುಗಳ ರಚನೆಯಾಗಿದ್ದು, 85326 ಸದಸ್ಯರಿರುತ್ತಾರೆ. ಈ ಸಂಘಗಳ ಮೂಲಕ ರೂ: 399.90 ಲಕ್ಷಗಳ

ಉಳಿತಾಯವನ್ನು ಮಾಡಲಾಗಿರುತ್ತದೆ. 2017–18ನೇ ಸಾಲಿಗೆ ರಾಮನಗರ ಜಿಲ್ಲೆಗೆ ಒಟ್ಟು ರೂ:–2.18 ಕೋಟಿಗಳ ಅನುದಾನ ಬಿಡುಗಡೆಯಾಗಿದ್ದು, ರೂ:–2.16 ಕೋಟಿಗಳ ಅನುದಾನವನ್ನು ವೆಚ್ಚ ಮಾಡಲಾಗಿದೆ.

ಊ. ಭಾಗ್ಯಲಕ್ಷ್ಮಿ ಯೋಜನೆ:–

2011ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಹೆಣ್ಣು ಮಕ್ಕಳ ಲಿಂಗಾನುಪಾತವು ಗಂಡು ಮಕ್ಕಳಿಗಿಂತ ಅಧಿಕವಾಗಿರುತ್ತದೆ. ಸಮಾಜದಲ್ಲಿ ಹೆಚ್ಚಾಗಿ ಗಂಡು ಮಗುವಿನ ಜನನಕ್ಕೆ ಹೆಚ್ಚಿನ ಪ್ರಶಸ್ತ್ಯ ನೀಡುತ್ತಿರುವುದು ಕಂಡುಬರುತ್ತಿದ್ದು, ಇದಕ್ಕೆ ಹಲವಾರು ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳಿರುತ್ತವೆ. ಇದರಿಂದ ಹೆಣ್ಣು ಮಗುವಿಗೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಪೌಷ್ಟಿಕ ಆಹಾರ, ಆರೋಗ್ಯ ರಕ್ಷಣೆ, ಶಿಕ್ಷಣದಂತಹ ಸೌಲಭ್ಯಗಳನ್ನು ಪಡೆಯುವುದರ ಮೇಲೆ ಹಾಗೂ ಒಟ್ಟಾರೆ ಅಭಿವೃದ್ಧಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ.

ಈ ಎಲ್ಲಾ ಕಾರಣಗಳಿಂದ ಸಮುದಾಯದಲ್ಲಿ ಹೆಣ್ಣು ಮಗುವಿನ ಸ್ಥಾನಮಾನ ಹೆಚ್ಚಿಸುವ ಹಾಗೂ ಲಿಂಗಾನುಪಾತವನ್ನು ಸರಿದೂಗಿಸಲು ಹೆಣ್ಣು ಮಗುವಿನ ಆರೋಗ್ಯ, ಶಿಕ್ಷಣ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗುವಂತೆ ಹಾಗೂ ಬಡತನ ರೇಖೆಗಿಂತ ಕೆಳಗಿನ ಕುಟುಂಬದವರಿಗೆ ನೈತಿಕ ಸ್ಥೈರ್ಯ ತುಂಬಲು ಭಾಗ್ಯಲಕ್ಷ್ಮೀ ಕಾರ್ಯಕ್ರಮವನ್ನು ರಾಜ್ಯದಲ್ಲಿ ಪ್ರಾರಂಭಿಸಲಾಗಿರುತ್ತದೆ.

ಈ ಯೋಜನೆಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಜನಿಸಿದ ಮೊದಲ ಹಾಗೂ ಎರಡನೇ ಹೆಣ್ಣು ಮಗುವಿಗೆ ಅನುಕೂಲವಾಗುವಂತೆ 2006–07ನೇ ಸಾಲಿನಿಂದ ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಈ ಸಂಬಂಧ 2017–18ನೇ ಸಾಲಿನಲ್ಲಿ ಜಿಲ್ಲೆಯಲ್ಲಿ 2520 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ.

ಋ. ಕರ್ನಾಟಕ ಮಹಿಳಾ ಅಭಿವೃದ್ಧಿ ನಿಗಮ :–

ಮಹಿಳೆಯರು ಆಧಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿ ಸ್ವಯಂ ಉದ್ಯೋಗಿಗಳಾಗಲು ಸಾಲ ಮತ್ತು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಸಹಾಯಧನ ನೀಡುವ ಮೂಲಕ ಉತ್ತೇಜನ ನೀಡುವುದು ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. 2017–18ನೇ ಸಾಲಿನಲ್ಲಿ ಭೌತಿಕ ಗುರಿ 49 ಆಗಿದ್ದು ಆರ್ಥಿಕ ಗುರಿ 21.18 ನಿಗದಿಪಡಿಸಲಾಗಿತ್ತು. ಈ ಸಾಲಿನಲ್ಲಿ 71 ಫಲಾನುಭವಿಗಳಿಗೆ 17.90 ಲಕ್ಷಗಳ ಸಹಾಯಧನವನ್ನು ಬಿಡುಗಡೆಗೊಳಿಸಲಾಗಿದೆ.

ಕಿರುಸಾಲ ಯೋಜನೆಯಡಿ 098 ಗುಂಪುಗಳಿಗೆ ರೂ: 16.00 ಲಕ್ಷಗಳ ಸಾಲ ನೀಡಲಾಗಿದೆ. ಜಿಲ್ಲೆಯಲ್ಲಿ 20 ಲೈಂಗಿಕ ಅಲ್ಪ ಸಂಖ್ಯಾತರಿಗೆ ರೂ: 10.00 ಲಕ್ಷಗಳ ಸಹಾಯಧನ ನೀಡಲಾಗಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

2017–18ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾದ ಕಾರ್ಯಕ್ರಮಗಳ ವಿವರಗಳು

1. 2205–00–104–0–26 :– ಕ್ರೀಡಾಕೂಟ ಮತ್ತು ರ್ಯಾಲಿಗಳಸಂಘಟನೆ ಹಾಗೂ ಅದರಲ್ಲಿ ಭಾಗವಹಿಸುವವರಿಗೆ ಪ್ರಯಾಣ ಭತ್ಯೆ, ದಿನಭತ್ಯೆ ಯೋಜನೆ ಅಡಿಯಲ್ಲಿ 2017–18ನೇ ಸಾಲಿಗೆ ರೂ. 18.00 ಲಕ್ಷ ಅನುದಾನ ನಿಗಧಿಪಡಿಸಿ ಬಿಡುಗಡೆ ಮಾಡಲಾಗಿದ್ದು, ಸದರಿ ಅನುದಾನದಲ್ಲಿ ಜಿಲ್ಲೆಯ 04 ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದಿಂದ ರಾಜ್ಯ ಮಟ್ಟದವರೆಗೆ ದಸರಾ ಕ್ರೀಡಾಕೂಟ, ಯುವಜನೋತ್ಸವ, ಯುವಜನ ಮೇಳಗಳ ಸಂಘಟನೆ, ರಾಜ್ಯ ಮಟ್ಟದ ಕ್ರೀಡಾಕೂಟ ಗುಂಪು–01 ರಿಂದ ಗುಂಪು–04 ಮತ್ತು ರಾಜ್ಯ ಮಟ್ಟದ ಮಹಿಳಾ ಕ್ರೀಡಾಕೂಟ, ಗುಂಪು–01 ಮತ್ತು ಗುಂಪು–02 ರಲ್ಲಿ ಭಾಗವಹಿಸಿದ ಜಿಲ್ಲಾ ತಂಡದ ಕ್ರೀಡಾಪಟುಗಳಿಗೆ ಮತ್ತು ಯುವಕ/ಯುವತಿಯರಿಗೆ ಪ್ರಯಾಣಭತ್ಯೆ ಮತ್ತು ದಿನಭತ್ಯೆಗಾಗಿ ವೆಚ್ಚ ಭರಿಸಲಾಗಿದೆ.

2. 2205–00–104–0–28 :– ಕ್ರೀಡಾಂಗಣ ಮತ್ತು ಇತರೆ ನಿರ್ಮಾಣ ಮತ್ತು ನಿರ್ವಹಣೆ ಯೋಜನೆ ಅಡಿಯಲ್ಲಿ ರೂ 33.00 ಲಕ್ಷಗಳ ಅನುದಾನ ನಿಗಧಿಪಡಿಸಿ ಬಿಡುಗಡೆಯಾಗಿದ್ದು, ಕ್ರೀಡಾಂಗಣಗಳ ಭದ್ರತಾ ಸಿಬ್ಬಂಧಿಯ ವೇತನ ಮತ್ತು ಗುರುತುಗಾರರ ವೇತನ, ಕಛೇರಿಯ ಸ್ವಚ್ಚತಾಗಾರರ ವೇತನ ಮತ್ತು ಕಛೇರಿಯ ದೂರವಾಣಿ ವೆಚ್ಚ, ಮಲ್ಟಿಜಿಮ್ ವಿದ್ಯುತ್‌ವೆಚ್ಚ ಕ್ರೀಡಾಂಗಣದ ವಿದ್ಯುತ್‌ವೆಚ್ಚ ಹಾಗೂ ಕ್ರೀಡಾಂಗಣದ ನಿರ್ವಹಣೆಗಾಗಿ ವೆಚ್ಚ ಭರಿಸಲಾಗಿದೆ.

3. 2205–00–104–0–29 :– ಕ್ರೀಡಾ ಶಾಲೆ ಯೋಜನೆ ಅಡಿಯಲ್ಲಿ ರೂ 15.00 ಲಕ್ಷಗಳ ಅನುದಾನ ನಿಗಧಿಪಡಿಸಿ ಬಿಡುಗಡೆ ಮಾಡಲಾಗಿದ್ದು, ಈ ಅನುದಾನದಲ್ಲಿ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳ ಸಮವಸ್ತ್ರ, ಷೂ ಭದ್ರತಾ ಸಿಬ್ಬಂಧಿಯವರ ವೇತನ, ವಿದ್ಯುತ್‌ಚ್ಚಕ್ತಿ ಬಿಲ್ಲು, ದೂರವಾಣಿ ವೆಚ್ಚ, ಹಾಗೂ ಕ್ರೀಡಾಪಟುಗಳ ವೈದ್ಯಕೀಯ ವೆಚ್ಚ ಮತ್ತು ಕ್ರೀಡಾ ವಸತಿ ಶಾಲೆಯ ನಿರ್ವಹಣೆಗಾಗಿ ವೆಚ್ಚ ಭರಿಸಲಾಗಿದೆ.

4. 2204–00–104–0–30 :– ಕಷ್ಟಪರಿಸ್ಥಿತಿಯಲ್ಲಿರುವ ಕ್ರೀಡಾಪಟುಗಳು ಮತ್ತು ಕುಸ್ತಿದಾರರಿಗೆ ಮಾಸಾಶನ ಯೋಜನೆ ಅಡಿಯಲ್ಲಿ ರೂ 3.06 ಲಕ್ಷಗಳ ಅನುದಾನ ನಿಗಧಿಪಡಿಸಿ ಬಿಡುಗಡೆ ಮಾಡಲಾಗಿದ್ದು, ಈ ಅನುದಾನದಲ್ಲಿ ಮಾಗಡಿ ತಾಲ್ಲೂಕಿನ ನಾಲ್ಕು ಕುಸ್ತಿಪಟುಗಳು, ರಾಮನಗರ ತಾಲ್ಲೂಕಿನ ಒಬ್ಬ ಕ್ರೀಡಾಪಟು ಮತ್ತು ಕನಕಪುರ ತಾಲ್ಲೂಕಿನ ಒಬ್ಬ ಕುಸ್ತಿ ಪಟ್ಟು ಒಟ್ಟು ಆರು ಕುಸ್ತಿಪಟು/ಕ್ರೀಡಾಪಟುಗಳಿಗೆ ಮಾಶಾಸನ ನೀಡಲು ಒಟ್ಟು ರೂ 1.14 ಲಕ್ಷಗಳ ವೆಚ್ಚ ಭರಿಸಲಾಗಿದೆ.

5. 2205–00–104–0–31:– ಗ್ರಾಮೀಣ ಕ್ರೀಡಾ ಕೇಂದ್ರಗಳು ಯೋಜನೆ ಅಡಿಯಲ್ಲಿ ರೂ. 3.00 ಲಕ್ಷ ಅನುದಾನ ನಿಗಧಿಪಡಿಸಿ ಬಿಡುಗಡೆ ಮಾಡಿದೆ. ಜಿಲ್ಲೆಯ 04 ತಾಲ್ಲೂಕುಗಳಲ್ಲಿ ಈ ಕೆಳಕಂಡಂತೆ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಆಯ್ಕೆ ಮಾಡಿಕೊಂಡು ಸದರಿ ಶಾಲೆಯಲ್ಲಿ ಆಟದ ಮೈದಾನ ಅಭಿವೃದ್ಧಿ ಪಡಿಸಲು ಅಥವಾ ಶಾಲೆಗಳಿಗೆ ಕ್ರೀಡಾ ಸಾಮಗ್ರಿಗಳನ್ನು ಖರೀಧಿಸಲು ತಲಾ ರೂ. 25,000–00 ಗಳಂತೆ ವಿತರಿಸಲಾಗಿರುತ್ತದೆ. ಹಾಗೂ ರೂ. 1.00 ಲಕ್ಷಗಳಿಗೆ ಜಿಲ್ಲಾ ಮಟ್ಟದ ಶಿಲಾರೋಹಣ ತರಬೇತಿ ಶಿಬಿರವನ್ನು ಜನರಲ್ ತಿಮ್ಮಯ್ಯ ಸಾಹಸ ಅಕಾಡೆಮಿ, ಬಸವನಪುರದಲ್ಲಿ ಸಂಘಟಿಸಲಾಗಿದೆ.

ಕ್ರ.ಸ	ತಾಲ್ಲೂಕು	ಶಾಲೆಯ ಹೆಸರು	ಮೊತ್ತ
01	ರಾಮನಗರ ತಾಲ್ಲೂಕಿನಲ್ಲಿ 2	ಸರ್ಕಾರಿ ಪ್ರಾಥಮಿಕ ಶಾಲೆ, ಶ್ಯಾನಮಂಗಲ	25,000–00
02	ಗ್ರಾಮೀಣ ಕ್ರೀಡಾ ಕೇಂದ್ರಗಳು	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಪಾದರಹಳ್ಳಿ.	25,000–00
03	ಚನ್ನಪಟ್ಟಣ ತಾಲ್ಲೂಕಿನಲ್ಲಿ 2	ಸರ್ಕಾರಿ ಪ್ರೌಢಶಾಲೆ, ಜೆ.ಬ್ಯಾಡರಹಳ್ಳಿ	25,000–00
04	ಗ್ರಾಮೀಣ ಕ್ರೀಡಾ ಕೇಂದ್ರಗಳು	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತಗಚಗೆರೆ.	25,000–00
05	ಮಾಗಡಿ ತಾಲ್ಲೂಕಿನಲ್ಲಿ	ಸರ್ಕಾರಿ ಪ್ರಾಥಮಿಕ ಪಾಠಶಾಲೆ, ಕರಲಮಂಗಲ	25,000–00
06	2 ಗ್ರಾಮೀಣ ಕ್ರೀಡಾ ಕೇಂದ್ರಗಳು	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸೋಲೂರು.	25,000–00
07	ಕನಕಪುರ ತಾಲ್ಲೂಕಿನಲ್ಲಿ 2	ಸರ್ಕಾರಿ ಪ್ರೌಢಶಾಲೆ, ತುಂಗಣಿ	25,000–00
08	ಗ್ರಾಮೀಣ ಕ್ರೀಡಾ ಕೇಂದ್ರಗಳು	ಸರ್ಕಾರಿ ಪ್ರೌಢಶಾಲೆ, ಹೊನ್ನಿಗಾನಹಳ್ಳಿ.	25,000–00
		ಒಟ್ಟು	**2,00,000–00**

6. **2204–00–104–0–32 :–** ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥೇತರರಿಗೆ ಸಹಾಯ ಅಡಿಯಲ್ಲಿ ರೂ 2.14 ಲಕ್ಷಗಳ ಅನುದಾನ ನಿಗಧಿಪಡಿಸಿ ಬಿಡುಗಡೆ ಮಾಡಲಾಗಿದ್ದು, ಈ ಅನುದಾನದಲ್ಲಿ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದ ಸಂಘಟನೆಗೆ ಒಟ್ಟು ರೂ 1.00 ಲಕ್ಷಗಳ ವೆಚ್ಚ ಭರಿಸಲಾಗಿದೆ. ಮತ್ತು ಜಿಲ್ಲಾ ಮಟ್ಟದ ಬೇಸಿಗೆ ತರಬೇತಿ ಶಿಬಿರ ಸಂಘಟಿಸಲು ರೂ. 1.14 ಲಕ್ಷಗಳ ಗಳ ವೆಚ್ಚ ಭರಿಸಲಾಗಿದೆ.

7. **2205–00–104–0–33 :–** ಕ್ರೀಡಾ ಸಾಮಾಗ್ರಿಗಳನ್ನು ಕೊಳ್ಳಲು ಮತ್ತು ಆಟದ ಮೈದಾನಗಳನ್ನು ಅಭಿವೃದ್ಧಿಪಡಿಸಲು ಶೈಕ್ಷಣಿಕ ಮತ್ತು ಇತರೇ ಸಂಸ್ಥೆಗಳ ಸಹಾಯ ಯೋಜನೇತರ ಅಡಿಯಲ್ಲಿ ರೂ 2.14 ಲಕ್ಷ ಅನುದಾನ ನಿಗಧಿಪಡಿಸಿ ಬಿಡುಗಡೆ ಮಾಡಿದೆ. ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಈ ಕೆಳಕಂಡಂತೆ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ಆಯ್ಕೆ ಮಾಡಿಕೊಂಡು ಸದರಿ ಶಾಲೆಯಲ್ಲಿ ಕ್ರೀಡಾ ಸಮತಟ್ಟು ಮಾಡಲು ಮತ್ತು ಕ್ರೀಡಾ ಸಾಮಗ್ರಿಗಳನ್ನು ಕೊಳ್ಳಲು ತಲಾ ರೂ. 1,00,000 ಲಕ್ಷ ಅನುದಾನವನ್ನು ಬಿಡುಗಡೆ ಮಾಡಿ ವೆಚ್ಚ ಭರಿಸಲಾಗಿದೆ. ಮತ್ತು ವಾಲಿಬಾಲ್, ಫುಟ್ಬಾಲ್ ತರಬೇತಿ ಶಿಬಿರ ನಡೆಸಲು ರೂ.74,000–00 ಗಳ ವೆಚ್ಚ ಭರಿಸಲಾಗಿದೆ.

ಕ.ಸ	ತಾಲ್ಲೂಕು	ಶಾಲೆಯ ಹೆಸರು	ಮೊತ್ತ
1	ರಾಮನಗರ	ಸರ್ಕಾರಿ ಪ್ರೌಢಶಾಲೆ, ಅವ್ವೇರಹಳ್ಳಿ	25,000/–
2	ಚನ್ನಪಟ್ಟಣ	ಸರ್ಕಾರಿ ಪ್ರೌಢಶಾಲೆ, ಹೊಂಗನೂರು	25,000/–
3	ಕನಕಪುರ	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೊತ್ತನೂರು	25,000/–
4	ಮಾಗಡಿ	ಸರ್ಕಾರಿ ಪ್ರೌಢಶಾಲೆ, ನಾರಸಂದ್ರ	25,000/–
		ಒಟ್ಟು	1,00,000/–

8. 2205–00–104–0–34 :– ಒಳಾಂಗಣ ಕ್ರೀಡಾಂಗಣ ಮತ್ತು ಬಯಲು ರಂಗಮಂದಿರ ನಿರ್ಮಾಣಗಳ ಅನುದಾನ ಯೋಜನೆ ಅಡಿಯಲ್ಲಿ ರೂ 1.00 ಲಕ್ಷ ಅನುದಾನ ನಿಗಧಿಪಡಿಸಿ ಬಿಡುಗಡೆ ಮಾಡಲಾಗಿದ್ದು, ಈ ಅನುದಾನದಲ್ಲಿ ಜಿಲ್ಲೆಯ 04 ತಾಲ್ಲೂಕಿನ ಈ ಕೆಳಕಂಡ ನಾಲ್ಕು ಶೈಕ್ಷಣಿಕ ಶಾಲೆಗಳನ್ನು ಆಯ್ಕೆ ಮಾಡಿಕೊಂಡು ಸದರಿ ಶಾಲೆಗಳಲ್ಲಿ ಬಯಲು ರಂಗಮಂದಿರ ನಿರ್ಮಾಣ ಮಾಡಲು ರೂ. 4.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಿ ವೆಚ್ಚ ಭರಿಸಲಾಗಿದೆ.

ಕ್ರ.ಸ	ಶಾಲೆಯ ಹೆಸರು	ತಾಲ್ಲೂಕು	ಮೊತ್ತ
1	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ. ಸೋಗಾಲ	ಚನ್ನಪಟ್ಟಣ	1,00,000/–
2	ಸರ್ಕಾರಿ ಪ್ರೌಢಶಾಲೆ, ಕಲ್ಲಿನಕುಪ್ಪೆ	ಕನಕಪುರ	1,00,000/–
3	ಸರ್ಕಾರಿ ಪ್ರೌಢಶಾಲೆ, ಶ್ಯಾನುಭೋಗನಹಳ್ಳಿ	ಮಾಗಡಿ	1,00,000/–
4	ಸರ್ಕಾರಿ ಪ್ರೌಢಶಾಲೆ, ಬನ್ನಿಕುಪ್ಪೆ.	ರಾಮನಗರ	1,00,000/–
		ಒಟ್ಟು ರೂ.	4,00,000/–

9. 2205–00–104–0–35 :– ಗ್ರಾಮಾಂತರ ಪ್ರದೇಶದಲ್ಲಿ ಕ್ರೀಡೆಗಾಗಿ ಪ್ರೋತ್ಸಾಹ ಇದರಡಿಯಲ್ಲಿ ಒಟ್ಟು ರೂ 1.07 ಲಕ್ಷ ಬಿಡುಗಡೆಯಾಗಿದ್ದು, 2017–18 ನೇ ಸಾಲಿಗೆ ಹಿರಿಯರ ಕ್ರೀಡಾಪಟುಗಳ ಆಯ್ಕೆಗೆ ಮತ್ತು ಕಿರಿಯರ ಆಯ್ಕೆಗೆ ರೂ 40,000/– ಗಳನ್ನು ಹಾಗೂ ಜಿಲ್ಲಾ ಮಟ್ಟದ ಆಯ್ಕೆ ಮತ್ತು ಕ್ರೀಡಾ ಸಾಮಾಗ್ರಿಗಳನ್ನು ಖರೀದಿಸಲು ರೂ. 67,000–00 ಗಳ ವೆಚ್ಚ ಭರಿಸಲಾಗಿದೆ.

10. 2205–00–104–0–36 :– ಜಿಲ್ಲಾ ಮತ್ತು ವಿಭಾಗ ಯುವಜನ ಸೇವಾ ಮಂಡಳಿಗಳಿಗೆ ಕ್ರೀಡಾ ಸಾಮಗ್ರಿಗಳ ಖರೀಧಿಸಲು ಸಹಾಯ ಯೋಜನೇತರ ಅಡಿಯಲ್ಲಿ ರೂ 1.07 ಲಕ್ಷ ಅನುದಾನ ನಿಗಧಿಪಡಿಸಿ ಬಿಡುಗಡೆ ಮಾಡಿದೆ. ಜಿಲ್ಲೆಯ ನಾಲ್ಕೂ ತಾಲ್ಲೂಕಿನ ಒಂದು ಈ ಕೆಳಕಂಡಂತೆ ಸರ್ಕಾರಿ ಪ್ರೌಢಶಾಲೆಗಳನ್ನು ಆಯ್ಕೆ ಮಾಡಿಕೊಂಡು ಸದರಿ ಶಾಲೆಗಳಿಗೆ ಕ್ರೀಡಾ ಸಾಮಗ್ರಿಗಳನ್ನು ಖರೀಧಿಸಲು ರೂ. 1,07,000–00 ಗಳ ವೆಚ್ಚ ಭರಿಸಲಾಗಿದೆ.

ಕ್ರ.ಸ	ಶಾಲೆಯ ಹೆಸರು	ತಾಲ್ಲೂಕು	ಮೊತ್ತ
1	ಸರ್ಕಾರಿ ಪ್ರೌಢಶಾಲೆ, ಬಿಸ್ಕೂರು	ಮಾಗಡಿ	28,000/–
2	ಸರ್ಕಾರಿ ಪ್ರೌಢಶಾಲೆ, ಲಕ್ಕೋಜನಹಳ್ಳಿ	ರಾಮನಗರ	28,000/–
3	ಸರ್ಕಾರಿ ಪ್ರೌಢಶಾಲೆ, ಕನ್ನಿದೊಡ್ಡಿ	ಚನ್ನಪಟ್ಟಣ	25,000/–
4	ಸರ್ಕಾರಿ ಮಹಿಳಾ ಪ್ರೌಢಶಾಲೆ, ಕನಕಪುರ	ಕನಕಪುರ	26,000/–
	ಒಟ್ಟು		**1,07,000**/–

ಲೋಕ ಶಿಕ್ಷಣ ಇಲಾಖೆ

2009–10ನೇ ಸಾಲಿನಲ್ಲಿ ರಾಮನಗರ ಜಿಲ್ಲೆಯಲ್ಲಿ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿಯನ್ನು ಪ್ರಾರಂಭಿಸಲು ಸರ್ಕಾರಿ ಆದೇಶ ಸಂಖ್ಯೆ: ಇಡಿ–72/ಎಂ.ಸಿ.ಡಿ/2009 ದಿನಾಂಕ:26.02.2009 ಇಡಿ25ಎಸ್ಟೀಮರ (ಯುನಿಕ್) ದಿನಾಂಕ:26.02.2009 ರಂತೆ ಲೆಕ್ಕ ಶೀರ್ಷಿಕೆ:2202–04–001–02–059 ಯೋಜನೆಯಡಿಯಲ್ಲಿ ಗ್ರೂಪ್–ಎ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ–1 ಗ್ರೂಪ್–ಸಿ ಕಾರ್ಯಕ್ರಮ ಸಹಾಯಕರು–1 ದ್ವಿತೀಯ ದರ್ಜೆ ಸಹಾಯಕರು–1 ಹಾಗೂ ಗ್ರೂಪ್–ಡಿ ನೌಕರರು–1 ಒಟ್ಟು 4 ಹುದ್ದೆಗಳನ್ನು ಸೃಜಿಸಿದಂತೆ ಜಿಲ್ಲೆಯಲ್ಲಿ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿಯನ್ನು 14.02.2009 ರಂದು ಸ್ಥಾಪಿಸಿ ಪ್ರಾರಂಭಿಸಲಾಗಿದೆ. 2016–17ನೇ ಸಾಲಿನಿಂದ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಕಛೇರಿ ವೇತನ ಮತ್ತು ವೇತನೇತರ ಬಾಬುಗಳನ್ನು ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯುಮೆಂಟ್ ಅನುದಾನದಡಿಯಲ್ಲಿ ಯೋಜನೇತರ ಲೆಕ್ಕಶೀರ್ಷಿಕೆ: 2202–00–103–0–36 ಅಡಿಯಲ್ಲಿ ಭರಿಸಲಾಗುತ್ತಿದೆ.

ಸರ್ಕಾರಿ ಆದೇಶದನ್ವಯ ಸಾಕ್ಷರತಾ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಜಿಲ್ಲೆಯ ಅನಕ್ಷರಸ್ಥರ ಅಗತ್ಯತೆಗಳನ್ನು ಪೂರೈಸಲು ಅನುಕೂಲವಾಗುವಂತೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಾಕ್ಷರತಾ ಸಮಿತಿಯನ್ನು ರಚಿಸಿ ದಿನಾಂಕ: 23.03.2011 ರಂದು ನೋಂದಣಿ ಸಂಖ್ಯೆ: ಡಿ.ಆರ್.ಎಸ್/ಆರ್.ಜಿ.ಎನ್/282/2009–10 ರಂತೆ ಸಂಘ ಸಂಸ್ಥೆಗಳ ನೋಂದಣಾಧಿಕಾರಿಗಳ ಕಛೇರಿ, ರಾಮನಗರ ಇಲ್ಲಿ ನೋಂದಾಯಿಸಲಾಗಿದೆ.

ಜಿಲ್ಲೆಯಲ್ಲಿ ಸಾಕ್ಷರತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮೂಲಕ ಜಿಲ್ಲಾ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸುವುದು, ಸಮಾನ ಶಿಕ್ಷಣ ಕಾರ್ಯಕ್ರಮದ ಅನುಷ್ಠಾನ ಮಾಡುವುದು ಮಹಿಳಾ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸುವುದು, ಲಿಂಗ, ಸಾಮಾಜಿಕ ಮತ್ತು ಪ್ರಾದೇಶಿಕ ಸಾಕ್ಷರತಾ ಪ್ರಮಾಣಗಳಲ್ಲಿನ ಅಂತರವನ್ನು ಕಡಿಮೆಗೊಳಿಸುವ ಮೂಲಕ ಜಿಲ್ಲೆಯ ನವಸಾಕ್ಷರರ ಜೀವನ ಮಟ್ಟವನ್ನು ಸುಧಾರಿಸಲು ಅಗತ್ಯ ಜೀವನೋಪಾಯ ಮಾರ್ಗಗಳ ಬಗ್ಗೆ ವೃತ್ತಿಕೌಶಲ್ಯ ತರಬೇತಿಗಳನ್ನು ಅನುಷ್ಠಾನಗೊಳಿಸಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮಾರ್ಗದರ್ಶನದಂತೆ ಸಾಕ್ಷರತಾ ಕಾರ್ಯಕ್ರಮಗಳನ್ನು ಅಭಿವೃದ್ಧಿ ಇಲಾಖೆಗಳ ಇತರೆ ಸರ್ಕಾರಿ ಕಾರ್ಯಕ್ರಮಗಳೊಂದಿಗೆ ಸಮನ್ವಯಗೊಳಿಸುವುದು. ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿ ಆಧ್ಯ ಕರ್ತವ್ಯವಾಗಿರುತ್ತದೆ.

ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿ (ಲೋಕ ಶಿಕ್ಷಣ ಇಲಾಖೆ) ಆಡಳಿತ



ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿ, ರಾಮನಗರದ ಅಧೀನದಲ್ಲಿ ಕೇಂದ್ರ, ರಾಜ್ಯ ಹಾಗೂ ಜಿಲ್ಲಾ ಮಟ್ಟದ ಸಾಕ್ಷರತಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಜಿಲ್ಲಾ ಸಾಕ್ಷರತಾ ಸಮಿತಿ ಲೋಕ ಶಿಕ್ಷಣ ನಿದೇಶನಾಲಯದ ಆದೇಶದಂತೆ, ಸಾಕ್ಷರತಾ ಕಾರ್ಯಕ್ರಮಗಳನ್ನು ಈ ಕೆಳಕಂಡಂತೆ 2017–18ನೇ ಸಾಲಿನಲ್ಲಿ ಕಾರ್ಯಕ್ರಮವಾರು ಅನುಷ್ಠಾನಗೊಳಿಸಿ ವಾರ್ಷಿಕ ಪ್ರಗತಿ ವರದಿಯನ್ನು ಸಲ್ಲಿಸಿದೆ.

ಜಿಲ್ಲಾ ಪಂಚಾಯತ್ ಲಿಂಕ್ ಅನುದಾನ ಲೆಕ್ಕಶೀರ್ಷಿಕೆ:2202–00–104–0–37 ಯೋಜನೆ ರೂ.9.00 ಲಕ್ಷಗಳು

ಲೋಕ ಶಿಕ್ಷಣ ನಿರ್ದೇಶನಾಲಯದ ಮಾರ್ಗಸೂಚಿಯಂತೆ, ಜಿಲ್ಲಾ ಪಂಚಾಯತ್ ಲಿಂಕ್ ಅನುದಾನ ಲೆಕ್ಕಶೀರ್ಷಿಕೆ: 2202–00–104–0–37(ಯೋಜನೆ) ಅಡಿಯಲ್ಲಿ ರೂ.9.00 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಯೋಜನೆಯಡಿಯಲ್ಲಿ ಈ ಕೆಳಕಂಡಂತೆ 15 ವರ್ಷ ಮೇಲ್ಪಟ್ಟ 1191 ಮಂದಿ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿ ಮಾಡಲು ಮೂಲ ಸಾಕ್ಷರತಾ ಕಾರ್ಯಕ್ರಮವನ್ನು ಸ್ವಯಂ ಸೇವಕರ ಮೂಲಕ ಕಲಿಕಾ ಕೇಂದ್ರಗಳನ್ನು ನಡೆಸಿ ಕಲಿಕಾ ಕಾರ್ಯ ಪೂರ್ಣಗೊಳಿಸಲಾಗಿದೆ. ಜಿಲ್ಲಾ ಸಾಕ್ಷರತಾ ಸಮಿತಿ ಕಛೇರಿ ಸಿಬ್ಬಂದಿ ಹೊರಗುತ್ತಿಗೆ ಹಾಗೂ ವಾಹನ ಬಾಡಿಗೆ ಮತ್ತು ಕಛೇರಿ ವೆಚ್ಚಗಳನ್ನು ಭರಿಸಲಾಗಿದೆ.

ಜಿಲ್ಲಾ ಪಂಚಾಯತ್ ಲಿಂಕ್ ಅನುದಾನ ಮೂಲ ಸಾಕ್ಷರತಾ ಕಾರ್ಯಕ್ರಮ

ಕ್ರ ಸಂ	ತಾಲ್ಲೂಕಿನ ಹೆಸರು	ನಿಗದಿ ಪಡಿಸಿರುವ ಗುರಿ	ಗ್ರಾ.ಪಂ ಗಳ ಸಂಖ್ಯೆ	ಪರೀಕ್ಷೆಗೆ ದಾಖಲಾದವರು			ಪರೀಕ್ಷೆಗೆ ಹಾಜರಾದವರು		
				ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
1	ರಾಮನಗರ	224	1	93	131	224	93	131	224
2	ಚನ್ನಪಟ್ಟಣ	220	2	58	162	220	58	162	220
3	ಮಾಗಡಿ	220	2	52	168	220	52	168	220
4	ಕನಕಪುರ	527	1	213	314	527	211	313	524
	ಒಟ್ಟು	**1191**	**6**	**416**	**775**	**1191**	**414**	**774**	**1188**

ಒಟ್ಟು ಫಲಾನುಭವಿಗಳ ಸಂಖ್ಯೆ 1191, ಒಟ್ಟು ವೆಚ್ಚ ರೂ.2.74 ಲಕ್ಷಗಳು.

ಜಿಲ್ಲಾ ಪಂಚಾಯತ್ ಲಿಂಕ್ ಅನುದಾನ ಲೆಕ್ಕಶೀರ್ಷಿಕೆ:2202–00–103–0–36(ಯೋಜನೇತರ) ರೂ.2.14 ಲಕ್ಷಗಳು

ಲೋಕ ಶಿಕ್ಷಣ ನಿರ್ದೇಶನಾಲಯದ ಮಾರ್ಗಸೂಚಿಯಂತೆ, ಜಿಲ್ಲಾ ಪಂಚಾಯತ್ ಲಿಂಕ್ ಅನುದಾನ ಲೆಕ್ಕಶೀರ್ಷಿಕೆ:2202–00–103–0–36 (ಯೋಜನೇತರ) ಅಡಿಯಲ್ಲಿ ರೂ.2.14 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿ ಸಾದಿಲ್ವಾರು, ಪ್ರಯಾಣ ಭತ್ಯೆ, ಸ್ವಚ್ಛತೆ ಮತ್ತು ಟೆಲಿಫೋನ್, ವಾಹನ ಬಾಡಿಗೆ ಹಾಗೂ ಇತರೆ ವೆಚ್ಚಗಳನ್ನು ಭರಿಸಲಾಗಿದೆ.

ಕ್ರ ಸಂ	ಒಟ್ಟು ಬಿಡುಗಡೆ	ಒಟ್ಟು ಖರ್ಚು	ಒಟ್ಟು ಉಳಿಕೆ
1	ರೂ. 2.14 ಲಕ್ಷಗಳು	ರೂ. 2.14 ಲಕ್ಷಗಳು	**NIL**

ಮೀನುಗಾರಿಕೆ ಇಲಾಖೆ

ನೂತನವಾಗಿ ರಚನೆಯಾದ ರಾಮನಗರ ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಯ ಜಿಲ್ಲಾ ಕಛೇರಿಯನ್ನು ದಿ:23–08–2007 ರಿಂದ ಪ್ರಾರಂಭಿಸಲಾಗಿರುತ್ತದೆ. ಚನ್ನಪಟ್ಟಣ, ಮಾಗಡಿ ಹಾಗೂ ರಾಮನಗರ ತಾಲ್ಲೂಕಿನ ಬಿಡದಿಯಲ್ಲಿ (ನೆಲ್ಲಿಗುಡ್ಡ) ತಾಲ್ಲೂಕು ಮಟ್ಟದ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ. 2012–13ನೇ ಸಾಲಿನಿಂದ ಕನಕಪುರ ತಾಲ್ಲೂಕಿನಲ್ಲಿ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2), ರವರ ಕಛೇರಿಯು ಹೊಸದಾಗಿ ಸೃಜನೆಯಾಗಿದ್ದು ಕಾರ್ಯನಿರ್ವಹಿಸುತ್ತಿದೆ.

ರಾಮನಗರ ಜಿಲ್ಲೆಯಲ್ಲಿನ ಮೀನು ಕೃಷಿ ಸಂಪನ್ಮೂಲಗಳು:

ರಾಮನಗರ ಜಿಲ್ಲೆಗೆ ಚನ್ನಪಟ್ಟಣ, ಕನಕಪುರ, ಮಾಗಡಿ ಹಾಗೂ ರಾಮನಗರ ತಾಲ್ಲೂಕುಗಳು ಸೇರಿರುತ್ತವೆ. ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿ 04 ಜಲಾಶಯಗಳು ಸೇರಿದಂತೆ ಸುಮಾರು 9912.94 ಹೆಕ್ಟೇರ್ ಜಲಪ್ರದೇಶದ 526 ಕೆರೆಗಳು ಲಭ್ಯವಿರುತ್ತದೆ. 40 ಹೆಕ್ಟೇರ್‌ವರೆಗಿನ ಅಚ್ಚುಕಟ್ಟು ಇರುವ 417 ಕೆರೆಗಳು ಗ್ರಾಮ ಪಂಚಾಯತ್ ವ್ಯಾಪ್ತಿಗೆ, 40 ಹೆಕ್ಟೇರ್‌ಗಿಂತ ಹೆಚ್ಚು ಅಚ್ಚುಕಟ್ಟು ಇರುವ 105 ಕೆರೆಗಳು ಇಲಾಖಾ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಸುಮಾರು 10,000 ಹೆಕ್ಟೇರ್‌ಗಳಷ್ಟು ಜಲಾವೃತ ಪ್ರದೇಶ ಮೀನುಕೃಷಿಗೆ ಲಭ್ಯವಿದ್ದು, ಜಿಲ್ಲೆಯಲ್ಲಿ ಮೀನುಕೃಷಿಗೆ ಉತ್ತಮ ಅವಕಾಶವಿರುತ್ತದೆ. ಜಿಲ್ಲೆಯಲ್ಲಿ ಪಿನಾಕಿನಿ, ಅರ್ಕಾವತಿ, ಕಣ್ವಾ ನದಿಗಳು ಹರಿಯುತ್ತವೆ. ಈ ಜಿಲ್ಲೆಯಲ್ಲಿ ಅರ್ಕಾವತಿ, ಮಂಚನಬೆಲೆ, ಕಣ್ವಾ ಮತ್ತು ಭೈರಮಂಗಲ ಜಲಾಶಯಗಳಿದ್ದು ಅವುಗಳ ವಿಸ್ತೀರ್ಣ ಅನುಕ್ರಮವಾಗಿ 665, 334, 447 ಹಾಗೂ 411 ಹೆಕ್ಟೇರ್ ಆಗಿದೆ. ಯೋಗ್ಯವಿರುವ ಕೆರೆಗಳಲ್ಲಿ ಮೀನುಕೃಷಿ ಕೈಗೊಳ್ಳಲು ಸುಮಾರು 120 ಲಕ್ಷ ಮೀನುಮರಿಗಳ ಬೇಡಿಕೆ ಇರುತ್ತದೆ. ಜಿಲ್ಲೆಯ ಅಂದಾಜು ಮೀನಿನ ಉತ್ಪನ್ನ 6245 ಮೆಟ್ರಿಕ್ ಟನ್‌ಗಳಾಗಿರುತ್ತದೆ.

ಜಿಲ್ಲೆಯಲ್ಲಿರುವ ಜಲಾಶಯ ಹಾಗೂ ಕೆರೆಗಳ ವಿವರ:

ಕ್ರ. ಸಂ.	ತಾಲ್ಲೂಕು	ಜಲಾಶಯಗಳು		ಇಲಾಖಾ ಕೆರೆಗಳು		ಗ್ರಾ.ಪಂ. ಕೆರೆಗಳು		ಒಟ್ಟು ಜಲಾಶಯ/ ಕೆರೆಗಳು	ಒಟ್ಟು ಜಲವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
		ಸಂಖ್ಯೆ	ಜಲವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)	ಸಂಖ್ಯೆ	ಜಲವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)	ಸಂಖ್ಯೆ	ಜಲವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)		
1.	ರಾಮನಗರ	1	411.98	15	756.66	56	321.86	72	1490.50
2.	ಚನ್ನಪಟ್ಟಣ	1	447.00	32	1650.47	84	769.87	117	2867.34
3.	ಕನಕಪುರ	1	665.00	29	1775.76	118	719.24	148	3160.00
4.	ಮಾಗಡಿ	1	334.00	29	1202.83	159	858.27	189	2395.10
	ಒಟ್ಟು	**4**	**1857.98**	**105**	**5385.72**	**417**	**2669.24**	**526**	**9912.94**

ರಾಮನಗರ ಜಿಲ್ಲೆ, ಮೀನುಗಾರಿಕೆ ಇಲಾಖೆ ಸಿಬ್ಬಂದಿ ವಿವರ

1) ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ರಾಮನಗರ, ರಾಮನಗರ ಜಿಲ್ಲೆ

ಕ್ರ. ಸಂ.	ಹುದ್ದೆಗಳ ವಿವರ	ಹುದ್ದೆಗಳು ಮಂಜೂರಾದ ಆದೇಶ/ದಿನಾಂಕ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ	ಷರಾ
1.	ಮೀ.ಹಿ.ಸ.ನಿ	ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್‌ಡಿ27 ಬಿಹೆಚ್‌ವಿ:ಡಿಹೆಚ್‌ಎ : ಆರ್‌ಯು 2006 ಬೆಂಗಳೂರು ದಿ:21–06–2007	1	1	–	ಖಾಲಿಯಿರುವ ಹುದ್ದೆಗಳನ್ನು ತುಂಬಲು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರನ್ನು ಕೋರಿದೆ.
2.	ಮಿ.ಸ.ನಿ (ಶ್ರೇ–2) (ತಾ.ಸ)		1	1	–	
3.	ಕಛೇರಿ ಅಧೀಕ್ಷಕರು		1	–	1	
4.	ಪ್ರ.ದ.ಸ		1	1	–	
5.	ಬೆರಳಚ್ಚುಗಾರರು		1	–	1	
6.	ವಾಹನ ಚಾಲಕರು		1	–	1	
7.	'ಡಿ' ದರ್ಜೆ ನೌಕರರು		2	1	1	
ಒಟ್ಟು			**8**	**4**	**4**	

2) ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2), ನಲ್ಲಿಗುಡ್ಡ ಕಛೇರಿ, ರಾಮನಗರ ತಾಲ್ಲೂಕು

1.	ಮೀ.ಸ.ನಿ (ಶ್ರೇ–2)	ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್‌ಡಿ27 ಬಿಹೆಚ್‌ವಿ:ಡಿಹೆಚ್ ಎ: ಆರ್‌ಂಯು 2006 ಬೆಂಗಳೂರು ದಿ:21–06–2007	1	1	–	ಖಾಲಿಯಿರುವ ಹುದ್ದೆಗಳನ್ನು ತುಂಬಲು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರನ್ನು ಕೋರಿದೆ.
2.	ಮೀ.ಹಿ.ಮೇ		1	–	1	
3.	ಮೀ.ಕ್ಷೇ.ಪಾ		6	2	4	
	ಒಟ್ಟು		**8**	**3**	**5**	

3) ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2), ಚನ್ನಪಟ್ಟಣ ಕಛೇರಿ, ಚನ್ನಪಟ್ಟಣ ತಾಲ್ಲೂಕು

1.	ಮೀ.ಸ.ನಿ (ಶ್ರೇ–2)	ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್‌ಡಿ27 ಬಿಹೆಚ್‌ವಿ:ಡಿಹೆಚ್ ಎ: ಆರ್‌ಂಯು 2006 ಬೆಂಗಳೂರು ದಿ:21–06–2007	1	1	–	ಖಾಲಿಯಿರುವ ಹುದ್ದೆಗಳನ್ನು ತುಂಬಲು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರನ್ನು ಕೋರಿದೆ.
2.	ಮೀ.ಕ್ಷೇ.ಪಾ		2	1	1	
	ಒಟ್ಟು		**3**	**2**	**1**	

4) ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2), ಕನಕಪುರ ಕಛೇರಿ, ಕನಕಪುರ ತಾಲ್ಲೂಕು

1.	ಮೀ.ಸ.ನಿ (ಶ್ರೇ–2)	ಸರ್ಕಾರದ ಆದೇಶ ಸಂಖ್ಯೆ:ಪಸಂಮೀ/ 33/ಮೀಇಸೇ/201 2 ದಿ:24–05– 12.	1	1	–	ಖಾಲಿಯಿರುವ ಹುದ್ದೆಗಳನ್ನು ತುಂಬಲು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರನ್ನು ಕೋರಿದೆ.
2.	ಮೀನುಗಾರಿಕೆ ಹಿರಿಯ ಮೇಲ್ವಿಚಾರಕರು		1	–	1	
3.	ಮೀ.ಕ್ಷೇ.ಪಾ		2	–	2	
4.	'ಡಿ' ದರ್ಜೆ ನೌಕರರು		1	–	1	
	ಒಟ್ಟು	—	**5**	**1**	**4**	

5) ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2), ಮಾಗಡಿ ಕಛೇರಿ, ಮಾಗಡಿ ತಾಲ್ಲೂಕು

1. ಮೀ.ಸ.ನಿ (ಶ್ರೇ–2)	ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್‌ಡಿ27 ಬಿಹೆಚ್‌ವಿ:ಡಿಹೆಚ್‌ಎ: ಆರ್‌ಯು 2006 ಬೆಂಗಳೂರು ದಿ:21–06–2007	1	1	–	ಖಾಲಿಯಿರುವ ಹುದ್ದೆಗಳನ್ನು ತುಂಬಲು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರನ್ನು ಕೋರಿದೆ.
3. ಮೀ.ಕ್ಷೇ.ಪಾ		2	–	2	
ಒಟ್ಟು		**3**	**1**	**2**	

2017–18ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳು

1. ಜಿಲ್ಲೆಯಲ್ಲಿನ ಇಲಾಖಾ ವ್ಯಾಪ್ತಿಯ 90 ಕೆರೆ ಮತ್ತು ಜಲಾಶಯಗಳನ್ನು ವಿಲೇವಾರಿ ಮಾಡಿ ರೂ.12.63 ಲಕ್ಷಗಳ ಆದಾಯ ಗಳಿಸಲಾಗಿದೆ.
2. ಇಲಾಖೆ ಮತ್ತು ಗ್ರಾಮ ಪಂಚಾಯ್ತಿಗಳು ವಿಲೇ ಮಾಡಿದ ಕೆರೆಗಳಲ್ಲಿ ಒಟ್ಟು 90 ಕೆರೆಗಳಿಗೆ ಸುಮಾರು ರೂ.118.63 ಲಕ್ಷ ಮೀನುಮರಿಗಳನ್ನು ಫಲಾನುಭವಿಗಳು ಭಿತ್ತನೆ ಮಾಡಲಾಗಿದೆ.
3. ಮೀನುಗಾರಿಕೆ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ ಯೋಜನೆ ಅಡಿ ರೂ.6.00 ಲಕ್ಷಗಳ ಅನುದಾನದಲ್ಲಿ ರೂ.5.99 ಲಕ್ಷಗಳ ವೆಚ್ಚದಲ್ಲಿ ರಾಮನಗರ ತಾಲ್ಲೂಕಿನ ಬಿಡದಿ ಬಳಿಯಿರುವ ನಲ್ಲಿಗುಡ್ಡ ಫಿಶ್‌ಫಾರಂನಲ್ಲಿ ಮೀನುಮರಿ ಪಾಲನಾ ಕೊಳಗಳ ದುರಸ್ಥಿ ಹಾಗೂ ಮೀನುಮರಿ ಪಾಲನಾ ಕೊಳಗಳ ಕಾರಿಡಾರ್ ದುರಸ್ಥಿ ಮತ್ತು ಜಿಲ್ಲಾ ಕಛೇರಿಯ ನಿರ್ವಹಣಾ ಶುಲ್ಕ ಪಾವತಿಸಲಾಗಿದೆ.
4. ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ ಯೋಜನೆ ಅಡಿಯಲ್ಲಿ ರೂ.13.00 ಲಕ್ಷಗಳ ಅನುದಾನದಲ್ಲಿ ರೂ.12.56 ಲಕ್ಷಗಳ ವೆಚ್ಚ ಭರಿಸಿದ್ದು, ಮೀನುಮರಿ ಪಾಲನೆಗೆ ಅಗತ್ಯವಾದ ಮೂಲಭೂತ ಸೌಕರ್ಯಗಳಿಗೆ ವೆಚ್ಚ ಮತ್ತು ಮೀನುಮರಿ ವಿತರಣೆ, ಕಛೇರಿ ವಾಹನ ನಿರ್ವಹಣೆ ಮತ್ತು ಖಾಸಗೀ ವಾಹನವನ್ನು ಬಾಡಿಗೆ ಆಧಾರದಲ್ಲಿ ಪಡೆದ ಸೇವಾ ಬಾಬ್ತು ಹಾಗೂ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಅಡಿ 60 ಫಲಾನುಭವಿಗಳಿಗೆ ಮೀನುಗಾರಿಕೆ ಸಲಕರಣೆ ಕಿಟ್ಟುಗಳನ್ನು ಉಚಿತವಾಗಿ ನೀಡಲಾಗಿದೆ.
5. ಮತ್ಸ್ಯವಾಹಿನಿ ಯೋಜನೆ ಅಡಿಯಲ್ಲಿ ಮೀನುಮಾರಾಟ ಮಾಡಲು ಒಟ್ಟು 30 ಮೀನುಗಾರರಿಗೆ ತಲಾ ರೂ.10,000/– ಗಳಂತೆ ಒಟ್ಟು ರೂ.3.00 ಲಕ್ಷಗಳ ಸಹಾಯಧನದಲ್ಲಿ ಮೀನುಮಾರಾಟ ಮತ್ತು ಮೀನು ಹಿಡುವಳಿ ಸಲಕರಣೆಗಳ ಖರೀದಿಸಿ ಉಚಿತವಾಗಿ ವಿತರಿಸಲಾಗಿದೆ.
6. ವಸ್ತು ಪ್ರದರ್ಶನ ಮತ್ತು ತರಬೇತಿ ಯೋಜನೆ ಅಡಿ ರೂ.2.00 ಲಕ್ಷಗಳ ಅನುದಾನದಲ್ಲಿ ರೂ.1.99 ಲಕ್ಷಗಳ ವೆಚ್ಚದಲ್ಲಿ ಜಿಲ್ಲೆಯಲ್ಲಿ ನಡೆಯುವ ವಸ್ತುಪ್ರದರ್ಶನದಲ್ಲಿ ಭಾಗವಹಿಸುವುದು ಹಾಗೂ ಮೀನುಕೃಷಿಕರಿಗೆ ಮೀನುಗಾರಿಕೆಗೆ ಸಂಬಂಧಿಸಿದಂತೆ ಕರಪತ್ರ ಮತ್ತು ಬ್ರೋಚರ್ಸ್‌ಗಳ ಮುದ್ರಣವನ್ನು ಮಾಡಿಸಲಾಗಿದೆ. ಹಾಗೂ ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಇರಿಸಲಾಗಿದ್ದ ಮಳಿಗೆಯ ನಿರ್ವಹಣಾ ವೆಚ್ಚದ ಬಾಬ್ತನ್ನು ನಿರ್ಮಿತಿ ಕೇಂದ್ರ, ರಾಮನಗರ ಇವರಿಗೆ ನೀಡಲಾಗಿರುತ್ತದೆ.
7. ರಾಜ್ಯವಲಯ ಮೀನುಮರಿ ಖರೀದಿಗೆ ನೆರವು ಯೋಜನೆ ಅಡಿ ರೂ.1.27 ಲಕ್ಷಗಳ ಅನುದಾನದಲ್ಲಿ ಒಟ್ಟು 10 ಸಂಘ/ ಫಲಾನುಭವಿಗಳಿಗೆ ಮೀನುಮರಿ ಖರೀದಿಗೆ ನೆರವು ಅಡಿ ಸಹಾಯಧನ ವಿತರಿಸಲಾಗಿದೆ.
8. ರಾಜ್ಯವಲಯ ಸಾಮಾನ್ಯ ಯೋಜನೆಯಲ್ಲಿ ಮೀನುಹಿಡುವಳಿ ಸಲಕರಣೆ ಖರೀದಿಗಾಗಿ ಸಹಾಯಧನ ನೀಡಲು 15 ಮೀನುಗಾರರಿಗೆ ತಲಾ ರೂ.10000/–ಗಳಂತೆ ಒಟ್ಟು ರೂ.1.50 ಲಕ್ಷಗಳ ಮೌಲ್ಯದ ಮೀನುಹಿಡುವಳಿ ಸಲಕರಣೆಗಳನ್ನು ಖರೀದಿಸಿ ಉಚಿತವಾಗಿ ವಿತರಿಸಲಾಗಿದೆ.
9. ರಾಜ್ಯವಲಯ ಯೋಜನೆ ಅಡಿಯಲ್ಲಿ ಮೀನು ಹಿಡಿಯಲು ಉಪಯೋಗಿಸುವ ಫೈಬರ್‌ಗ್ಲಾಸ್ ಮತ್ತು ಹರಿಗೋಲುಗಳನ್ನು ತಲಾ ರೂ.10000/– ರಂತೆ ಒಟ್ಟು ರೂ.1.50 ಲಕ್ಷಗಳ ವೆಚ್ಚದಲ್ಲಿ ಜಿಲ್ಲೆಯ 15 ಜನ ಮೀನುಗಾರರಿಗೆ ಉಚಿತವಾಗಿ ವಿತರಿಸಲಾಗಿದೆ.

10. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೂ.3.00 ಲಕ್ಷಗಳ ವೆಚ್ಚದಲ್ಲಿ 30 (ಸಾಮಾನ್ಯ–ವಿಘಯೋ–ಗಿಉಯೋ) ಫಲಾನುಭವಿಗಳಿಗೆ ತಲಾ ರೂ.10000/–ಗಳ ವೆಚ್ಚದಲ್ಲಿ ಫೈಬರ್‌ಗ್ಲಾಸ್ ಹರಿಗೋಲುಗಳನ್ನು ಖರೀದಿಸಿ ಉಚಿತವಾಗಿ ವಿತರಿಸಲಾಗಿದೆ.

11. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೂ.3.00 ಲಕ್ಷಗಳ ವೆಚ್ಚದಲ್ಲಿ 30 (ಸಾಮಾನ್ಯ–ವಿಘಯೋ–ಗಿಉಯೋ) ಫಲಾನುಭವಿಗಳಿಗೆ ತಲಾ ರೂ.10000/–ಗಳ ವೆಚ್ಚದಲ್ಲಿ ಮೀನುಹಿಡುವಳಿ ಸಲಕರಣೆ ಕಿಟ್ಟುಗಳನ್ನು ಖರೀದಿಸಿ ಉಚಿತವಾಗಿ ವಿತರಿಸಲಾಗಿದೆ.

12. ಮತ್ಸ್ಯ ಕೃಷಿ ಆಶಾ ಕಿರಣ ಯೋಜನೆ ಅಡಿ ಜಿಲ್ಲೆಯ 15 ಕೆರೆಗಳ 155.00 ಹೆಕ್ಟೇರ್ ಜಲವಿಸ್ತೀರ್ಣದಲ್ಲಿ ರೂ.41.79 ಲಕ್ಷಗಳ ವೆಚ್ಚದಲ್ಲಿ ಮೀನುಮರಿ ಮತ್ತು ಮೀನುಮರಿ ಆಹಾರ ಖರೀದಿಗೆ ನೆರವು ನೀಡಿ ಮತ್ಸ್ಯ ಸಂಪತ್ತನ್ನು ಅಭಿವೃದ್ಧಿಗೊಳಿಸಲಾಗಿದೆ.

	ಒಟ್ಟು	5419199	26014245	31433444	18297590	5077021	23374611	8058833	74.36

ಕೃಷಿ ಇಲಾಖೆ

ಕೃಷಿ ಇಲಾಖೆಯ ಎಲ್ಲಾ ಕಾರ್ಯಕ್ರಮಗಳಿಗೆ ಜಿಲ್ಲಾ ಮಟ್ಟದಲ್ಲಿ ಜಂಟಿ ಕೃಷಿ ನಿರ್ದೇಶಕರು ಉಸ್ತುವಾರಿ ಅಧಿಕಾರಿಯಾಗಿರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಉಪ ಕೃಷಿ ನಿರ್ದೇಶಕರು ಹಾಗೂ ತಾಲ್ಲೂಕು ಮಟ್ಟದಲ್ಲಿ ಸಹಾಯಕ ಕೃಷಿ ನಿರ್ದೇಶಕರುಗಳು ಅನುಷ್ಠಾನಾಧಿಕಾರಿ ಗಳಾಗಿರುತ್ತಾರೆ. ಜಿಲ್ಲೆಯ ಎಲ್ಲಾ 18 ಹೋಬಳಿಗಳಲ್ಲಿ ರೈತ ಸಂಪರ್ಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ಕೃಷಿ ಅಧಿಕಾರಿಗಳು ಅನುಷ್ಠಾನ ಅಧಿಕಾರಿಗಳಾಗಿರುತ್ತಾರೆ. ಜಲಾನಯನ ಪ್ರದೇಶಗಳಲ್ಲಿ ಅರಣ್ಯ ಚಟುವಟಿಕೆ ಅನುಷ್ಠಾನಕ್ಕಾಗಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ತೋಟಗಾರಿಕೆ ಚಟುವಟಿಕೆ ಅನುಷ್ಠಾನಕ್ಕಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಅನುಷ್ಠಾನಾಧಿಕಾರಿಗಳಾಗಿರುತ್ತಾರೆ.

ಜಿಲ್ಲೆಯ ಸರಾಸರಿ ವಾಡಿಕೆ ಮಳೆ 851 ಮಿ.ಮೀ ಇದ್ದು ವಾಸ್ತವ 828 ಮಿ.ಮೀ ಮಳೆಯಾಗಿರುತ್ತದೆ. ಮುಂಗಾರು ಹಂಗಾಮಿನಲ್ಲಿ ಕೃಷಿ ಬೆಳೆಗಳ ಬಿತ್ತನೆ ವಿಸ್ತೀರ್ಣದ ಗುರಿ 114000 ಹೆ. ಗುರಿ ಇದ್ದು ವಾಸ್ತವ 87446 ಪ್ರದೇಶವು ವಿವಿಧ ಕೃಷಿ ಬೆಳೆಗಳಿಂದ ಆವರಿಸಲ್ಪಟ್ಟಿರುತ್ತದೆ.

2018–19ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದ್ದ ಯೋಜನೆಗಳ ಸಂಕ್ಷಿಪ್ತ ಪ್ರಗತಿ ಈ ಕೆಳಗಿನಂತಿದೆ.

ಜಿಲ್ಲಾ ವಲಯ

1. **ಇತರೆ ಕೃಷಿ ಯೋಜನೆ:**– ಯೋಜನೆಯಡಿ 507 ಜನ ರೈತರಿಗೆ ರೂ.7.97 ಲಕ್ಷ ಸಹಾಯಧನದಲ್ಲಿ ಎತ್ತುಚಾಲಿತ ಕೃಷಿ ಉಪಕರಣಗಳನ್ನು ವಿತರಣೆ ಮಾಡಲಾಗಿದೆ. (ಸಾಮಾನ್ಯ ವರ್ಗಕ್ಕೆ ಶೇ.50 ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ಸಹಾಯಧನ)

2. **ಸಾವಯವ ಗೊಬ್ಬರ ಯೋಜನೆ:**– ಯೋಜನೆಯಡಿ 300 ಹೆ. ಪ್ರದೇಶಕ್ಕೆ ರೂ.5.99 ಲಕ್ಷ ಸಹಾಯಧನದಲ್ಲಿ ಸಾವಯವ ಗೊಬ್ಬರ ವಿತರಣೆ ಮಾಡಲಾಗಿದೆ. (ಸಾಮಾನ್ಯ ವರ್ಗಕ್ಕೆ ಶೇ.50 ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ ಶೇ.75 ಸಹಾಯಧನ)

3. **ಎಣ್ಣೆಕಾಳು ಅಭಿವೃದ್ಧಿ ಯೋಜನೆ:**– ಯೋಜನೆಯಡಿ ರೂ.5.01 ಲಕ್ಷ ಸಹಾಯಧನದಲ್ಲಿ 447 ಹೆಕ್ಟೇರ್/ಸಂಖ್ಯೆ ಪ್ರದೇಶಕ್ಕೆ ಲಘುಪೋಷಕಾಂಶಗಳು, ಸಸ್ಯ ಸಂರಕ್ಷಣಾ ಔಷಧಿಗಳು, ಸಸಂ ಉಪಕರಣಗಳು, ಎತ್ತುಚಾಲಿತ ಕೃಷಿ ಉಪಕರಣಗಳು ವಿತರಣೆ ಮಾಡಲಾಗಿದೆ

4. **ಸಸ್ಯ ಸಂರಕ್ಷಣಾ ಯೋಜನೆ(ತಾಪಂ):**– ಯೋಜನೆಯಡಿ ರೂ.6.97 ಲಕ್ಷ ಸಹಾಯಧನದಲ್ಲಿ 629 ಹೆಕ್ಟೇರ್ ಪ್ರದೇಶಕ್ಕೆ ಶೇ.50ರ ಸಹಾಯ ಧನದಲ್ಲಿ ಸಸ್ಯ ಸಂರಕ್ಷಣಾ ಔಷಧಿ ಹಾಗೂ 481 ಜನ ರೈತರಿಗೆ ಕೈಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳನ್ನು ವಿತರಣೆ ಮಾಡಲಾಗಿದೆ.

ರಾಜ್ಯ ವಲಯ

1. **ಕೃಷಿ ಅಭಿಯಾನ:**– ಕೃಷಿ ಮತ್ತು ಇತರೇ ಸಹ ಇಲಾಖೆಗಳ ಕಾರ್ಯಕ್ರಮಗಳ ವಿವರಗಳನ್ನು ರೈತರಿಗೆ ಪ್ರಚುರಪಡಿಸುವ ಸಲುವಾಗಿ ಇಲಾಖೆಗಳ ನಡಿಗೆ ರೈತರ ಮನೆ ಬಾಗಿಲಿಗೆ ಎಂಬ ಶೀರ್ಷಿಕೆಯೊಂದಿಗೆ ಜಿಲ್ಲೆಯ 18 ಹೋಬಳಿಗಳಲ್ಲಿ 127 ಗ್ರಾಮ ಪಂಚಾಯ್ತಿ ಹಾಗೂ ಪ್ರಮುಖ ಹಳ್ಳಿಗಳಲ್ಲಿ ಸಂಚಾರಿ ಮಾಹಿತಿ ಘಟಕದೊಂದಿಗೆ ರೈತರಿಗೆ ವಿವಿಧ ಇಲಾಖೆಗಳಿಂದ ದೊರಕುವ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ ಯೋಜನೆಯಡಿ ರೂ.13.44 ಲಕ್ಷ ಅನುದಾನ ವೆಚ್ಚ ಮಾಡಲಾಗಿದೆ.

2. **ಸಸ್ಯ ಸಂರಕ್ಷಣೆ ಯೋಜನೆ:**– ಯೋಜನೆಯಡಿ 6.21 ಲಕ್ಷ ಸಹಾಯ ಧನದಲ್ಲಿ 400 ಹೆ. ವಿಸ್ತೀರ್ಣಕ್ಕೆ ಜೈವಿಕ ಪೀಡೆ ನಾಶಕಗಳು, 204 ಜನ ರೈತರಿಗೆ ದಾನ್ಯ ಸಂಗ್ರಹಣಾ ಪೆಟ್ಟಗೆಗಳು ಹಾಗೂ 14 ಹೋಬಳಿಗಳಲ್ಲಿ ಬೀಜೋಪಚಾರ ಮತ್ತು ಸುರಕ್ಷಿತ ಕೀಟನಾಶಕಗಳ ಬಗ್ಗೆ ತರಬೇತಿ ನೀಡಲಾಗಿರುತ್ತದೆ.

3. **ಬಿತ್ತನೆ ಬೀಜ ವಿತರಣೆ:**– ರೂ.21.36 ಲಕ್ಷ ಸಹಾಯ ಧನದಲ್ಲಿ 3290.61 ಕ್ವಿಂ. ವಿವಿಧ ಬೆಳೆಗಳ ದೃಢೀಕೃತ/ನಿಜಚೀಟಿ ಬಿತ್ತನೆ ಬೀಜಗಳನ್ನು 19776 ರೈತರಿಗೆ 18 ರೈತ ಸಂಪರ್ಕ ಕೇಂದ್ರಗಳ ಮುಖಾಂತರ ಇಲಾಖೆ ನಿಗಧಿಪಡಿಸಿದ ಸಹಾಯಧನದಲ್ಲಿ ವಿತರಣೆ ಮಾಡಲಾಗಿದೆ.

4. **ಮಣ್ಣು ಆರೋಗ್ಯ ಅಭಿಯಾನ:**– ಭೂ–ಹಿಡುವಳಿ ಹೊಂದಿರುವ ರೈತರ ಜಮೀನಿನಲ್ಲಿ ಗ್ರಿಡ್ ಮಾದರಿ ಆಧಾರದ ಮೇಲೆ ಮಣ್ಣು ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಿ ಫಲಿತಾಂಶದ ವರದಿಯ ಭೂ ಫಲವತ್ತತೆಯ ಕಾರ್ಡ್‌ಗಳನ್ನು ಮುದ್ರಿಸಿ ಎಲ್ಲಾ ರೈತರಿಗೆ ವಿತರಣೆ ಮಾಡಲಾಗುವುದು. ಯೋಜನೆಯ ವಿವಿಧ ಘಟಕಗಳ ಅನುಷ್ಠಾನಕ್ಕಾಗಿ ರೂ.28.31 ಲಕ್ಷ ವೆಚ್ಚ ಭರಿಸಲಾಗಿದೆ.

5. **ಕೃಷಿ ಯಾಂತ್ರೀಕರಣ ಯೋಜನೆ:**– ಕೃಷಿಯಲ್ಲಿ ಕೃಷಿ ಕಾರ್ಮಿಕರ ಕೊರತೆ ನೀಗಿಸಿ ಉತ್ಪಾದನಾ ವೆಚ್ಚ ಕಡಿಮೆ ಮಾಡುವ ಸಲುವಾಗಿ ಕೃಷಿ ಯಾಂತ್ರೀಕರಣ ಯೋಜನೆಯಡಿ ರೂ.358.44 ಲಕ್ಷ ಸಹಾಯಧನದಲ್ಲಿ 1089 ಜನ ರೈತರಿಗೆ ಮಿನಿ ಟ್ರ್ಯಾಕ್ಟರ್, ಪವರ್ ಟಿಲ್ಲರ್ ಸೇರಿದಂತೆ ವಿವಿಧ ಬಗೆಯ ಹೈಟೆಕ್ ಕೃಷಿ ಯಂತ್ರೋಪಕರಣಗಳನ್ನು ಇಲಾಖೆ ನಿಗಧಿಪಡಿಸಿದ ದರಗಳಲ್ಲಿ ವಿತರಣೆ ಮಾಡಲಾಗಿದೆ. ಸಾಮಾನ್ಯ ವರ್ಗಕ್ಕೆ ಶೇ.50 ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90ರ ಸಹಾಯಧನದಲ್ಲಿ ವಿತರಣೆ ಮಾಡಲಾಗಿದೆ.

6. **ಕೃಷಿ ಸಂಸ್ಕರಣೆ ಯೋಜನೆ:**– ಈ ಯೋಜನೆಯಡಿ 76.90 ಲಕ್ಷ ಅನುದಾನದಲ್ಲಿ 3880 ಜನ ರೈತರಿಗೆ 8*6ಮೀ ಅಳತೆಯ ಹೆಚ್‌ಡಿಪಿಇ ಟಾರ್ಪಲುಗಳನ್ನು ಹಾಗೂ ವಿವಿಧ ಸಂಸ್ಕರಣಾ ಘಟಕಗಳನ್ನು ಇಲಾಖಾ ವತಿಯಿಂದ ನಿಗಧಿಪಡಿಸಲಾದ ಸಹಾಯಧನದಲ್ಲಿ ವಿತರಣೆ ನೀಡಲಾಗಿದೆ. ಸಾಮಾನ್ಯ ವರ್ಗಕ್ಕೆ ಶೇ.50 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ ಶೇ.90ರ ಸಹಾಯಧನದಲ್ಲಿ ವಿತರಣೆ ಮಾಡಲಾಗಿದೆ.

7. **ಮಣ್ಣಿನ ಸತ್ವ ಹೆಚ್ಚಿಸುವಿಕೆ:**– ಯೋಜನೆಯಡಿ ರೂ.41.16 ಲಕ್ಷ ಸಹಾಯಧನದಲ್ಲಿ 1308 ಹೆಕ್ಟೇರ್ ಪ್ರದೇಶಕ್ಕೆ ಮಣ್ಣಿನ ಫಲವತ್ತತೆ ಹೆಚ್ಚಿಸಲು ಶೇ.50ರ ಸಹಾಯಧನದಲ್ಲಿ ಹಸಿರೆಲೆ ಗೊಬ್ಬರ ಬಿತ್ತನೆ ಬೀಜ, ಜಿಪ್ಸಂ, ಲಘು ಪೋಷಕಾಂಶಗಳು, ಜೈವಿಕ ಗೊಬ್ಬರವನ್ನು ವಿತರಣೆ ಮಾಡಲಾಗಿದೆ ಹಾಗೂ 59 ರೈತರಿಗೆ ಜೈವಿಕ ರಸಸಾರ ಘಟಕ ನಿರ್ಮಾಣ ಹಾಗೂ 51 ರೈತರಿಗೆ ಎರೆಹುಳು ಗೊಬ್ಬರ ಘಟಕ ನಿರ್ಮಾಣಕ್ಕೆ ಸಹಾಯಧನ ನೀಡಲಾಗಿದೆ.

8. **ಸಾವಯವ ಭಾಗ್ಯ ಯೋಜನೆ:**– ಸಾವಯವ ಕೃಷಿ ಉತ್ತೇಜನಕ್ಕಾಗಿ ಜಿಲ್ಲೆಯಲ್ಲಿ ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ 14 ಹೋಬಳಿಗಳಲ್ಲಿನ 14 ಗ್ರಾಮಗಳಲ್ಲಿ 100 ಎಕರೆ ಪ್ರದೇಶವನ್ನು ಸಾವಯವ ಕೃಷಿಗೆ ಒಳಪಡಿಸುವುದಲ್ಲದೆ ಸದರಿ ಗ್ರಾಮಗಳಲ್ಲಿ ಸಾವಯವ ಕೃಷಿಗೆ ಉತ್ತೇಜನ ನೀಡಲು 7.83 ಲಕ್ಷ ಸಹಾಯಧನದಲ್ಲಿ ವಿವಿಧ ಸಾವಯವ ಘಟಕಗಳ ಅನುಷ್ಠಾನಕ್ಕಾಗಿ ವೆಚ್ಚ ಭರಿಸಲಾಗಿದೆ.

9. **ಪರಂಪರಾಗತ ಕೃಷಿ ವಿಕಾಸ ಯೋಜನೆ:**– ಪ್ರತಿ ತಾಲ್ಲೂಕಿನ 3 ಗ್ರಾಮಗಳಲ್ಲಿ 50 ಎಕರೆ ಪ್ರದೇಶವನ್ನು ಸಾವಯವ ಕೃಷಿಗೆ ಒಳಪಡಿಸಲು ಆಯ್ದ ಗ್ರಾಮಗಳಲ್ಲಿ ಸಹಾಯಧನದಲ್ಲಿ ಸಾವಯವ ಕೃಷಿ ಪರಿಕರಗಳು ಮತ್ತು ಸಾವಯವ ಪರಿಕರಗಳ ತಯಾರಿಕಾ ಘಟಕಕ್ಕೆ ಸಹಾಯಧನ ನೀಡಲಾಗುವುದು. ಸದರಿ ವರ್ಷದಲ್ಲಿ ಯೋಜನೆಯಡಿ 4.61 ಲಕ್ಷ ವೆಚ್ಚ ಭರಿಸಲಾಗಿದೆ.

10. **ಹಾವು ಕಡಿತ ಮತ್ತು ಬೆಂಕಿ ಆಕಸ್ಮಿಕದಿಂದ ಹುಲ್ಲು ಮೆದೆ ನಷ್ಟಕ್ಕೆ ಪರಿಹಾರ:**– ಕೃಷಿ ಕೆಲಸದಲ್ಲಿ ತೊಡಗಿರುವಾಗ ಆಕಸ್ಮಿಕವಾಗಿ ಹಾವು ಕಚ್ಚಿ ಹಾಗೂ ಮರದಿಂದ ಬಿದ್ದು ಮರಣ ಹೊಂದಿದ 5 ಜನ ರೈತರಿಗೆ ತಲಾ ಒಂದು ಲಕ್ಷದಂತೆ ಒಟ್ಟು ರೂ.5.00 ಲಕ್ಷ ಪರಿಹಾರ ಹಾಗೂ ಬೆಂಕಿ ಆಕಸ್ಮಿಕದಿಂದ ಹುಲ್ಲು ಮೆದೆ ಸುಟ್ಟು ಹೋದ 22 ಜನ ರೈತರಿಗೆ 0.89 ಲಕ್ಷ ಪರಿಹಾರವನ್ನು ಉಪ ವಿಭಾಗ ಮಟ್ಟದ ಸಮಿತಿಯ ತೀರ್ಮಾನದ ಮೇರೆಗೆ ವಿತರಣೆ ಮಾಡಲಾಗಿದೆ. ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ 13 ರೈತ ಕುಟುಂಬಗಳಿಗೆ ಉಪವಿಭಾಗ ಮಟ್ಟದ ಸಮಿತಿಯ ಶಿಫಾರಸ್ಸಿನ ಮೇರೆಗೆ ಪ್ರತಿ ಕುಟುಂಬಕ್ಕೆ ರೂ.5.00 ಲಕ್ಷದಂತೆ ಒಟ್ಟು 65.00 ಲಕ್ಷಗಳ ಪರಿಹಾರವನ್ನು ವಿತರಣೆ ಮಾಡಲಾಗಿದೆ.

11. **ರಾಷ್ಟ್ರೀಯ ಆಹಾರ ಭದ್ರತಾ ಮಿಷನ್:**– ದ್ವಿದಳಧಾನ್ಯ ಬೆಳೆಗಳ ವಿಸ್ತೀರ್ಣ ಹಾಗೂ ಇಳುವರಿ ಹೆಚ್ಚಿಸುವ ಸಲುವಾಗಿ 98.17 ಲಕ್ಷ ಅನುದಾನದಲ್ಲಿ 3560 ಹೆ/ರೈತರ ಪ್ರದೇಶಕ್ಕೆ ಲಘುಪೋಷಕಾಂಶಗಳು/ಸಸ್ಯ ಸಂರಕ್ಷಣಾ ಔಷಧಿಗಳನ್ನು ಹಾಗೂ 753 ಹೆ. ಪ್ರದೇಶದ ಪ್ರಾತ್ಯಕ್ಷಿಕೆ ವಿಸ್ತೀರ್ಣಕ್ಕೆ 44.16 ಲಕ್ಷಗಳನ್ನು ಡಿ.ಬಿ.ಟಿ. ಮುಖಾಂತರ ರೈತರ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಲಾಗಿದೆ ಹಾಗೂ 1199 ಜನ ರೈತರಿಗೆ ಪವರ್ ಸ್ಪ್ರೆಯರ್ ಹಾಗೂ 153 ರೈತರಿಗೆ ತುಂತುರು ನೀರಾವರಿ ಘಟಕಗಳನ್ನು ಸಹಾಯಧನದಲ್ಲಿ ವಿತರಣೆ ಮಾಡಲಾಗಿದೆ.

12. **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ:**– ಕೃಷಿಯಲ್ಲಿ ನೀರಿನ ಮಿತ ಬಳಕೆಗಾಗಿ ಯೋಜನೆಯಡಿ 2990 ಜನ ರೈತರಿಗೆ 555.01 ಲಕ್ಷ ಅನುದಾನದಲ್ಲಿ ಶೇ.90ರ ಸಹಾಯಧನದಲ್ಲಿ ತುಂತುರು ನೀರಾವರಿ ಘಟಕಗಳನ್ನು ವಿತರಣೆ ಮಾಡಲಾಗಿದೆ. ಇದರಲ್ಲಿ 17 ಜನ ರೈತರಿಗೆ 16.88 ಲಕ್ಷ ಸಹಾಯಧನದಲ್ಲಿ ಕಬ್ಬು ಬೆಳೆಗೆ ಹನಿ ನೀರಾವರಿ ಸೌಲಭ್ಯ ಅಳವಡಿಸಿಕೊಳ್ಳಲು ಸಹಾಯಧನ ನೀಡಲಾಗಿದೆ.

13. **ಬಂಡವಾಳ ವೆಚ್ಚ ಯೋಜನೆ:**– ಕೃಷಿಯಲ್ಲಿ ನೀರಿನ ಮಿತ ಬಳಕೆಗಾಗಿ ಯೋಜನೆಯಡಿ 308 ಜನ ರೈತರಿಗೆ 55.65 ಲಕ್ಷ ಅನುದಾನದಲ್ಲಿ ಶೇ.90ರ ಸಹಾಯಧನದಲ್ಲಿ ತುಂತುರು ನೀರಾವರಿ ಘಟಕಗಳನ್ನು ವಿತರಣೆ ಮಾಡಲಾಗಿದೆ.

14. **ಮಣ್ಣು ಆರೋಗ್ಯ ಅಭಿಯಾನ:**– ಮಣ್ಣು ಆರೋಗ್ಯ ಚೀಟಿ ಕಾರ್ಯಕ್ರಮವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಹಾತ್ವಕಾಂಕ್ಷೆ ಯೋಜನೆಯಾಗಿದ್ದು ಜಿಲ್ಲೆಯ ಎಲ್ಲಾ ರೈತ ಹಿಡುವಳಿದಾರರಿಗೆ ಮಣ್ಣು ಮಾದರಿಗಳನ್ನು ಪರಿಕ್ಷೀಸಿ ಮಣ್ಣು ಆರೋಗ್ಯ ಚೀಟಿಗಳನ್ನು ಮುದ್ರಿಸಿ ವಿತರಿಸುವ ಕಾರ್ಯಕ್ಕಾಗಿ ರಾಮನಗರ ಜಿಲ್ಲೆಯಲ್ಲಿ ಮಣ್ಣು ಆರೋಗ್ಯ ಕೇಂದ್ರವನ್ನು ಪ್ರಾರಂಭಿಸಿದೆ ಯೋಜನೆಯ ವಿವಿಧ ಘಟಕಗಳ ಅನುಷ್ಟಾನಕ್ಕಾಗಿ 58.18 ಲಕ್ಷ ಅನುದಾನ ವೆಚ್ಚ ಮಾಡಲಾಗಿದೆ.

15. **ಕೃಷಿ ಭಾಗ್ಯ:–** ಮಳೆಯಾಶ್ರಿತ ರೈತ ಸಮುದಾಯದ ಜೀವನೋಪಾಯವನ್ನು ಉತ್ತಮಪಡಿಸುವುದಾಗಿದ್ದು. 2018–19ನೇ ಸಾಲಿನ ಯೋಜನೆಯಡಿ 607.9 ಲಕ್ಷ ಸಹಾಯಧನದಲ್ಲಿ 856 ಕೃಷಿಹೊಂಡಗಳನ್ನು ನಿರ್ಮಿಸಿ 856 ರೈತರಿಗೆ ಯೋಜನೆಯ ಸಹ ಘಟಕಗಳಾದ ತುಂತುರು ನೀರಾವರಿ, ಡೀಸೆಲ್ ಪಂಪ್‌ಸೆಟ್ ಘಟಕಗಳ ವಿತರಣೆಗಾಗಿ ಸಹಾಯಧನ ನೀಡಲಾಗಿದೆ.

16. **ಎಸ್.ಎಂ.ಎ.ಎಂ:–** ಕೃಷಿ ಯಾಂತ್ರೀಕರಣ ಯೋಜನೆಯಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹೊಂದಾಣಿಕೆ ಮೊತ್ತ ರೂ.298.68 ಲಕ್ಷ ಅನುದಾನದಲ್ಲಿ 1147 ಜನ ಫಲಾನುಭವಿಗಳಿಗೆ ಆಧುನಿಕ ಕೃಷಿ ಯಂತ್ರೋಪಕರಣಗಳನ್ನು ಇಲಾಖೆ ನಿಗಧಿಪಡಿಸಿದ ಸಹಾಯಧನದಲ್ಲಿ ವಿತರಣೆ ಮಾಡಲಾಗಿದೆ.

17. **ಎಣ್ಣೆಕಾಳು ಅಭಿವೃದ್ಧಿ ಯೋಜನೆ:** ಯೋಜನೆಯಡಿ 1.89 ಲಕ್ಷ ಸಹಾಯಧನದಲ್ಲಿ 380 ಹೆ. ಪ್ರದೇಶಕ್ಕೆ ಸಹಾಯಧನದಲ್ಲಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ವಿತರಣೆ ಮಾಡಲಾಗಿದೆ.

18. **ಕೃಷಿ ಯಂತ್ರಧಾರೆ ಯೋಜನೆ:** ಸ್ಥಳೀಯವಾಗಿ ಕಡಿಮೆ ಬಾಡಿಗೆ ದರದಲ್ಲಿ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಒದಗಿಸುವ ಸಲುವಾಗಿ ಇಲಾಖೆಯ ಸಹಯೋಗದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ವತಿಯಿಂದ ಕಾರ್ಯನಿರ್ವಹಿಸಲಾಗಿರುವ ಜಿಲ್ಲೆಯ 4 ಕೃಷಿ ಯಂತ್ರಧಾರೆ ಕೇಂದ್ರಗಳಿಗೆ ನೂತನ ಕೃಷಿ ಯಂತ್ರೋಪಕರಣಗಳ ಖರೀದಿಗೆ 19.66 ಲಕ್ಷಗಳ ಸಹಾಯಧನ ನೀಡಲಾಗಿದೆ.

19. **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಕೃಷಿ ಸಂಸ್ಕರಣೆ):** ಯೋಜನೆಯಡಿ 26.87 ಲಕ್ಷ ಸಹಾಯಧನದಲ್ಲಿ 2690 ಫಲಾನುಭವಿಗಳಿಗೆ 8X6 ಮೀ ಅಳತೆಯ ಹೆಚ್‌ಡಿಪಿಇ ಟಾರ್ಪಾಲುಗಳನ್ನು ಶೇ.50ರ ಸಹಾಯಧನದಲ್ಲಿ ವಿತರಣೆ ಮಾಡಲಾಗಿದೆ.

20. **ಆತ್ಮ ಯೋಜನೆ:–** ಯೋಜನೆಯಡಿ 109.14 ಲಕ್ಷ ಅನುದಾನದಲ್ಲಿ ರೈತರಿಗೆ ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ, ಅರಣ್ಯ ಮೀನುಗಾರಿಕೆ ಇಲಾಖೆಗಳ ಸಹಭಾಗಿತ್ವದಲ್ಲಿ ರೈತರಿಗೆ ತರಬೇತಿ, ಪ್ರಾತ್ಯಕ್ಷಿಕೆ, ಅಂತರ್ ರಾಜ್ಯ ಪ್ರವಾಸ, ರೈತ ಶಕ್ತಿ ಗುಂಪುಗಳ ರಚನೆ, ಕಿಸಾನ್ ಗೋಷ್ಟಿ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

21. **ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ–ಜಲಾನಯನ ಅಭಿವೃದ್ಧಿ:–** 2018–19ನೇ ಸಾಲಿಗೆ ಪ್ರಧಾನಮಂತ್ರಿ ಕೃಷಿ ಸಿಂಚಯಿ ಯೋಜನೆಯಡಿ ಲಭ್ಯವಿದ್ದ ರೂ.338.54 ಲಕ್ಷಗಳು (ಪ್ರಾರಂಭಿಕ ಶಿಲ್ಕು) ಹಾಗೂ ಬಿಡುಗಡೆಯಾದ ಅನುದಾನ ರೂ.709.66 ಲಕ್ಷಗಳು ಒಟ್ಟು ರೂ.1048.20 ಲಕ್ಷಳಲ್ಲಿ, ರೂ.438.72 ಲಕ್ಷಗಳನ್ನು ಜಲಾನಯನ ಪ್ರದೇಶದಲ್ಲಿ ಜಲಾನಯನ ಕಾಮಗಾರಿಗಳು ಹಾಗೂ ಉತ್ಪಾದನಾ ಪದ್ದತಿ ಮತ್ತು ಕಿರು ಉದ್ದಿಮೆ ಚಟುವಟಿಕೆಗಳಿಗೆ ವೆಚ್ಚ ಮಾಡಲಾಗಿರುತ್ತದೆ. ಕೃಷಿ ಘಟಕದಡಿ ಜಿಲ್ಲೆಯಲ್ಲಿ ಜಲಾನಯನ ಕಾಮಗಾರಿಗಳಾದ ತಡೆಅಣೆ–65 ಸಂ, ನಾಲಾ ಬದು–7 ಸಂ, ಕಂದಕ ಬದು ನಿರ್ಮಾಣ–61.21 ಹೆ. ಪ್ರದೇಶದಲ್ಲಿ ಕೈಗೊಳ್ಳಲಾಗಿದೆ ಹಾಗೂ ಉತ್ಪಾದನಾ ಪದ್ದತಿ ಮತ್ತು ಕಿರು ಉದ್ದಿಮೆ ಘಟಕದಡಿ 426.63ಹೆ. ರಾಗಿ ಬೆಳೆ ಪ್ರಾತ್ಯೇಕ್ಷಿಕೆ, 20 ಪಶು ಆರೋಗ್ಯ ಶಿಬಿರ, 6700 ಸಂ ಮೇವಿನ ಕಿರುಪೊಟ್ಟಣಗಳ ವಿತರಣೆ ಮಾಡಲಾಗಿದೆ. ಸದರಿ ಯೋಜನೆಯಡಿ ಉಳಿಕೆ ಅನುದಾನವನ್ನು 2019–20ನೇ ಸಾಲಿನಲ್ಲಿ ಜಲಾನಯನ ಕಾಮಗಾರಿ ಕೈಗೊಳ್ಳಲು ವೆಚ್ಚ ಭರಿಸಲಾಗುವುದು.

22. **ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ–ಇತರೆ ಉಪಚಾರಗಳು:–** 2018–19ನೇ ಸಾಲಿಗೆ ಲಭ್ಯವಿದ್ದ ಅನುದಾನ ರೂ.184.51 ಲಕ್ಷಗಳು (ಪ್ರಾರಂಭಿಕ ಶಿಲ್ಕು) ಬಿಡುಗಡೆಯಾದ ಅನುದಾನ ರೂ.145.02 ಲಕ್ಷಗಳು ಒಟ್ಟು ರೂ.329.53 ಲಕ್ಷಗಳಲ್ಲಿ, 245.23 ಲಕ್ಷಗಳನ್ನು ಜಲಾನಯನ ಪ್ರದೇಶದಲ್ಲಿ ಜಲಾನಯನ ಕಾಮಗಾರಿಗಳನ್ನು ಮಾಡಲಾಗಿರುತ್ತದೆ. ಕೃಷಿ ಘಟಕದಡಿ ಜಿಲ್ಲೆಯಲ್ಲಿ ಜಲಾನಯನ ಕಾಮಗಾರಿಗಳಾದ ತಡೆಅಣೆ–46 ಸಂ, ನಾಲಾ ಬದು–9 ಸಂ ಗಳನ್ನು ಕೈಗೊಳ್ಳಲಾಗಿದೆ. ಸದರಿ ಯೋಜನೆಯಡಿ ಉಳಿಕೆ ಅನುದಾನವನ್ನು 2019–20ನೇ ಸಾಲಿನಲ್ಲಿ ಜಲಾನಯನ ಕಾಮಗಾರಿ ಕೈಗೊಳ್ಳಲು ವೆಚ್ಚ ಭರಿಸಲಾಗುವುದು.

23. **ರಾಷ್ಟ್ರೀಯ ಕೃಷಿ ಸುಸ್ಥಿರ ಅಭಿಯಾನ ಮಳೆಯಾಶ್ರಿತ ಪ್ರದೇಶಾಭಿವೃದ್ಧಿ (NMSA-RAD):-** ಯೋಜನೆಯಡಿ 80.15 ಲಕ್ಷ ಅನುದಾನದಲ್ಲಿ ಮಳೆಯಾಶ್ರಿತ ಪ್ರದೇಶದಲ್ಲಿ ಕೃಷಿ ಮತ್ತು ಕೃಷಿ ಅವಲಂಬಿತ ಘಟಕಗಳ ಅಭಿವೃದ್ಧಿಗಾಗಿ 311 ಫಲಾನುಭವಿಗಳಿಗೆ ಜಾನುವಾರು ಆಧಾರಿತ ಪದ್ಧತಿ ಹಾಗೂ ನಾಲ್ಕು ಸಮಗ್ರ ಕೃಷಿ ಪದ್ದತಿ ತರಬೇತಿಗೆ ಸಹಾಯಧನ ನೀಡಲಾಗಿದೆ.

24. **ರಾಷ್ಟ್ರೀಯ ವಿಕಾಸ ಯೋಜನೆ:** ತಡೆ ಅಣೆ ನಿರ್ಮಾಣ (RKVY-CD) 2018–19ನೇ ಸಾಲಿನಲ್ಲಿ ರೂ.48.47 ಲಕ್ಷಗಳು ಬಿಡುಗಡೆಯಾಗಿದ್ದು ರೂ.45.19 ಲಕ್ಷಗಳನ್ನು 10 ತಡೆ ಅಣೆ ನಿರ್ಮಾಣಕ್ಕಾಗಿ ವೆಚ್ಚ ಮಾಡಲಾಗಿದೆ.

ತೋಟಗಾರಿಕೆ ಇಲಾಖೆ

ಮುನ್ನೋಟ:

ರಾಮನಗರ ಜಿಲ್ಲೆಯು ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ.27 ಭೂದಾಪು 2006 (ಭಾಗ–3), ದಿನಾಂಕ: 03–08–2007. ಕರ್ನಾಟಕ ರಾಜ್ಯ ಗೆಜೆಟ್ ವಿಶೇಷ ಪತ್ರಿಕೆ ಭಾಗ–4 (ಎ) ರಂತೆ ಹೊಸದಾಗಿ 2007–08 ನೇ ಸಾಲಿನಿಂದ ಅಸ್ತಿತ್ವಕ್ಕೆ ಬಂದಿರುತ್ತದೆ. ರಾಮನಗರ ಜಿಲ್ಲೆಯ ಒಟ್ಟು 3,55,912 ಹೆ ಪ್ರದೇಶದ ಭೌಗೋಳಿಕ ವಿಸ್ತೀರ್ಣದಲ್ಲಿದ್ದು (3555 ಡ ಕಿ.ಮೀ) ಒಟ್ಟು 10.30 ಲಕ್ಷ ಜನಸಂಖ್ಯೆಯನ್ನು ಹೊಂದಿರುತ್ತದೆ. ಜಿಲ್ಲೆಯ ಉತ್ತರ ಅಕ್ಷಾಂಶ 12 ಮತ್ತು ಪೂರ್ವ ರೇಖಾಂಶ 72 ಹಾಗೂ 77.3 ಬೆಂಗಳೂರು ನೈರುತ್ಯ ದಿಕ್ಕಿನವರೆಗೆ ಹರಡಿರುತ್ತದೆ. ಇದು ಕರ್ನಾಟಕದ 28 ನೇ ಜಿಲ್ಲೆಯಾಗಿದ್ದು ಮೂಲತಃ ಬೆಂಗಳೂರಿನಿಂದ ಬೇರ್ಪಡಿಸಲಾಗಿದೆ. ರಾಮನಗರವು ಬೆಂಗಳೂರಿನಿಂದ 50 ಕಿ.ಮೀಗಳ ಅಂತರದಲ್ಲಿದ್ದು ಒಟ್ಟು ನಾಲ್ಕು ತಾಲ್ಲೂಕುಗಳನ್ನು (ರಾಮನಗರ, ಚನ್ನಪಟ್ಟಣ, ಮಾಗಡಿ ಹಾಗೂ ಕನಕಪುರ) ಹೊಂದಿರುತ್ತದೆ.

ಜಿಲ್ಲೆಯ ವಾರ್ಷಿಕ ಮಳೆಯ ಪ್ರಮಾಣವು 800 ರಿಂದ 900 ಮಿ.ಮಿ ಆಗಿರುತ್ತದೆ. ಇಲ್ಲಿಯ ಮಣ್ಣಿನ ಗುಣ ಮತ್ತು ಹವಾಗುಣ ಬಹಳಷ್ಟು ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಯೋಗ್ಯವಾಗಿರುತ್ತದೆ. ಹಣ್ಣಿನ ಬೆಳೆಗಳಾದ ಮಾವು, ಬಾಳೆ, ಸೀಬೆ, ಸಪೋಟ, ಪಪ್ಪಾಯ ಹಾಗೂ ತರಕಾರಿ ಬೆಳೆಗಳಾದ ಟೊಮ್ಯಾಟೊ, ಬದನೆ, ಹಸಿಮೆಣಸಿನಕಾಯಿ, ಗೆಡ್ಡೆಕೋಸು, ಬೆಂಡೆ ಈ ಜಿಲ್ಲೆಯ ಪ್ರಮುಖವಾದ ತೋಟಗಾರಿಕೆ ಬೆಳೆಗಳಾಗಿರುತ್ತದೆ. ತೆಂಗು ಮತ್ತು ಅಡಿಕೆ ಮುಖ್ಯವಾದ ತೋಟದ ಬೆಳೆಗಳಾಗಿರುತ್ತದೆ. ಪುಷ್ಪ ಬೆಳೆಗಳಾದ ಗುಲಾಬಿ, ಚಂಡು ಹೂ, ಮಲ್ಲಿಗೆ, ಕಾಕಡ, ಸೇವಂತಿಗೆ, ಆಸ್ಟರ್, ಮುಂಖಾದವುಗಳನ್ನು ವಾಣಿಜ್ಯವಾಗಿ ಬೆಳೆಯಬಹುದಾಗಿರುತ್ತದೆ.

ಆದ್ದರಿಂದ ರಾಮನಗರ ಜಿಲ್ಲೆಯ ತೋಟಗಾರಿಕೆ ಬೆಳೆಗಳ ತವರೂರಾಗಿದ್ದು, ಇನ್ನೂ ಹೆಚ್ಚಿನ ಅಭಿವೃದ್ಧಿಗೆ ವಿಪುಲ ಅವಕಾಶವಿರುತ್ತದೆ. ಇಂದಿನ ದಿನಗಳಲ್ಲಿ ತೋಟಗಾರಿಕೆಯು ಕೃಷಿಗಿಂತ ಹೆಚ್ಚು ಲಾಭದಾಯಕವಾಗಿರುವ ಕಾರಣ ರೈತರು ತೋಟಗಾರಿಕೆ ಬೆಳೆಗಳಿಗೆ ಆಸಕ್ತಿ ತೋರುತ್ತಿರುವುದು ಸಾಮಾನ್ಯವಾಗಿರುವುದರಿಂದ ತೋಟಗಾರಿಕೆ ಇಲಾಖೆಯ ಜವಾಬ್ದಾರಿಯು ಸರಿಸಮಾನವಾಗಿ ಹೆಚ್ಚುತ್ತಿದೆ.

ಇತ್ತೀಚಿನ ದಿನಗಳಲ್ಲಿ ತೋಟಗಾರಿಕಾ ಬೆಳೆಗಳು ಹೆಚ್ಚಿನ ಪ್ರಾಮುಖ್ಯತೆ ಪಡೆದಿದ್ದು, ರೈತರ ಆರ್ಥಿಕ ಮಟ್ಟವನ್ನು ಹೆಚ್ಚಿಸುವಲ್ಲಿ ಸಫಲವಾಗಿದೆ. ತೋಟಗಾರಿಕೆಯ ಹೊಸ ತಾಂತ್ರಿಕತೆಗಳ ಅನುಕರಣೆಗೆ ರೈತರ ಮುಂದೆ ಬರುತ್ತಿರುವ ಹಿನ್ನೆಲೆಯಲ್ಲಿ ರೈತ ಸಮುದಾಯದಿಂದ ಹೆಚ್ಚಿನ ಬೇಡಿಕೆ ಬರುತ್ತಿದೆ. ಜಿಲ್ಲೆಯ ರೈತರಿಗೆ ವಿವಿಧ ತೋಟಗಾರಿಕೆ ಬೆಳೆಗಳ ಉತ್ಪಾದನೆಯಲ್ಲಿ ತುಂಬಾ ಆಸಕ್ತಿ ಇದ್ದು ಸಕ್ರಿಯವಾಗಿ ಕಾರ್ಯಪ್ರವೃತ್ತರಾಗಿರುತ್ತಾರೆ.

[ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ ಹಾಗೂ ತೋಟಗಾರಿಕೆ ಅಭಿವೃದ್ಧಿ.

- ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ : 355912 ಹೆ.
- ಒಟ್ಟು ಸಾಗುವಳಿ ಭೂಮಿ ವಿಸ್ತೀರ್ಣ : 208982 ಹೆ.
- ಒಟ್ಟು ಅಂದಾಜು ತೋಟಗಾರಿಕೆ ಬೆಳೆಗಳ ವಿಸ್ತೀರ್ಣ : 61055 ಹೆ.
- ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ತೋಟಗಾರಿಕೆ ಬೆಳೆಯ ವಿಸ್ತೀರ್ಣ : ಶೇ.17.15
- ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಜಿಲ್ಲೆಯ

ಒಟ್ಟು ಸಾಗುವಳಿ ಭೂಮಿ ವಿಸ್ತೀರ್ಣದಲ್ಲಿ : ಶೇ.29.21

- ಒಟ್ಟು ಅಂದಾಜು ಬೀಳು ಭೂಮಿ ವಿಸ್ತೀರ್ಣ : 30,000 ಹೆ.
- ತೋಟಗಾರಿಕೆ ಬೆಳೆಗಳನ್ನು ಅಭಿವೃದ್ಧಿ ಪಡಿಸಲು
  ಅವಕಾಶವಿರುವಂತಹ ವಿಸ್ತೀರ್ಣ : 30,000 ಹೆ.

ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು

1. ಹನಿ ನೀರಾವರಿಗಾಗಿ ಕೇಂದ್ರವಲಯ ಯೋಜನೆ: (ಲೆಕ್ಕ ಶೀರ್ಷಿಕೆ: 2435–00–101–0–28)

2018–19 ನೇ ಸಾಲಿನ ಹನಿ ನೀರಾವರಿಯಾಗಿ ಕೇಂದ್ರವಲಯ ಯೋಜನೆಗೆ ರೂ.10.00 ಲಕ್ಷಗಳ ಗುರಿಯಿದ್ದು, ಬಿಡುಗಡೆಯಾದ ರೂ.10.00 ಲಕ್ಷಗಳನ್ನು ಉಪಯೋಗಿಸಿಕೊಂಡು ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

2. ತೋಟಗಾರಿಕಾ ಕಟ್ಟಡಗಳು (ಲೆಕ್ಕ ಶೀರ್ಷಿಕೆ: 2435–00–101–0–32)

2018–19 ನೇ ಸಾಲಿನ ತೋಟಗಾರಿಕಾ ಕಟ್ಟಡಗಳು ಯೋಜನೆಗೆ ರೂ.11.00 ಲಕ್ಷಗಳ ಗುರಿಯಿದ್ದು, ಈ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಕ್ಕೆ ಬಿಡುಗಡೆಯಾದ ರೂ.11.00 ಲಕ್ಷಗಳಲ್ಲಿ ಅವರ ವತಿಯಿಂದಲೇ ರೂ.9.89 ಲಕ್ಷಗಳು ಪ್ರಗತಿಯನ್ನು ಸಾಧಿಸಿ, ಹಿ.ಸ.ತೋ.ನಿ (ಜಿಪಂ) ಚನ್ನಪಟ್ಟಣ ತಾಲ್ಲೂಕಿನ ವಂದಾರಗುಪ್ಪೆ ತೋಟಗಾರಿಕೆ ಕ್ಷೇತ್ರದಲ್ಲಿ ತಾಂತ್ರಿಕ ಮಾಹಿತಿ ಕಟ್ಟಡ ನಿರ್ಮಾಣ ಹಾಗೂ ಸಲಹಾ ಕೇಂದ್ರ ನವೀಕರಣ ಕಾಮಗಾರಿ ಕನಕಪುರ ತಾಲ್ಲೂಕು ರವರ ಕಛೇರಿ ನವೀಕರಣ ಕಾಮಗಾರಿ ಮಾಡಲಾಗಿರುತ್ತದೆ.

3. ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ: (ಲೆಕ್ಕ ಶೀರ್ಷಿಕೆ: 2435–00–101–0–35)

ಈ ಯೋಜನೆಯಡಿ ತೋಟಗಾರಿಕೆ ಕ್ಷೇತ್ರಗಳಲ್ಲಿ ನಿರ್ವಹಣಾ ಕಾರ್ಯ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿಯನ್ನು ತೆಗೆದುಕೊಳ್ಳಲಾಗುವುದು. ಸದರಿ ಕಾರ್ಯಕ್ಕೆ ಈ ಸಾಲಿನಲ್ಲಿ ರೂ.20.00 ಲಕ್ಷ ನಿಗಧಿಪಡಿಸಿದ್ದು, ಪೂರ್ಣ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರೀ ಅನುದಾನದಲ್ಲಿ ರೂ.19.99 ಲಕ್ಷಗಳ ಆರ್ಥಿಕ ಪ್ರಗತಿ ಸಾಧಿಸಿದ್ದು, ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

ಕ್ಷೇತ್ರ ನಿರ್ವಹಣಾ ಕಾರ್ಯಗಳು:

- ಬೇವಿನ ಹಿಂಡಿ, ಕೊಟ್ಟಿಗೆ ಗೊಬ್ಬರ, ಕೆಂಪುಮಣ್ಣು, ಜೈವಿಕ ಗೊಬ್ಬರ ಹಾಗೂ ಸಲಕರಣೆಗಳ ಖರೀದಿ ಮತ್ತು ಇತರೆ ಕಾರ್ಯಗಳು.
- ಉಳುಮೆ, ಪಾತಿ ಮುಂತಾದ ಗುತ್ತಿಗೆ ಕೆಲಸಗಳ ವೆಚ್ಚ.

4. ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ: (ಲೆಕ್ಕ ಶೀರ್ಷಿಕೆ: 2435–00–101–0–36)

ಜಿಲ್ಲೆಯಲ್ಲಿ ಹೊಸದಾಗಿ ತೋಟಗಳನ್ನು ಅಭಿವೃದ್ಧಿ ಪಡಿಸಲಿಸಚ್ಚಿಸುವ ರೈತರಿಗೆ ಒಳ್ಳೆಯ ಗುಣಮಟ್ಟದ ತೆಂಗಿನ ಸಸಿಗಳು, ಉತ್ಪಾದಿಸಿ ಸರಬರಾಜು ಮಾಡುವ ಉದ್ದೇಶವಿರುತ್ತದೆ. 2017–18 ನೇ ಸಾಲಿನಲ್ಲಿ 21086 ಸಂಖ್ಯೆಯ ಉತ್ತಮ ಗುಣಮಟ್ಟದ ಬೀಜದ ತೆಂಗಿನಕಾಯಿಗಳನ್ನು ಸಂಗ್ರಹಿಸಿ ಸಸಿಗಳನ್ನು ಉತ್ಪಾದಿಸುವ ಗುರಿ ಇದ್ದು, ಪೂರ್ಣ ಪ್ರಗತಿ ಸಾಧಿಸಲಾಗಿರುತ್ತದೆ. 2018–19 ನೇ ಸಾಲಿನಲ್ಲಿ ಬಿತ್ತನೆ ಮಾಡಿ ಅಭಿವೃದ್ಧಿಪಡಿಸಲಾದ 21000 ತೆಂಗಿನ ಗಿಡಗಳ ನಿರ್ವಹಣೆ ಮಾಡಲಾಗಿದೆ. ಈ ಕಾರ್ಯಕ್ರಮಕ್ಕೆ ರೂ.6.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ರೂ.5.99 ಲಕ್ಷಗಳ ಆರ್ಥಿಕ ಪ್ರಗತಿ ಸಾಧಿಸಲಾಗಿರುತ್ತದೆ.]

5. ಪ್ರಚಾರ ಮತ್ತು ಸಾಹಿತ್ಯ (ಲೆಕ್ಕ ಶೀರ್ಷಿಕೆ: 2435–00–101–0–35):

ಸದರಿ ಯೋಜನೆಯಡಿ ತೋಟಗಾರಿಕೆ ಬೆಳೆಗಳ ಬಗ್ಗೆ ತಾಂತ್ರಿಕ ವಿಷಯಗಳು ಹಾಗೂ ಇಲಾಖಾ ಯೋಜನೆಗಳ ಬಗ್ಗೆ ಮಾಹಿತಿ ನೀಡಲು ಕರಪತ್ರ, ಕಚಿಟಠಿಟಜಣ ಹಾಗೂ ಬ್ರೋಚರ್‌ಗಳನ್ನು ಮುದ್ರಿಸಿ ರೈತರಿಗೆ ವಿತರಿಸಲು ರೂ.6.00 ಲಕ್ಷಗಳ ಗುರಿಯಿದ್ದು, ಬಿಡಗಡೆಯಾದ ರೂ.5.98 ಲಕ್ಷಗಳನ್ನು ಉಪಯೋಗಿಸಿಕೊಂಡು ಪ್ರಗತಿ ಸಾಧಿಸಲಾಗಿರುತ್ತದೆ.

6. ಜೇನು ಕೃಷಿ: (ಲೆಕ್ಕ ಶೀರ್ಷಿಕೆ: 2851–00–107–0–33):

ಈ ಯೋಜನೆಯಡಿ ತೋಟಗಾರಿಕೆ ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಲು ಜೇನು ಕೃಷಿ ಮಾಡುವ ರೈತರಿಗೆ ಶೇಕಡ.50 ರ ಸಹಾಯಧನದಲ್ಲಿ ಜೇನು ಪೆಟ್ಟಿಗೆ ಮತ್ತು ಜೇನು ಕಾಲೋನಿ ನೀಡಲು ಹಾಗೂ ತರಬೇತಿ ವೆಚ್ಚಕ್ಕಾಗಿ ರೂ.2.00 ಲಕ್ಷಗಳ ಗುರಿಯಿದ್ದು, ಬಿಡಗಡೆಯಾದ ರೂ.1.98 ಲಕ್ಷಗಳನ್ನು ಉಪಯೋಗಿಸಿಕೊಂಡು ಪ್ರಗತಿ ಸಾಧಿಸಲಾಗಿರುತ್ತದೆ.

ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು

1. ರೈತರಿಗೆ ತರಬೇತಿ (ಲೆಕ್ಕ ಶೀರ್ಷಿಕೆ: 2435–00–101–0–64)

ತೋಟಗಾರಿಕಾ ಕ್ಷೇತ್ರಗಳಲ್ಲಿ ಅಭಿವೃದ್ಧಿಪಡಿಸಲಾದ ಆಧುನಿಕ ತಂತ್ರಜ್ಞಾನವನ್ನು ರೈತರಿಗೆ ಮನದಟ್ಟು ಮಾಡುವ ಸಲುವಾಗಿ ರೈತರಿಗೆ ತರಬೇತಿಗಾಗಿ ರೂ.0.50 ಲಕ್ಷಗಳ ಅನುದಾನದ ಗುರಿ ಇದ್ದು, ಅದರಲ್ಲಿ ರೂ. 0.38 ಲಕ್ಷಗಳ ಪ್ರಗತಿ ಸಾಧಿಸಲಾಗಿರುತ್ತದೆ.

2. ರೈತರಿಗೆ ಸಹಾಯ: (ಲೆಕ್ಕ ಶೀರ್ಷಿಕೆ: 2435–00–101–0–62)

ಈ ಯೋಜನೆಯಡಿಯಲ್ಲಿ ನಾಲ್ಕು ಕಾರ್ಯಕ್ರಮಗಳಿರುತ್ತವೆ. ರೈತರಿಗೆ ಸಹಾಯ ಯೋಜನೆಗೆ ರೂ.10.00 ಲಕ್ಷಗಳ ಗುರಿಯಿದ್ದು, ರೂ.9.67 ಲಕ್ಷಗಳ ಪ್ರಗತಿಯನ್ನು ಸಾಧಿಸಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತದೆ.

- **ಪ್ರದೇಶ ವಿಸ್ತರಣೆ:**

  ರೈತರ ತೋಟದಲ್ಲಿ ಬಹುವಾರ್ಷಿಕ ತೋಟಗಾರಿಕೆ ಕಸಿ ಗಿಡಗಳನ್ನು ನೆಡಲು ರೂ 6.16000 ಲಕ್ಷಗಳನ್ನು ವೆಚ್ಚ ಭರಿಸಿ 675 ಎಕರೆ ಭೌತಿಕ ಸಾಧನೆ ಮಾಡಲಾಗಿದೆ.

- **ಅಲಂಕಾರಿಕ ಗಿಡಗಳ ಅಭಿವೃದ್ಧಿ:**

  ರಾಷ್ಟ್ರೀಯ ದಿನಾಚರಣೆಯಂದು ಕಛೇರಿ ಮತ್ತು ಸರ್ಕಾರಿ ಕಾರ್ಯಕ್ರಮಗಳ ವೇದಿಕೆಯ ಮುಂದೆ ಜೋಡಿಸಲು ಮತ್ತು ರೂ.0.45 ಲಕ್ಷಗಳನ್ನು ವೆಚ್ಚ ಭರಿಸಿ 1000 ಅಲಂಕಾರಿಕಾ ಗಿಡಗಳನ್ನು ಅಭಿವೃದ್ಧಿ ಪಡಿಸುವ ಗುರಿಯಿದ್ದು ಪೂರ್ಣ ಗುರಿ ಸಾಧಿಸಲಾಗಿದೆ.

- **ಶೇಕಡ 50 ರ ಸಹಾಯಧನದಲ್ಲಿ ಸಸ್ಯಸಂರಕ್ಷಣಾ ಔಷಧಿಗಳ ವಿತರಣೆ:**

  ಜಿಲ್ಲೆಯಲ್ಲಿ ರೈತರು ಬೆಳೆಯುತ್ತಿರುವ ತೋಟಗಾರಿಕೆ ಬೆಳೆಗಳಿಗೆ ಬಾಧಿಸುತ್ತಿರುವ ಕ್ರಿಮಿಕೀಟ ಹಾಗೂ ರೋಗಗಳನ್ನು ನಿಯಂತ್ರಿಸುವ ಸಲುವಾಗಿ ಶೇಕಡಾ 50 ರಷ್ಟು ಸಹಾಯಧನದಲ್ಲಿ ಫಲಾನುಭವಿಗಳಿಗೆ ರೂ.2.46 ಲಕ್ಷಗಳ ವೆಚ್ಚ ಭರಿಸಿ ಆರ್ಥಿಕ ಪ್ರಗತಿ ಸಾಧಿಸಲಾಗಿದೆ.

- **ಸಾಮಾಜಿಕ ತೋಟಗಾರಿಕೆ:**

  ಈ ಯೋಜನೆಯಡಿ ಶಾಲಾ ಆವರಣದಲ್ಲಿ ಹಾಗೂ ಸರ್ಕಾರಿ ಸಂಸ್ಥೆಗಳ ಆವರಣದಲ್ಲಿ ಪರಿಸರ/ ವನ ಸಂಪತ್ತು ಹೆಚ್ಚಿಸಲು ಹಣ್ಣಿನ ಕಸಿ/ಸಸಿ ಅಥವಾ ಇತರ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ಗಿಡಗಳನ್ನು ವಿತರಿಸಿ ಕಿರು ತೋಟ ನಿರ್ಮಿಸಲು ಕ್ರಮ ವಹಿಸುವುದು. ಹಾಗೂ ಸಾಮಾಜಿಕ ತೋಟಗಾರಿಕೆಗೆ ಅಭಿವೃದ್ಧಿಗಾಗಿ ಒಟ್ಟು ರೂ.0.60 ಲಕ್ಷಗಳ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

3. ವಿಶೇಷ ಘಟಕ ಯೋಜನೆ: (ಲೆಕ್ಕ ಶೀರ್ಷಿಕೆ: 2225–00–101–0–64)

ಈ ಯೋಜನೆಯಡಿ ಪರಿಶಿಷ್ಟ ಜಾತಿಯ ಫಲಾನುಭವಿಗಳ ಜಮೀನಿನಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ರೂ.1.20 ಲಕ್ಷಗಳ ಗುರಿಯಿದ್ದು, ರೂ.1.20 ಲಕ್ಷಗಳ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

* * * * *

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ

ಜಿಲ್ಲೆಯು ಹೈನೋದ್ಯಮಕ್ಕೆ ಹೆಸರು ವಾಸಿಯಾಗಿದ್ದು ಸರಾಸರಿ ವಾರ್ಷಿಕ 2512 ಲಕ್ಷ ಲೀಟರ್ ಹಾಲು, ಮಾಂಸ 458.56 ಸಾವಿರ ಟನ್, ಮೊಟ್ಟೆ 157.4 ಲಕ್ಷ ಉತ್ಪಾದನೆಯಾಗುತ್ತಿದೆ. ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದಡಿ ಜಿಲ್ಲೆಯಲ್ಲಿ 882 ಹಾಲು ಉತ್ಪಾದಕರ ಸಹಕಾರ ಸಂಘಗಳು ಅಸ್ಥಿತ್ವದಲ್ಲಿರುತ್ತವೆ.

ಹತ್ತೋಂಬತ್ತನೇ ಜಾನುವಾರು ಗಣತಿಯಂತೆ (2012 ರ) ಒಟ್ಟು ಜಾನುವಾರುಗಳ ಸಂಖ್ಯೆ:– ದೇಶೀ ತಳಿ ದನ–1.34 ಲಕ್ಷ, ಮಿಶ್ರತಳಿ ದನ–1.25 ಲಕ್ಷ, ಎಮ್ಮೆ–0.30 ಲಕ್ಷ, ಕುರಿ–1.52 ಲಕ್ಷ, ಮೇಕೆ–1.20 ಲಕ್ಷ ಮತ್ತು ಹಿತ್ತಲ ಕೋಳಿ–2.32 ಲಕ್ಷ, ವಾಣಿಜ್ಯ ಮೊಟ್ಟೆ ಕೋಳಿ 1.21 ಲಕ್ಷ, ಮಾಂಸದ ಕೋಳಿ 9.31 ಲಕ್ಷ ಇರುತ್ತವೆ. ಜಿಲ್ಲೆಯಲ್ಲಿ 2.47 ಲಕ್ಷ ಕುಟುಂಬಗಳಿದ್ದು, 1.76 ಲಕ್ಷ ಕುಟುಂಬಗಳು ಪಶುಪಾಲನೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. (ದನ ಸಾಕಾಣಿಕೆದಾರರು 0.87 ಲಕ್ಷ, ಎಮ್ಮೆ ಸಾಕಾಣಿಕೆದಾರರು 0.16 ಲಕ್ಷ, ಕುರಿ/ಮೇಕೆ ಸಾಕಾಣಿಕೆದಾರರು 0.46 ಲಕ್ಷ, ಕೋಳಿ ಸಾಕಾಣಿಕೆದಾರರು 0.27 ಲಕ್ಷ) ಜಿಲ್ಲೆಯಲ್ಲಿ ಪಾಲಿಕ್ಲಿನಿಕ್ 1, ಪಶುಆಸ್ಪತ್ರೆ 16, ಪಶುಚಿಕಿತ್ಸಾಲಯ 63, ಸಂಚಾರಿ ಪಶುಚಿಕಿತ್ಸಾಲಯ 4, ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ 36, ಒಟ್ಟು 120 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ಪಶುಸಂಗೋಪನಾ ಇಲಾಖೆಯು ಅಭಿವೃದ್ಧಿ ಇಲಾಖೆಗಳಲ್ಲೊಂದಾಗಿದ್ದು ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರು, ತಾಲ್ಲೂಕು/ ಹೋಬಳಿ ಮಟ್ಟದಲ್ಲಿ ಸಹಾಯಕ ನಿರ್ದೇಶಕರು, ಪಶುವೈದ್ಯಾಧಿಕಾರಿ ಹಾಗೂ ಗ್ರಾಮಾಂತರ ಪಶುವೈದ್ಯ ಸಂಸ್ಥೆಗಳಲ್ಲಿ ಪಶುವೈದ್ಯಕೀಯ ಪರೀಕ್ಷಕರು ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಜಿಲ್ಲಾ/ ತಾಲ್ಲೂಕು ಮಟ್ಟದ ಕಾರ್ಯಾಲಯಗಳಲ್ಲಿ ತಾಂತ್ರಿಕ / ಅರೆ ತಾಂತ್ರಿಕ / ಲಿಪಿಕ ವರ್ಗದ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಜಾನುವಾರು ಆರೋಗ್ಯ ಸಂರಕ್ಷಣೆ ಇಲಾಖೆಯ ಆದ್ಯ ಕರ್ತವ್ಯವಾಗಿದ್ದು ಕಾಲ ಕಾಲಕ್ಕೆ ಜಾನುವಾರು ರೋಗಗಳ ವಿರುದ್ಧ ಸಾಮೂಹಿಕ ಲಸಿಕಾ ಕಾರ್ಯಕ್ರಮ ಹಮ್ಮಿಕೊಂಡು ರೋಗಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ ದಿನನಿತ್ಯ ಪಶುವೈದ್ಯ ಸಂಸ್ಥೆಗಳಲ್ಲಿ ಜಾನುವಾರುಗಳ ರೋಗಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ರೈತ ಸಂದರ್ಶನ ಸಭೆಗಳನ್ನು ಏರ್ಪಡಿಸಿ ಜಾನುವಾರುಗಳ ಸಾಕಾಣಿಕೆ ಮತ್ತು ಉತ್ಪತ್ತಿ ಹಾಗೂ ಉತ್ಪನ್ನಗಳ ಹೆಚ್ಚಳಕ್ಕೆ ಸಲಹೆ ಸೂಚನೆಗಳನ್ನು ನೀಡುತ್ತಿದ್ದಾರೆ.

ಜಾನುವಾರುಗಳಲ್ಲಿ ಕಾಯಿಲೆ ಮರುಕಳಿಸದಂತೆ ತಡೆಯಲು ಕಾಲು ಬಾಯಿ ಜ್ವರ ಲಸಿಕಾ ಕಾರ್ಯಕ್ರಮವನ್ನು ವರ್ಷಕ್ಕೆ ಎರಡು ಬಾರಿ ಹಮ್ಮಿಕೊಂಡಿರುತ್ತದೆ.

ಇತರೆ ಸಾಂಕ್ರಾಮಿಕ ರೋಗಗಳಾದ ಗಳಲೆ, ಚಪ್ಪೆ ರೋಗ ಹಾಗೂ ಕಂದು ರೋಗಕ್ಕೂ ಸಹ ಲಸಿಕೆಯನ್ನು ಮುಂಜಾಗ್ರತಾ ಕ್ರಮವಾಗಿ ಹಾಕಲಾಗಿದೆ. ಕುರಿ ಮತ್ತು ಮೇಕೆಗಳಲ್ಲಿ ಮುಂಜಾಗ್ರತೆ ಕ್ರಮವಾಗಿ ಕರುಳು ಬೇನೆ ಹಾಗೂ ಪಿ.ಪಿ.ಆರ್. ರೋಗ ಬಾರದಂತೆ ಲಸಿಕೆ ಕಾರ್ಯಕ್ರಮ ಹಮ್ಮಿಕೊಂಡು ರೋಗಗಳನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿದೆ. ಕೋಳಿಗಳಿಗೆ ಕೊಕ್ಕರೆ ರೋಗದ ವಿರುದ್ಧ ಲಸಿಕೆ ಎಲ್ಲಾ ಪಶುವೈದ್ಯ ಸಂಸ್ಥೆಗಳಲ್ಲಿ ಲಭ್ಯವಿದ್ದು ಉಚಿತವಾಗಿ ಹಾಕಲಾಗುತ್ತಿದೆ.

ಪಶುವೈದ್ಯ ಸಂಸ್ಥೆಗಳಲ್ಲಿ ಪ್ರೋವನ್ ಬ್ರೀಡ್ ತಳಿಗಳಾದ ಹೆಚ್.ಎಫ್. ಜರ್ಸಿ, ಅಮೃತ್ ಮಹಲ್, ಸುರ್ತಿ, ಮುರ್ರಾ, ಘನೀಕೃತ ವೀರ್ಯ ನಳಿಕೆಗಳು ಲಭ್ಯವಿದ್ದು, ಪ್ರತಿ ವೀರ್ಯ ನಳಿಕೆಗೆ ರೂ. 15/– ಸೇವಾ ಶುಲ್ಕವನ್ನು ರೈತರಿಂದ ಸಂಗ್ರಹಿಸಿ ಹಣವನ್ನು ಸರ್ಕಾರಕ್ಕೆ ಜಮಾ ಮಾಡಲಾಗುತ್ತದೆ. ರಾಸುಗಳಲ್ಲಿ ಕೃತಕ ಗರ್ಭಧಾರಣೆ ಕಾರ್ಯಕ್ರಮ ಪ್ರಚಲಿತದಲ್ಲಿದ್ದು, ಹೆಚ್ಚು ಹಾಲನ್ನು ನೀಡುವ ರಾಸುಗಳನ್ನು ಪಡೆಯುತ್ತಿದ್ದಾರೆ. ಇದರಿಂದ ರೈತರ ಆರ್ಥಿಕ ಮಟ್ಟ ಸುಧಾರಿಸಿದ್ದು, ಹೈನುಗಾರಿಕೆಗೆ ಅವಲಂಬಿತರಾಗಿರುತ್ತಾರೆ.

ಪಶುವೈದ್ಯ ಸಂಸ್ಥೆಗಳಿಂದ ಬಹು ದೂರವಿರುವ ಗ್ರಾಮಗಳಿಗೆ ಪಶುವೈದ್ಯ ಚಿಕಿತ್ಸಾ ಸೌಲಭ್ಯ ನಾಲ್ಕು ತಾಲ್ಲೂಕುಗಳ ಪಶುವೈದ್ಯ ಸಂಚಾರಿ ಘಟಕಗಳಿಂದ ಒದಗಿಸಲಾಗುತ್ತಿದೆ.

ಜಾನುವಾರುಗಳಲ್ಲಿ ಬರಡುತನವನ್ನು ಹೋಗಲಾಡಿಸಲು ಚಿಕಿತ್ಸಾ ಶಿಬಿರಗಳನ್ನು ಹಮ್ಮಿಕೊಂಡು ತಜ್ಞ ವೈದ್ಯರಿಂದ ಅಂತಹ ಜಾನುವಾರುಗಳನ್ನು ಪರೀಕ್ಷೆಗೆ ಒಳಪಡಿಸಿ ಸೂಕ್ತ ಚಿಕಿತ್ಸಾ ಹಾಗೂ ಸಲಹೆಗಳನ್ನು ನೀಡಲಾಗುತ್ತಿದೆ.

ಜಿಲ್ಲೆಯಲ್ಲಿ ಮೇವಿನ ಕೊರತೆಯನ್ನು ನೀಗಿಸಲು ನೀರಾವರಿ ಸೌಲಭ್ಯವಿರುವ ರೈತರಿಗೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಹಾಗೂ ಬರ ಪರಿಹಾರ ನಿಧಿಯಡಿಯಲ್ಲಿ, ಸೋರ್ಗಂ ಮಲ್ಟಿಕಟ್, ಆಫ್ರಿಕನ್ ಟಾಲ್ ಮೈಜ್ (ಎ.ಟಿ.ಎಂ), ಹಾಗೂ ಮೇವಿನ ಜೋಳದ 65,814 ಕಿರುಪೊಟ್ಟಣಗಳನ್ನು ಹಸಿರು ಮೇವು ಉತ್ಪಾದನೆಗಾಗಿ ರೈತರಿಗೆ ಉಚಿತವಾಗಿ ನೀಡಲಾಗಿದೆ.

ಗ್ರಾಮಾಂತರ ಪ್ರದೇಶದಲ್ಲಿ ಪೌಷ್ಟಿಕ ಆಹಾರದ ಕೊರತೆ ನೀಗಿಸಲು ಹಾಗೂ ಆರ್ಥಿಕ ಸಬಲೀಕರಣಕ್ಕೆ 6ನೇ ವಾರದ ಗಿರಿರಾಜ ಕೋಳಿಗಳನ್ನು ರಿಯಾಯಿತಿ ದರ ರೂ. 85/– ರಂತೆ ಸಾಮಾನ್ಯ ವರ್ಗದವರಿಗೆ ಶೇ 75 ರಷ್ಟು ವಿನಾಯಿತಿ ದರ, (ಮಹಿಳಾ/ ಅಲ್ಪಸಂಖ್ಯಾಂತರು/ಅಂಗವಿಕಲರು/ಇತರೆ) ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗದವರಿಗೆ ಉಚಿತವಾಗಿ ಒಟ್ಟು 15,290 ಗಿರಿರಾಜ ಕೋಳಿಮರಿಗಳನ್ನು ವಿತರಿಸಲಾಗಿದೆ.

ಹಾಲು ಉತ್ಪಾದಕರಿಗೆ ಹಾಲು ಉತ್ಪಾದನೆಯನ್ನು ಉತ್ತೇಜಿಸಲು ಸರ್ಕಾರ ಪ್ರತಿ ಲೀಟರ್‌ಗೆ ರೂ. 5/– ರಂತೆ ಪ್ರೋತ್ಸಾಹ ಧನ ಒಟ್ಟು ರೂ. 106.537 ಕೋಟಿಯನ್ನು ಪ್ರಸ್ತುತ ಸಾಲಿನಲ್ಲಿ ಹಾಲು ಉತ್ಪಾದಕರ ಖಾತೆಗೆ ಜಮಾ ಮಾಡಲಾಗಿದೆ.

ಪಶುಭಾಗ್ಯ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಒಟ್ಟು 29 ಫಲಾನುಭವಿಗಳಿಗೆ ರೂ. 17.40 ಲಕ್ಷ ಸಹಾಯಧನ ನೀಡಿ, ಬ್ಯಾಂಕುಗಳ ಮುಖಾಂತರ ಸಾಲದೊಂದಿಗೆ ಹೈನುಗಾರಿಕೆ ಘಟಕವನ್ನು ವಿತರಿಸಿ ಯೋಜನೆ ಅನುಷ್ಟಾನಗೊಳಿಸಲಾಗಿದೆ.

ಅಮೃತ ಮಹಿಳಿಯರಿಗಾಗಿ ಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಸಾಮಾನ್ಯ ವರ್ಗದ ಒಟ್ಟು 218 ಫಲಾನುಭವಿಗಳಿಗೆ ರೂ. 29.7496 ಲಕ್ಷ ಸಹಾಯಧನ ನೀಡಿ, ಬ್ಯಾಂಕುಗಳ ಮುಖಾಂತರ ಸಾಲದೊಂದಿಗೆ ಹೈನುಗಾರಿಕೆ/ 03–ಕುರಿ/ ಕರು ಘಟಕವನ್ನು ವಿತರಿಸಿ ಯೋಜನೆ ಅನುಷ್ಟಾನಗೊಳಿಸಲಾಗಿದೆ.

ವಿಶೇಷ ಘಟಕ ಯೋಜನೆ (ರಾಜ್ಯವಲಯ) ಅಡಿಯಲ್ಲಿ ಆಯ್ಕೆಯಾದ 27 ಫಲಾನುಭವಿಗಳಿಗೆ ಸಹಾಯಧನ ರೂ. 19.95 ಲಕ್ಷ. ಹಾಗೂ ಗಿರಿಜನ ಉಪಯೋಜನೆ (ರಾಜ್ಯವಲಯ) ಅಡಿಯಲ್ಲಿ ಆಯ್ಕೆಯಾದ 08 ಫಲಾನುಭವಿಗಳಿಗೆ ರೂ. 5.70 ಲಕ್ಷ ಸಹಾಯಧನದೊಂದಿಗೆ ಮಿಶ್ರತಳಿ ರಾಸು, ಕುರಿ/ಮೇಕೆ, ಹಂದಿ ಘಟಕಗಳನ್ನು ವಿತರಿಸಿದೆ.

ಹಾಲು ಪೋತ್ಸಾಹಧನ ಉಳಿಕೆ ಹಣ ಯೋಜನೆಯಡಿ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಆಯ್ಕೆಯಾದ 716 ಫಲಾನುಭವಿಗಳಿಗೆ ಸಹಾಯಧನ ರೂ. 323.49 ಲಕ್ಷ. ಹಾಗೂ ಗಿರಿಜನ ಉಪಯೋಜನೆ ಅಡಿಯಲ್ಲಿ ಆಯ್ಕೆಯಾದ 212 ಫಲಾನುಭವಿಗಳಿಗೆ ರೂ. 99.33 ಲಕ್ಷ ಸಹಾಯಧನದೊಂದಿಗೆ ಮಿಶ್ರತಳಿ ರಾಸು, ಕುರಿ/ಮೇಕೆ, ಕರು ಘಟಕಗಳನ್ನು ವಿತರಿಸಿದೆ.

ಹಾಲುಪೋತ್ಸಾಹಧನ ಯೋಜನೆಯಡಿ ಎಸ್.ಸಿ.ಪಿ.& ಟಿ.ಎಸ್.ಪಿ. ಯೋಜನೆಯಡಿ ಒಟ್ಟು 666 ರಾಸುಗಳಿಗೆ ರೂ. 17.587 ಲಕ್ಷಗಳ ಅನುದಾನವನ್ನು ಉಚಿತ ವಿಮೆಗಾಗಿ ನೀಡಲಾಗಿದೆ.

ಇಲಾಖಾ ಬೇಡಿಕೆಗಳು:–

- ಜಿಲ್ಲೆಯ ಪಶುವೈದ್ಯ ಸಂಸ್ಥೆಗಳಿಗೆ ದ್ರವಸಾರಜನಕ, ಔಷಧಿ ರಾಸಾಯನಿಕಗಳ ಪೂರೈಕೆಗಾಗಿ 1 ಮಿನಿ ಟ್ರಕ್ ವಾಹನದ ಅವಶ್ಯಕತೆ ಇರುತ್ತದೆ.
- ಜಿಲ್ಲಾ ಕೇಂದ್ರದಲ್ಲಿ ಔಷಧಿ ರಾಸಾಯನಿಕಗಳ ಸಂಗ್ರಹಣೆಗೆ 1 ಔಷಧಿ ಉಗ್ರಾಣದ ಅವಶ್ಯಕತೆಯಿದ್ದು 30 ಘಿ 60 ಚದರ ಅಡಿ ಅಳತೆಯುಳ್ಳ ಕಟ್ಟಡ ನಿರ್ಮಾಣಕ್ಕೆ ರೂ 50.00 ಲಕ್ಷ ಅನುದಾನ ಅವಶ್ಯಕತೆ ಇರುತ್ತದೆ.
- ಇಲಾಖಾ ಅಧಿಕಾರಿ / ಸಿಬ್ಬಂದಿಯವರಿಗೆ ತಾಂತ್ರಿಕ ಕಾರ್ಯಗಾರ ಹಾಗೂ ತರಬೇತಿ ಏರ್ಪಡಿಸಲು 30 ಘಿ 60 ಚದರ ಅಡಿ ಅಳತೆಯುಳ್ಳ ಕಟ್ಟಡ ನಿರ್ಮಾಣಕ್ಕೆ ರೂ 50.00 ಲಕ್ಷ ಅನುದಾನ ಅವಶ್ಯಕತೆ ಇರುತ್ತದೆ.
- ಇಲಾಖಾ ಪಶುವೈದ್ಯ ಸಂಸ್ಥೆಗಳಲ್ಲಿ 75% ಡಿ–ದರ್ಜೆ ನೌಕರರ ಹುದ್ದೆಗಳು ಖಾಲಿ ಇದ್ದು, 35% ನ್ನು ಬಾಹ್ಯಮೂಲದಲ್ಲಿ ಸೇವೆ ಪಡೆಯಲಾಗುತ್ತಿದ್ದು, ಇನ್ನು 40% ಹುದ್ದೆಗಳು ಖಾಲಿ ಇದ್ದು ಇವುಗಳನ್ನು ಭರ್ತಿ ಮಾಡಬೇಕಾಗಿರುತ್ತದೆ.
- ಉಪನಿರ್ದೇಶಕರ ಕಾರ್ಯಾಲಯದ ಕಟ್ಟಡದ ನಿರ್ಮಾಣಕ್ಕೆ ನಿವೇಶನ ಹಾಗೂ ರೂ 50.00 ಲಕ್ಷ ಅನುದಾನದ ಅವಶ್ಯಕತೆ ಇರುತ್ತದೆ.

ಸಮಾಜ ಕಲ್ಯಾಣ ಇಲಾಖೆ

ಪೀಠಿಕೆ:– ಸರ್ಕಾರವು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಜನಾಂಗದವರನ್ನು ಗುರುತಿಸಿ ಅವರ ಕ್ಷೇಮಾಭಿವೃದ್ಧಿಗಾಗಿ 1958 ರಿಂದ ಜನತೆಯ ಆಶೋತ್ತರಗಳನ್ನು ಈಡೇರಿಸಲು ಹಲವಾರು ಜನಹಿತ ಹಾಗೂ ಪ್ರಗತಿಪರ ಯೋಜನೆಗಳನ್ನು ಹಮ್ಮಿಕೊಂಡಿದೆ. ಸರ್ಕಾರ ರಾಜ್ಯದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಅಭಿವೃದ್ಧಿಗಾಗಿ ಸಂವಿಧಾನದ 15(4) ಅನುಚ್ಛೇದದಂತೆ ಶೈಕ್ಷಣಿಕ ಸೌಲಭ್ಯ ಮತ್ತು 16(4) ಅನುಚ್ಛೇದದಂತೆ ಉದ್ಯೋಗ ಮೀಸಲಾತಿಯ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿರುತ್ತದೆ. ಒಟ್ಟಾರೆ ಈ ಇಲಾಖೆಯು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಜನರು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಸ್ವಾವಲಂಭಿಗಳಾಗಲು ಶ್ರಮಿಸುತ್ತಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಪ್ರತಿಭಾನ್ವೇಶಣೆ, ಪ್ರತಿಭಾ ಪ್ರೋತ್ಸಾಹ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಹಾಯಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಪರಿಶಿಷ್ಟ ಜಾತಿ ಯೋಜನೆ ಕಾರ್ಯಕ್ರಮಗಳು

1. **ಲೆಕ್ಕ ಶೀರ್ಷಿಕೆ:2225–00–101–0–27 ರಡಿ** ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ ಸದರಿ ಲೆಕ್ಕ ಶೀರ್ಷಿಕೆಯಡಿ, ಒಟ್ಟು ರೂ.446.60 ಲಕ್ಷಗಳು ಬಿಡುಗಡೆಯಾಗಿದ್ದು,ರೂ.430.46 ಲಕ್ಷಗಳು ಖರ್ಚಾಗಿದ್ದು, ಭೌತಿಕ ಗುರಿ 5972 ಇದ್ದು ಸಾಧನೆ 4980 ಪ್ರಗತಿ ಸಾಧಿಸಲಾಗಿದೆ. ಒಟ್ಟಾರೆ ಶೇ.96.39 ರಷ್ಟು ಪ್ರಗತಿ ಸಾಧಿಸಲಾಗಿದೆ.

2. **ಲೆಕ್ಕ ಶೀರ್ಷಿಕೆ:2225–00–101–0–29 ರ**ಡಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿರ್ವಹಣೆ ಹಾಗೂ ಸಿಬ್ಬಂದಿ ವೇತನ ಸೇರಿದಂತೆ ಸದರಿ ಲೆಕ್ಕ ಶೀರ್ಷಿಕೆಯಡಿ ಒಟ್ಟು ರೂ.139.00 ಲಕ್ಷಗಳು ಬಿಡುಗಡೆಯಾಗಿದ್ದು, 127.65 ಲಕ್ಷ ರೂ.ಗಳು ಖರ್ಚಾಗಿದ್ದು, ಭೌತಿಕ ಗುರಿ 10 ವಿದ್ಯಾರ್ಥಿನಿಲಯಗಳ ಸಿಬ್ಬಂದಿ ವೇತನ ಹಾಗೂ ನಿರ್ವಹಣೆಗೆ ಖರ್ಚು ಮಾಡಲಾಗಿದೆ. ಈ ಲೆಕ್ಕಶೀರ್ಷಿಕೆಯಡಿಯಲ್ಲಿ ಶೇ.91.83 ರಷ್ಟು ಪ್ರಗತಿ ಸಾಧಿಸಲಾಗಿದೆ.

3. **ಲೆಕ್ಕ ಶೀರ್ಷಿಕೆ:2225–00–101–0–30 ರಡಿ** ನಿರ್ದೇಶನ ಮತ್ತು ಆಡಳಿತ ಕಾರ್ಯನಿರ್ವಾಹಕ ಸಿಬ್ಬಂದಿ ಲೆಕ್ಕ ಶೀರ್ಷಿಕೆಯಡಿ ಒಟ್ಟು ರೂ.169.00 ಲಕ್ಷಗಳು ಬಿಡುಗಡೆಯಾಗಿದ್ದು, 162.80 ಲಕ್ಷ ರೂ.ಗಳು ಖರ್ಚಾಗಿದ್ದು, ಭೌತಿಕ ಗುರಿ 5 ಕಛೇರಿಗಳ ಸಿಬ್ಬಂದಿ ವೇತನ, ಸಾದಿಲ್ವಾರು ವೆಚ್ಚ ಮತ್ತು ಹೊರಗುತ್ತಿಗೆ ಬಾಬ್ತುಗಳಿಗೆ ಖರ್ಚು ಮಾಡಲಾಗಿದೆ. ಶೇ.96.33 ರಷ್ಟು ಪ್ರಗತಿ ಸಾಧಿಸಲಾಗಿದೆ.

4. **ಲೆಕ್ಕ ಶೀರ್ಷಿಕೆ: 2225–00–101–0–36:** ಸರ್ಕಾರಿ ಕಾಲೇಜು ವಿದ್ಯಾರ್ಥಿನಿಲಯಗಳ ನಿರ್ವಹಣೆ ಲೆಕ್ಕ ಶೀರ್ಷಿಕೆಯಡಿ ರೂ.43.04 ಲಕ್ಷಗಳು ಬಿಡುಗಡೆಯಾಗಿದ್ದು, ರೂ.41.22 ಲಕ್ಷಗಳು ವೆಚ್ಚವಾಗಿದ್ದು, ಭೌತಿಕ ಗುರಿ 3 ವಿದ್ಯಾರ್ಥಿ ನಿಲಯಗಳ ಸಿಬ್ಬಂದಿ ವೇತನ ಮತ್ತು ಸಾದಿಲ್ವಾರು ವೆಚ್ಚಕ್ಕೆ ಖರ್ಚು ಮಾಡಲಾಗಿದೆ. ಶೇ.95.77 ರಷ್ಟು ಪ್ರಗತಿ ಸಾಧಿಸಲಾಗಿದೆ.

5. **ಲೆಕ್ಕ ಶೀರ್ಷಿಕೆ: 2225–00–101–0–37:** ಕಾಲೇಜು ವಿದ್ಯಾರ್ಥಿಗಳಿಗೆ ಪುರಸ್ಕಾರ/ಇತರೆ ರಿಯಾಯ್ತಿಗಳು/ಶ್ರೇಷ್ಟತೆ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಸಹಾಯ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ.249.50 ಲಕ್ಷಗಳು ಬಿಡುಗಡೆಯಾಗಿದ್ದು ರೂ.131.01 ಲಕ್ಷಗಳು ಗಳನ್ನು ವೆಚ್ಚ ಮಾಡಲಾಗಿದೆ. ಭೌತಿಕ ಗುರಿ 705 ಇದ್ದು ಸಾಧನೆ 587 ಪ್ರಗತಿ ಸಾಧಿಸಲಾಗಿದೆ. ಶೇ.52.51 ರಷ್ಟು ಪ್ರಗತಿ ಸಾಧಿಸಲಾಗಿದೆ.

6. **ಲೆಕ್ಕ ಶೀರ್ಷಿಕೆ: 2225–00–101–0–42 :** ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಸಹಾಯಧನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ.4.44 ಲಕ್ಷಗಳು ಬಿಡುಗಡೆಯಾಗಿದ್ದು, ರೂ.3.46 ಲಕ್ಷಗಳ ವೆಚ್ಚ ಮಾಡಿ, ಭೌತಿಕ ಗುರಿ 2 ವಿದ್ಯಾರ್ಥಿ ನಿಲಯವಿದ್ದು, ಇದ್ದು ಸಾಧನೆ 1 ವಿದ್ಯಾರ್ಥಿ ನಿಲಯದಲ್ಲಿ ಪ್ರಗತಿ ಸಾಧಿಸಲಾಗಿದೆ. ಶೇ 77.93 ರಷ್ಟು ಪ್ರಗತಿ ಸಾಧಿಸಲಾಗಿದೆ.

ತಾಲ್ಲೂಕು ಪಂಚಾಯತ್, ಕಾರ್ಯಕ್ರಮಗಳು (ಪರಿಶಿಷ್ಟ ಜಾತಿ)

7. **ಲೆಕ್ಕ ಶೀರ್ಷಿಕೆ: 2225–00–101–0–61:** ತಾ.ಪಂ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಸದರಿ ಲೆಕ್ಕ ಶೀರ್ಷಿಕೆಯಲ್ಲಿ ಸಿಬ್ಬಂದಿ ವೇತನ, ದಿನಗೂಲಿ, ವಿದ್ಯಾರ್ಥಿನಿಲಯ ಸೇರಿದಂತೆ ರೂ.761.49 ಲಕ್ಷಗಳು ಬಿಡುಗಡೆಯಾಗಿದ್ದು, ರೂ.756.16 ಲಕ್ಷ ಗಳನ್ನು ವೆಚ್ಚಮಾಡಲಾಗಿದೆ, ಭೌತಿಕ ಗುರಿ 37 ವಿದ್ಯಾರ್ಥಿನಿಲಯಗಳ ಪೈಕಿ, 37 ವಿದ್ಯಾರ್ಥಿನಿಲಯಗಳ ಸಿಬ್ಬಂದಿ ವೇತನ ದಿನಗೂಲಿ ಮತ್ತು ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ಖರ್ಚು ಮಾಡಲಾಗಿದೆ. ಶೇ. 99.55 ರಷ್ಟು ಪ್ರಗತಿ ಸಾಧಿಸಲಾಗಿದೆ.

8. **ಲೆಕ್ಕ ಶೀರ್ಷಿಕೆ: 2225–00–101–0–65 :** ಹೆಚ್ಚಿನ ಊಟ ಮತ್ತು ವಸತಿ ವೆಚ್ಚಗಳ ಸಹಾಯ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ.62.20ಲಕ್ಷಗಳು ಬಿಡುಗಡೆಯಾಗಿದ್ದು, ರೂ.40.44 ಲಕ್ಷಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 528 ವಿದ್ಯಾರ್ಥಿನಿಲಯಗಳ 528 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ. ಶೇ. 65.23 ರಷ್ಟು ಪ್ರಗತಿ ಸಾಧಿಸಲಾಗಿದೆ.

9. **ಲೆಕ್ಕ ಶೀರ್ಷಿಕೆ: 2225–00–101–0–67 :** ಕಟ್ಟಡಗಳ ನಿರ್ವಹಣೆ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ.15.00 ಲಕ್ಷಗಳು ಬಿಡುಗಡೆಯಾಗಿದ್ದು, ರೂ.15.00 ಲಕ್ಷಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 8 ಇದ್ದು ಸಾಧನೆ 8 ಪ್ರಗತಿ ಸಾಧಿಸಲಾಗಿದೆ. ಶೇ. 100 ರಷ್ಟು ಪ್ರಗತಿ ಸಾಧಿಸಲಾಗಿದೆ.

10. **ಲೆಕ್ಕ ಶೀರ್ಷಿಕೆ: 2225–00–101–0–68** : ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 287.40 ಲಕ್ಷಗಳು ಬಿಡುಗಡೆಯಾಗಿದ್ದು, ರೂ. 287.40 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 14000 ಇದ್ದು ಸಾಧನೆ 14000 ಪ್ರಗತಿ ಸಾಧಿಸಲಾಗಿದೆ. ಶೇ. 100 ರಷ್ಟು ಪ್ರಗತಿ ಸಾಧಿಸಲಾಗಿದೆ.

11. **ಲೆಕ್ಕ ಶೀರ್ಷಿಕೆ: 2225–00–101–0–80**: ಪರಿಶಿಷ್ಟ ಜಾತಿಯ ಕಾನೂನು ಪಧವೀದರರಿಗೆ ಪ್ರೋತ್ಸಾಹ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 10.00 ಲಕ್ಷಗಳು ಬಿಡುಗಡೆಯಾಗಿದ್ದು ರೂ.9.50 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 21 ಇದ್ದು ಸಾಧನೆ 21 ಪ್ರಗತಿ ಸಾಧಿಸಲಾಗಿದೆ.

12. **ಲೆಕ್ಕ ಶೀರ್ಷಿಕೆ: 2225–00–101–0–05 :** ಅಸ್ಪೃಶ್ಯತಾ ನಿವಾರಣೆ ಹಾಗೂ ಅಂತರ್ ಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹಧನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 90.00 ಲಕ್ಷಗಳು ಬಿಡುಗಡೆಯಾಗಿದ್ದು ರೂ.70.85.00 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 70 ಇದ್ದು ಸಾಧನೆ 68 ಪ್ರಗತಿ ಸಾಧಿಸಲಾಗಿದೆ.

13. **ಲೆಕ್ಕ ಶೀರ್ಷಿಕೆ: 2225–00–101–0–02(ಕೇಂದ್ರ ಯೋಜನೆ):** ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 117.97 ಲಕ್ಷಗಳು ಬಿಡುಗಡೆಯಾಗಿದ್ದು ರೂ.97.76 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 500 ಇದ್ದು ಸಾಧನೆ 500 ಪ್ರಗತಿ ಸಾಧಿಸಲಾಗಿದೆ.

14. **ಲೆಕ್ಕ ಶೀರ್ಷಿಕೆ: 2225–00–101–0–03(ಕೇಂದ್ರ ಯೋಜನೆ)** ಅಶುದ್ಧ ವೃತ್ತಿಯಲ್ಲಿ ತೊಡಗಿರುವವರ ಮಕ್ಕಳಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 0.00 ಲಕ್ಷಗಳು ಬಿಡುಗಡೆಯಾಗಿದ್ದು ಅಶುದ್ಧ ವೃತ್ತಿಯಲ್ಲಿ ತೊಡಗಿರುವವರು ಮಕ್ಕಳು ಅರ್ಜಿ ಸಲ್ಲಿಸಿರುವುದಿಲ್ಲ.

15. **ಲೆಕ್ಕ ಶೀರ್ಷಿಕೆ: 2225–00–101–0–85(ಕೇಂದ್ರ ಯೋಜನೆ)** ಅಶುದ್ಧ ವೃತ್ತಿಯಲ್ಲಿ ತೊಡಗಿರುವವರ ಮಕ್ಕಳಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 0.34 ಲಕ್ಷಗಳು ಬಿಡುಗಡೆಯಾಗಿದ್ದು ಅಶುದ್ಧ ವೃತ್ತಿಯಲ್ಲಿ ತೊಡಗಿರುವವರು ಮಕ್ಕಳು ಅರ್ಜಿ ಸಲ್ಲಿಸಿರುವುದಿಲ್ಲ.

ಪರಿಶಿಷ್ಟ ವರ್ಗದ ಯೋಜನೆ ಕಾರ್ಯಕ್ರಮಗಳು

16. **ಲೆಕ್ಕ ಶೀರ್ಷಿಕೆ: 2225–00–102–0–31:** ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 28.60 ಲಕ್ಷಗಳು ಬಿಡುಗಡೆಯಾಗಿದ್ದು ರೂ19.87ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 150 ಇದ್ದು ಸಾಧನೆ 110 ಪ್ರಗತಿ ಸಾಧಿಸಲಾಗಿದೆ.

17. **ಲೆಕ್ಕ ಶೀರ್ಷಿಕೆ: 2225–00–102–0–33:** ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳ ನಿರ್ವಹಣೆ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 64.41 ಲಕ್ಷಗಳು ಬಿಡುಗಡೆಯಾಗಿದ್ದು ರೂ.53.50ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 12 ಇದ್ದು ಸಾಧನೆ 12 ಪ್ರಗತಿ ಸಾಧಿಸಲಾಗಿದೆ.

18. **ಲೆಕ್ಕ ಶೀರ್ಷಿಕೆ: 2225–00–101–0–35 :**ಆಶ್ರಮ ಶಾಲೆಗಳು ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 93.60ಲಕ್ಷಗಳು ಬಿಡುಗಡೆಯಾಗಿದ್ದು ರೂ.91.61ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 24 ಇದ್ದು ಸಾಧನೆ 24 ಪ್ರಗತಿ ಸಾಧಿಸಲಾಗಿದೆ.

19. **ಲೆಕ್ಕ ಶೀರ್ಷಿಕೆ: 2225–00–102–0–38:** ವಿದ್ಯಾರ್ಥಿನಿಲಯಗಳು, ವಿದ್ಯಾರ್ಥಿವೇತನ ಮತ್ತು ಸಹಾಯಧನ, ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 12.00 ಲಕ್ಷಗಳು ಬಿಡುಗಡೆಯಾಗಿದ್ದು ರೂ. 8.25 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 36 ಇದ್ದು ಸಾಧನೆ 36 ಪ್ರಗತಿ ಸಾಧಿಸಲಾಗಿದೆ.

ತಾಲ್ಲೂಕು ಪಂಚಾಯತ್, ಕಾರ್ಯಕ್ರಮಗಳು (ಪರಿಶಿಷ್ಟ ವರ್ಗ)

20. **ಲೆಕ್ಕ ಶೀರ್ಷಿಕೆ: 2225–00–102–0–68 :** ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 32.69 ಲಕ್ಷಗಳು ಬಿಡುಗಡೆಯಾಗಿದ್ದು ರೂ.32.69 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 2800 ಇದ್ದು ಸಾಧನೆ 0 ಪ್ರಗತಿ ಸಾಧಿಸಲಾಗಿದೆ.

21. **ಲೆಕ್ಕ ಶೀರ್ಷಿಕೆ: 2225–00–102–0–71 :** ಇ.ಬಿ.ಎಲ್.ವೆಚ್ಚ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 11.00 ಲಕ್ಷಗಳು ಬಿಡುಗಡೆಯಾಗಿದ್ದು ರೂ. 5.10 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 30 ಇದ್ದು ಸಾಧನೆ 30 ಪ್ರಗತಿ ಸಾದಿಸಲಾಗಿದೆ.

22. **ಲೆಕ್ಕ ಶೀರ್ಷಿಕೆ: 2225–00–102–0–07:** ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ 15.60 ಲಕ್ಷಗಳು ಅನುದಾನ ನಿಗಧಿಯಾಗಿದ್ದು, ಆದರೆ ಅನುದಾನ ಬಿಡುಗಡೆಯಾರುವುದಿಲ್ಲ.

ಪರಿಶಿಷ್ಟ ಜಾತಿ ಉಪಯೋಜನೆ

23. **ಲೆಕ್ಕ ಶೀರ್ಷಿಕೆ: 2225–00–101–0–62 :** ಪರಿಶಿಷ್ಟ ಜಾತಿಯ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 25.00 ಲಕ್ಷಗಳು ಬಿಡುಗಡೆಯಾಗಿದ್ದು ರೂ. 24.45 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 40 ಇದ್ದು ಸಾಧನೆ 40 ಪ್ರಗತಿ ಸಾಧಿಸಲಾಗಿದೆ.

24. **ಲೆಕ್ಕ ಶೀರ್ಷಿಕೆ: 2225–00–101–0–64 :** ಪರಿಶಿಷ್ಟ ಜಾತಿಯ ಕುಟುಂಬಗಳಿಗೆ ಸಹಾಯಧನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 23.00 ಲಕ್ಷಗಳು ಬಿಡುಗಡೆಯಾಗಿದ್ದು ರೂ. 23.00 ಲಕ್ಷ ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 220 ಇದ್ದು ಸಾಧನೆ 220 ಪ್ರಗತಿ ಸಾಧಿಸಲಾಗಿದೆ.

ಗಿರಿಜನ ಉಪಯೋಜನೆ

25. **ಲೆಕ್ಕ ಶೀರ್ಷಿಕೆ: 2225–00–102–0–69 :** ಪ.ವರ್ಗ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 3.00 ಲಕ್ಷಗಳು ಬಿಡುಗಡೆಯಾಗಿದ್ದು ರೂ.3.00 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 10 ಇದ್ದು ಸಾಧನೆ 10 ಪ್ರಗತಿ ಸಾಧಿಸಲಾಗಿದೆ.

26. **ಲೆಕ್ಕ ಶೀರ್ಷಿಕೆ: 2225–00–102–0–70 :** ಪ.ವರ್ಗದ ಕುಟುಂಬಗಳಿಗೆ ಆರ್ಥಿಕ ಸಹಾಯಧನ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 4.00 ಲಕ್ಷಗಳು ಬಿಡುಗಡೆಯಾಗಿದ್ದು ರೂ.4.00 ಗಳನ್ನು ವೆಚ್ಚ ಮಾಡಿ, ಭೌತಿಕ ಗುರಿ 50 ಇದ್ದು ಸಾಧನೆ 50 ಪ್ರಗತಿ ಸಾಧಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಪೀಠಿಕೆ:– –ಸರ್ಕಾರವು ಹಿಂದುಳಿದ ವರ್ಗಗಳ ಜನಾಂಗದವರನ್ನು ಗುರುತಿಸಿ ಅವರ ಕ್ಷೇಮಾಭಿವೃದ್ಧಿಗಾಗಿ 1977ರಿಂದ ಜನತೆಯ ಆಶೋತ್ತರಗಳನ್ನು ಈಡೇರಿಸಲು ಹಲವಾರು ಜನಹಿತ ಹಾಗೂ ಪ್ರಗತಿಪರ ಯೋಜನೆಗಳನ್ನು ಹಮ್ಮಿಕೊಂಡಿದೆ. ಸರ್ಕಾರ ರಾಜ್ಯದ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಸಂವಿಧಾನದ 15(4) ಅನುಚ್ಛೇದದಂತೆ ಶೈಕ್ಷಣಿಕ ಸೌಲಭ್ಯ ಮತ್ತು 16(4) ಅನುಚ್ಛೇದದಂತೆ ಉದ್ಯೋಗ ಮೀಸಲಾತಿಯ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿರುತ್ತದೆ. ಒಟ್ಟಾರೆ ಈ ಇಲಾಖೆಯು ಹಿಂದುಳಿದ ವರ್ಗಗಳ ಜನರು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಸ್ವಾವಲಂಭಿಗಳಾಗಲು ಶ್ರಮಿಸುತ್ತಿದೆ. ಗ್ರಾಮೀಣ ಹಾಗೂ ಹಿಂದುಳಿದ ವರ್ಗಗಳ ಪ್ರತಿಭಾನ್ವೇಶಣೆ, ಪ್ರತಿಭಾ ಪ್ರೋತ್ಸಾಹ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಹಾಯಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ನಿಟ್ಟಿನಲ್ಲಿ 2018–19ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯದಲ್ಲಿ ರಾಮನಗರ ಜಿಲ್ಲೆಗೆ ಹಿಂದುಳಿದ ವರ್ಗಗಳ ಏಳಿಗೆಗಾಗಿ ಜಿಲ್ಲಾವಲಯ ಬಾಬ್ತಿನಲ್ಲಿ ಒಟ್ಟು 2185.05 ಲಕ್ಷಗಳ ಆಯವ್ಯಯವನ್ನು ಒದಗಿಸಲಾಗಿದ್ದು, 2334.08 ಲಕ್ಷಗಳನ್ನು ಬಿಡುಗಡೆ ಇದಲ್ಲಿ ಕ್ರಮವಾಗಿ ಬಾಬ್ತಿನಲ್ಲಿ ಒಟ್ಟು 2296.78 ಲಕ್ಷಗಳನ್ನು ಖರ್ಚುಮಾಡಿ ಪ್ರಗತಿ ಸಾಧಿಸಲಾಗಿದೆ.

1. ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ನೀಡಿಕೆ.

ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ತರಗತಿಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಅರ್ಹತೆಯ ಆಧಾರದ ಮೇಲೆ ಲಭ್ಯವಿರುವ ಅನುದಾನಕ್ಕೆ ಅನುಸಾರವಾಗಿ ಮಂಜೂರು ಮಾಡಲಾಗುತ್ತದೆ. 1ನೇ ತರಗತಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲಾಗುತ್ತದೆ.

ಮೆಟ್ರಿಕ್ ಪೂರ್ವ

ತರಗತಿ	ಬಾಲಕ/ಬಾಲಕಿ
1 ರಿಂದ 5	750/–
6 ರಿಂದ 8	900/–
9 ರಿಂದ 10	1000/–

ಮೆಟ್ರಿಕ್ ನಂತರ

ಕ್ರ.ಸಂ	ಗುಂಪು	ಮಂಜೂರು ಮಾಡಲಾಗುವ ವಿದ್ಯಾರ್ಥಿವೇತನದ ದರ (ವಾರ್ಷಿಕ)
1	ಗುಂಪು–ಎ	3500/–
2	ಗುಂಪು–ಬಿ	3350/–
3	ಗುಂಪು–ಸಿ	2100/–
4	ಗುಂಪು–ಡಿ	1600/–

2018–19ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ ಒಟ್ಟು 563.26 ಲಕ್ಷ ಒದಗಿಸಿದ್ದು, 563.26 ಲಕ್ಷಗಳು ಖರ್ಚಾಗಿರುತ್ತದೆ. ಈ ಯೋಜನೆಯ ಕಾರ್ಯಕ್ರಮದಲ್ಲಿ 52790 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

2. ಶುಲ್ಕವಿನಾಯಿತಿ ಮಂಜೂರಾತಿ

ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳಾದ ಪ್ರವರ್ಗ–1, 2ಎ, 3ಎ ಮತ್ತು 3ಬಿ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಭೋದನಾಶುಲ್ಕ, ಪರೀಕ್ಷಾ ಶುಲ್ಕ, ಕ್ರೀಡಾ ಶುಲ್ಕ, ಗ್ರಂಥಾಲಯ ಶುಲ್ಕ, ಪ್ರಯೋಗಾಲಯ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಮಂಜೂರು ಮಾಡಲಾಗುವುದು. ಕುಟುಂಬದ ವಾರ್ಷಿಕ ಆದಾಯ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ 2.50 ಲಕ್ಷಗಳು ಇತರೆ ಹಿಂದುಳಿದ ವಿದ್ಯಾರ್ಥಿಗಳಿಗೆ 1.00 ಲಕ್ಷ ಆದಾಯ ಮಿತಿಗೊಳಪಟ್ಟಿರುತ್ತದೆ. 2018–19ನೇ ಸಾಲಿನಲ್ಲಿ 680.91 ಲಕ್ಷ ಬಿಡುಗಡೆಯಾಗಿದ್ದು, ನಿಯಮಾನುಸಾರ ಮಂಜೂರು ಮಾಡಲಾಗಿದೆ. 680.91 ಲಕ್ಷಗಳು ಖರ್ಚಾಗಿರುತ್ತದೆ. ಈ ಯೋಜನೆಯ ಕಾರ್ಯಕ್ರಮದಲ್ಲಿ 14493 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

3. ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ ಮತ್ತು ಹೊಸ ತರಬೇತಿ ಕೇಂದ್ರಗಳು

ಹಿಂದುಳಿದ ವರ್ಗಗಳ ನಿರುದ್ಯೋಗಿ ಮಹಿಳೆಯರು ತಮ್ಮ ಜೀವನದಲ್ಲಿ ಸ್ವಾವಲಂಭಿಗಳಾಗಲು ಇಲಾಖೆಯು ಹಿಂದುಳಿದ ವರ್ಗಗಳ ಮಹಿಳೆಯರಿಗೆ ಹೊಲಿಗೆ ವೃತ್ತಿಯಲ್ಲಿ ಒಂದು ವರ್ಷದ ತರಬೇತಿಯನ್ನು ನೀಡಲಾಗುತ್ತಿದೆ. ಈ ತರಬೇತಿ ಪಡೆಯ ಬಯಸುವವರು 7ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ತರಬೇತಿ ಅವಧಿಯಲ್ಲಿ ತಿಂಗಳಿಗೆ ತಲಾ 300 ರಂತೆ ಸ್ಟೈಫಂಡ್ ನೀಡಲಾಗುವುದು. ವಿಧವೆಯರಿಗೆ ಮತ್ತು ನಿರ್ಗತಿಕ ನಿರಾಶ್ರಿತ ಮಹಿಳೆಯರಿಗೆ ಆಧ್ಯತೆ ನೀಡಲಾಗುವುದು. ಹೊಲಿಗೆ ತರಬೇತಿಯ ನಂತರ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಉಚಿತ ಹೊಲಿಗೆ ಯಂತ್ರವನ್ನು ವಿತರಿಸಲಾಗುತ್ತದೆ. ಈ ಜಿಲ್ಲೆಯಲ್ಲಿ 01 ಹೊಲಿಗೆ ತರಬೇತಿ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ. 2018–19ನೇ ಸಾಲಿನಲ್ಲಿ 4.17 ಲಕ್ಷ ಆಯವ್ಯಯ ಒದಗಿಸಿದ್ದು, ಜಿಲ್ಲಾ ಪಂಚಾಯತ್‌ನಿಂದ 4.17 ಲಕ್ಷ ಬಿಡುಗಡೆಯಾಗಿರುತ್ತದೆ. ಒಟ್ಟು 20 ಅಭ್ಯರ್ಥಿಗಳಿಗೆ 3.95 ಲಕ್ಷಗಳು ಖರ್ಚು ಮಾಡಲಾಗಿದೆ.

4. ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆ.

ಈ ಜಿಲ್ಲೆಯಲ್ಲಿ ಜಿಲ್ಲಾವಲಯ ಕಾರ್ಯಕ್ರಮದಡಿಯಲ್ಲಿ 16 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು, 26 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ. ಹಿಂದುಳಿದ ವರ್ಗಗಳ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ನಂತರದ ವಿದ್ಯಾಭ್ಯಾಸವನ್ನು ಮುಂದುವರೆಸಲು ಈ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ನೀಡಲಾಗುವುದು. ವಿದ್ಯಾರ್ಥಿನಿಲಯದಲ್ಲಿ ಉಚಿತ ಊಟ ಮತ್ತು ವಸತಿ ಸೌಲಭ್ಯ, ದಿನ ಪತ್ರಿಕೆಗಳ ಸೌಲಭ್ಯ, ಪುಸ್ತಕ ಬಂಡಾರದ ಸೌಲಭ್ಯ ಹಾಗೂ ಕ್ರೀಡಾ ಸಾಮಾಗ್ರಿಗಳ ಸೌಲಭ್ಯ ಒದಗಿಸಲಾಗುತ್ತದೆ.

ಇದೇ ರೀತಿ ಜಿಲ್ಲೆಯಲ್ಲಿ 26 ಮೆಟ್ರಿಕ್ ಪೂರ್ವ ಬಾಲಕ/ ಬಾಲಕಿಯರ ವಿದ್ಯಾರ್ಥಿನಿಲಯಗಳು ಹಾಗೂ 21 ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಗ್ರಾಮೀಣ ಪ್ರದೇಶದ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು 05 ರಿಂದ 10ನೇ ತರಗತಿಯವರಗೆ ವಿದ್ಯಾಭ್ಯಾಸವನ್ನು ಮುಂದುವರೆಸಲು ಈ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶವನ್ನು ನೀಡಲಾಗುತ್ತದೆ. ವಿದ್ಯಾರ್ಥಿನಿಲಯಗಳಲ್ಲಿ ಉಚಿತ ಊಟ ಮತ್ತು ವಸತಿ ಸೌಲಭ್ಯ, ಉಚಿತ ಹಾಸಿಗೆ–ಹೊದಿಕೆಗಳು, ವಾರ್ಷಿಕವಾಗಿ 02 ಜೊತೆ ಸಮವಸ್ತ್ರಗಳು, ದಿನಪತ್ರಿಕೆಗಳು, ಪಠ್ಯ–ಪುಸ್ತಕ ಮತ್ತು ಲೇಖನಾ ಸಾಮಾಗ್ರಿಗಳು, ವೈದ್ಯಕೀಯ ಸೌಲಭ್ಯ, ಕ್ರೀಡಾ ಸಾಮಾಗ್ರಿ, ಸಾಬೂನು, ಟ್ರಂಕು, ತಟ್ಟೆ–ಲೋಟಗಳು ಈ ಸೌಲಭ್ಯಗಳನ್ನು ನೀಡುವುದಲ್ಲದೆ ಅರೆಕಾಲಿಕ ಶಿಕ್ಷಕರಿಂದ ವಿದ್ಯಾರ್ಥಿನಿಲಯದಲ್ಲಿ ವಿಶೇಷ ಪಾಠದ ಸೌಲಭ್ಯ ಕಲ್ಪಿಸಲಾಗುತ್ತದೆ. ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಬೊರ್ಡಿಂಗ್ ವೆಚ್ಚವನ್ನು ಮಾತ್ರ ಮಂಜೂರು ಮಾಡಲಾಗುತ್ತದೆ.

2018–19ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ 1335.13 ಲಕ್ಷಗಳನ್ನು ಒದಗಿಸಲಾಗಿದ್ದು, 1318.98 ಲಕ್ಷಗಳನ್ನು ವೆಚ್ಚಮಾಡಿದ್ದು, ಒಟ್ಟು 3068 ವಿದ್ಯಾರ್ಥಿಗಳು ಪ್ರಯೋಜನೆ ಪಡೆದಿರುತ್ತಾರೆ

6. ಆಶ್ರಮ ಶಾಲೆಗಳ ನಿರ್ವಹಣೆ.

ಈ ಜಿಲ್ಲೆಯಲ್ಲಿ ಇಲಾಖಾ ವತಿಯಿಂದ 02 ಆಶ್ರಮ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಅಲೆಮಾರಿ ಜನಾಂಗದ ಹಾಗೂ ಇತರೆ ಹಿಂದುಳಿದ ವರ್ಗಗಳ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ 01 ನೇ ತರಗತಿಯಿಂದ 05ನೇ ತರಗತಿಯವರೆಗೆ ಓದುವ ಮಕ್ಕಳಿಗೆ ಉಚಿತ ಊಟ ಮತ್ತು ವಸತಿ ಸೌಲಭ್ಯವನ್ನು ಕಲ್ಪಿಸಿಕೊಡಲಾಗುತ್ತದೆ. ಇದರಿಂದ ಪ್ರಮುಖವಾಗಿ ಅಲೆಮಾರಿ ಜನಾಂಗದವರು ತಮ್ಮ ನಿಯತಕಾಲಿಕ ವಲಸೆಯೊಂದಿಗೆ ತಮ್ಮ ಮಕ್ಕಳನ್ನು ಕರೆದುಕೊಂಡು ಹೋಗದೆ ಅವರ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಅನುಕೂಲವಾಗಿರುತ್ತದೆ. ಈ ಆಶ್ರಮ ಶಾಲೆಗಳಲ್ಲಿ ಉಚಿತ ಊಟ ಮತ್ತು ವಸತಿ ಸೌಲಭ್ಯಗಳಲ್ಲದೆ 02 ಜೊತೆ ಸಮವಸ್ತ್ರಗಳು, ಹಾಸಿಗೆ–ಹೊದಿಕೆಗಳು, ಸೋಪು, ತಲೆಕ್ಷೌರ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಸಹ ನೀಡಲಾಗುತ್ತದೆ.

2018–19ನೇ ಸಾಲಿನಲ್ಲಿ ಇವುಗಳ ನಿರ್ವಹಣೆಗಾಗಿ 42.21 ಲಕ್ಷಗಳನ್ನು ಒದಗಿಸಲಾಗಿದ್ದು, ಜಿಲ್ಲಾ ಪಂಚಾಯತ್‌ನಿಂದ 42.21 ಲಕ್ಷ ಬಿಡುಗಡೆಯಾಗಿರುತ್ತದೆ. ಹಾಗೂ 37.83 ಲಕ್ಷಗಳನ್ನು ಖರ್ಚುಮಾಡಲಾಗಿದೆ. 88 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

7. ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಕಟ್ಟಡ ದುರಸ್ತಿ ಮತ್ತು ನಿರ್ವಹಣೆ.

2018–19ನೇ ಸಾಲಿನಲ್ಲಿ ಜಿಲ್ಲಾವಲಯ ಯೋಜನೆಯಡಿಯಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಕಟ್ಟಡಗಳ ದುರಸ್ಥಿ ಹಾಗೂ ಅಪೂರ್ಣಗೊಂಡ ಕಾಮಗಾರಿಗಳನ್ನು ಪೂರ್ಣಗೊಳಿಸಲು 37.26 ಲಕ್ಷ ಅನುದಾನ ಒದಗಿಸಲಾಗಿದೆ. ಇದರಲ್ಲಿ 9 ಸ್ವಂತ ಕಟ್ಟಡಗಳನ್ನು ದುರಸ್ಥಿಗೊಳಿಸಲಾಗಿದೆ.

8. ವಿದ್ಯಾರ್ಥಿನಿಲಯಗಳ ಸುಧಾರಣೆ.

ರಾಮನಗರ ಜಿಲ್ಲೆಯಲ್ಲಿ ವಿದ್ಯಾರ್ಥಿನಿಲಯಗಳಿಗೆ ಬೇಕಾಗುವ ಅಗತ್ಯ ಪಾತ್ರೆ–ಸಾಮಾಗ್ರಿಗಳು, ಊಟದ ತಟ್ಟೆ–ಲೋಟ, ಹಾಸಿಗೆ–ಹೊದಿಕೆ, ಡೈನಿಂಗ್ ಟೇಬಲ್–ಖುರ್ಚಿಗಳು, ಗ್ರಂಥಾಲಯದ ಪುಸ್ತಕಗಳು ಹಾಗೂ ಅಲ್ಮೇರಾಗಳು, ಅನಿಲದ ಒಲೆ ಅಳವಡಿಕೆ ಮತ್ತಿತ್ತರ ಸಾಮಾಗ್ರಿಗಳ ಸರಬರಾಜು ಮಾಡಲಾಗಿದೆ. 2018–19ನೇ ಸಾಲಿಗೆ 30.00 ಲಕ್ಷಗಳನ್ನು ನಿಗಧಿಪಡಿಸಲಾಗಿದ್ದು, 29.93 ಖರ್ಚು ಮಾಡಲಾಗಿದೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಪೀಠಿಕೆ:– ಸರ್ಕಾರವು ಅಲ್ಪಸಂಖ್ಯಾತರ ಜನಾಂಗದವರನ್ನು ಗುರುತಿಸಿ ಅವರ ಕ್ಷೇಮಾಭಿವೃದ್ಧಿಗಾಗಿ 1977ರಿಂದ ಜನತೆಯ ಆಶೋತ್ತರಗಳನ್ನು ಈಡೇರಿಸಲು ಹಲವಾರು ಜನಹಿತ ಹಾಗೂ ಪ್ರಗತಿಪರ ಯೋಜನೆಗಳನ್ನು ಹಮ್ಮಿಕೊಂಡಿದೆ. ಸರ್ಕಾರ ರಾಜ್ಯದ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಸಂವಿಧಾನದ 15(4) ಅನುಚ್ಛೇದದಂತೆ ಶೈಕ್ಷಣಿಕ ಸೌಲಭ್ಯ ಮತ್ತು 16(4) ಅನುಚ್ಛೇದದಂತೆ ಉದ್ಯೋಗ ಮೀಸಲಾತಿಯ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿರುತ್ತದೆ. ಒಟ್ಟಾರೆ ಈ ಇಲಾಖೆಯು ಅಲ್ಪಸಂಖ್ಯಾತರ ಜನರು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಸ್ವಾವಲಂಭಿಗಳಾಗಲು ಶ್ರಮಿಸುತ್ತಿದೆ. ಅಲ್ಪಸಂಖ್ಯಾತರಲ್ಲಿ ಪ್ರತಿಭಾನ್ವೇಶಣೆ, ಪ್ರತಿಭಾ ಪ್ರೋತ್ಸಾಹ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಹಾಯಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ನಿಟ್ಟಿನಲ್ಲಿ 2018–19ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯದಲ್ಲಿ ರಾಮನಗರ ಜಿಲ್ಲೆಗೆ ಅಲ್ಪಸಂಖ್ಯಾತರ ಏಳಿಗೆಗಾಗಿ ಜಿಲ್ಲಾವಲಯ ಒಟ್ಟು ಬಾಬ್ತು 172.70 ಲಕ್ಷಗಳ ಆಯವ್ಯಯವನ್ನು ಒದಗಿಸಲಾಗಿರುತ್ತದೆ. ಒಟ್ಟು 166.28 ಲಕ್ಷಗಳನ್ನು ಖರ್ಚುಮಾಡಿದ್ದು, ಇದರಲ್ಲಿ ಖಾಸಗಿ ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ 3.76 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಸದರಿ ಸಂಸ್ಥೆಯವರು 06 ವರ್ಷಗಳಿಂದ ಸಹಾಯಧನಗಳನ್ನು ಪಡೆಯುತ್ತಿರುವುದಿಲ್ಲ. ಒಟ್ಟಾರೆ 2018–19ನೇ ಸಾಲಿನಲ್ಲಿ 166.28 ಲಕ್ಷಗಳನ್ನು ಖರ್ಚುಮಾಡಿ ಶೇ. 96ರಷ್ಟು ಪ್ರಗತಿ ಸಾಧಿಸಲಾಗಿದೆ.

1. ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳ ನಿರ್ವಹಣೆ

ಈ ಜಿಲ್ಲೆಯಲ್ಲಿ ಜಿಲ್ಲಾವಲಯ ಕಾರ್ಯಕ್ರಮದಡಿಯಲ್ಲಿ 05 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು (04 ಬಾಲಕ ಹಾಗೂ 02 ಬಾಲಕಿ) ಕಾರ್ಯನಿರ್ವಹಿಸುತ್ತಿದ್ದು, ಅಲ್ಪಸಂಖ್ಯಾತರ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ನಂತರದ ವಿದ್ಯಾಭ್ಯಾಸವನ್ನು ಮುಂದುವರೆಸಲು ಈ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ನೀಡಲಾಗುವುದು. ವಿದ್ಯಾರ್ಥಿನಿಲಯದಲ್ಲಿ ಉಚಿತ ಊಟ ಮತ್ತು ವಸತಿ ಸೌಲಭ್ಯ, ದಿನ ಪತ್ರಿಕೆಗಳ ಸೌಲಭ್ಯ, ಪುಸ್ತಕ ಬಂಡಾರದ ಸೌಲಭ್ಯ ಹಾಗೂ ಕ್ರೀಡಾ ಸಾಮಾಗ್ರಿಗಳ ಸೌಲಭ್ಯ ಒದಗಿಸಲಾಗುತ್ತದೆ. ಇದೇ ರೀತಿ ಜಿಲ್ಲೆಯಲ್ಲಿ 02 ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಗ್ರಾಮೀಣ ಪ್ರದೇಶದ ಅಲ್ಪಸಂಖ್ಯಾತರ ಅಭ್ಯರ್ಥಿಗಳು 05 ರಿಂದ 10ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮುಂದುವರೆಸಲು ಈ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶವನ್ನು ನೀಡಲಾಗುತ್ತದೆ. ವಿದ್ಯಾರ್ಥಿನಿಲಯಗಳಲ್ಲಿ ಉಚಿತ ಊಟ ಮತ್ತು ವಸತಿ ಸೌಲಭ್ಯ, ಉಚಿತ ಹಾಸಿಗೆ–ಹೊದಿಕೆಗಳು, ವಾರ್ಷಿಕವಾಗಿ 02 ಜೊತೆ ಸಮವಸ್ತ್ರಗಳು, ದಿನಪತ್ರಿಕೆಗಳು, ಪಠ್ಯ–ಪುಸ್ತಕ ಮತ್ತು ಲೇಖನಾ ಸಾಮಾಗ್ರಿಗಳು, ವೈದ್ಯಕೀಯ ಸೌಲಭ್ಯ, ಕ್ರೀಡಾ ಸಾಮಾಗ್ರಿ, ಸಾಬೂನು, ಟ್ರಂಕು, ತಟ್ಟೆ–ಲೋಟಗಳು ಈ ಸೌಲಭ್ಯಗಳನ್ನು ನೀಡಲಾಗುತ್ತಿದೆ.

2018–19ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ 151.54 ಲಕ್ಷಗಳನ್ನು ಒದಗಿಸಲಾಗಿದ್ದು, 149.00 ಲಕ್ಷಗಳನ್ನು ವೆಚ್ಚಮಾಡಿದ್ದು, ಒಟ್ಟು 283 ವಿದ್ಯಾರ್ಥಿಗಳು ಹಾಗೂ 39 ಸಿಬ್ಬಂದಿಗಳು ಇದರ ಪ್ರಯೋಜನ ಪಡೆದಿರುತ್ತಾರೆ.

2. ಅಲ್ಪಸಂಖ್ಯಾತರ ಕಾನೂನು ಪದವಿಧರರಿಗೆ ಶಿಷ್ಯವೇತನ.

ರಾಮನಗರ ಜಿಲ್ಲೆಯಲ್ಲಿನ 05 ಕಾನೂನು ಪದವೀಧರರಿಗೆ ಶಿಷ್ಯವೇತನ ವಿತರಿಸಲು 2018–19ನೇ ಸಾಲಿಗೆ 2.40 ಲಕ್ಷಗಳನ್ನು ಒದಗಿಸಿದ್ದು, ಜಿಲ್ಲಾ ಪಂಚಾಯಿತಿಯಿಂದ 2.40 ಲಕ್ಷಗಳು ಬಿಡುಗಡೆ ಮಾಡಲಾಗಿದ್ದು, ಇದುವರೆವಿಗೂ 2.20 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಇದರಲ್ಲಿ 04 ಕಾನೂನು ಪದವೀಧರರು ಪ್ರಯೋಜನೆ ಪಡೆದಿರುತ್ತಾರೆ.

3. ಅಲ್ಪಸಂಖ್ಯಾತರ ಸಂಸ್ಥೆಗಳು ನಡೆಸುತ್ತಿರುವ ಖಾಸಗಿ ವಿದ್ಯಾರ್ಥಿನಿಲಯಗಳ ನಿರ್ವಹಣೆ.

2018–19ನೇ ಸಾಲಿಗೆ 3.76 ಲಕ್ಷಗಳು ಬಿಡುಗಡೆ ಮಾಡಲಾಗಿದ್ದು, ಮಾಗಡಿ ತಾಲ್ಲೂಕಿನಲ್ಲಿ ಇರುವ ಸೈಯದ್ ಶಾಕದ್ರಿ ಬಡಮಖಾನ್ ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯದ ನಿರ್ವಹಣೆಗಾಗಿ ವೆಚ್ಚ ಭರಿಸಲಾಗುವುದು. ಸದರಿ ವಿದ್ಯಾರ್ಥಿನಿಲಯವು 06 ವರ್ಷಗಳಿಂದ ಸಹಾಯಧನಗಳನ್ನು ಪಡೆಯುತ್ತಿಲ್ಲವಾದ್ದರಿಂದ ಅನುದಾನವು ಖರ್ಚಾಗಿರುವುದಿಲ್ಲ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

"ಎಲ್ಲೆಡೆ ಆರೋಗ್ಯ ಎಲ್ಲರಿಗೂ ಆರೋಗ್ಯ" ಎಂಬ ನಾಣ್ಣುಡಿಯಂತೆ ಎಲ್ಲರಿಗೂ **"ಆರೋಗ್ಯ ಭಾಗ್ಯ"** ಎಂಬ ಸರ್ಕಾರದ ಘೋಷಣೆಯಂತೆ ದಿನಾಂಕ: 23–09–2007 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ವಿಭಜಿಸಿ ನೂತವಾಗಿ ರಾಮನಗರ ಜಿಲ್ಲೆಯಾಗಿ ಪ್ರಾರಂಭ ಮಾಡಿ ಇದರಲ್ಲಿ

1. ಚನ್ನಪಟ್ಟಣ
2. ಕನಕಪುರ
3. ಮಾಗಡಿ
4. ರಾಮನಗರ

ಮೇಲಿನ ನಾಲ್ಕು ತಾಲ್ಲೂಕುಗಳು ಒಳಗೊಂಡಿರುತ್ತದೆ. ಜಿಲ್ಲಾ ಮಟ್ಟದಲ್ಲಿ 1 ಜಿಲ್ಲಾ ಆಸ್ಪತ್ರೆ, 3 ಸಾರ್ವಜನಿಕ ಆಸ್ಪತ್ರೆಗಳು ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿವೆ. 04 ಸಮುದಾಯ ಆರೋಗ್ಯ ಕೇಂದ್ರ, 61 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 04 ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ಹಾಗೂ 240 ಉಪ–ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಪ್ರಾಥಮಿಕ ಆರೋಗ್ಯ ಸೇವಾ ಸೌಲಭ್ಯಗಳನ್ನು ಗ್ರಾಮಾಂತರ ಜನರ ಮನೆ ಬಾಗಿಲಿಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಉಪ–ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಸರ್ಕಾರವು ರೂಪಿಸಿರುವ ಆರೋಗ್ಯ ಸೇವಾ ಸೌಲಭ್ಯಗಳು ಈ ರೀತಿ ಇರುತ್ತವೆ.

ರಾಮನಗರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ

ಸಂಕ್ಷಿಪ್ತ ವಿವರಣೆ

ಕ್ರ.ಸ	ಆರೋಗ್ಯ ಸಂಸ್ಥೆಗಳ ವಿವರ	ಆರೋಗ್ಯ ಸಂಸ್ಥೆಗಳ ಸಂಖ್ಯೆ
1	ಜಿಲ್ಲಾ ಆಸ್ಪತ್ರೆ	1
2	ಸಾರ್ವಜನಿಕ ಆಸ್ಪತ್ರೆ	3
3	ಸಮುದಾಯ ಆರೋಗ್ಯ ಕೇಂದ್ರಗಳು	4
4	ಪ್ರಾಥಮಿಕ ಆರೋಗ್ಯ ಕೇಂದ್ರಗಳು	61
5	ಉಪ–ಕೇಂದ್ರಗಳು	240
6	ನಗರ ಆರೋಗ್ಯ ಕೇಂದ್ರ	04

ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು:–

ಕುಟುಂಬ ಕಲ್ಯಾಣ ಕಾರ್ಯಕ್ರಮ 2018–19:–

ರಾಮನಗರ ಜಿಲ್ಲೆಯಲ್ಲಿ ಆರ್ ಸಿ ಹೆಚ್ ಕಾರ್ಯಕ್ರಮದ ಅಡಿಯಲ್ಲಿ ಆರೋಗ್ಯ ಮಾಹಿತಿಗಳು ಈ ಕೆಳಕಂಡಂತಿವೆ

ತಾಯಂದಿರ ಮರಣ ಪ್ರಮಾಣವು 2014–15 ರಲ್ಲಿ 5, 2015–16 ರಲ್ಲಿ 5, 2016–17 ರಲ್ಲಿ 07 ಹಾಗೂ 2017–18 ರಲ್ಲಿ 11 ಆಗಿರುತ್ತದೆ. ಶಿಶುಮರಣ ಪ್ರಮಾಣವು 2014–15 ನೇ ಸಾಲಿಗೆ 88, 2015–16 ನೇ ಸಾಲಿಗೆ 103 2016–17 ನೇ ಸಾಲಿಗೆ 158, 2017–18 ನೇ ಸಾಲಿಗೆ 167 ಆಗಿರುತ್ತದೆ. ಹಾಗೂ 2018–19 ನೇ ಸಾಲಿಗೆ 129 ಆಗಿರುತ್ತದೆ. ಗರ್ಭಿಣಿ ಸ್ತ್ರೀಯರಿಗೆ ಟಿಟಿ ಚುಚ್ಚುಮದ್ದು ಹಾಗೂ ಕಬ್ಬಿಣಾಂಶದ ಮಾತ್ರೆಗಳನ್ನು ವಿತರಿಸುವ ಕಾರ್ಯಕ್ರಮದಲ್ಲಿ ಪ್ರಗತಿ ಸಾಧಿಸಲಾಗಿದೆ. ಜನನಾಂಗ ಮಾರ್ಗದ ಸೋಂಕು ಮತ್ತು ಲೈಂಗಿಕ ಸಂಪರ್ಕದ ಸೋಂಕು ಹಾಗೂ ಹೆಚ್.ಐ.ವಿ/ ಏಡ್ಸ್ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಪ್ರಗತಿಯಲ್ಲಿದ್ದು, ಎನ್.ಹೆಚ್.ಎಂ ಅಡಿಯಲ್ಲಿ ಹೆಚ್ಚು ಒತ್ತು ನೀಡಲಾಗಿದೆ. 2018–19 ನೇ ಸಾಲಿಗೆ ನೋ ಸ್ಕಾಲ್‌ಪೆಲ್ ವ್ಯಾಸಕ್ಟಮಿ 9 ಸಾಧನೆ ಆಗಿರುತ್ತದೆ. ನೋ ಸ್ಕಾ ಲ್‌ಪೆಲ್ ವ್ಯಾಸಕ್ಟಮಿ ಕಾರ್ಯಕ್ರಮದಲ್ಲಿ ಗಮನಾರ್ಹ ಪ್ರಗತಿ ಸಾಧಿಸಲು ಸಾಧ್ಯವಾಗಿಲ್ಲ. ಈ ನಿಟ್ಟಿನಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದು ಪ್ರತಿ ಉಪಕೇಂದ್ರದಿಂದ ಒಬ್ಬರಿಗೆ ಎನ್.ಎಸ್.ವಿ ಮಾಡಿಸುವ ಗುರಿ ಹೊಂದಲಾಗಿದೆ. ಸಂತಾನಹರಣ

ಶಸ್ತ್ರಚಿಕಿತ್ಸೆಯಲ್ಲಿ 2014–15 ನೇ ಸಾಲಿಗೆ 5805 ಗುರಿ ಇದ್ದು ಸಾಧನೆ 4672 ಆಗಿರುತ್ತದೆ. 2015–16 ನೇ ಸಾಲಿನಲ್ಲಿ 6500 ಗುರಿ ಇದ್ದು 3724 ಸಾಧನೆ ಆಗಿರುತ್ತದೆ. 2016–17 ನೇ ಸಾಲಿನಲ್ಲಿ 6500 ಗುರಿ ಇದ್ದು 3700 ಸಾಧನೆ ಆಗಿರುತ್ತದೆ. 2017–18 ನೇ ಸಾಲಿನಲ್ಲಿ 6500 ಗುರಿ ಇದ್ದು 3602 ಸಾಧನೆ ಆಗಿರುತ್ತದೆ. 2018–19 ನೇ ಸಾಲಿನಲ್ಲಿ 5482 ಗುರಿ ಇದ್ದು 3404 ಸಾಧನೆ ಆಗಿರುತ್ತದೆ. ಮುಂದಿನ ವರ್ಷದಲ್ಲಿ ಶೇ.100 ರಷ್ಟು ಪ್ರಗತಿ ಸಾಧಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

2014–15 ನೇ ಸಾಲಿಗೆ 4897 ಗುರಿ ಇದ್ದು 2470, ಹಾಗೂ 2015–16 ನೇ ಸಾಲಿನಲ್ಲಿ 2278 2016–17 ನೇ ಸಾಲಿನಲ್ಲಿ 2186, 2017–18 ನೇ ಸಾಲಿನಲ್ಲಿ 2771 2018–19 ನೇ ಸಾಲಿನಲ್ಲಿ 2431 ಮಹಿಳೆಯರಿಗೆ ವಂಕಿ ಅಳವಡಿಸಲಾಗಿದೆ 2014–15 ರಲ್ಲಿ 2134, 2015–16 ರಲ್ಲಿ 2134, 2017–18 ರಲ್ಲಿ 2100 2018–19 ರಲ್ಲಿ 2107 ಫಲಾನುಭವಿಗಳಿಗೆ ನುಂಗುವ ಮಾತ್ರೆ ಮತ್ತು 2014–15 ರಲ್ಲಿ 4913, 2015–16 ರಲ್ಲಿ 4808 2016–17 ರಲ್ಲಿ 4450, 2017–18 ರಲ್ಲಿ 4900, 2018–19 ರಲ್ಲಿ 4506 ಪುರುಷರಿಗೆ ನಿರೋಧ್ ವಿತರಿಸುವ ಮೂಲಕ ಕುಟುಂಬ ಕಲ್ಯಾಣ ಕಾರ್ಯಕ್ರಮದಲ್ಲಿ ಗಮನಾರ್ಹ ಸಾಧನೆ ಸಾಧಿಸಲಾಗಿದೆ.

ರಾಷ್ಟ್ರೀಯ ಲಸಿಕಾ ಕಾರ್ಯಕ್ರಮದಡಿಯಲ್ಲಿ ಮಾರಕ ರೋಗಗಳ ವಿರುದ್ಧ ನೀಡುವ ಲಸಿಕೆಗಳಾದ 2014–15 ನೇ ಸಾಲಿಗೆ ಬಿ.ಸಿ.ಜಿ, ಡಿ.ಪಿ.ಟಿ., ಪೋಲಿಯೋ, ದಡಾರ ಲಸಿಕೆಗಳಿಗೆ 14916 ಗುರಿ ಇದ್ದು ಬಿ.ಸಿ.ಜಿ–14680, ಪೋಲಿಯೋ 15576, ಪೆಂಟಾ 14708 ಹಾಗೂ ದಡಾರ–15107 ಹಾಗೂ ಟಿ.ಟಿ. ಲಸಿಕೆಯ ಗುರಿ 17121 ಇದ್ದು 16344 ರಷ್ಟು ಪ್ರಗತಿ ಸಾಧಿಸಲಾಗಿದೆ. 2015–16 ನೇ ಸಾಲಿಗೆ ಬಿ.ಸಿ.ಜಿ, ಡಿ.ಪಿ.ಟಿ., ಪೋಲಿಯೋ, ದಡಾರ ಲಸಿಕೆಗಳಿಗೆ 14916 ಗುರಿ ಇದ್ದು ಬಿ.ಸಿ.ಜಿ–13789, ಪೋಲಿಯೋ 14549, ಪೆಂಟಾ 14549 ಹಾಗೂ ದಡಾರ–15089 ಹಾಗೂ ಟಿ.ಟಿ.ಲಸಿಕೆಯ ಗುರಿ 15893 ಇದ್ದು 14439 ರಷ್ಟು ಪ್ರಗತಿ ಸಾಧಿಸಲಾಗಿದೆ. 2016–17 ನೇ ಸಾಲಿಗೆ ಬಿ.ಸಿ.ಜಿ, ಡಿ.ಪಿ.ಟಿ., ಪೋಲಿಯೋ, ದಡಾರ ಲಸಿಕೆಗಳಿಗೆ 13153 ಗುರಿ ಇದ್ದು ಬಿ.ಸಿ.ಜಿ–111971, ಪೋಲಿಯೋ–14319, ಪೆಂಟಾ–14319, ಹಾಗೂ ದಡಾರ–12188 ಹಾಗೂ ಟಿ.ಟಿ.ಲಸಿಕೆಯ ಗುರಿ 15036 ಇದ್ದು 13518 ರಷ್ಟು ಪ್ರಗತಿ ಸಾಧಿಸಲಾಗಿದೆ. 2017–18 ನೇ ಸಾಲಿಗೆ ಬಿ.ಸಿ.ಜಿ, ಡಿ.ಪಿ.ಟಿ., ಪೋಲಿಯೋ, ದಡಾರ ಲಸಿಕೆಗಳಿಗೆ 13153 ಗುರಿ ಇದ್ದು ಬಿ.ಸಿ.ಜಿ–10469, ಪೋಲಿಯೋ–13247, ಪೆಂಟಾ–13247, ಹಾಗೂ ದಡಾರ–13024 ಹಾಗೂ ಟಿ.ಟಿ.ಲಸಿಕೆಯ ಗುರಿ 15036 ಇದ್ದು 14343 ರಷ್ಟು ಪ್ರಗತಿ ಸಾಧಿಸಲಾಗಿದೆ. 2018–19 ನೇ ಸಾಲಿಗೆ ಬಿ.ಸಿ.ಜಿ, ಡಿ.ಪಿ.ಟಿ., ಪೋಲಿಯೋ, ದಡಾರ ಲಸಿಕೆಗಳಿಗೆ 12864 ಗುರಿ ಇದ್ದು ಬಿ.ಸಿ.ಜಿ–11036, ಪೋಲಿಯೋ–13195, ಪೆಂಟಾ–13195, ಹಾಗೂ ದಡಾರ–13146 ಹಾಗೂ ಟಿ.ಟಿ.ಲಸಿಕೆಯ ಗುರಿ 14645 ಇದ್ದು 14238 ರಷ್ಟು ಪ್ರಗತಿ ಸಾಧಿಸಲಾಗಿದೆ.

2014–15 ನೇ ಸಾಲಿನಲ್ಲಿ ಎನ್.ಹೆಚ್.ಎಂ ಯೋಜನೆಯ ಅಡಿಯಲ್ಲಿ ಜನನಿ ಸುರಕ್ಷಾ ಯೋಜನೆಯಲ್ಲಿ 7275 ಫಲಾನುಭವಿಗಳಿಗೆ 65.29 ಲಕ್ಷ ರೂ 2015–16 ನೇ ಸಾಲಿನಲ್ಲಿ 6700 ಫಲಾನುಭವಿಗಳಿಗೆ 82.57 ಲಕ್ಷ ರೂ 2016–17 ನೇ ಸಾಲಿನಲ್ಲಿ 6758 ಫಲಾನುಭವಿಗಳಿಗೆ 60.31 ಲಕ್ಷ ರೂ 2017–18 ನೇ ಸಾಲಿನಲ್ಲಿ 6299 ಫಲಾನುಭವಿಗಳಿಗೆ 53.52 ಲಕ್ಷ ರೂ ಹಾಗೂ 2018–19 ನೇ ಸಾಲಿನಲ್ಲಿ 4855 ಫಲಾನುಭವಿಗಳಿಗೆ 27.13 ಲಕ್ಷ ರೂ ಸಹಾಯಧನ ಖರ್ಚು ಮಾಡಲಾಗಿದೆ.

ಶಾಲಾ ಆರೋಗ್ಯ ಕಾರ್ಯಕ್ರಮದಲ್ಲಿ ಪ್ರಾರಂಭಿಸಿರುವ ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮದಲ್ಲಿ 2014–15ನೇ ಸಾಲಿಗೆ 701512 ಮಕ್ಕಳಿದ್ದು 353804 ಮಕ್ಕಳ ಆರೋಗ್ಯ ತಪಾಸಣೆ ನಡೆಸಿ ನ್ಯೂನತೆ ಇರುವ 22732 ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದ್ದು 28 ಮಕ್ಕಳನ್ನು, 2015–16ನೇ ಸಾಲಿಗೆ 181690 ಮಕ್ಕಳಿದ್ದು 20066 ಮಕ್ಕಳ ಆರೋಗ್ಯ ತಪಾಸಣೆ ನಡೆಸಿ ನ್ಯೂನತೆ ಇರುವ 12897ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದ್ದು, ರಾಜ್ಯ ಮಟ್ಟದ ಆಸ್ಪತ್ರೆಗೆ ನಿರ್ದೇಶಿಸಲಾಗಿದೆ. 2016–17ನೇ ಸಾಲಿಗೆ 208560 ಮಕ್ಕಳಿದ್ದು 155239 ಮಕ್ಕಳ ಆರೋಗ್ಯ ತಪಾಸಣೆ ನಡೆಸಿ ನ್ಯೂನತೆ ಇರುವ 23660 ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದ್ದು, ಹೆಚ್ಚುವರಿ ಚಿಕಿತ್ಸೆಗಾಗಿ 13955 ಮಕ್ಕಳನ್ನು ರಾಜ್ಯ ಮಟ್ಟದ ಆಸ್ಪತ್ರೆಗೆ ನಿರ್ದೇಶಿಸಲಾಗಿದೆ. 2017–18 ನೇ ಸಾಲಿಗೆ 227504 ಮಕ್ಕಳಿದ್ದು, 169974 ಮಕ್ಕಳ ಆರೋಗ್ಯ ತಪಾಸಣೆ ನಡೆಸಿ ನ್ಯೂನತೆ ಇರುವ 26848 ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದ್ದು, ಹೆಚ್ಚುವರಿ ಚಿಕಿತ್ಸೆಗಾಗಿ 14860 ಮಕ್ಕಳನ್ನು ರಾಜ್ಯ ಮಟ್ಟದ ಆಸ್ಪತ್ರೆಗೆ ನಿರ್ದೇಶಿಸಲಾಗಿದೆ. 2018–9 ನೇ ಸಾಲಿಗೆ 198600 ಮಕ್ಕಳಿದ್ದು, 178676 ಮಕ್ಕಳ ಆರೋಗ್ಯ ತಪಾಸಣೆ ನಡೆಸಿ ನ್ಯೂನತೆ ಇರುವ 18207 ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದ್ದು, ಹೆಚ್ಚುವರಿ ಚಿಕಿತ್ಸೆಗಾಗಿ 10495 ಮಕ್ಕಳನ್ನು ರಾಜ್ಯ ಮಟ್ಟದ ಆಸ್ಪತ್ರೆಗೆ ನಿರ್ದೇಶಿಸಲಾಗಿದೆ.

ಹದಿಹರೆಯ ಮತ್ತು ಸಂತಾನೋತ್ಪತ್ತಿ ವಿನೂತನ ಕಾರ್ಯಕ್ರಮದ ಮುಖಾಂತರ, ಜಿಲ್ಲೆಯಲ್ಲಿರುವ ಎಲ್ಲಾ ಕಿಶೋರ–ಕಿಶೋರಿಯರಿಗೆ ಹದಿಹರೆಯದ ಆರೋಗ್ಯ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಹಾಗೂ ಪ್ರತಿ ಗುರುವಾರ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹದಿಹರೆಯದ ಸಮಸ್ಯೆಗಳಿಗೆ ಚಿಕಿತ್ಸೆ ನೀಡುವ ಸಲುವಾಗಿ **"ಸ್ನೇಹ ಕ್ಲಿನಿಕ್"** ಪ್ರಾರಂಭಿಸಲಾಗಿದೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿಯಲ್ಲಿ ಜಿಲ್ಲೆಯಲ್ಲಿ 879 ಆಶಾ ಕಾರ್ಯಕರ್ತೆಯರನ್ನು ಗುರುತಿಸಿ ತರಬೇತಿ ನೀಡುವ ಗುರಿ ಹೊಂದಲಾಗಿದ್ದು ಸುಮಾರು 853 ಆಶಾ ಕಾರ್ಯಕರ್ತೆಯರಿಗೆ ತರಬೇತಿ ನೀಡಿ ಕ್ಷೇತ್ರಮಟ್ಟದಲ್ಲಿ ಕಾರ್ಯ ನಿರ್ವಹಿಸಲು ನಿಯೋಜಿಸಲಾಗಿತ್ತು. ಸದರಿ ಸಾಲಿನಲ್ಲಿ ಒಟ್ಟು 853 ಆಶಾ ಕಾರ್ಯಕರ್ತೆಯರು ಮಾತ್ರ ಕಾರ್ಯನಿರ್ವಹಿಸುತ್ತಿರುತ್ತಾರೆ.

ಆರೋಗ್ಯ ರಕ್ಷಾ ಕವಚ ಕಾರ್ಯಕ್ರಮದ ಅಡಿಯಲ್ಲಿ 12 **"108"** ತುರ್ತು ವಾಹನಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. 2014–15 ನೇ ಸಾಲಿನಲ್ಲಿ 15263 ಫಲಾನುಭವಿಗಳಿಗೆ, 2015–16 ನೇ ಸಾಲಿನಲ್ಲಿ 15247 ಫಲಾನುಭವಿಗಳಿಗೆ, 2016–17 ನೇ ಸಾಲಿನಲ್ಲಿ 17839 ಫಲಾನುಭವಿಗಳಿಗೆ ಹಾಗೂ 2018–19 ನೇ ಸಾಲಿನಲ್ಲಿ 14180 ಫಲಾನುಭವಿಗಳಿಗೆ ಈ ಸೇವೆಯನ್ನು ಒದಗಿಸಲಾಗಿದೆ. 2018–19 ನೇ ಸಾಲಿನಲ್ಲಿ ರಾಷ್ಟ್ರೀಯ ಲಸಿಕಾ ಕಾರ್ಯಕ್ರಮದಡಿಯಲ್ಲಿ 6 ಮಾರಕ ಕಾಯಿಲೆಗಳಿಗೆ ನೀಡಿದ ಲಸಿಕೆಗಳ ವಿವರ

ಕ್ರ.ಸಂ.	ಲಸಿಕೆಗಳ ಹೆಸರು	ಗುರಿ	2018–19
1	ಬಿ.ಸಿ.ಜಿ.	12864	11036
2	ಪೆಂಟಾ	12864	13195
3	ಪೋಲಿಯೋ	12864	13195
4	ದಡಾರ	12864	13146
5	ಟಿಟಿ ಕಾರ್ಯಕ್ರಮ	12864	14238
6	ವಿಟಮಿನ್ ಎ	12864	9105

2018–19 ನೇ ಸಾಲಿನಲ್ಲಿ ಎನ್.ಹೆಚ್.ಎಂ. ಯೋಜನೆಯಡಿಯಲ್ಲಿ ವಿವಿಧ ಕಾರ್ಯಕ್ರಮದಡಿಯಲ್ಲಿನ ಘನಾನುಭವಿಗಳ ವಿವರಗಳು

ಕ್ರ ಸಂ	ಕಾರ್ಯಕ್ರಮಗಳು	ಫಲಾನುಭವಿಗಳು	ಖರ್ಚಾದ ಹಣ (ರೂ.ಲಕ್ಷಗಳಲ್ಲಿ)
1	ಜನನಿ ಸುರಕ್ಷಾ ಯೋಜನೆ	4855	27.13

2018–19 ನೇ ಸಾಲಿನ ಸುವರ್ಣ ಆರೋಗ್ಯ ಕಾರ್ಯಕ್ರಮ ಅಭಿಯಾನ ಕಾರ್ಯಕ್ರಮದ ಪ್ರಗತಿ ವಿವರ

ಕ್ರ:ಸಂ	ವಿವರಗಳು	ಪ್ರಗತಿ
1	ಅಂಗನವಾಡಿಗಳು	1543
2	ಮಕ್ಕಳ ಸಂಖ್ಯೆ	106630
3	ಶಾಲೆಗಳು	1598
4	ಮಕ್ಕಳ ಸಂಖ್ಯೆ	91970
5	ತಪಾಸಣೆ ನಡೆಸಿದ ಮಕ್ಕಳು	178676
6	ನ್ಯೂನ್ಯತೆ ಇರುವ ಮಕ್ಕಳು	18207
7	ಹೆಚ್ಚುವರಿ ಚಿಕಿತ್ಸೆಗಾಗಿ ಕಳುಹಿಸಿದ ಮಕ್ಕಳು	10495

ರಾಮನಗರ ಜಿಲ್ಲೆಯಲ್ಲಿ ಆರ್.ಸಿ.ಹೆಚ್. ಕಾರ್ಯಕ್ರಮದಡಿಯಲ್ಲಿ ಇರುವ ಆರೋಗ್ಯ ಮಾಹಿತಿಗಳ ವಿವರಗಳು

ಕ್ರ. ಸಂ	ಆರೋಗ್ಯ ಕಾರ್ಯಕ್ರಮಗಳು	2014–2015	2015–2016	2016–17	2017–18	2018–19
1	ತಾಯಂದಿರ ಮರಣ	5	5	7	11	17
2	ಶಿಶು ಮರಣ	88	105	158	181	146
3	ಸಂತಾನಹರಣ ಶಸ್ತ್ರ ಚಿಕಿತ್ಸೆ	4672	3724	3700	3602	3404
4	ವಂಕಿ ಅಳವಡಿಕೆ	2470	2278	2186	2771	2431
5	ನುಂಗುವ ಮಾತ್ರೆ	2134	2134	3590	2100	2107
6	ನಿರೋದ್ ವಿತರಣೆ	4913	4808	4450	4900	4506
7	ಮಕ್ಕಳಿಗೆ ಅತಿಸಾರ ಬೇದಿಗೆ ಚಿಕಿತ್ಸೆ	3066	186077	48675	69016	80256

ಆರೋಗ್ಯ ರಕ್ಷಾ ಕವಚ (108)

ಕ್ರ. ಸಂ.	ಆರೋಗ್ಯ ರಕ್ಷಾ ಕವಚ ಕಾರ್ಯಕ್ರಮ	2014–15	2015–16	2016–17	2017–18	2018–19
1	ಫಲಾನುಭವಿಗಳು	15263	15247	17839	17012	14150

2018–19 ನೇ ಸಾಲಿನ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ ವರದಿ

ರಾಮನಗರ ಜಿಲ್ಲೆಯಲ್ಲಿ ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ (ಆರ್.ಎನ್.ಟಿ.ಸಿ.ಪಿ.) ಕಾರ್ಯಕ್ರಮವು 01 ಜನವರಿ 2008 ರಂದು ಜಾರಿಗೆ ಬಂದಿರುತ್ತದೆ.

ಪ್ರಸ್ತುತ 05 ಕ್ಷಯರೋಗ ಘಟಕಗಳು ರಾಮನಗರ, ಕನಕಪುರ, ಚನನಪಟ್ಟಣ, ಮಾಗಡಿ ಮತ್ತು ಹಾರೋಹಳ್ಳಿ ಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು ಇವುಗಳ ವ್ಯಾಪ್ತಿಯಲ್ಲಿ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಡಿಎಂಸಿಗಳಾಗಿ ಕರ್ತವ್ಯ ನಿರ್ವಹಿಸುತ್ತಿವೆ.

- ರಾಮನಗರ ಕ್ಷಯ ರೋಗ ಘಟಕ
- ಕನಕಪುರ ಕ್ಷಯ ರೋಗ ಘಟಕ
- ಚನ್ನಪಟ್ಟಣ ಕ್ಷಯ ರೋಗ ಘಟಕ
- ಮಾಗಡಿ ಕ್ಷಯ ರೋಗ ಘಟಕ
- ಹಾರೋಹಳ್ಳಿ ಕ್ಷಯ ರೋಗ ಘಟಕ

2018–19 ರಲ್ಲಿ ಸದರಿ ಕಾರ್ಯಕ್ರಮದಲ್ಲಿ 17095 ಜನರಿಗೆ ಕಫ ಪರೀಕ್ಷೆ ಮಾಡಿ 525 ರೋಗಿಗಳನ್ನು ಪತ್ತೆ ಹಚ್ಚಲಾಗಿದೆ.

REPORT for 4 Years

ವರ್ಷ	ಜನಸಂಖ್ಯೆ	ಎನ್ ಎಸ್ ಪಿ	ಗುಣಮುಖರಾದ ಕ್ಷಯ ರೋಗಿಗಳು	ಕಫ ಪರೀಕ್ಷೆ
2014–2015	1140749	546	86%	10848
2015–2016	1155271	484	85%	11512
2016–2017	1180571	482	87%	13084
2017–18	1184359	660	86%	16211
2018–19	1198904	525	80%	17095

ಜಿಲ್ಲಾ ಹೆಚ್.ಐ.ವಿ/ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕ.

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಬೆಂಗಳೂರು, ಇವರ ವತಿಯಿಂದ, ರಾಮನಗರ ಜಿಲ್ಲೆಯಲ್ಲಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ, ಜಿಲ್ಲಾ ಹೆಚ್.ಐ.ವಿ/ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕವು ಸ್ಥಾಪನೆಗೊಂಡಿದ್ದು, ಈ ಘಟಕದ ಅಡಿಯಲ್ಲಿ

08 ಐಸಿಟಿಸಿ (ಸಮಗ್ರ ಆಪ್ತಸಮಾಲೋಚನಾ ಮತ್ತು ಪರೀಕ್ಷಾ ಕೇಂದ್ರ) ಕೇಂದ್ರಗಳು ಜಿಲ್ಲಾದ್ಯಂತ ಕಾರ್ಯನಿರ್ವಹಿಸುತ್ತಿವೆ. ಅವುಗಳೆಂದರೆ:

- ರಾಮನಗರ – ಜಿಲ್ಲಾ ಆಸ್ಪತ್ರೆ
- ಕನಕಪುರ – ಸಾರ್ವಜನಿಕ ಆಸ್ಪತ್ರೆ
- ಚನ್ನಪಟ್ಟಣ – ಸಾರ್ವಜನಿಕ ಆಸ್ಪತ್ರೆ
- ಮಾಗಡಿ – ಸಾರ್ವಜನಿಕ ಆಸ್ಪತ್ರೆ
- ಹಾರೋಹಳ್ಳಿ – ಸಮುದಾಯ ಆರೋಗ್ಯ ಕೇಂದ್ರ
- ಬಿಡದಿ – ಸಮುದಾಯ ಆರೋಗ್ಯ ಕೇಂದ್ರ
- ಸೋಲೂರು – ಸಮುದಾಯ ಆರೋಗ್ಯ ಕೇಂದ್ರ
- ಸಾತನೂರು –ಸಮುದಾಯ ಆರೋಗ್ಯ ಕೇಂದ್ರ

ಈ ಮೇಲ್ಕಂಡ 8 ಕೇಂದ್ರದಲ್ಲಿ ನುರಿತ ಆಪ್ತಸಮಾಲೋಚಕರು ಮತ್ತು ಪ್ರಯೋಗಶಾಲಾ ತಂತ್ರಜ್ಞರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಕೇಂದ್ರದಲ್ಲಿ ಸ್ವಯಂಪ್ರೇರಿತವಾಗಿ/ವೈದ್ಯಾಧಿಕಾರಿಗಳು ಶಿಫಾರಸ್ಸು ಮಾಡಿದ ಅಥವಾ ಸ್ವಯಂ ಸೇವಾ ಸಂಸ್ಥೆಗಳು ಶಿಫಾರಸ್ಸು ಮಾಡಿದ ಹೆಚ್.ಐ.ವಿ ಸೋಂಕು ತಗಲುವ ಅಪಾಯದ ಅಂಚಿನಲ್ಲಿರುವ ಅಭ್ಯರ್ಥಿಗಳಿಗೆ ಹಾಗೂ ಗರ್ಭಿಣಿಯರಿಗೆ ಆಪ್ತ ಸಮಾಲೋಚನೆ ನೀಡಿ ಒಪ್ಪಿದವರಿಗೆ ಹೆಚ್.ಐ.ವಿ ಪರೀಕ್ಷೆ ನಡೆಸಲಾಗುತ್ತದೆ. ಹೆಚ್.ಐ.ವಿ ಸೋಂಕಿತರಿಗೆ ಉಚಿತವಾಗಿ ಎ.ಆರ್.ಟಿ.ಚಿಕಿತ್ಸೆಯನ್ನು ರಾಮನಗರ ಜಿಲ್ಲಾಸ್ಪತ್ರೆಯ ಎ.ಆರ್.ಟಿ. ಕೇಂದ್ರದಲ್ಲಿ ನೀಡಲಾಗುತ್ತಿದೆ.

ಹಾಗೆಯೇ ರಾಮನಗರ ಜಿಲ್ಲಾದ್ಯಂತ ಇರುವ ಎಲ್ಲಾ 24/7 ಪ್ರಾಥಮಿಕ ಆರೋಗ್ಯ ಕೇಂದ್ರಗಳು,ನಗರ ಆರೋಗ್ಯ ಕೇಂದ್ರಗಳು ಹಾಗೂ ಕೆಲವು ಖಾಸಗಿ ಆಸ್ಪತ್ರೆಗಳಲ್ಲೂ ಸಹ ಹೆಚ್.ಐ.ವಿ ಸ್ಕ್ರೀನಿಂಗ್ ಸೇವೆಗಳ ವಿಸ್ತರಣೆಯಾಗಿದ್ದು, ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಶುಶ್ರೂಷಕ/ ಶುಶ್ರೂಷಕಿಯರು ಆಪ್ತ ಸಮಾಲೋಚನೆಯ ಹೊಣೆ ಹೊತ್ತಿದ್ದು, ಹೆಚ್.ಐ.ವಿ ಪರೀಕ್ಷೆಯನ್ನು ಅಲ್ಲಿಯ ಸಾಮಾನ್ಯ ಪ್ರಯೋಗ ಶಾಲಾ ತಂತ್ರಜರು ಅಥವಾ ಆರೋಗ್ಯ ಸಿಬ್ಬಂದಿ ನಿರ್ವಹಿಸುತ್ತಿದ್ದಾರೆ.

ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕ ರಾಮನಗರ ಜಿಲ್ಲೆಯ 2018–19ನೇ ಸಾಲಿನ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ವರದಿ.

ಕ್ರಮ ಸಂಖ್ಯೆ	ಚಟುವಟಿಕೆಗಳು	ಕಾರ್ಯಕ್ರಮದ ವಾರ್ಷಿಕ ವರದಿ – 2018 ರಿಂದ 2019
1	ಸಂಗ್ರಹಣೆಯಾದ ರಕ್ತದ ಯೂನಿಟ್‌ನ ಸಂಖ್ಯೆ	73
2	ಸಮಗ್ರ ಆಪ್ತ ಸಮಾಲೋಚನೆ ಮತ್ತು ಪರೀಕ್ಷಾ ಕೇಂದ್ರಗಳ ಸಂಖ್ಯೆ	
	(ಸ್ಟ್ಯಾಂಡ್–ಅಲೋನ್)	8
4	ಒಟ್ಟು ಆಪ್ತಸಮಾಲೋಚನೆಯಾಗಿರುವ ಗರ್ಭಿಣಿಯರ ಸಂಖ್ಯೆ	16810
5	ಒಟ್ಟು ಹೆಚ್.ಐ.ವಿ ಪರೀಕ್ಷೆಗೆ ಒಳಪಟ್ಟ ಗರ್ಭಿಣಿಯರ ಸಂಖ್ಯೆ	16802
6	ಅದರಲ್ಲಿ ಕಂಡುಬಂದ ಸೋಂಕಿತರ ಸಂಖ್ಯೆ	13
7	ಜಿಲ್ಲೆಯಲ್ಲಿ ಹೆರಿಗೆಯಾದ ಸೋಂಕಿತ ಗರ್ಭಿಣಿಯರ ಸಂಖ್ಯೆ	5
8	ಜಿಲ್ಲೆಯ ಹೊರಗೆ ಹೆರಿಗೆಯಾದ ಸೋಂಕಿತ ಗರ್ಭಿಣಿಯರ ಸಂಖ್ಯೆ	8
9	ಎ.ಆರ್.ವಿ ಚಿಕಿತ್ಸೆಗೆ ಒಳಪಟ್ಟ ಹೆರಿಗೆಯಾದ ಗರ್ಭಿಣಿಯರ ಸಂಖ್ಯೆ	13
10	ಸರ್ಕಾರಿ ಎಸ್.ಟಿ.ಡಿ ಚಿಕಿತ್ಸಾ ಕೇಂದ್ರಗಳ ಸಂಖ್ಯೆ	01
11	ಸರ್ಕಾರೇತರ ಎಸ್.ಟಿ.ಡಿ ಚಿಕಿತ್ಸಾ ಕೇಂದ್ರಗಳ ಸಂಖ್ಯೆ	0
12	ಲೈಂಗಿಕ ಸಂಪರ್ಕದ ಸೋಂಕುಗಳಿಂದಾಗಿ ಚಿಕಿತ್ಸೆಗೆ ಒಳಪಟ್ಟಿರುವವರ ಸಂಖ್ಯೆ (ಸರ್ಕಾರಿ ಹಂತದಲ್ಲಿ)	40
13	ಲೈಂಗಿಕ ಸಂಪರ್ಕದ ಸೋಂಕುಗಳಿಂದಾಗಿ ಚಿಕಿತ್ಸೆಗೆ ಒಳಪಟ್ಟಿರುವವರ ಸಂಖ್ಯೆ (ಸರ್ಕಾರೇತರ ಸಂಸ್ಥೆಗಳಿಂದ)	0
14	ಸರ್ಕಾರಿ ಹಂತದ ಆರೈಕೆ ಮತ್ತು ಬೆಂಬಲ ಕೇಂದ್ರಗಳ ಸಂಖ್ಯೆ	1
15	ಸಕಾರೇತರ ಹಂತದ ಆರೈಕೆ ಮತ್ತು ಬೆಂಬಲ ಕೇಂದ್ರಗಳ ಸಂಖ್ಯೆ	0
16	ಎಷ್ಟು ಮಂದಿ ಹೊಸ ಸೋಂಕಿತ ಅಭ್ಯರ್ಥಿಗಳು ಆರೈಕೆ ಮತ್ತು ಬೆಂಬಲ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ (ಸಾಮಾನ್ಯ ಮತ್ತು ಗರ್ಭಿಣಿ ಅಭ್ಯರ್ಥಿಗಳು)	185
17	ಆ್ಯಂಟಿ–ರೆಟ್ರೋವೈರಲ್ ಚಿಕಿತ್ಸೆಯು ಉಚಿತವಾಗಿ ಲಭ್ಯವಿದೆಯೇ?	ಹೌದು
18	ಒಟ್ಟು ಜಿಲ್ಲೆಯಲ್ಲಿ ಎಷ್ಟು ಐಸಿಟಿಸಿ–ಎಫ್–ಐಸಿಟಿಸಿ ಕೇಂದ್ರಗಳು ಲಭ್ಯವಿದೆ.	73

2018–19ನೇ ಸಾಲಿನ ಸಾಂಕ್ರಾಮಿಕ ರೋಗಗಳ ಕಾರ್ಯಕ್ರಮದ ವರದಿ

ಜಿಲ್ಲೆಯಲ್ಲಿ ಯಾವುದೇ ರೇಬೀಸ್ ಪ್ರಕರಣ ಕಂಡುಬಂದಿರುವುದಿಲ್ಲ ಹಾಗೂ ಎಲ್ಲಾ ಪ್ರಾ.ಆ.ಕೇಂದ್ರದಲ್ಲಿ ಎಆರ್‌ಯು ಲಸಿಕೆ ದೊರೆಯುವಂತೆ ವ್ಯವಸ್ಥೆ ಮಾಡಲಾಗಿದೆ. ವಿಷಮ ಶೀತ ಜ್ವರ, ಅರಿಶಿನ ಕಾಮಾಲೆ ಪ್ರಕರಣಗಳು ಅತಿ ಕಡಿಮೆ ಪ್ರಮಾಣದಲ್ಲಿ ಕಂಡು ಬಂದಿದ್ದು ಯಾವುದೇ ಸಾವಿನ ಬಗ್ಗೆ ದಾಖಲಾಗಿರುವುದಿಲ್ಲ. ಒಟ್ಟಾರೆ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಶಿಕ್ಷಣ ಇಲಾಖೆ, ಸ್ತ್ರೀ ಸ್ವಸಹಾಯ ಸಂಘಗಳು ಆರೋಗ್ಯ ನೈರ್ಮಲ್ಯ ಸಮಿತಿಗಳ ಸಹಯೋಗದೊಂದಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಾಂಕ್ರಾಮಿಕ ರೋಗಗಳು ಹರಡದಂತೆ ನಿಗಾವಹಿಸಲಾಗಿದೆ.

2018–19 ನೇ ಸಾಲಿನ ಮಲೇರಿಯಾ ನಿಯಂತ್ರಣ ಕಾರ್ಯಕ್ರಮದ ವರದಿ

ಮಲೇರಿಯಾ ರೋಗವು ಒಂದು ಸಾಂಕ್ರಾಮಿಕ ರೋಗ, ಇದು "ಪ್ಲಾಸ್ಮೋಡಿಯಂ" ಎಂಬ ಪರೋಪಜೀವಿಯಿಂದ ಬರುತ್ತದೆ. ಆರೋಗ್ಯವಂತ ಮನುಷ್ಯನಿಗೆ ಮಲೇರಿಯ ರೋಗವು ಸೋಂಕು ತಗುಲಿದ ಅನಾಫಿಲೀಸ್ ಎಂಬ ಹೆಣ್ಣು ಸೊಳ್ಳೆಯ ಮೂಲಕ ಹರಡುತ್ತದೆ. ಈ ರೋಗವನ್ನು ತಡೆಗಟ್ಟಬೇಕಾದರೆ ಮೊದಲಿಗೆ ರೋಗ ಹರಡುವ ಸೊಳ್ಳೆಗಳ ಉತ್ಪತ್ತಿಯನ್ನು ನಿಯಂತ್ರಿಸುವುದು. ಹಾಗೂ ಸೊಳ್ಳೆಗಳನ್ನು ನಾಶಪಡಿಸುವುದು. ಸೋಂಕಿತ ವ್ಯಕ್ತಿಗೆ ಸೂಕ್ತ ಚಿಕಿತ್ಸೆ ನೀಡಿ ರೋಗಮುಕ್ತನನ್ನಾಗಿ ಮಾಡುವುದು ಆಧ್ಯ ಕರ್ತವ್ಯ.

ಈ ನಿಟ್ಟಿನಲ್ಲಿ ಆರೋಗ್ಯ ಇಲಾಖೆಯ ಕ್ಷೇತ್ರ ಕಾರ್ಯಕರ್ತರು ಮನೆ ಮನೆ ಭೇಟಿ ನೀಡಿ ಜ್ವರ ತಪಾಸಣೆ ನಡೆಸುತ್ತಿದ್ದಾರೆ. ಜ್ವರ ಇದ್ದವರಿಗೆ ರಕ್ತಲೇಪನ ತೆಗೆದು ಮಲೇರಿಯ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಅಲ್ಲದೆ ಉಚಿತ ಮಾತ್ರೆಗಳನ್ನು ಸಹ ನೀಡಲಾಗುತ್ತಿದೆ. ರಾಮನಗರ ಜಿಲ್ಲೆಯ 4 ತಾಲ್ಲೂಕುಗಳ ವ್ಯಾಪ್ತಿಗೆ ಒಳಪಡುವ ಎಲ್ಲಾ ಗ್ರಾಮಗಳಲ್ಲಿ ಜ್ವರ ತಪಾಸಣೆ ನಡೆಸಲಾಗುತ್ತಿದೆ. ಜನಸಂಖ್ಯೆಗೆ ಅನುಗುಣವಾಗಿ 1% ರಂತೆ ಸಕ್ರಿಯ ರಕ್ತಲೇಪನದ ಗುರಿ ನಿರ್ಧರಿಸಲಾಗಿದ್ದು, ಹೊಸ ಹೊರರೋಗಿಗಳಿಂದ ಶೇ 15 ರಂತೆ ಸ್ಥಿತ ರಕ್ತ ಲೇಪನ ಸಂಗ್ರಹಿಸುವ ಗುರಿ ನಿರ್ಧರಿಸಲಾಗಿದೆ.

ಜನವರಿ–2018 ರಿಂದ ಡಿಸೆಂಬರ್–2018 ರವರೆಗೆ 251928 ರಕ್ತಲೇಪನಗಳನ್ನು ಸಂಗ್ರಹಿಸಲಾಗಿದೆ. 2018 ರಲ್ಲಿ 7 ಮಲೇರಿಯ ಪ್ರಕರಣಗಳು ವರದಿಯಾಗಿದ್ದು ಅದರಲ್ಲಿ 6 ಪಿವಿ ಪ್ರಕರಣಗಳು 1 ಪಿಎಫ್ ಪ್ರಕರಣಗಳು ವರದಿಯಾಗಿವೆ.

2016 ನೇ ಸಾಲಿಗೆ ರಾಮನಗರ ಜಿಲ್ಲೆಯಲ್ಲಿ 15 ಡೆಂಗಿ ಹಾಗೂ 21 ಚಿಕೂನ್‌ಗುನ್ಯಾ ಪ್ರಕರಣಗಳು ವರದಿಯಾಗಿದ್ದು ರೋಗಗಳ ನಿಯಂತ್ರಣಕ್ಕೆ ಜಿಲ್ಲೆಯಲ್ಲಿ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳು ಈ ಕೆಳಕಂಡಂತಿರುತ್ತವೆ. ಜುಲೈ–2018 ರ ಡೆಂಗಿ ವಿರೋಧ ಮಾಸಾಚರಣೆಯನ್ನು ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಂಡು ಶಾಲಾ ಕಾಲೇಜು ವಿದ್ಯಾರ್ಥಿಗಳಿಂದ ಸಾರ್ವಜನಿಕರಿಗೆ ಜಾಗೃತಿ ಜಾಥಾ ಮೂಲಕ ಅರಿವು ಮೂಡಿಸಲಾಗಿದೆ. ಈಡೀಸ್ ಲಾರ್ವಾ ಸಮೀಕ್ಷೆಯನ್ನು ಮಾಡಲಾಗಿದೆ. ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ಕ್ಷೇತ್ರ ಸಿಬ್ಬಂದಿಗಳು ನಿಗಧಿತ ಪ್ರವಾಸ ವೇಳೆಯಲ್ಲಿ ಈಡೀಸ್ ಲಾರ್ವಾ ಸಮೀಕ್ಷೆ/ಜ್ವರ ಸಮೀಕ್ಷೆ ಮತ್ತು ಆರೋಗ್ಯ ಶಿಕ್ಷಣ ನೀಡುವುದರ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಆಯ್ಕೆ ಮಾಡಲಾದ 20 ಉಪಕೇಂದ್ರಗಳ ಮಟ್ಟದಲ್ಲಿ ಸ್ಥಳಿಯ ಜನಪ್ರತಿನಿಧಿಗಳು, ಸ್ತ್ರೀಶಕ್ತಿ ಸದಸ್ಯರು, ಸ್ವಸಹಾಯ ಸಂಘದ ಸದಸ್ಯರು, ಯುವಕ/ಯುವತಿ ಮಂಡಳಿ ಸದಸ್ಯರು, ಗ್ರಾಮದ ಮುಖಂಡರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ಸಹಕಾರದೊಂದಿಗೆ ಅಡ್ವೋಕೆಸಿ ಹಾಗೂ ಗುಂಪು ಸಭೆಗಳನ್ನು ಏರ್ಪಡಿಸಿ ಡೆಂಗಿ ಜ್ವರದ ಬಗ್ಗೆ ಅರಿವು ಮೂಡಿಸಲಾಗಿದೆ. ಡೆಂಗಿ/ಚಿಕುಂಗುನ್ಯಾ ರೋಗಗಳ ಕರಪತ್ರಗಳನ್ನು ಮುದ್ರಿಸಿ ಸಾರ್ವಜನಿಕರಿಗೆ ವಿತರಿಸುವ ಮೂಲಕ ಅರಿವು ಮೂಡಿಸಲಾಗಿದೆ. ವಿವಿಧ ಇಲಾಖೆಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಭೆ ಏರ್ಪಡಿಸಿ ಡೆಂಗಿ/ಚಿಕುಂಗುನ್ಯಾ ರೋಗಗಳು ಮತ್ತು ನಿಯಂತ್ರಣ ಕ್ರಮಗಳ ಬ್ಗಗೆ ಚರ್ಚಿಸಿ ಸಂಪೂರ್ಣ ಸಹಕಾರ ನೀಡಲು ಕೋರಲಾಗಿತ್ತು. ವಾರ್ತಾ ಮತ್ತು ಪ್ರಚಾರ ಇಲಾಖೆಯಿಂದ ಸ್ಥಳೀಯ ಖಾಸಗಿ ಚಾನಲ್‌ಗಳು/ಪತ್ರಿಕಾ ವರದಿಗಾರರು/ಮಾಧ್ಯಮ ಪ್ರತಿನಿಧಿಗಳ ಸಭೆ ಕರೆದು ಈ ರೋಗಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡಿ ಚರ್ಚಿಸಿ ಮಾಧ್ಯಮಗಳಲ್ಲಿ ಜಾಗೃತಿ ಮೂಡಿಸುವ ಮೂಲಕ ಸಹಕಾರ ನೀಡಲು ಕೋರಲಾಗಿತ್ತು. ಜಿಲ್ಲೆಯ ವ್ಯಾಪ್ತಿಯಲ್ಲಿ ಎಲ್ಲಾ ಗ್ರಾಮ ಪಂಚಾಯತಿ/ನಗರ ಸಭೆ/ಪುರಸಭೆಗಳ ವ್ಯಾಪ್ತಿಗಳಲ್ಲಿ ಡೆಂಗಿ/ಚಿಕುಂಗುನ್ಯಾ ಪ್ರಕರಣಗಳು ಉಲ್ಬಣಗೊಳ್ಳದಂತೆ ಮುಂಜಾಗೃತಾ ಕ್ರಮವಾಗಿ ಘನ ತ್ಯಾಜ್ಯಾ ವಿಲೇವಾರಿ/ಚರಂಡಿಗಳ ಸ್ವಚ್ಚತೆ/ಪರಿಸರ ನೈರ್ಮಲ್ಯದ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ಪತ್ರ ವ್ಯವಹರಿಸಿ ಸಹಕಾರ ನೀಡಲು ಕೋರಲಾಗಿತ್ತು.

Annual Target of Blood Smear collection for the year 2018-19 for Ramanagara Dist.

Population 2018-19	Annul Target of B/S Collection		
	Active	Passive	Total
1142338	108447	124308	232755

2018–19 ನೇ ಸಾಲಿನ ಅಂಧತ್ವ ನಿವಾರಣಾ ಕಾರ್ಯಕ್ರಮದ ವರದಿ

ಅಂಧತ್ವ ನಿವಾರಣಾ ಕಾರ್ಯಕ್ರಮದಲ್ಲಿ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಗೆ ಐ.ಒ.ಎಲ್. ಅಳವಡಿಕೆಯ ಸುಲಭ ಮತ್ತು ಸುರಕ್ಷಿತ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ರಾಮನಗರ ಜಲ್ಲೆಯಲ್ಲಿ 5 ರಿಂದ 10 ನೇ ತರಗತಿಯಲ್ಲಿ ಓದುತ್ತಿರುವ ಮಕ್ಕಳಿಗೆ ಕಣ್ಣಿನ ತಪಾಸಣೆಯನ್ನು ಮಾಡಲಾಗಿದೆ. ಈ ಸಾಲಿನಲ್ಲಿ ನೂನ್ಯತೆ ಇರುವ 500 ಮಕ್ಕಳಿಗೆ ಮತ್ತು 1000 ವಯೋವೃದ್ದರಿಗೆ ಉಚಿತವಾಗಿ ಕನ್ನಡಕಗಳನ್ನು ವಿತರಿಸಲಾಗಿರುತ್ತದೆ.

ಗ್ರಾಮೀಣ ಮಟ್ಟದಲ್ಲಿ ಕಣ್ಣಿನ ಪೊರೆ ಇರುವ ಫಲಾನುಭವಿಗಳಿಗೆ ಉಚಿತವಾಗಿ ತಪಾಸಣೆಯನ್ನು ಮಾಡಿಸಿ ಬೆಂಗಳೂರಿನಲ್ಲಿರುವ ಉನ್ನತ ಕಣ್ಣಿನ ಆಸ್ಪತ್ರೆಗಳಲ್ಲಿ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಯನ್ನು ನಿಗದಿ ಪಡಿಸಲಾಗಿರುವ ದಿನಾಂಕಗಳಂದು ಸರ್ಕಾರೇತರ ಸಂಸ್ಥೆಯವರ ಸಹಯೋಗದೊಂದಿಗೆ 3557 ಜನಗಳಿಗೆ ಶಸ್ತ್ರ ಚಿಕಿತ್ಸೆಯನ್ನು ಮಾಡಲಾಗಿದೆ.

ಇದೇ ಸಾಲಿನಲ್ಲಿ ಜಿಲ್ಲೆಗೆ 7166 ಗುರಿ ನಿಗದಿಯಾಗಿದ್ದು, 6356 ಫಲಾನುಭವಿಗಳಿಗೆ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಯನ್ನು ಮಾಡಲಾಗಿರುತ್ತದೆ. ಹಾಗೂ ನಮಗೆ ನೀಡಲಾಗಿರುವ ಕಣ್ಣುಗಳ ಶೇಖರಣ ಕಾರ್ಯಕ್ರಮದಲ್ಲಿ ಗುರಿ 50 ಇದ್ದು, ನಾವು 26 ಕಣ್ಣುಗಳನ್ನು ಶೇಖರಣೆ ಮಾಡಲಾಗಿದೆ

2018–19 ನೇ ಸಾಲಿನ ಮಾನಸಿಕ ಆರೋಗ್ಯ ಕಾರ್ಯಕ್ರಮದ ವರದಿ

ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿಯಲ್ಲಿ 2018–19 ನೇ ಸಾಲಿನಲ್ಲಿ ಜಿಲ್ಲಾ ಮಟ್ಟದಲ್ಲಿ ಮಾನಸಿಕ ಆರೋಗ್ಯ ಕಾರ್ಯಕ್ರಮದ ಶಿಬಿರಗಳನ್ನು ನಿಗದಿತ ದಿನಗಳಂದು 9 ಕಡೆ ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ (ಪ್ರತಿ ಮಂಗಳವಾರ ಮನೋಚೈತನ್ಯ ಕ್ಲಿನಿಕ್) ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಮ್ಮಿಕೊಂಡು ಇಲ್ಲಿಯ ವರೆಗೂ ಒಟ್ಟು 118 ಶಿಬಿರಗಳನ್ನು ನಡೆಸಿ ಅದರಲ್ಲಿ 5606 ಮಾನಸಿಕ ರೋಗಿಗಳಿಗೆ ತಪಾಸಣೆ ಮಾಡಿ ಚಿಕಿತ್ಸೆಯನ್ನು ನೀಡುವುದಲ್ಲದೇ ಆಪ್ತಸಮಾಲೋಚನೆಯನ್ನು ಸಹ ನೀಡಲಾಗಿದೆ.

ಅದೇ ರೀತಿ ರಾಮನಗರ ಜಿಲ್ಲೆಯಲ್ಲಿರುವ ಶಾಲಾ ಕಾಲೇಜುಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಜೀವನ ಕೌಶಲ್ಯಗಳ ತರಬೇತಿ ಮತ್ತು ಮಾನಸಿಕ ಆರೋಗ್ಯದ ಬಗ್ಗೆ ಅರಿವು ಹಾಗೂ ತಿಳುವಳಿಕೆಯನ್ನು ನೀಡಲಾಗಿರುತ್ತದೆ. ಅಲ್ಲದೆ ಕೊಳಚೆ ಪ್ರದೇಶಗಳಿಗೆ ಹಾಗೂ ಕಾರ್ಮಿಕರು ಕರ್ತವ್ಯ ನಿರ್ವಹಿಸುವ ಕಾರ್ಖಾನೆಗಳಿಗೆ ಭೇಟಿ ನೀಡಿ ಅವರುಗಳಿಗೆ ಮಾನಸಿಕ ಆರೋಗ್ಯದ ಬಗ್ಗೆ ತಿಳುವಳಿಕೆಯನ್ನು ಮತ್ತು ಸಮಾಲೋಚನೆಯನ್ನು ಮಾಡಲಾಗಿರುತ್ತದೆ.

2018–19 ನೇ ಸಾಲಿನ ಕುಷ್ಟ ರೋಗ ನಿವಾರಣ ಕಾರ್ಯಕ್ರಮದ ವರದಿ

ಕುಷ್ಟರೋಗ ನಿರ್ಮೂಲನ ಕಾರ್ಯಕ್ರಮದಲ್ಲಿ ಮಾರ್ಪಾಡಿತ ಕುಷ್ಟರೋಗ ನಿವಾರಣಾ ಆಂದೋಲನದಲ್ಲಿ ರೋಗಿಗಳು ಸ್ವಯಂ ಪ್ರೇರಿತರಾಗಿ ವರದಿ ಕೇಂದ್ರಗಳಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ, ಇದೇ ಸಾಲಿನಲ್ಲಿ ಹೊಸದಾಗಿ 35 ರೋಗಿಗಳನ್ನು ಪತ್ತೆ ಹಚ್ಚಲಾಗಿದ್ದು, ಈ ಸಾಲಿನಲ್ಲಿ 32 ರೋಗಿಗಳನ್ನು ಗುಣ ಪಡಿಸಲಾಗಿದೆ. ಹಾಗೂ ನಮ್ಮಲ್ಲಿ 29 ರೋಗಿಗಳು ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ಹಾಗೂ ಕುಷ್ಟರೋಗಕ್ಕೆ ಸಂಬಂಧಿಸಿದ ಹಾಗೆ ಹೆಚ್ಚಿನ ಪ್ರಮಾಣದ ಚಿಕಿತ್ಸೆಯು ಬೇಕಾದ್ದಲ್ಲಿ ಬೆಂಗಳೂರಿನ ಆಸ್ಪತ್ರೆಗೆ ಕಳುಹಿಸುವ ವ್ಯವಸ್ಥೆ ಮಾಡಲಾಗುತ್ತದೆ.

ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆ

ಕರ್ನಾಟಕ ರಾಜ್ಯದ ಎಲ್ಲಾ ನಾಗರಿಕರಿಗೂ ಆರೋಗ್ಯ ರಕ್ಷಣೆ ಕಲ್ಪಿಸಲು ರಾಜ್ಯ ಸರ್ಕಾರವು ಮಾರ್ಚ್ 2018 ರಂದು ಆರೋಗ್ಯ ಕರ್ನಾಟಕ ಯೋಜನೆಯನ್ನು ಜಾರಿಗೊಳಿಸಿತು. ಇದೊಂದು ಸಾರ್ವತ್ರಿಕ ಆರೋಗ್ಯ ರಕ್ಷಣೆಯಾಗಿದ್ದು, ಪ್ರಾಥಮಿಕ, ಸಾಮಾನ್ಯ ದ್ವಿತೀಯ, ದ್ವಿತೀಯ ಕ್ಲಿಷ್ಟಕರ ಹಾಗೂ ತೃತೀಯ ಹಂತ ಮತ್ತು ತುರ್ತು ಚಿಕಿತ್ಸಾ ಹಂತಗಳಲ್ಲಿ ಚಿಕಿತ್ಸೆಯನ್ನು ರಾಜ್ಯದ ಎಲ್ಲಾ ವರ್ಗದ ಜನತೆಗೆ ಭರವಸೆ ಮಾದರಿಯಲ್ಲಿ (ಥಿಣಡಿಚಿಟಿಛಿಜ ಟಠಜಜ) ಒದಗಿಸುವ ಯೋಜನೆಯಾಗಿತ್ತು. ನಂತರ ಕೇಂದ್ರ ಸರ್ಕಾರವು ಅಕ್ಟೋಬರ್ 2018 ರಲ್ಲಿ ಆಯುಷ್ಮಾನ್ ಭಾರತ ಎಂಬ ಯೋಜನೆಯನ್ನು ಜಾರಿಗೊಳಿಸಿತು. ಈ ಎರಡೂ ಯೋಜನೆಗಳ ಉದ್ದೇಶ, ವ್ಯಾಪ್ತಿಗಳಲ್ಲಿ ಹೋಲಿಕೆ ಇರುವುದರಿಂದ ಎರಡೂ ಯೋಜನೆಗಳನ್ನು ಸಂಯೋಜಿಸಿ **"ಆಯುಷ್ಮಾನ್ ಭಾರತ್– ಆರೋಗ್ಯ ಕರ್ನಾಟಕ"** ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಬಿ.ಪಿ.ಎಲ್ ಪಡಿತರ ಚೀಟಿ ಹೊಂದಿರುವ ಫಲಾನುಭವಿಗಳಿಗೆ ಒಂದು ಕುಟುಂಬಕ್ಕೆ ವರ್ಷಕ್ಕೆ ರೂ.5.00 ಲಕ್ಷಗಳವರೆಗೆ ಉಚಿತ ಚಿಕಿತ್ಸೆ ಲಭ್ಯ, ಏ.ಪಿ.ಎಲ್ ಪಡಿತರ ಚೀಟಿ ಹೊಂದಿರುವವರಿಗೆ ಸಹ–ಪಾವತಿ ಆಧಾರದ ಮೇಲೆ ಸರ್ಕಾರಿ ಪ್ಯಾಕೇಜ್ ದರದ 30% ರಷ್ಟು ಚಿಕಿತ್ಸಾ ವೆಚ್ಚ ಲಭ್ಯವಿದ್ದು, ವಾರ್ಷಿಕ ಮಿತಿ ಪ್ರತಿ ಕುಟುಂಬಕ್ಕೆ ರೂ.1.50 ಲಕ್ಷ ಇರುತ್ತದೆ. 2018–19 ನೇ ಸಾಲಿನಲ್ಲಿ ರಾಮನಗರ ಜಿಲ್ಲೆಯ ಒಟ್ಟು 2.017 ಫಲಾನುಭವಿಗಳು ಈ ಯೋಜನೆಯಡಿ ಚಿಕಿತ್ಸೆ ಪಡೆದಿದ್ದಾರೆ.

ರಾಮನಗರ ಜಿಲ್ಲೆಯ ವಿವಿಧ ವೃಂದಗಳ ವೈದ್ಯಾಧಿಕಾರಿಗಳ ವಿವರ

ಹುದ್ದೆಗಳ ವಿವರ	ಮಂಜೂರಾತಿ	ಕಾರ್ಯನಿರ್ವಹಣೆ	ಖಾಲಿ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ	1	1	0
ಕಾರ್ಯಕ್ರಮಾಧಿಕಾರಿಗಳು	4	4	0
ತಜ್ಞ ವೈದ್ಯರು	42	33	09
ದಂತ ವೈದ್ಯರು	8	8	0
ತಾಲ್ಲೂಕು ಆರೋಗ್ಯಾಧಿಕಾರಿ	4	3	1
ರಜೆ ಮೀಸಲು ವೈದ್ಯರು	–	–	–
ಸಾಮಾನ್ಯ ಕರ್ತವ್ಯ ವೈದ್ಯರು	61	52	9

ರಾಮನಗರ ಜಿಲ್ಲೆಯಲ್ಲಿ 24/7 ಪ್ರಾ.ಆ.ಕೇಂದ್ರ ಗುರುತಿಸಿದ್ದು, ಸದರಿ 24/7 ಘಂಟೆಗಳಲ್ಲಿ ಕರ್ತವ್ಯ ನಿರ್ವಹಿಸುವ 11 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಗುರುತಿಸಲಾಗಿದೆ.

2018–19 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯುಮೆಂಟ್‌ನಲ್ಲಿ ನಿಗದಿ ಪಡಿಸಿರುವ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಡಿಯಲ್ಲಿ ನಿಗಧಿ ಪಡಿಸಿರುವ ಒಟ್ಟಾರೆ ಅನುದಾನದ ವಿವರ (ಲಕ್ಷ ರೂ.ಗಳಲ್ಲಿ) ಈ ಕೆಳಕಂಡಂತಿದೆ.

ಮುಖ್ಯ ಲೆಕ್ಕ ಶೀರ್ಷಿಕೆ	ನಿಗದಿಯಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ
2210– ರಾಜ್ಯ ಯೋಜನೆ	9.62	9.62	5.72
2211–ರಾಜ್ಯಯೋಜನೆ	331.46	331.46	331.31
2210–ತಾಲ್ಲೂಕು ಪಂಚಾಯತ್ ಅನುದಾನ	67.82	77.82	60.31
2211–ಕೇಂದ್ರ ಪುರಷ್ಕೃತ ಯೋಜನೆ	881.00	1345.49	798.32
2210–ಜಿ.ಪಂ.ಅನುದಾನ	3139.61	3182.25	2838.33

2018–19 ನೇ ಸಾಲಿನಲ್ಲಿ ಖರೀದಿಸಲಾದ ಔಷಧಿ ಮತ್ತು ರಾಸಾಯಿನಿಕಗಳ ಖರೀದಿ ವಿವರ

ಕ್ರ ಸ	ಲೆಕ್ಕ ಶೀರ್ಷಿಕೆ	ನಿಗಧಿಯಾದ ಅನುದಾನ (ಲಕ್ಷ ರೂ. ಗಳಲ್ಲಿ)	ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)	ವೆಚ್ಚ (ರೂ.ಲಕ್ಷಗಳಲ್ಲಿ)
1	2210–00–106–0–53 ಯೋಜನೆ ಕುಟುಂಬ ಕಲ್ಯಾಣ ಕಾರ್ಯಕ್ರಮಕ್ಕೆ ಔಷಧಿ ಪೂರೈಕೆಮತ್ತು ಪಲ್ಸ್ ಪೋಲಿಯೋ ಕಾರ್ಯಕ್ರಮ	7.00	6.99	4.97
2	2210–00–103–0–43 ಯೋಜನೆ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ವೈದ್ಯಕೀಯ ಚಿಕಿತ್ಸೆ, ಉಪಕರಣಗಳು/ಸಲಕರಣೆಗಳ ಖರೀದಿ	7.00	7.00	6.84
3	2210–00–103–0–45 ಯೋಜನೆ ತಾಲ್ಲೂಕು ಆಸ್ಪತ್ರೆಗಳಿಗೆ ಕ್ಷ–ಕಿರಣ ಸೌಲಭ್ಯ	4.00	4.00	3.96
4	2210–00–102–0–40 ಸಲಕರಣೆಗಳ ದುರಸ್ಥಿ	9.00	9.00	8.99

ರಾಮನಗರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ಮಾಹಿತಿ, ಶಿಕ್ಷಣ, ಸಂವಹನ ವಿಭಾಗದ ವತಿಯಿಂದ ಈ ಮುಂದೆ ಹೇಳಲಾದ ಸಮೂಹ ಶಿಕ್ಷಣ ಮಾಧ್ಯಮ ಕಾರ್ಯ ಚಟುಟಿಕೆಗಳನ್ನು ಪ್ರಸಕ್ತ ಸಾಲಿಗೆ ಕೈಗೊಳ್ಳಲಾಗಿದೆ

1. **ರಾಷ್ಟ್ರೀಯ ಆರೋಗ್ಯ ದಿನಾಚರಣೆಗಳು:–** ಪ್ರಸಕ್ತ ವರ್ಷದಲ್ಲಿ ಜರುಗುವ ರಾಷ್ಟ್ರೀಯ ಆರೋಗ್ಯ ದಿನಾಚರಣೆಗಳನ್ನು ಜಿಲ್ಲಾ ಮಟ್ಟದಲ್ಲಿ ತಾಲ್ಲೂಕು ಪ್ರಾಥಮಿಕ ಆರೋಗ್ಯ ಕೇಂದ್ರ, ಉಪ ಕೇಂದ್ರಗಳ ಮಟ್ಟದಲ್ಲಿ ಆಚರಿಸಿ ದಿನಾಚರಣೆ ಉದ್ದೇಶ ಮತ್ತು ಸಮುದಾಯದ ಸಹಭಾಗಿತ್ವದ ಬಗ್ಗೆ ಅರಿವು ಮೂಡಿಸಲಾಗಿದೆ.

2. **ಸರ್ಕಾರೇತರ ಸಂಸ್ಥೆಗಳ ನೆರವಿನೊಂದಿಗೆ ಆರೋಗ್ಯ ಶಿಬಿರ:–** ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರೇತರ ಸಂಘ ಸಂಸ್ಥೆಗಳ ನೆರವಿನೊಂದಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ, ನೇತ್ರ ತಪಾಸಣೆ ಶಿಬಿರ, ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಮುಂತಾದ ಜನೋಪಯೋಗಿ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ.

3. **ಆರೋಗ್ಯ ದಿನಾಚರಣೆ:–** ಪ್ರತಿ ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿ, ಬಾಣಂತಿಯರು, ತಾಯಂದಿರು, ಸ್ತ್ರೀಶಕ್ತಿ ಗುಂಪು ಮತ್ತು ಜನಪ್ರತಿನಿಧಿಗಳನ್ನೊಳಗೊಂಡಂತೆ ಸಭೆ ಏರ್ಪಡಿಸಿ ಆರೋಗ್ಯದ ಬಗ್ಗೆ ಮಾಹಿತಿಗಳನ್ನು ನೀಡಿ ಸಮುದಾಯದಲ್ಲಿ ಅರಿವು ಮೂಡಿಸಲು ಆರೋಗ್ಯ ದಿನಾಚರಣೆ ಆಚರಿಸಲಾಗಿದೆ.

4. **ಸಮುದಾಯ ಆರೋಗ್ಯ ದಿನಾಚರಣೆ:–** ನಿರ್ದೇಶನಾಲಯದ ಆದೇಶದ ಮೇರೆಗೆ ಪ್ರತಿ ಮೂರು ತಿಂಗಳಿಗೊಮ್ಮೆ ಆರೋಗ್ಯ ಕೇಂದ್ರಗಳಲ್ಲಿ ಜನಪ್ರತಿನಿಧಿಗಳು, ಸ್ತ್ರೀಶಕ್ತಿ ಗುಂಪುಗಳು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸುತ್ತಮುತ್ತಲ ಗ್ರಾಮಸ್ಥರ ಸಭೆ ಏರ್ಪಡಿಸಿ ಆರೋಗ್ಯ ಕಾರ್ಯ ಕ್ರಮಗಳ ಬಗ್ಗೆ ಮಾಹಿತಿ ನೀಡಿ ಆರೋಗ್ಯ ಕೇಂದ್ರದ ಅಭಿವೃದ್ಧಿಗೆ ಸಮುದಾಯದ ಸಹ ಭಾಗಿತ್ವ ಕೋರಲಾಗಿದೆ.

5. **ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮ:–** ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಅಡಿಯಲ್ಲಿ ಕೈಗೊಂಡಿರುವ 1 ರಿಂದ 10ನೇ ತರಗತಿವರೆಗಿನ ಎಲ್ಲಾ ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆ ಶಿಬಿರ ಏರ್ಪಡಿಸಿದ್ದು ಹೆಚ್ಚಿನ ತಪಾಸಣೆ ಹಾಗೂ ಸೇವೆಯ ಅಗತ್ಯವಿದ್ದಲ್ಲಿ ಅಂತಹ ಮಕ್ಕಳನ್ನು ಉನ್ನತ ಮಟ್ಟದ ಆಸ್ಪತ್ರೆಗೆ ನಿರ್ದೇಶಿಸಲಾಗುವುದು ಹಾಗೂ ಶಾಲಾ ಮಕ್ಕಳಿಗೆ ಆರೋಗ್ಯ ರಕ್ಷಣೆ ಕುರಿತು ಆರೋಗ್ಯ ಶಿಕ್ಷಣ ನೀಡಲಾಗಿದೆ.

6. **ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಶೈಕ್ಷಣಿಕ ಕಾರ್ಯಕ್ರಮ (ಐ.ಇ.ಸಿ):–** ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ ಕುರಿತಂತೆ ಹಾಗೂ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿ ಜಾರಿಗೆ ಬಂದಿರುವ ಜನನಿ ಸುರಕ್ಷಾ ಯೋಜನೆ, ಜನನಿ ಶಿಶು ಸುರಕ್ಷಾ, ಮುಂತಾದ ಕಾರ್ಯಕ್ರಮಗಳ ಬಗ್ಗೆ ಸಮುದಾಯದಲ್ಲಿ ಮಾಹಿತಿ ನೀಡಿ ಜಾಗೃತಿ ಮೂಡಿಸುವ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವುದು ಮತ್ತು ಮೇಲ್ವಿಚಾರಣೆ ನಡೆಸಿ ಮಾರ್ಗದರ್ಶನ ನೀಡಲಾಗಿದೆ

   ಎ. **ಆರೋಗ್ಯ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಶೈಕ್ಷಣಿಕ ಸಾಮಗ್ರಿಗಳ ವಿತರಣೆ:–** ನಿರ್ದೇಶನಾಲಯದಿಂದ ಪೂರೈಕೆಯಾದ ಭಿತ್ತಿಪತ್ರ, ಕರಪತ್ರ ಕಿರುಹೊತ್ತಿಗೆ ಮುಂತಾದ ಶೈಕ್ಷಣಿಕ ಸಾಮಗ್ರಿಗಳನ್ನು ಸ್ವೀಕರಿಸಿ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸಲು ಎಲ್ಲಾ ಆರೋಗ್ಯ ಸಂಸ್ಥೆಗಳಿಗೆ ವಿತರಿಸಿ ಮೇಲ್ವಿಚಾರಣೆ ನಡೆಸಲಾಗಿದೆ.

   ಬಿ. ಕಾರ್ಯಕ್ರಮಗಳ ಯಶಸ್ವಿಗಾಗಿ ಜಿಲ್ಲೆಯಲ್ಲಿನ ಸರ್ಕಾರೇತರ ಸಂಘ ಸಂಸ್ಥೆಗಳು ಮತ್ತು ಸಮುದಾಯದ ನೆರವನ್ನು ಪಡೆದುಕೊಳ್ಳಲಾಗಿದೆ.

   ಸಿ. ಎಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳೊಡನೆ ಸಹಭಾಗಿತ್ವ ಮತ್ತು ಸಹಕಾರದೊಡನೆ ಆರೋಗ್ಯ ಕಾರ್ಯಕ್ರಮಗಳನ್ನು ನಿರ್ವಹಿಸಲಾಗುವುದು.

   ಡಿ. ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಜೊತೆಗೆ ಹೆಣ್ಣು ಶಿಶು ಸಂರಕ್ಷಣೆ, ಗರ್ಭೋತ್ತರ ಮತ್ತು ಪ್ರಸವಪೂರ್ವ ಲಿಂಗ ಪತ್ತೆ ನಿಷೇಧ ಪುರುಷರ ಸಂತಾನ ಹರಣ ಶಸ್ತ್ರಚಿಕಿತ್ಸೆಯಲ್ಲಿ ಪ್ರಗತಿ ಸಾಧಿಸುವಲ್ಲಿ ಜನನಾಂಗ ಮಾರ್ಗದ ಸೋಂಕು, ಲೈಂಗಿಕ ರೋಗಗಳು ಹೆಚ್.ಐ.ವಿ/ಏಡ್ಸ್ ನಿಯಂತ್ರಣ ಕುರಿತಂತೆ ಸರ್ಕಾರೇತರ ಸಂಘ ಸಂಸ್ಥೆಗಳ ನೆರವಿನೊಂದಿಗೆ ಸಮುದಾಯದಲ್ಲಿ ಮಾಹಿತಿ ವಿನಿಮಯದ ಮೂಲಕ ಜಾಗೃತಿ ಮೂಡಿಸುವುದರ ಮೂಲಕ ಎಲ್ಲಾ ಆರೋಗ್ಯ ಕಾರ್ಯಕ್ರಮಗಳಲ್ಲಿ ಕೈಗೊಂಡಿರುವ ಗುರಿಯನ್ನು ತಲುಪಲಾಗುವುದು.

   ಇ ಕಬ್ಬಿಣಾಂಶದ ಮಾತ್ರೆ ನೀಡುವ ಕಾರ್ಯಕ್ರಮ (WIFS):– 2013–14ನೇ ಸಾಲಿನಿಂದ WIFS ಕಾರ್ಯಕ್ರಮ ಜಾರಿಯಲ್ಲಿದ್ದು. ಸದರಿ ಕಾರ್ಯಕ್ರಮದ ಉದ್ದೇಶ 10–19 ವಯಸ್ಸಿನವರಲ್ಲಿ ಕಂಡು ಬರುವ ರಕ್ತಹೀನತೆ ಪ್ರಮಾಣ ನಿಯಂತ್ರಿಸುವುದು ಹಾಗೂ ಕಡಿಮೆ ಮಾಡುವುದು. ಈ ಕಾರ್ಯಕ್ರಮದ ಗುರಿ 6 ರಿಂದ 10ನೇ ತರಗತಿಯಲ್ಲಿ ಓದುತ್ತಿರುವ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಗಂಡು ಹಾಗೂ ಹೆಣ್ಣು ಮಕ್ಕಳು ಹಾಗೂ ಶಾಲೆಯಿಂದ ಹೊರಗುಳಿದ ಹದಿಹರೆಯದ ಹೆಣ್ಣು ಮಕ್ಕಳಿಗೆ IFA ಮಾತ್ರೆ ಹಾಗೂ 6 ತಿಂಗಳಿಗೊಮ್ಮೆ ಒಂದು Albendazole 400mg ಮಾತ್ರೆ ಕೊಡುವುದು ಮತ್ತು ಸರಿಯಾಗಿ ಸಮತೋಲನ/ಪೌಷ್ಟಿಕ ಆಹಾರ ಸೇವನೆ ಹಾಗೂ ಮಾತ್ರೆಗಳ ಸೇವನೆಗಾಗಿ ಆಪ್ತಸಲಹೆ ಮತ್ತು ಸಮಾಲೋಚನೆ ನಡೆಸಲಾಗುತ್ತಿದೆ.

ಜಿಲ್ಲಾ ಆಯುಷ್ ಇಲಾಖೆ



ಆಯುಷ್ ಇಲಾಖೆಯು ಆಯುರ್ವೇದ, ಯೋಗ ಮತ್ತು ಪ್ರಕೃತಿ ಚಿಕಿತ್ಸೆ, ಯುನಾನಿ, ಹೋಮಿಯೋಪತಿ, ಪದ್ದತಿಗಳನ್ನು ಒಳಗೊಂಡಿರುತ್ತದೆ. ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರಲ್ಲಿ ಕೆಲವು ಇಂಗ್ಲೀಷ್ ಔಷಧಿಗಳಿಂದ ಉಂಟಾಗುವ ಯಾವುದೇ ಅಡ್ಡ ಪರಿಣಾಮಗಳು ಈ ಪದ್ದತಿಯು ಬೀರುವುದಿಲ್ಲ ಎಂದು ಮನವರಿಕೆಯಾಗಿರುತ್ತದೆ. ಈ ಚಿಕಿತ್ಸೆಯು ಸರಳ ಹಾಗೂ ಕಡಿಮೆ ವೆಚ್ಚದಲ್ಲಿ ಸುಲಭವಾಗಿ ದೊರೆಯುವುದರಿಂದ ಸಾರ್ವಜನಿಕರು ಇತ್ತೀಚಿನ ದಿನಗಳಲ್ಲಿ ಈ ಪದ್ದತಿಗೆ ಹೆಚ್ಚಾಗಿ ಮೊರೆಹೋಗುತ್ತಿದ್ದಾರೆ. ಆಯುಷ್ ಪದ್ದತಿಗಳಲ್ಲಿ ಆರೋಗ್ಯವಂತ ಮಾನವನು ಆರೋಗ್ಯ ಕಾಪಾಡಿಕೊಳ್ಳಲು ಮತ್ತು ರೋಗಗಳು ಬಾರದಂತೆ ತಡೆಗಟ್ಟಲು ಹಾಗೂ ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ಈ ಪದ್ದತಿಗಳಲ್ಲಿ ಉತ್ತಮ ಕ್ರಮಗಳಿವೆ. ಇದಲ್ಲದೆ ಅತೀ ಕಡಿಮೆ ಖರ್ಚಿನಲ್ಲಿ ಆಥವಾ ಖರ್ಚಿಲ್ಲದೆ ಆಯುಷ್ ಪದ್ದತಿಗಳನ್ನು ಅಳವಡಿಸಿಕೊಳ್ಳಬಹುದಾಗಿದೆ. ಈ ಪದ್ದತಿಗಳಿಂದ ಯಾವುದೇ ಅಡ್ಡ ಪರಿಣಾಮಗಳಿರುವುದಿಲ್ಲ. ಆದುದರಿಂದ ಉತ್ತಮ ಆರೋಗ್ಯ ಸೌಲಭ್ಯವನ್ನು ಜನತೆಗೆ ನೀಡಲು ಸಹಾಯಕವಾಗುತ್ತದೆ. ಆಯುರ್ವೇದದ ಉಪಯೋಗ ಆರೋಗ್ಯದ ವಿಕಾಸ ಎಂಬಂತೆ ಆಯುಷ್ ಪದ್ದತಿಯ ಚಿಕಿತ್ಸೆಯಲ್ಲಿ ವಿಶೇಷವಾಗಿ ಕಾಮಾಲೆ, ಚರ್ಮರೋಗ, ಅಸ್ತಮಾ, ಸೈನುಸೈಟೀಸ್, ಮೈಗ್ರೇನ್, ಆರ್ಥ್ರೈಟಿಸ್ (ಸಂಧಿಶೂಲ), ಪಕ್ಷಪಾತ, ಸ್ತ್ರೀ ರೋಗ, ಇತ್ಯಾದಿ ರೋಗಗಳಿಗೆ ಉತ್ತಮ ಚಿಕಿತ್ಸೆ ಇದೆ ಎಂಬುವುದರ ಬಗ್ಗೆ ಮನವರಿಕೆಯಾಗಿರುತ್ತದೆ. ಆಯುಷ್ ಪದ್ದತಿಯು ಹೆಸರೇ ಹೇಳುವಂತೆ ಜನರ ಆಯಸ್ಸನ್ನು ಹೆಚ್ಚಿಸುವಲ್ಲಿ ಬಹಳ ಪ್ರಯೋಜನಕಾರಿಯಾಗಿರುತ್ತದೆ. ಹಾಗೂ ಕೆಲವು ದೀರ್ಘಕಾಲಿಕ ಖಾಯಿಲೆಗಳಿಗೆ ಪರಿಣಾಮಕಾರಿ ಚಿಕಿತ್ಸೆ ನೀಡುವಲ್ಲಿ ಸಫಲವಾಗಿದೆ. ರಾಮನಗರ ಜಿಲ್ಲೆಯಲ್ಲಿ ಆಯುರ್ವೇದ, ಯೋಗ, ಯುನಾನಿ, ಸಿದ್ಧ ಮತ್ತು ಹೋಮಿಯೋಪತಿ ಚಿಕಿತ್ಸೆಗಳನ್ನು ಸಾರ್ವಜನಿಕರಿಗೆ ನೀಡುವಂತೆ 4 ತಾಲ್ಲೂಕುಗಳಲ್ಲಿ 1 ಯುನಾನಿ ಆಸ್ಪತ್ರೆ, 2 ಆಯುರ್ವೇದ ಆಸ್ಪತ್ರೆ, ಹಾಗೂ 9 ಆಯುರ್ವೇದ ಮತ್ತು 01 ಯುನಾನಿ ಚಿಕಿತ್ಸಾಲಯಗಳು ಕಾರ್ಯನಿರ್ವಹಿಸುತ್ತಿದೆ. ಹಾಗೂ ಪಿ.ಪಿ.ಪಿ. ಅಡಿಯಲ್ಲಿ ಒಂದು ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರ ಕಾರ್ಯನಿರ್ವಹಿಸುತ್ತಿದೆ. ಹಾಗೂ ಮಾಗಡಿ ತಾಲ್ಲೂಕಿನ ಸೋಲೂರು ಇಲ್ಲಿ ಹೊಸದಾಗಿ ತಾಲ್ಲೂಕು ಮಟ್ಟದ ಸರ್ಕಾರಿ ಹೋಮಿಯೋಪತಿ ಆಸ್ಪತ್ರೆಯು ಸರ್ಕಾರದಿಂದ ಮಂಜೂರಾಗಿರುತ್ತದೆ.

ರಾಷ್ಟ್ರೀಯ ಕಾರ್ಯಕ್ರಮಗಳು:

ನಮ್ಮ ಇಲಾಖೆಯ ಎಲ್ಲಾ ಆಸ್ಪತ್ರೆಗಳ ಹಾಗೂ ಚಿಕಿತ್ಸಾಲಯಗಳ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂಧಿಗಳು ಎಲ್ಲಾ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಎಲ್ಲಾ ಸಮೀಪದ ಆರೋಗ್ಯ ಕೇಂದ್ರಗಳಿಗೆ ಹಾಗೂ ಸಾರ್ವಜನಿಕ ಆಸ್ಪತ್ರೆಗಳೊಂದಿಗೆ ಸಹಕರಿಸುತ್ತವೆ.

ಮಲೇರಿಯಾ ರೋಗವು ಆರೋಗ್ಯವಂತ ಮನುಷ್ಯನಿಗೆ ಸೋಂಕು ತಗಲುವ ಅನಾಫಿಲೀಸ್ ಎಂಬ ಹೆಣ್ಣು ಸೊಳ್ಳೆಯಿಂದ ಹರಡುತ್ತದೆ. ಈ ರೋಗವನ್ನು ತಡೆಗಟ್ಟಬೇಕಾದರೆ ಮೊದಲಿಗೆ ರೋಗ ಹರಡುವ ಸೊಳ್ಳೆಗಳ ಉತ್ಪತ್ತಿಯನ್ನು ನಿಯಂತ್ರಿಸುವುದು ಹಾಗೂ ಬೇವಿನ ಸೊಪ್ಪು ಹಾಗೂ ಧೂಪ ಹಾಕುವುದು ಮತ್ತು ನೀಲಗಿರಿ, ತುಳಸಿ, ಕಾಮಕಸ್ತೂರಿ, ಅಗ್ನಿಮಂಥ, ಪಾರಿಜಾತ ಚೆಂಡು ಹೂ ಮುಂತಾದ ಔಷಧಿ ಗಿಡಗಳನ್ನು ಬೆಳೆಸುವುದರಿಂದ ಸಹಜ ರೀತಿಯಲ್ಲಿ ಸೊಳ್ಳೆಗಳನ್ನು ನಿಯಂತ್ರಿಸಲು ಆಯುಷ್ ಪದ್ದತಿಯಿಂದ ಸಾಧ್ಯವಿದೆ ಎಂದು ಸಾರ್ವಜನಿಕರಿಗೆ ಮನೆಮದ್ದು ಮತ್ತು ಆರೋಗ್ಯ ಶಿಬಿರದ ಮುಖಾಂತರ ಮನದಟ್ಟು ಮಾಡಿಸುವುದು.

ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಮನೆ ಮನೆಗೆ ಮಲೇರಿಯಾ ಕಾರ್ಯಕರ್ತರೊಡನೆ ರಕ್ತ ಲೇಪನ ತೆಗೆಯುವುದು. ಮತ್ತು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿರುವ ಮಲೇರಿಯಾ, ಚಿಕೂನ್‌ಗೂನ್ಯಾ, ಡೆಂಗ್ಯೂ ಜ್ವರಗಳನ್ನು ನಿಯಂತ್ರಿಸಲು ಪಪ್ಪಾಯ (ಪರಂಗಿ) ಎಲೆಗಳ ರಸದ ಉಪಯುಕ್ತತೆಯಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಒದಗಿಸಿ, ಇಂತಹ ಖಾಯಿಲೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸೂಕ್ತ ಔಷಧಿಗಳನ್ನು ಆಯುರ್ವೇದ ಮತ್ತು ಯುನಾನಿ ಔಷಧಿಗಳು ಇಲಾಖೆಯಿಂದ ಉಚಿತವಾಗಿ ವಿತರಿಸಿ ಗ್ರಾಮಾಂತರಗಳಲ್ಲಿ ಈ ಖಾಯಿಲೆಯನ್ನು ನಿಯಂತ್ರಿಸುವ ಕಾರ್ಯಕ್ರಮದಲ್ಲಿ ಯಶಸ್ವಿಯಾಗಿರುತ್ತದೆ.

ಕೇಂದ್ರ ಪುರಸ್ಕೃತ ಯೋಜನೆಯಡಿ ಆಚರಿಸಲಾದ ಕಾರ್ಯಕ್ರಮಗಳು

1. ಅಂತರಾಷ್ಟ್ರೀಯ ಯೋಗ ಕಾರ್ಯಕ್ರಮ :–

ಜೂನ್–21 ಅಂತರಾಷ್ಟ್ರೀಯ ಯೋಗ ದಿನವಾದ್ದರಿಂದ ಪ್ರತಿ ವರ್ಷವು ಜೂನ್–21 ರಂದು ಜಿಲ್ಲಾ ಆಯುಷ್ ಕಛೇರಿ ವತಿಯಿಂದ ಅಂತರಾಷ್ಟ್ರೀಯ ಯೋಗ ಕಾರ್ಯಕ್ರಮವನ್ನು ಆಚರಿಸಲಾಗಿದೆ.

2. 3ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ :–

ದಿನಾಂಕ: 05/11/2018 ರಂದು ಜಿಲ್ಲಾ ಆಯುಷ್ ಕಛೇರಿ ವತಿಯಿಂದ 3ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯನ್ನು ಜಿಲ್ಲಾ ಸಾರ್ವಜನಿಕ ಆಸ್ಪತ್ರೆ ಆವರಣ, ರಾಮನಗರ ಇಲ್ಲಿ ಆಚರಿಸಲಾಗಿದೆ.

3. ಪ್ರಕೃತಿ ಚಿಕಿತ್ಸಾ ದಿನಾಚರಣೆ:–

ದಿನಾಂಕ: 16/11/2018 ರಂದು ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರ, ಕನಕಪುರ ಇಲ್ಲಿ ಪ್ರಕೃತಿ ಚಿಕಿತ್ಸಾ ದಿನಾಚರಣೆಯನ್ನು ಆಚರಿಸಲಾಗಿದೆ.

ಆಯುಷ್ ಆರೋಗ್ಯ ಮತ್ತು ಐ.ಇ.ಸಿ ತರಬೇತಿ ಕಾರ್ಯಕ್ರಮಗಳು:

1. ಮನೆಮದ್ದು, ಸ್ವಸ್ಥವೃತ್ತ ಮತ್ತು ಆಯುಷ್ ಅರಿವು ಕಾರ್ಯಕ್ರಮ :–

ಜನರನ್ನು ಪ್ರಾಥಮಿಕ ಆರೋಗ್ಯ ರಕ್ಷಣೆ ಮಾಡಿಕೊಳ್ಳುವಲ್ಲಿ ಹೆಚ್ಚು ಔಷಧಿಗಳ ಉಪಯೋಗವಿಲ್ಲದೆ ಸ್ವಾವಲಂಬಿಗಳಾಗಿಸುವುದು. ಆಯುಷ್ ಪದ್ದತಿಯನ್ನು ಮನೆ ಮನೆಗೂ ತಲುಪಿಸುವುದು. ಸ್ಥಳೀಯವಾಗಿ ದೊರೆಯುವ ಔಷಧಿ ಸಸ್ಯಗಳು ಹಾಗೂ ಅಡಿಗೆ ಮನೆಯಲ್ಲಿ ದೊರೆಯುವ ಪದಾರ್ಥಗಳನ್ನು ಬಳಸಿ ಪ್ರಾಥಮಿಕ ಆರೋಗ್ಯ ರಕ್ಷಣೆ ಮಾಡಿಕೊಳ್ಳುವ ವಿಧಾನ ತಿಳಿಸುವುದು. ಮನೆಮದ್ದು ಮೂಲಕ ಆರೋಗ್ಯ ವಿಷಯಗಳ ಬಗ್ಗೆ ಆಸಕ್ತಿ ಮೂಡಿಸುವುದು. ಸುಲಭವಾಗಿ ಮತ್ತು ತಕ್ಷಣವೇ ಸಿಗುವ ಪದಾರ್ಥಗಳಿಗಳಿಂದ ಚಿಕಿತ್ಸೆ ಪಡೆಯುವ ಕ್ರಮ ಮತ್ತು ಪ್ರಾತ್ಯಕ್ಷಿಕವಾಗಿ ಔಷಧಿಗಳ ತಯಾರಿಕೆ ಮಾಡುವುದನ್ನು ಈ ಕಾರ್ಯಕ್ರಮಗಳಲ್ಲಿ ಮಾ"ತಿ ನೀಡಲಾಗಿದೆ.

ಇತ್ತೀಚಿನ ದಿನಗಳಲ್ಲಿ ಮಾರಣಾಂತಿಕವಾಗಿ ಹೆಚ್ಚುತ್ತಿರುವ ಮಲೇರಿಯಾ, ಡೆಂಗ್ಯೂ, ಚಿಕ್ಕೂನ್ ಗುನಿಯಾ ಖಾಲೆಗಳು ಹರಡಲು ಕಾರಣವಾದ "ಸೊಳ್ಳೆಗಳ" ನಿಯಂತ್ರಣ ವಿಧಾನವನ್ನು ಆಯುಷ್ ಪದ್ದತಿಯ ಮೂಲಕ ಗ್ರಾಮಗಳಲ್ಲಿ/ಕಾಲೋನಿಗಳಲ್ಲಿ ಸಾರ್ವಜನಿಕರಿಗೆ ಪ್ರಚಾರ ಮಾಡಲಾಗಿದೆ.

2. ಉಚಿತ ಆಯುಷ್ ಆರೋಗ್ಯ ಶಿಬಿರ :–

2018–19ನೇ ಸಾಲಿನಲ್ಲಿ 15 ಶಿಬಿರಗಳನ್ನು ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡಗಳು ವಾಸಿಸುವ ಗ್ರಾಮಗಳು/ಕಾಲೋನಿಗಳಲ್ಲಿ ಆಯೋಜಿಸಲಾಗಿದೆ. ಇಲ್ಲಿ ಜನರಿಗೆ ಚಿಕಿತ್ಸೆಗಳನ್ನು ಉಚಿತವಾಗಿ ಏರ್ಪಡಿಸಲಾಗಿದೆ, ಹಾಗೂ ಅವರಿಗೆ ಆಯುಷ್ ವಿಶೇಷ ಚಿಕಿತ್ಸೆಗಳ ಅರಿವು ಮೂಡಿಸಲಾಗಿದೆ.

3. ಆಯುಷ್ ಸೆಮಿನಾರ್‌ಗಳು/ತರಬೇತಿ :–

ಈ ಸೇಮಿನಾರ್/ತರಬೇತಿಗಳನ್ನು ಖಾಸಗಿ ವೈದ್ಯಾಧಿಕಾರಿಗಳಿಗೆ, ಎನ್.ಜಿ.ಓ ಗಳಿಗೆ ಅಂಗನವಾಡಿ ಕಾರ್ಯಕರ್ತೆಯರಿಗೆ, ಆಶಾ ಕಾರ್ಯಕರ್ತೆಯರಿಗೆ ಮತ್ತು ವಿದ್ಯಾರ್ಥಿಗಳಿಗೆ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ) ನಡೆಸಲಾಗುವುದು. ಈ ಆಯುಷ್ ಪದ್ಧತಿಯ ಬಗ್ಗೆ ಅರಿವು ಮೂಡಿಸಲಾಗಿದೆ. ರೋಗಗಳು ಬಾರದಂತೆ ಆರೋಗ್ಯ ಕಾಪಾಡಿಕೊಳ್ಳುವ ಬಗ್ಗೆ ಶಿಕ್ಷಣ ನೀಡಲಾಗಿದೆ.

1. ಆಯುಷ್ ಕಾರ್ಯಾಗಾರ ತಾಲ್ಲೂಕು ಮಟ್ಟದ – ದಿ: 25/01/2019 ಎಸ್.ಸಿ.ಪಿ ಯಡಿ ಶಾಲಾ ಮಕ್ಕಳಿಗಾಗಿ
2. ಜಿಲ್ಲಾ ಮಟ್ಟದ ಆಯುಷ್ ಕಾರ್ಯಾಗಾರ / ಸೆಮಿನಾರ್ ಕಾರ್ಯಕ್ರಮ :– ದಿ: 20/02/2019, ಆಶಾ ಕಾರ್ಯಕರ್ತೆಯರಿಗಾಗಿ.
3 ಆಯುಷ್ ಕಾರ್ಯಾಗಾರ ತಾಲ್ಲೂಕು ಮಟ್ಟದ:– ದಿ: 25/02/2019, ಟಿ.ಎಸ್.ಪಿ ಕಾರ್ಯಕ್ರಮದಡಿ ಶಾಲಾಮಕ್ಕಳಿಗಾಗಿ,

ರಾಮನಗರ ಜಿಲ್ಲಾ ಆಯುಷ್ ಇಲಾಖೆಯ ಚಿಕಿತ್ಸಾಲಯಗಳು/ಆಸ್ಪತ್ರೆಗಳ ಸಂಕ್ಷಿಪ್ತ ವಿವರ:

1. ಸರ್ಕಾರಿ ಯುನಾನಿ ಆಸ್ಪತ್ರೆ, ರಾಮನಗರ,
2. ಸರ್ಕಾರಿ ಆಯುರ್ವೇದ ಆಸ್ಪತ್ರೆ, ಕನಕಪುರ
3. ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಆವರಣ, ರಾಮನಗರ.
4. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಹೊರಳಗಲ್ಲು, ಕನಕಪುರ ತಾಲ್ಲೂಕು
5. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ,
   ತುಂಬೇನಹಳ್ಳಿ, ರಾಮನಗರ ತಾಲ್ಲೂಕು.
6. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಯಲವಳ್ಳಿ, ಕನಕಪುರ ತಾಲ್ಲೂಕು
7. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ,
   ಹೊಸೂರು, ರಾಮನಗರ ತಾಲ್ಲೂಕು.
8. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ,
   ಬಿಜ್ಜಿಹಳ್ಳಿ, ಕನಕಪುರ ತಾಲ್ಲೂಕು.

9. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ,
ಕೊಳಗೊಂಡನಹಳ್ಳಿ, ಕನಕಪುರ ತಾ॥
10. ಚಿಕಿತ್ಸಾ ಕೇಂದ್ರ, ಪಿ.ಪಿ.ಪಿ ಯೋಜನೆ, ಕನಕಪುರ
11. ಸರ್ಕಾರಿ ಆಯುರ್ವೇದ ಆಸ್ಪತ್ರೆ, ಯೋಗ ಮತ್ತು ಪ್ರಕೃತಿ ಮಾಗಡಿ,
12. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಮೋಟಗಾನಹಳ್ಳಿ. ಮಾಗಡಿ ತಾಲ್ಲೂಕು.
13. ಸರ್ಕಾರಿ ಹೋಮಿಯೋಪತಿ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ (ಸಿ.ಹೆಚ್.ಸಿ) ಸೋಲೂರು
14. ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಚನ್ನಪಟ್ಟಣ ತಾ॥
15. ಸರ್ಕಾರಿ ಯುನಾನಿ ಚಿಕಿತ್ಸಾಲಯ, ಚನ್ನಪಟ್ಟಣ ತಾ॥

2018–19 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯುಮೆಂಟ್‌ನಲ್ಲಿ ನಿಗಧಿಪಡಿಸಿರುವ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಡಿಯಲ್ಲಿ ನಿಗಧಿಪಡಿಸಿರುವ ಒಟ್ಟಾರೆ ಅನುದಾನದ "ವರ.

ಕ್ರ.ಸಂ.	ಲೆಕ್ಕಶೀರ್ಷಿಕೆ	ನಿಗದಿಗೊಳಿಸಿದ ಅನುದಾನ	ಆರ್ಥಿಕ (ರೂ. ಲಕ್ಷಗಳಲ್ಲಿ)			ಭೌತಿಕ(ಸಂಖ್ಯೆಗಳಲ್ಲಿ)			ಷರಾ
			ಬಿಡುಗಡೆಯಾದ ಅನುದಾನ	ವೆಚ್ಚ	ಶೇಕಡ	ವಾರ್ಷಿಕ ಗುರಿ	ಸಾಧನೆ	ಶೇಕಡ	
1	2210–00–101–0–35 ಭಾ.ವೈ.ಪ. ಪದ್ದತಿ ಮತ್ತು ಹೋಮಿಯೋಪತಿ ಜಿಲ್ಲಾ ಖಾಸಗಿ ಆಸ್ಪತ್ರೆಗಳಿಗೆ ಸಹಾಯಧನ	37.30	37.30+6.00 =43.30	26.11	60%	7	2	33%	
2	2210–00–101–0–41 ಯುನಾನಿ ಚಿಕಿತ್ಸಾಲಯಗಳ ಪ್ರಾರಂಭ ಮತ್ತು ನಿರ್ವಹಣೆ (ಆಯುರ್ವೇದ)	35.00	35.00+3.00 =38.00	30.61	81%	4	3	50%	
3	2210–00–101–0–29 ಆಯುಷ್ ಚಿಕಿತ್ಸಾಲಯಗಳು ಮತ್ತು ಆಸ್ಪತ್ರೆಗಳನ್ನು ತೆರೆಯುವುದು ಮತ್ತು ನಿರ್ವಹಣೆ	273.87	273.87+4.00 =277.87	229.56	83%	46	19	41%	
4	2210–00–101–0–37 ಆಯುಷ್ ಇಲಾಖೆಯ ಔಷಧಿ ಮತ್ತು ರಾಸಾಯನಿಕಗಳು	9.16	9.16	9.16	100%	12	12	100%	
5	2210–00–105–0–38 ಕಟ್ಟಡಗಳು, ಸಣ್ಣ ಕಾಮಗಾರಿಗಳು	5.00	5.00 -	-	1	-	-		ಈ ಅನುದಾನವು ಪಂಚಾಯತ್ ರಾಜ್ ಇಂಜಿನಿಯರಿಂಗ ವಿಭಾಗ, ರಾಮನಗರ ಇವರಿಗೆ ಬಿಡುಗಡೆ ಮಾಡಿದ್ದು ಕಾರ್ಯ ಅನುಷ್ಠಾನಗೊಳಿಸಲು ಸೂಚಿಸಿದೆ.
	ಒಟ್ಟು	**360.33**	**373.33 286.28**		**77%**	**70**	**36**	**51%**	

2018–19ನೇ ಸಾಲಿನಲ್ಲಿ ಖರೀದಿಸಲಾದ ಔಷಧಿ ರಾಸಾಯನಿಕಗಳ ಖರೀದಿ ವಿವರ :

2018–19ನೇ ಸಾಲಿನಲ್ಲಿ ಆಯುಷ್ ಇಲಾಖೆಗೆ ಔಷಧಿ ಹಾಗೂ ರಾಸಾಯನಿಕ ವಸ್ತುಗಳನ್ನು ಖರೀದಿಸುವ ಸಟಲುವಾಗಿ ಲಿಂಕ್ ಡಾಕ್ಯುಮೆಂಟ್‌ನಲ್ಲಿ ರೂ. 9.16 ಲಕ್ಷಗಳು ನಿಗಧಿಯಾಗಿದ್ದು, ಆಯುಷ್ ನಿರ್ದೇಶನಾಲಯದ ಆದೇಶದನ್ವಯ ಈ ಅನುದಾನದಲ್ಲಿ ಆಯುರ್ವೇದ ಮತ್ತು ಯುನಾನಿ ಔಷಧಿಗಳನ್ನು ಮೆ॥ ಔಷಧಿ ಫಾರ್ಮಾಸ್ಯೂಟಿಕಲ್ಸ್, ತ್ರಿಶೂರ್, ಕೇರಳ ಮತ್ತು ಐ.ಎಂ.ಪಿ.ಸಿ.ಎಸ್ ಉತ್ತರಖಂಡ್, ಇವರಿಂದ ಔಷಧಿಗಳನ್ನು ಖರೀದಿಸಿ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ.

ಹೊರಗುತ್ತಿಗೆಯ ವಿವರ

2018–19ನೇ ಸಾಲಿನಲ್ಲಿ ಜಿಲ್ಲಾ ಆಯುಷ್ ಕಛೇರಿ, ರಾಮನಗರ ಜಿಲ್ಲೆ ಮತ್ತು ಇದರ ವ್ಯಾಪ್ತಿಗೆ ಬರುವ ಆಯುಷ್ ಆಸ್ಪತ್ರೆ/ಚಿಕಿತ್ಸಾಲಯಗಳಿಗೆ ಈ ಕೆಳಕಂಡಂತೆ ಕಂಪ್ಯೂಟರ್ ಆಪರೇಟರ್ ಮತ್ತು ಗ್ರೂಪ್ ಡಿ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ.

ಕಂಪ್ಯೂಟರ್ ಆಪರೇಟರ್	–	ಜಿಲ್ಲಾ ಆಯುಷ್ ಕಛೇರಿ, ರಾಮನಗರ.
ಗ್ರೂಪ್ ಡಿ ನೌಕರರು	–	ಸರ್ಕಾರಿ ಯುನಾನಿ ಆಸ್ಪತ್ರೆ, ರಾಮನಗರ
ಗ್ರೂಪ್ ಡಿ ನೌಕರರು	–	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಹೊಸೂರು, ರಾಮನಗರ ತಾ॥
ಗ್ರೂಪ್ ಡಿ ನೌಕರರು	–	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ತುಂಬೇನಹಳ್ಳಿ, ರಾಮನಗರ ತಾ॥
ಗ್ರೂಪ್ ಡಿ ನೌಕರರು	–	ಸರ್ಕಾರಿ ಆಯುರ್ವೇದ ಆಸ್ಪತ್ರೆ, ಮಾಗಡಿ
ಗ್ರೂಪ್ ಡಿ ನೌಕರರು	–	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಮೋಟಗಾನಹಳ್ಳಿ, ಮಾಗಡಿ ತಾ॥
ಗ್ರೂಪ್ ಡಿ ನೌಕರರು	–	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಹೊರಳಗಲ್ಲು, ಕನಕಪುರ ತಾ॥
ಗ್ರೂಪ್ ಡಿ ನೌಕರರು	–	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಬಿಜ್ಜಿಹಳ್ಳಿ, ಕನಕಪುರ ತಾ॥
ಗ್ರೂಪ್ ಡಿ ನೌಕರರು	–	ಸರ್ಕಾರಿ ಯುನಾನಿ ಚಿಕಿತ್ಸಾಲಯ, ಚನ್ನಪಟ್ಟಣ

ಹಾಗೂ 2018–19ನೇ ಸಾಲಿನಲ್ಲಿ ಜಿಲ್ಲಾ ಆಯುಷ್ ಕಛೇರಿ, ರಾಮನಗರ ವ್ಯಾಪ್ತಿಗೆ ಬರುವ 3 ಆಸ್ಪತ್ರೆ ಹಾಗೂ 9 ಚಿಕಿತ್ಸಾಲಯಗಳ ತಪಾಸಣೆಗಾಗಿ, ಆಯುಷ್ ಇಲಾಖೆ ವತಿಯಿಂದ ಹಮ್ಮಿಕೊಳ್ಳುವ ಆರೋಗ್ಯ ಶಿಬಿರಗಳಿಗೆ ಭೇಟಿ, ಖಾಸಗಿ ಚಿಕಿತ್ಸಾಲಯಗಳಿಗೆ ಭೇಟಿ, ಇತರೆ ಇಲಾಖೆಗಳ ಭೇಟಿಗಾಗಿ ಹಾಗೂ ಇನ್ನಿತರೆ ಕಛೇರಿ ಕೆಲಸಗಳಿಗಾಗಿ ಹೊರಗುತ್ತಿಗೆ ಆಧಾರದ ಮೇಲೆ ಬಾಡಿಗೆ ಟಾಟಾ ಇಂಡಿಕಾ ವಾಹನವನ್ನು ಪಡೆಯಲಾಗಿದೆ.

ಇತ್ತೀಚಿನ ದಿನಗಳಲ್ಲಿ ಆಯುಷ್ ಪದ್ದತಿಯ ಬಳಕೆಯಿಂದ ಉತ್ತಮ ರೋಗನಿರೋಧಕ ಶಕ್ತಿಯನ್ನು ಹೊಂದಲು ಸಾಧ್ಯವಿದೆ ಎಂಬುದಾಗಿ ಸಾರ್ವಜನಿಕರಲ್ಲಿ ಮನವರಿಕೆಯುಂಟಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಆಯುಷ್ ಪದ್ಧತಿಯ ಚಿಕಿತ್ಸೆಯನ್ನು ಪಡೆಯುವಲ್ಲಿ ಯಶಸ್ವಿಯಾಗಿರುತ್ತಾರೆ. ಈ ನಿಟ್ಟಿನಲ್ಲಿ ಸಾರ್ವಜನಿಕರ ಹಿತದೃಷ್ಟಿಯನ್ನು ಮನಗಂಡು ಆಯುಷ್ ಇಲಾಖೆಯಲ್ಲಿ ವಿವಿಧ ಯೋಜನೆಗಳಾದ ಐ.ಇ.ಸಿ, ಎನ್.ಎ.ಎಂ. ಮತ್ತು ಎನ್.ಹೆಚ್.ಎಂ ಅಡಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು ಇದರಿಂದ ಸಾರ್ವಜನಿಕರಿಗೆ ಉಪಯೋಗವಾಗುತ್ತಿರುವುದು ಮತ್ತು ಇದರ ಸದುಪಯೋಗ ಪಡೆದುಕೊಳ್ಳುತಿರುವುದು ಇಲಾಖೆಯ ಉತ್ತಮ ಬೆಳವಣಿಗೆಯಾಗಿರುತ್ತದೆ.

ರೇಷ್ಮೆ ಇಲಾಖೆ

- ರೇಷ್ಮೆ ನಾಡು ಎಂದೇ ಪ್ರಖ್ಯಾತಿಯಾಗಿರುವ ರಾಮನಗರ ಜಿಲ್ಲೆಯಲ್ಲಿ ರೇಷ್ಮೆ ವ್ಯವಸಾಯ ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಜಿಲ್ಲೆಯಲ್ಲಿ ಕನಕಪುರ, ಚನ್ನಪಟ್ಟಣ, ರಾಮನಗರ, ಮಾಗಡಿ 4 ತಾಲ್ಲೂಕುಗಳಿದ್ದು, ಇದರ ಪೈಕಿ 3 ತಾಲ್ಲೂಕುಗಳಲ್ಲಿ ರೇಷ್ಮೆ ಬೆಳೆಯು ವಾಣಿಜ್ಯ ಬೆಳೆಯಾಗಿರುತ್ತದೆ. ಮಾಗಡಿ ತಾಲ್ಲೂಕು ಬಿತ್ತನೆ ಪ್ರದೇಶವಾಗಿದ್ದು, ಇಲ್ಲಿ ಮೈಸೂರು ಶುದ್ದ ತಳಿ ರೇಷ್ಮೆ ಗೂಡುಗಳನ್ನು ಬೀಜೋತ್ಪಾದನೆಗೆ ಉತ್ಪಾದಿಸಲಾಗುತ್ತಿದೆ.
- ರಾಮನಗರ ಜಿಲ್ಲೆಯ 3 ತಾಲ್ಲೂಕುಗಳಲ್ಲಿ 95 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ 1097 ಗ್ರಾಮಗಳಲ್ಲಿ ಒಟ್ಟು 18381.10 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ವಿಸ್ತೀರ್ಣವಿದ್ದು, 26455 ರೇಷ್ಮೆ ಬೆಳೆಗಾರರಿದ್ದಾರೆ. ಇವರ ಪೈಕಿ 1709 ಪರಿಶಿಷ್ಟ ಜಾತಿ, 124 ಪರಿಶಿಷ್ಟ ಪಂಗಡ, 326 ಅಲ್ಪಸಂಖ್ಯಾತರು ಮತ್ತು 24296 ಇತರೆ ಹಾಗೂ 2342 ಮಹಿಳಾ ರೇಷ್ಮೆ ಬೆಳೆಗಾರರು ನಿರಂತರವಾಗಿ ರೇಷ್ಮೆ ಕೃಷಿಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಜಿಲ್ಲೆಯಲ್ಲಿ 268.40ಲಕ್ಷಗಳ ಮೊಟ್ಟೆಗಳನ್ನು ಚಾಕಿ ಮಾಡಿ 19802.16 ಮೆ.ಟನ್ ರೇಷ್ಮೆ ಗೂಡನ್ನು ಉತ್ಪಾದಿಸಲಾಗಿದೆ.
- ಮೈಸೂರು ತಳಿ ಬಿತ್ತನೆ ಪ್ರದೇಶವಾದ ಮಾಗಡಿ ತಾಲ್ಲೂಕಿನಲ್ಲಿ 331.26 ಹೆಕ್ಟೇರ್ ಹಿಪ್ಪುನೇರಳೆ ಪ್ರದೇಶವಿದ್ದು, ಒಟ್ಟು 1306 ರೇಷ್ಮೆ ಬೆಳೆಗಾರರು ಬಿತ್ತನೆ ಗೂಡು ಉತ್ಪಾದನೆ ಚಟುವಟಿಕೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುತ್ತಾರೆ.
- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹಿಪ್ಪುನೇರಳೆ ನರ್ಸರಿ, ಹಿಪ್ಪುನೇರಳೆ ನಾಟಿ ಹಾಗೂ ಹಿಪ್ಪುನೇರಳೆ ತೋಟಗಳ ನಿರ್ವಹಣೆ ಕಾರ್ಯಕ್ರಮಗಳಲ್ಲಿ 2747 ಕಾಮಗಾರಿಗಳನ್ನು ಪ್ರಾರಂಭಿಸಿ 1379.25 ಲಕ್ಷಗಳನ್ನು ಖರ್ಚು ಮಾಡಿ 527448 ಮಾನವ ದಿನಗಳನ್ನು ಸೃಜಿಸಲಾಗಿದೆ.
- ಜಿಲ್ಲೆಯಲ್ಲಿ ಒಟ್ಟು 1336 ನೂಲು ಬಿಚ್ಚಾಣಿಕೆದಾರರಿದ್ದು, ಇದರಲ್ಲಿ 1203 ಅಲ್ಪಸಂಖ್ಯಾತರು, 59 ಪರಿಶಿಷ್ಟ ಜಾತಿ ಹಾಗೂ 74ಇತರೆ ವರ್ಗದವರಿದ್ದು, 178 ಡ್ಯೂಪಿಯನ್ ಚರಕ, 1061 ಕಾಟೇಜ್ ಬೇಸಿನ್ ರೀಲಿಂಗ್ ಘಟಕ, 86 ಮಲ್ಟಿಯಂಡ್ ರೀಲಿಂಗ್ ಘಟಕ ಹಾಗೂ 09 ಸ್ವಯಂ ಚಾಲಿತ ರೀಲಿಂಗ್ ಘಟಕಗಳು ಹಾಗೂ 02 ಸ್ವಯಂ ಚಾಲಿತ ಡ್ಯೂಪಿಯಾನ್ ರೀಲಿಂಗ್ ಘಟಕಗಳಿರುತ್ತವೆ. ಜಿಲ್ಲೆಯಲ್ಲಿ ಪ್ರತಿ ದಿನ ಸುಮಾರು 7000ದಿಂದ 7500 ಕೆ.ಜಿ ಗಳಷ್ಟು ಕಚ್ಚಾ ರೇಷ್ಮೆ ಉತ್ಪಾದನೆಯಾಗುತ್ತಿದೆ.

ಕ್ರ. ಸಂ	ತಾಲ್ಲೂಕು	ವಾಡಿಕೆ ಮಳೆ	ಪ್ರತ್ಯಕ್ಷ ಮಳೆ			
			2018	%	2017	%
1	ಕನಕಪುರ	783	704	90	1259	160
2	ಚನ್ನಪಟ್ಟಣ	844	685	81	1204	142
3	ರಾಮನಗರ	908	926	102	1238	136
4	ಮಾಗಡಿ	948	939	99	1106	116
	ಒಟ್ಟು	870	814	94	1201	138

ಜಿಲ್ಲೆಯ ರೇಷ್ಮೆ ಬೆಳೆಗಾರರ ವಿವರ

ಕ್ರ. ಸಂ	ತಾಲ್ಲೂಕು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಅಲ್ಪ ಸಂಖ್ಯಾತರು	ಇತರೆ	ಒಟ್ಟು	ಮಹಿಳೆಯರು
1	ಕನಕಪುರ	1183	70	111	14465	15829	1229
2	ಚನ್ನಪಟ್ಟಣ	231	1	17	5730	5979	575
3	ರಾಮನಗರ	283	53	9	3989	4334	353
4	ಮಾಗಡಿ	82	14	8	1202	1306	138
	ಒಟ್ಟು	1779	138	145	25386	27448	2295

ಜಿಲ್ಲೆಯ ಹಿಪ್ಪುನೇರಳೆ ವಿಸ್ತೀರ್ಣದ ವಿವರಗಳು (ಹೆಕ್ಟೇರುಗಳಲ್ಲಿ)

ಕ್ರ ಸಂ	ತಾಲ್ಲೂಕು	ಎಂ5	ವಿ1	ಇತರೆ	ಒಟ್ಟು
1	ಕನಕಪುರ	1192.36	9713.05	15.10	10920.51
2	ಚನ್ನಪಟ್ಟಣ	225.73	3966.85	1.00	4193.58
3	ರಾಮನಗರ	395.71	2865.00	6.30	3267.01
4	ಮಾಗಡಿ	–	331.26	–	331.26
	ಒಟ್ಟು	**1813.8**	**16876.16**	**22.40**	**18712.36**

ಜಿಲ್ಲೆಯ ಚಾಕಿ ಮತ್ತು ರೇಷ್ಮೆ ಗೂಡಿನ ಉತ್ಪಾದನೆಯ ವಿವರಗಳು

ಕ್ರ ಸಂ	ವಿವರಗಳು	ತಳಿ	ಗುರಿ	ಸಾದನೆ	%
1	ಚಾಕಿಯಾದ ಮೊಟ್ಟೆಗಳು (ಲಕ್ಷಗಳಲ್ಲಿ)	ಮಿಶ್ರತಳಿ	253.400	256.003	101
		ದ್ವಿತಳಿ	13.600	12.405	91
		ಒಟ್ಟು	267.00	268.408	101
2	ರೇಷ್ಮೆ ಗೂಡಿನ ಉತ್ಪಾದನೆ (ಮೆ.ಟನ್‌ಗಳಲ್ಲಿ)	ಮಿಶ್ರತಳಿ	16471.00	18929.106	111
		ದ್ವಿತಳಿ	884.00	873.056	99
		ಒಟ್ಟು	17355.00	19802.162	114
3	ಕಚ್ಚಾ ರೇಷ್ಮೆ ಉತ್ಪಾದನೆ	ಮಿಶ್ರತಳಿ	2287.640	2629.040	115
		ದ್ವಿತಳಿ	136.000	134.310	99
		ಒಟ್ಟು	2423.64	2763.35	114

2018–19ನೇ ಸಾಲಿನ ರಾಮನಗರ ಜಿಲ್ಲೆಯ ರೇಷ್ಮೆ ಇಲಾಖೆಯ ""ದ ಯೋಜನೆಗಳ ಪ್ರಗತಿ ವರದಿ

ರಾಜ್ಯ ವಲಯ ಯೋಜನೆಗಳು

ರೂ.ಲಕ್ಷಗಳಲ್ಲಿ

ಕ್ರ ಸಂ	ಯೋಜನೆ	ಕಾರ್ಯಕ್ರಮ	ವಾರ್ಷಿಕ ಗುರಿ		ಬಿಡುಗಡೆ	ಸಾಧನೆ		ಫಲಾನುಭವಿಗಳ ಸಂಖ್ಯೆ
			ಬೌತಿಕ	ಆರ್ಥಿಕ		ಬೌತಿಕ	ಆರ್ಥಿಕ	
1	ರೇಷ್ಮೆ ಅಭಿವೃದ್ದಿ ಯೋಜನೆ 2851–00–107–1–35(106)	ಹುಳು ಸಾಕಾಣಿಕೆ ಮನೆ	270	371.250	414.60	279	413.173	279
		ಸಲಕರಣೆಗೆ ಸಹಾಯಧನ	303	56.81	92.23	748	88.998	748
		ಚಂದ್ರಿಕೆ ಮನೆ	90	45.00	12.50	30	11.605	30
		ಒಟ್ಟು	**663**	**473.06**	**519.33**	**1057**	**513.776**	**1057**
2	ನೂತನ ಕತೃತ್ವ ಶಕ್ತಿ ಹಾಗೂ ಭಾಗೀದಾರರಿಗೆ ಸವಲತ್ತು 2851–00–107–1–48(106)	ಚಾಕಿ ಸಾಕಾಣಿಕೆಗೆ ಸಹಾಯಧನ	560000	56.00	80.00	78068	79.068	4815
		ಒಟ್ಟು	560000	56	80	78068	79.068	4815
3	ರೇಷ್ಮೆ ಅಭಿವೃದ್ದಿ ಯೋಜನೆ ವಿಶೆಷ ಘಟಕ ಯೋಜನೆ 2851–00–107–1–35(422)	ಹುಳು ಸಾಕಾಣಿಕೆ ಮನೆ	35	94.50	96.96	39	97.167	39
		ಸಲಕರಣೆಗೆ ಸಹಾಯಧನ	150	33.75	22.27	169	21.41	169
		ಒಟ್ಟು	**185**	**128.25**	**119.23**	**208**	**118.577**	**208**
4	ರೇಷ್ಮೆ ಅಭಿವೃದ್ದಿ ಯೋಜನೆ ಗಿಜನ ಉಪಯೋಜನೆ 2851–00–107–1–35(423)	ಹುಳು ಸಾಕಾಣಿಕೆ ಮನೆ	8	21.60	10.125	6	9.63	6
		ಒಟ್ಟು	**8**	**21.60**	**10.125**	**6**	**9.63**	**6**
5	ಕಾಯದೆ 2013 ವಿಶೆಷ ಘಟಕ ಯೋಜನೆ 2851–00–107–1–50(422)	ಸಲಕರಣೆಗೆ ಸಹಾಯಧನ	03	0.675	0.45	02	0.42	02
6	ಕಾಯದೆ 2013 ಗಿರಿಜನ ಉಪಯೋಜನೆ 2851–00–107–1–50(423) ಕೇಂದ್ರ ವಲಯ ಯೋಜನೆಗಳು	ಸಲಕರಣೆಗೆ ಸಹಾಯಧನ	25	5.625	2.70	23	2.61	23
		ಒಟ್ಟು	**28**	**6.30**	**3.15**	**27**	**3.03**	**25**

ಕ್ರ. ಸಂ	ಯೋಜನೆ	ಕಾರ್ಯಕ್ರಮ	ವಾರ್ಷಿಕ ಗುರಿ		ಬಿಡುಗಡೆ	ಸಾಧನೆ		ಫಲಾನುಭವಿಗಳ ಸಂಖ್ಯೆ
			ಭೌತಿಕ	ಆರ್ಥಿಕ		ಭೌತಿಕ	ಆರ್ಥಿಕ	
		ಕೇಂದ್ರ ವಲಯ ಯೋಜನೆಗಳು						
7	ಪ್ರದಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ 2851–00–107–1–49(106)	ಹನಿ ನೀರಾವರಿಗೆ ಸಹಾಯಧನ	249	249.00	747.16	860	745.933	1371
8	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ 2401–00–800–1–57 1) ಗುಣಮಟ್ಟದ ಉತ್ಪಾದನೆಗಾಗಿ ಮಣ್ಣಿನ ಫಲವತ್ತತೆ ಸಮೃದ್ಧಿಗೆ ಪ್ಯಾಕೇಜ್	ಸಾಮಾನ್ಯ (106)	380	19.924	19.924	179	19.53	179
		ವಿಶೇಷ ಘಟಕ ಯೋಜನೆ (422)	212	24.37	24.37	211	24.05	211
		ಗಿರಿಜನ ಉಪ ಯೋಜನೆ (423)	75	6.88	6.88	75	6.83	75
		ಒಟ್ಟು	**667**	**51.174**	**51.174**	**465**	**50.41**	**465**
9	ರೇಷ್ಮೆ ವ್ಯವಸಾಯ ಯೋಜನೆ 2851–00–107–1–80(059) ಜಿಲ್ಲಾ ವಲಯ ಕಾರ್ಯಕ್ರಮಗಳು	ಕ್ಲಸ್ಟರ್ ತರಬೇತಿ ಕಾರ್ಯಕ್ರಮ	20	3.000	3.000	20	2.99	1000
		ಒಟ್ಟು	20	3.000	3.000	20	2.99	1000
		ಜಿಲ್ಲಾ ವಲಯ ಕಾರ್ಯಕ್ರಮಗಳು						
10	ಜಿಲ್ಲಾ ಪಂಚಾಯತ್ ಕಾರ್ಯಕ್ರಮ ರೇಷ್ಮೆ ಬೆಳೆಗಾರರಿಗೆ ಸಹಾಯ 2851–00–104–0–30	ಸಾಮಾನ್ಯ (100)	9250	37.00	37.00	9224	36.89	9224
		ವಿಶೇಷ ಘಟಕ ಯೋಜನೆ (422)	2250	9.00	8.99	2221	8.88	2221
		ಗಿರಿಜನ ಉಪ ಯೋಜನೆ (423)	1000	4.00	4.00	993	3.97	993
		ಒಟ್ಟು	**12500**	**50**	**49.99**	**12438**	**49.74**	**12438**
11	ತಾಲ್ಲೂಕು ಪಂಚಾಯತ್ ಕಾರ್ಯಕ್ರಮ 2851–00–104–0–61(100)	ರೇಷ್ಮೆ ಬೆಳೆಗಾರರಿಗೆ ಉತ್ಪಾದನೆ/ ಉತ್ಪಾದಕತೆ ಆಧಾರಿತ ಪ್ರೋತ್ಸಾಹಧನ	84	10.00	8.32	80	8.03	80
		ಎಲ್ಲಾ ಒಟ್ಟು	**574404**	**1048.384**	**1591.479**	**93229**	**158.184**	**21385**

ಸಾರ್ವಜನಿಕ ಶಿಕ್ಷಣ ಇಲಾಖೆ

ಮಧ್ಯಾಹ್ನದ ಉಪಹಾರ ಯೋಜನೆ : ಈ ಯೋಜನೆಯ ಮುಖ್ಯ ಉದ್ದೇಶವೆನೇಂದರೆ ಮಕ್ಕಳಲ್ಲಿ ಅಪೌಷ್ಟಿಕತೆಯನ್ನು ಹೋಗಲಾಡಿಸಿ ಪೌಷ್ಟಿಕಾಂಶವನ್ನು ಹೆಚ್ಚಿಸುವುದರ ಮೂಲಕ ಅವರುಗಳ ಆರೋಗ್ಯ ಹಾಗೂ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವುದಾಗಿರುತ್ತದೆ. ಮುಖ್ಯವಾಗಿ 6 ರಿಂದ 14 ವರ್ಷದ ಎಲ್ಲಾ ಮಕ್ಕಳಿಗೂ ಶಾಲೆಗೆ ತಪ್ಪದೇ ಹಾಜರಾಗುವಂತೆ ಮಾಡುವುದು ಹಾಗೂ ಸಮಾನತೆಯನ್ನು ಮೂಡಿಸುವ ಉದ್ದೇಶವಾಗಿರುತ್ತದೆ. ಈ ಕಾರ್ಯಕ್ರಮದಡಿಯಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರತಿ ದಿನ ನೀಡಬಹುದಾದ ಆಹಾರ ಪದಾರ್ಥಗಳ ವಿವರ ಈ ರೀತಿ ಇರುತ್ತದೆ. ಪ್ರಾಥಮಿಕ ಶಾಲಾ ವಿಭಾಗಕ್ಕೆ ಅಕ್ಕಿ 100 ಗ್ರಾಂ, ಬೇಳೆ 20 ಗ್ರಾ, ತರಕಾರಿ 50 ಗ್ರಾಂ, ಉಪ್ಪು 2 ಗ್ರಾಂ, ಎಣ್ಣೆ 5 ಗ್ರಾಂ, ಇರುತ್ತದೆ. ಅದರಂತೆ ಪ್ರೌಢಶಾಲಾ ವಿಭಾಗಕ್ಕೆ ಅಕ್ಕಿ 150 ಗ್ರಾಂ, ಬೇಳೆ 30 ಗ್ರಾಂ, ತರಕಾರಿ 75 ಗ್ರಾಂ, ಉಪ್ಪು 4 ಗ್ರಾಂ, ಎಣ್ಣೆ 7.5 ಗ್ರಾಂ ನೀಡಲಾಗುತ್ತಿದೆ.

ಇದರ ಜೊತೆ ಹೆಚ್ಚುವರಿ ಪೌಷ್ಟಿಕಾಂಶಗಳಾದ ವಿಟಮಿನ್ 'ಎ' ಮಾತ್ರೆ 6 ತಿಂಗಳಿಗೆ ಒಂದರಂತೆ ವರ್ಷಕ್ಕೆ 2 ಮಾತ್ರೆಗಳು, ಕಬ್ಬಿಣಾಂಶ ಮಾತ್ರೆಗಳು ವಾರಕ್ಕೆ ಒಂದು ದಿನ ಹಾಗೂ 6 ತಿಂಗಳಿಗೆ ಒಂದರಂತೆ ವರ್ಷಕ್ಕೆ 2 ಜಂತು ನಿವಾರಣಾ ಮಾತ್ರೆಗಳನ್ನು ನೀಡಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 80,208 ಫಲಾನುಭವಿಗಳು ಸೌಲಭ್ಯವನ್ನು ಪಡೆಯುತ್ತಿರುತ್ತಾರೆ. ಒಟ್ಟು 2534 ಅಡುಗೆ ಕೇಂದ್ರಗಳಿದ್ದು, 2430 ಅಡುಗೆ ಸಿಬ್ಬಂದಿ ವರ್ಗದವರು ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಕ್ಷೀರಭಾಗ್ಯ ಯೋಜನೆ ಕಾರ್ಯಕ್ರಮ:

ಕ್ಷೀರ ಭಾಗ್ಯ ಯೋಜನೆಯಡಿ ವಾರದಲ್ಲಿ 05 ದಿನ ಕೆನೆ ಭರಿತ ಹಾಲನ್ನು 01 ರಿಂದ 10ನೇ ತರಗತಿಗಳ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನೀಡುವ ಮೂಲಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿಯನ್ನು ಹಾಗೂ ಆರೋಗ್ಯದ ದೃಷ್ಟಿಯಿಂದ ಪೌಷ್ಟಿಕಾಂಶವನ್ನು ಹೆಚ್ಚಿಸಲು ಸಹಕಾರಿಯಾಗಿ ಕಾರ್ಯಕ್ರಮ ಯಶಸ್ವಿಯಾಗಿ ಅನುಷ್ಠಾನವಾಗಿರುತ್ತದೆ.

2019ರ ಏಪ್ರಿಲ್ ಮಾಹೆಯಲ್ಲಿ ರಾಮನಗರ ಜಿಲ್ಲೆಯಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾದ ಹಾಗೂ ಉತ್ತೀರ್ಣರಾದ ವಿದ್ಯಾರ್ಥಿಗಳ ಫಲಿತಾಂಶದ ವಿವರ:

ಜಿಲ್ಲೆಯಲ್ಲಿ 2018–19ನೇ ಸಾಲಿನಲ್ಲಿ ಒಟ್ಟು 11759 ವಿದ್ಯಾರ್ಥಿಗಳು ಹಾಜರಾಗಿದ್ದು, 10650 ವಿದ್ಯಾರ್ಥಿಗಳು ತೇರ್ಗಡೆ ಹೊಂದಿ ಶೇಕಡ 88.49% ರಷ್ಟು ಫಲಿತಾಂಶ ಬಂದಿರುತ್ತದೆ.

ಕ್ರ.ಸಂ	ತಾಲ್ಲೂಕಿನ ಹೆಸರು	ಪರೀಕ್ಷೆಗೆ ಹಾಜರಾದವರು	ಉತ್ತೀರ್ಣರಾದವರು	ಶೇ. ಫಲಿತಾಂಶ
1	ಮಾಗಡಿ	2302	2115	89.79
2	ಚನ್ನಪಟ್ಟಣ	2667	2646	88.15
3	ಕನಕಪುರ	3744	3304	85.2
4	ರಾಮನಗರ	3046	2585	80.97
	ಒಟ್ಟು	11759	10650	88.49

ಸೈಕಲ್ ಸರಬರಾಜು ಮತ್ತು ವಿತರಣೆ:

ಸರ್ಕಾರವು ಸರ್ಕಾರಿ/ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಬೈಸಿಕಲ್ ವಿತರಿಸಲು ಆದೇಶ ಮಾಡಿದೆ. 2018–19ನೇ ಸಾಲಿನಲ್ಲಿ ಕೆಳಕಂಡಂತೆ ಬೈಸಿಕಲ್ ವಿತರಣೆ ಮಾಡಲಾಗಿದೆ.

ಕ್ರ.ಸಂ.	ತಾಲ್ಲೂಕು	ಬೇಡಿಕೆ	ಷರಾ
1	ಚನ್ನಪಟ್ಟಣ	1876	2018–19ನೇ ಒಟ್ಟು 8089 ಬೈಸಿಕಲ್‌ಗಳನ್ನು ವಿತರಣೆ ಮಾಡಲಾಗಿದೆ
2	ಕನಕಪುರ	2556	
3	ಮಾಗಡಿ	1743	
4	ರಾಮನಗರ	1918	
	ಒಟ್ಟು	**8089**	

ಅಥಿತಿ ಶಿಕ್ಷಕರ ನೇಮಕಾತಿ :

ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರುಗಳ ಕೊರತೆಯಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ತಾತ್ಕಾಲಿಕವಾಗಿ ವರ್ಷದ ಅಂತ್ಯದವರಗೆ ಅಥವಾ ಹೊಸ ನೇಮಕಾತಿಯಾಗುವವರಗೆ ಅತಿಥಿ ಶಿಕ್ಷಕರುಗಳನ್ನು ತೆಗೆದುಕೊಳ್ಳಲು ಸರ್ಕಾರವು ಆದೇಶ ಮಾಡಿರುತ್ತದೆ. ಪ್ರಾಥಮಿಕ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುವ ಶಿಕ್ಷಕರುಗಳಿಗೆ 7,500/– ರಂತೆ ಹಾಗೂ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುವ ಶಿಕ್ಷಕರುಗಳಿಗೆ ರೂ 8,000/– ರಂತೆ ಗೌರವ ಸಂಭಾವನೆಯನ್ನು ನೀಡಲಾಗುತ್ತಿದೆ. ಈ ಸಂಬಂಧ 272 ಪ್ರಾಥಮಿಕ ಶಾಲಾ ಶಿಕ್ಷಕರುಗಳು ಹಾಗೂ 25 ಪ್ರೌಡಶಾಲಾ ಶಿಕ್ಷಕರುಗಳನ್ನು ಅತಿಥಿ ಶಿಕ್ಷಕರಾಗಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲಾಗಿದೆ.

ಶುಲ್ಕ ಮರು ಪಾವತಿ:

ಸರ್ಕಾರವು ಪ್ರತಿ ವರ್ಷ 6, 7 ಮತ್ತು 8, 9, 10ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ಎಸ್.ಸಿ/ಎಸ್.ಟಿ. ಗಂಡು ಮತ್ತು ಹೆಣ್ಣು ಮಕ್ಕಳು ಹಾಗೂ ಇತರೆ ವರ್ಗದ ಹೆಣ್ಣು ಮಕ್ಕಳಿಗೆ ಶುಲ್ಕ ಮರು ಪಾವತಿ ನೀಡುತ್ತಿದೆ. 2018–19ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಕಾರ್ಯಕ್ರಮ, ಶುಲ್ಕ ಮರುಪಾವತಿಯಡಿ 8,9,10ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ಎಸ್.ಸಿ ಹಾಗೂ ಎಸ್.ಟಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಮರುಪಾವತಿಗಾಗಿ ರೂ.24.00 ಲಕ್ಷಗಳು ನಿಗಧಿಯಾಗಿದ್ದು, ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಹಂಚಿಕೆ ಮಾಡಿ ಪಾವತಿ ಮಾಡಲಾಗಿದೆ. ವಿವರ ಕೆಳಕಂಡಂತಿದೆ.

ಕ್ರ.ಸಂ	ತಾಲ್ಲೂಕು	ಹಂಚಿಕೆ/ಪಾವತಿ ಮಾಡಿರುವ ಕಛೇರಿಯ ವಿಳಾಸ	ಪಾವತಿ ಮಾಡಿರುವ ಮೊತ್ತ
01	–	ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು	21,18,000/–
02	ಚನ್ನಪಟ್ಟಣ	ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಚನ್ನಪಟ್ಟಣ ತಾಲ್ಲೂಕು	84,000/–
03	ರಾಮನಗರ	ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ರಾಮನಗರ ತಾಲ್ಲೂಕು	70,500/–
04	ಮಾಗಡಿ	ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಮಾಗಡಿ ತಾಲ್ಲೂಕು	49,300/–
05	ಕನಕಪುರ	ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಕನಕಪುರ ತಾಲ್ಲೂಕು	79,700/–
		ಒಟ್ಟು	**24,00,000**/–

ಕುವೆಂಪು ಮಾದರಿ ಶಾಲೆ:

ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕು ಶೆಟ್ಟಿಹಳ್ಳಿಯಲ್ಲಿ ರಾಜ್ಯ ಸರ್ಕಾರದ ವತಿಯಿಂದ ಕುವೆಂಪು ಮಾದರಿ ಶಾಲೆಯನ್ನು ಪ್ರಾರಂಭಿಸಿದ್ದು, 1 ರಿಂದ 7 ನೇ ತರಗತಿಯ ವರೆಗೆ ನಡೆಸಲಾಗುತ್ತಿದೆ.

ಉಚಿತ ಸಮವಸ್ತ್ರ ಸರಬರಾಜು:

2018–19ನೇ ಸಾಲಿಗೆ ರಾಮನಗರ ಜಿಲ್ಲೆಯಲ್ಲಿ ನಡೆಯುತ್ತಿರುವ 1 ರಿಂದ 10ನೇ ತರಗತಿವರೆಗೆ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಗೆ ಒಟ್ಟು 62300 ಸಮವಸ್ತ್ರಗಳು ಸರಬರಾಜಗಿದ್ದು ಸಂಪೂರ್ಣವಾಗಿ ವಿತರಣೆ ಮಾಡಲಾಗಿದೆ.

ತಾಲ್ಲೂಕು	ಸರಬರಾಜು ಆಗಿರುವ ಸಮವಸ್ತ್ರಗಳು	ವಿತರಣೆಯಾಗಿರುವ ಸಮವಸ್ತ್ರಗಳು
ಚನ್ನಪಟ್ಟಣ	12897	12897
ಕನಕಪುರ	16889	16889
ಮಾಗಡಿ	11446	11446
ರಾಮನಗರ	15333	15333
ಒಟ್ಟು	**56565**	**56565**

ಉಚಿತ ಪಠ್ಯಪುಸ್ತಕ:

2018–19 ನೇ ಸಾಲಿನಲ್ಲಿ ರಾಮನಗರ ಜಿಲ್ಲಾ ವ್ಯಾಪ್ತಿಗೆ ಒಟ್ಟು 8,84,640 ಪಠ್ಯ ಪುಸ್ತಕಗಳನ್ನು ಅವಶ್ಯಕತೆಗಳಿಗನುಗುಣವಾಗಿ ಸಂಪೂರ್ಣ ಸರಬರಾಜಾಗಿರುತ್ತದೆ. ಹಾಗೂ ಸ್ವೀಕರಿಸಿರುವ ಎಲ್ಲಾ ಪಠ್ಯಪುಸ್ತಕಗಳನ್ನು ಜಿಲ್ಲೆಯ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಿಗೆ ಸರಬರಾಜು ಮಾಡಲಾಗಿರುತ್ತದೆ.

ಪ್ರತಿಭಾ ಕಾರಂಜಿ ಕಾರ್ಯಕ್ರಮಗಳು:

ಪ್ರಾಥಮಿಕ 1 ರಿಂದ 7ನೇ ತರಗತಿ ಹಾಗೂ ಪ್ರೌಢಶಾಲಾ 8 ರಿಂದ 10ನೇ ತರಗತಿಯವರೆಗಿನ ಮಕ್ಕಳಿಗೆ ವಿವಿಧ ರೀತಿಯ ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸಿ ಮಕ್ಕಳಲ್ಲಿ ಹುದುಗಿರುವ ಪ್ರತಿಭೆಯನ್ನು ಹೊರಹೊಮ್ಮಲು ಅವಕಾಶ ಕಲ್ಪಿಸುವ ಕಾರ್ಯಕ್ರಮವಾಗಿರುತ್ತದೆ. ಈ ಸಂಬಂಧ ನೂತನವಾಗಿ ರಚನೆಗೊಂಡು ಅಸ್ತಿತ್ವಕ್ಕೆ ಬಂದಿರುವ ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಜಿಲ್ಲಾ ಮಟ್ಟದ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳ ವಿವಿಧ ಸಾಂಸ್ಕೃತಿಕ ಸ್ಪರ್ದೆಗಳ **"ಪ್ರತಿಭಾ ಕಾರಂಜಿ"** ಕಾರ್ಯಕ್ರಮವನ್ನು ಶಾಲಾ ಮಟ್ಟದಿಂದ ಪ್ರಾರಂಭವಾಗಿ ರಾಜ್ಯ ಮಟ್ಟದವರೆಗೆ ನಡೆಸಲಾಗುವುದು.

ಈ ಕಾರ್ಯಕ್ರಮವು 2018–19ನೇ ಸಾಲಿನಲ್ಲಿ ತಾಲ್ಲೂಕು ಮಟ್ಟದ ಕಾರ್ಯಕ್ರಮಕ್ಕೆ 04 ತಾಲ್ಲೂಕುಗಳಿಗೆ ಹಾಗೂ ಜಿಲ್ಲಾ ಮಟ್ಟದ ಕಾರ್ಯಕ್ರಮಕ್ಕೆ ಸೇರಿ ರೂ. 15,15,500/– ಲಕ್ಷಗಳು ನಿಗಧಿಯಾಗಿದ್ದು, ಕ್ಲಸ್ಟರ್ ಮತ್ತು ತಾಲ್ಲೂಕು ಮಟ್ಟದ ಕಾರ್ಯಕ್ರಮಗಳು ಮುಗಿದಿದ್ದು, ಜಿಲ್ಲಾ ಮಟ್ಟದ ಕಾರ್ಯಕ್ರಮ ಪ್ರಗತಿಯಲ್ಲಿದೆ.

ವಿಜ್ಞಾನ ಪ್ರಶಸ್ತಿ:

ವಿಜ್ಞಾನ ಮತ್ತು ತಂತ್ರಜ್ಞಾನ ಯೋಜನೆಯಡಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ರಾಜ್ಯದ ವಿದ್ಯಾರ್ಥಿ ಸಮುದಾಯದಲ್ಲಿ ವೈಜ್ಞಾನಿಕ ವೃತ್ತಿಪರತೆಯನ್ನು ಉತ್ತೇಜಿಸಿ ಪ್ರೋತ್ಸಾಹಿಸುವ ಮತ್ತು ಗುರುತಿಸುವಲ್ಲಿ ವಿಜ್ಞಾನ ಪ್ರಶಸ್ತಿ ಸ್ಥಾಪಿಸಲಾಗಿದೆ. ಈ ಪ್ರಶಸ್ತಿಗೆ ಅರ್ಹ ಅಭ್ಯರ್ಥಿಗಳು 15–18 ವರ್ಷದ ಪ್ರೌಢಶಾಲಾ / ಪದವಿ ಪೂರ್ವ ವಿದ್ಯಾರ್ಥಿಗಳಾಗಿರಬೇಕು ಮತ್ತು ವಯೋಮಿತಿ 10 ರಿಂದ 18 ವರ್ಷಗಳನ್ನು ಮೀರಿರಬಾರದು. ವಿಜ್ಞಾನ ನಾಟಕ, ಪ್ರತಿಭಾ ಕಾರಂಜಿ, ವಿಷಯಗಳಲ್ಲಿ ಪಡೆದ ಅಂಕಗಳನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆಗೊಳಿಸಲಾಗುವುದು.

ಸೇರ್ಪಡೆ ಮತ್ತು ಮಾರ್ಪಾಡು ಕಾರ್ಯಕ್ರಮ:

2018–19ರಲ್ಲಿ ಸೇರ್ಪಡೆ ಮತ್ತು ಮಾರ್ಪಾಡು ಕಾರ್ಯಕ್ರಮದಡಿ ಜಿಲ್ಲೆಯಲ್ಲಿನ ಒಟ್ಟು 22 ಸರ್ಕಾರಿ ಪ್ರೌಡಶಾಲೆಗಳ ದುರಸ್ಥಿಯ ಕಾಮಗಾರಿಯನ್ನು 40.00 ಲಕ್ಷಗಳ ವೆಚ್ಚದಲ್ಲಿ ಹಾಗೂ 38 ಸರ್ಕಾರಿ ಪ್ರಾಥಮಿಕ ಶಾಲೆಗಳ ದುರಸ್ಥಿಯನ್ನು ರೂ 40.00 ಲಕ್ಷಗಳ ವೆಚ್ಚದಲ್ಲಿ ದುರಸ್ಥಿಯನ್ನು ಮಾಡಿ ವಿದ್ಯಾರ್ಥಿಗಳಿಗೆ ಕಲಿಕೆಗೆ ಸಂಬಂಧಿಸಿದಂತೆ ಅನುಕೂಲವನ್ನು ಮಾಡಲಾಗಿದೆ.

ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ(ಆರ್.ಟಿ.ಇ):–

ಕಡ್ಡಾಯ ಶಿಕ್ಷಣ ಕಾಯಿದೆ(ಆರ್.ಟಿ.ಇ) ಯಡಿ ಅರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಅನುದಾನಿತ ಶಾಲೆಗಳಲ್ಲಿ ಉಚಿತವಾಗಿ ವ್ಯಾಸಂಗ ಮಾಡಲು ಪ್ರತಿ ಖಾಸಗಿ ಶಾಲೆಯಲ್ಲಿ ಶೇಕಡ 25%ರಷ್ಟು ಸೀಟುಗಳನ್ನು ಮೀಸಲಿಟ್ಟಿ ವಿದ್ಯಾಭ್ಯಾಸವನ್ನು ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ. 2018–19ನೇ ಸಾಲಿಗೆ ಒಟ್ಟು ಈ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 1712 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಅನುದಾನವನ್ನು ಸಂಬಂಧಿಸಿದ ಶಾಲೆಗಳಿಗೆ ಶುಲ್ಕದ ರೂಪದಲ್ಲಿ ನೀಡಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಟಾನಗೊಳಿಸಲಾಗಿದೆ.

ಕರ್ನಾಟಕ ದರ್ಶನ ಕಾರ್ಯಕ್ರಮ:

ಆರ್ಥಿಕವಾಗಿ ಹಿಂದುಳಿದ/ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರ ವಿದ್ಯಾರ್ಥಿಗಳಿಗೆ ಕರ್ನಾಟಕದಲ್ಲಿ ಶೈಕ್ಷಣಿಕ ಸ್ಥಳಗಳನ್ನು ನೋಡಲು ಪ್ರತಿ ವಿದ್ಯಾರ್ಥಿಗೆ ರೂ 3500/–ರಂತೆ ನಿಗಧಿ ಮಾಡಿ ಸರ್ಕಾರದ ವತಿಯಿಚಿದ ಅನುದಾನ ಬಿಡುಗಡೆ ಮಾಡಿ ಅವಕಾಶವನ್ನು ಕಲ್ಪಿಸಲಾಗಿದೆ. ವಿವರಗಳನ್ನು ಕೋಷ್ಟಕ 22.6 ರಲ್ಲಿ ನೀಡಲಾಗಿದೆ.

ಕ್ರ ಸಂ	ಲೆಕ್ಕಶೀರ್ಷಿಕೆ ಮತ್ತು ಕಾರ್ಯಕ್ರಮದ ಹೆಸರು	ಬಿಡುಗಡೆ ಮಾಡಿರುವ ಅನುದಾನ	ಕರ್ನಾಟಕ ದರ್ಶನ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ	ಷರಾ
01	3452–80–104–0–01–059 ಹಿಂದುಳಿದ ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಕಾರ್ಯಕ್ರಮ	15.7 ಲಕ್ಷ	450 ವಿದ್ಯಾರ್ಥಿಗಳು	ಜಿಲ್ಲೆಯಲ್ಲಿನ ಒಟ್ಟು 450 ಹಿಂದುಳಿದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಒಬ್ಬ ವಿದ್ಯಾರ್ಥಿಗೆ ರೂ 3,500/–ರ ವೆಚ್ಚದಲ್ಲಿ ಕರ್ನಾಟಕದ ಶೈಕ್ಷಣಿಕ ಸ್ಥಳಗಳಿಗೆ ವೀಕ್ಷಣೆ ಮಾಡಲೂ ಅವಕಾಶವನ್ನು ಕಲ್ಪಿಸಲಾಗಿದೆ.
02	5452–80–104–0–01–422 ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಕಾರ್ಯಕ್ರಮ	8.99 ಲಕ್ಷ	527 ವಿದ್ಯಾರ್ಥಿಗಳು	ಜಿಲ್ಲೆಯಲ್ಲಿನ ಒಟ್ಟು 206 ಪರಿಶಿಷ್ಟ ಜಾತಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಒಬ್ಬ ವಿದ್ಯಾರ್ಥಿಗೆ ರೂ 3,500/–ರ ವೆಚ್ಚದಲ್ಲಿ ಕರ್ನಾಟಕದ ಶೈಕ್ಷಣಿಕ ಸ್ಥಳಗಳಿಗೆ ವೀಕ್ಷಣೆ ಮಾಡಲೂ ಅವಕಾಶವನ್ನು ಕಲ್ಪಿಸಲಾಗಿದೆ.
03.	3452–80–104–0–01–423 ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಕಾರ್ಯಕ್ರಮ	3.71 ಲಕ್ಷ	106ವಿದ್ಯಾರ್ಥಿಗಳು	ಜಿಲ್ಲೆಯಲ್ಲಿನ ಒಟ್ಟು 34 ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಒಬ್ಬ ವಿದ್ಯಾರ್ಥಿಗೆ ರೂ 3,500/–ರ ವೆಚ್ಚದಲ್ಲಿ ಕರ್ನಾಟಕದ ಶೈಕ್ಷಣಿಕ ಸ್ಥಳಗಳಿಗೆ ವೀಕ್ಷಣೆ ಮಾಡಲೂ ಅವಕಾಶವನ್ನು ಕಲ್ಪಿಸಲಾಗಿದೆ.

ಕರ್ನಾಟಕ ಪಬ್ಲಿಕ್ ಶಾಲೆ:–

2018–19ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ತಾಲ್ಲೂಕಿಗೆ ಒಂದರಂತೆ ನಾಲ್ಕು ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳೆಂದು ಗುರುತಿಸಲಾಗಿದೆ. ಈ ಶಾಲೆಯಲ್ಲಿ 01ನೇ ತರಗತಿಗೆ ದಾಖಲಾದ ಮಕ್ಕಳು 12ನೇ ತರಗತಿವರೆಗೂ ಅಭ್ಯಾಸ ಮಾಡಲು ಅವಕಾಶ ಕಲ್ಪಿಸಲಾಗಿದೆ. ಈ ಶಾಲೆಗಳಲ್ಲಿ ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡಿ ಗುಣಮಟ್ಟದ ಶಿಕ್ಷಣವನ್ನು ನೀಡಲು ಉದ್ದೇಶಿಸಲಾಗಿದೆ. ಶಾಲೆಗಳ ವಿವರ ಕೆಳಕಂಡಂತಿದೆ.

ಕ್ರ.ಸಂ	ತಾಲ್ಲೂಕು	ಶಾಲೆಯ ಹೆಸರು ಮತ್ತು ವಿಳಾಸ
01	ಚನ್ನಪಟ್ಟಣ	ಕರ್ನಾಟಕ ಪಬ್ಲಿಕ್ ಶಾಲೆ ಅರಳಾಳುಸಂದ್ರ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ
02	ಕನಕಪುರ	ಕರ್ನಾಟಕ ಪಬ್ಲಿಕ್ ಶಾಲೆ ದೊಡ್ಡಾಲಹಳ್ಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ
03	ಮಾಗಡಿ	ಕರ್ನಾಟಕ ಪಬ್ಲಿಕ್ ಶಾಲೆ ಕುದೂರು, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ
04	ರಾಮನಗರ	ಕರ್ನಾಟಕ ಪಬ್ಲಿಕ್ ಶಾಲೆ ಅವ್ವೇರಹಳ್ಳಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ

ವಿಶ್ವಾಸ ಕಿರಣ:–

2018–19ನೇ ಸಾಲಿನಲ್ಲಿ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ದಶರಾ ರಜಾವಧಿ ಹಾಗೂ ಭಾನುವಾರಗಳಂದು ಒಳಗೊಂಡಂತೆ ಒಟ್ಟು 25 ದಿನಗಳಿಗೆ ವಿಶೇಷ ಬೋಧನಾ ತರಬೇತಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ. ಕಲಿಕೆಯಲ್ಲಿ ಹಿಂದುಳಿದ 9 ಮತ್ತು 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಇಂಗ್ಲೀಷ್, ಗಣಿತ ಮತ್ತು ವಿಜ್ಞಾನ ವಿಷಯಗಳಿಗೆ ಪರಿಕಲ್ಪನೆಯನ್ನು ಅರ್ಥೈಸಿಕೊಂಡು ಪರೀಕ್ಷೆ ಎದುರಿಸಲು ಆತ್ಮ ವಿಶ್ವಾಸವನ್ನು ಮೂಡಿಸುವಲ್ಲಿ ಯಶಸ್ವಿಯಾಗಿದೆ.

ವಯಸ್ಕರ ಶಿಕ್ಷಣ ಇಲಾಖೆ

2009–10ನೇ ಸಾಲಿನಲ್ಲಿ ರಾಮನಗರ ಜಿಲ್ಲೆಯಲ್ಲಿ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿಯನ್ನು ಪ್ರಾರಂಭಿಸಲು ಸರ್ಕಾರಿ ಆದೇಶ ಸಂಖ್ಯೆ: ಇಡಿ–72/ಎಂ.ಸಿ.ಡಿ/2009 ದಿನಾಂಕ:26.02.2009 ಇಡಿ25ಎಸ್ಟೀಮರ (ಯುನಿಕ್) ದಿನಾಂಕ:26.02.2009 ರಂತೆ ಲೆಕ್ಕ ಶೀರ್ಷಿಕೆ:2202–04–001–02–059 ಯೋಜನೆಯಡಿಯಲ್ಲಿ ಗ್ರೂಪ್–ಎ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ–1 ಗ್ರೂಪ್–ಸಿ ಕಾರ್ಯಕ್ರಮ ಸಹಾಯಕರು–1 ದ್ವಿತೀಯ ದರ್ಜೆ ಸಹಾಯಕರು–1 ಹಾಗೂ ಗ್ರೂಪ್–ಡಿ ನೌಕರರು–1 ಒಟ್ಟು 4 ಹುದ್ದೆಗಳನ್ನು ಸೃಜಿಸಿದಂತೆ ಜಿಲ್ಲೆಯಲ್ಲಿ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿಯನ್ನು 14.02.2009 ರಂದು ಸ್ಥಾಪಿಸಿ ಪ್ರಾರಂಭಿಸಲಾಗಿದೆ. 2016–17ನೇ ಸಾಲಿನಿಂದ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಕಛೇರಿ ವೇತನ ಮತ್ತು ವೇತನೇತರ ಬಾಬುಗಳನ್ನು ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯೂಮೆಂಟ್ ಅನುದಾನದಡಿಯಲ್ಲಿ ಯೋಜನೇತರ ಲೆಕ್ಕಶೀರ್ಷಿಕೆ: 2202–00–103–0–36 ಅಡಿಯಲ್ಲಿ ಭರಿಸಲಾಗುತ್ತಿದೆ.

ಸರ್ಕಾರಿ ಆದೇಶದನ್ವಯ ಸಾಕ್ಷರತಾ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಜಿಲ್ಲೆಯ ಅನಕ್ಷರಸ್ಥರ ಅಗತ್ಯತೆಗಳನ್ನು ಪೂರೈಸಲು ಅನುಕೂಲವಾಗುವಂತೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಾಕ್ಷರತಾ ಸಮಿತಿಯನ್ನು ರಚಿಸಿ ದಿನಾಂಕ: 23.03.2011 ರಂದು ನೋಂದಣಿ ಸಂಖ್ಯೆ: ಡಿ.ಆರ್.ಎಸ್/ಆರ್.ಜಿ.ಎನ್/282/2009–10 ರಂತೆ ಸಂಘ ಸಂಸ್ಥೆಗಳ ನೋಂದಣಾಧಿಕಾರಿಗಳ ಕಛೇರಿ, ರಾಮನಗರ ಇಲ್ಲಿ ನೋಂದಾಯಿಸಲಾಗಿದೆ.

ಜಿಲ್ಲೆಯಲ್ಲಿ ಸಾಕ್ಷರತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮೂಲಕ ಜಿಲ್ಲಾ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸುವುದು, ಸಮಾನ ಶಿಕ್ಷಣ ಕಾರ್ಯಕ್ರಮದ ಅನುಷ್ಠಾನ ಮಾಡುವುದು ಮಹಿಳಾ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸುವುದು, ಲಿಂಗ, ಸಾಮಾಜಿಕ ಮತ್ತು ಪ್ರಾದೇಶಿಕ ಸಾಕ್ಷರತಾ ಪ್ರಮಾಣಗಳಲ್ಲಿನ ಅಂತರವನ್ನು ಕಡಿಮೆಗೊಳಿಸುವ ಮೂಲಕ ಜಿಲ್ಲೆಯ ನವಸಾಕ್ಷರರ ಜೀವನ ಮಟ್ಟವನ್ನು ಸುಧಾರಿಸಲು ಅಗತ್ಯ ಜೀವನೋಪಾಯ ಮಾರ್ಗಗಳ ಬಗ್ಗೆ ವೃತ್ತಿಕೌಶಲ್ಯ ತರಬೇತಿಗಳನ್ನು ಅನುಷ್ಠಾನಗೊಳಿಸಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮಾರ್ಗದರ್ಶನದಂತೆ ಸಾಕ್ಷರತಾ ಕಾರ್ಯಕ್ರಮಗಳನ್ನು ಅಭಿವೃದ್ಧಿ ಇಲಾಖೆಗಳ ಇತರೆ ಸರ್ಕಾರಿ ಕಾರ್ಯಕ್ರಮಗಳೊಂದಿಗೆ ಸಮನ್ವಯಗೊಳಿಸುವುದು. ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿ ಆಧ್ಯ ಕರ್ತವ್ಯವಾಗಿರುತ್ತದೆ.

ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿ (ಲೋಕ ಶಿಕ್ಷಣ ಇಲಾಖೆ) ಆಡಳಿತ



ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿ, ರಾಮನಗರದ ಅಧೀನದಲ್ಲಿ ಕೇಂದ್ರ, ರಾಜ್ಯ ಹಾಗೂ ಜಿಲ್ಲಾ ಮಟ್ಟದ ಸಾಕ್ಷರತಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಜಿಲ್ಲಾ ಸಾಕ್ಷರತಾ ಸಮಿತಿ ಲೋಕ ಶಿಕ್ಷಣ ನಿದೇಶನಾಲಯದ ಆದೇಶದಂತೆ, ಸಾಕ್ಷರತಾ ಕಾರ್ಯಕ್ರಮಗಳನ್ನು ಈ ಕೆಳಕಂಡಂತೆ 2018–19ನೇ ಸಾಲಿನಲ್ಲಿ ಕಾರ್ಯಕ್ರಮವಾರು ಅನುಷ್ಠಾನಗೊಳಿಸಿ ವಾರ್ಷಿಕ ಪ್ರಗತಿ ವರದಿಯನ್ನು ಸಲ್ಲಿಸಿದೆ.

ಜಿಲ್ಲಾ ಪಂಚಾಯತ್ ಲಿಂಕ್ ಅನುದಾನ ಲೆಕ್ಕಶೀರ್ಷಿಕೆ:2202–00–104–0–37 ಯೋಜನೆ ರೂ.9.00 ಲಕ್ಷಗಳು

ಲೋಕ ಶಿಕ್ಷಣ ನಿರ್ದೇಶನಾಲಯದ ಮಾರ್ಗಸೂಚಿಯಂತೆ, ಜಿಲ್ಲಾ ಪಂಚಾಯತ್ ಲಿಂಕ್ ಅನುದಾನ ಲೆಕ್ಕಶೀರ್ಷಿಕೆ:2202–00–104–0–37(ಯೋಜನೆ) ಅಡಿಯಲ್ಲಿ ರೂ.9.00 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಯೋಜನೆಯಡಿಯಲ್ಲಿ ಈ ಕೆಳಕಂಡಂತೆ 15

ವರ್ಷ ಮೇಲ್ಪಟ್ಟ 936 ಮಂದಿ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿ ಮಾಡಲು ಮೂಲ ಸಾಕ್ಷರತಾ ಕಾರ್ಯಕ್ರಮವನ್ನು ಬೋಧಕರ ಮೂಲಕ ಕಲಿಕಾ ಕೇಂದ್ರಗಳನ್ನು ನಡೆಸಿ ಕಲಿಕಾ ಕಾರ್ಯ ಪೂರ್ಣಗೊಳಿಸಲಾಗಿದೆ. ಜಿಲ್ಲಾ ಸಾಕ್ಷರತಾ ಸಮಿತಿ ಕಛೇರಿ ಸಿಬ್ಬಂದಿ ಹೊರಗುತ್ತಿಗೆ ಹಾಗೂ ವಾಹನ ಬಾಡಿಗೆ ಮತ್ತು ಕಛೇರಿ ವೆಚ್ಚಗಳನ್ನು ಭರಿಸಲಾಗಿದೆ.

ಜಿಲ್ಲಾ ಪಂಚಾಯತ್ ಲಿಂಕ್ ಅನುದಾನ ಮೂಲ ಸಾಕ್ಷರತಾ ಕಾರ್ಯಕ್ರಮ

ಕ್ರ ಸಂ	ತಾಲ್ಲೂಕಿನ ಹೆಸರು	ನಿಗದಿ ಪಡಿಸಿರುವ ಗುರಿ	ಗ್ರಾ.ಪಂ ಗಳ ಸಂಖ್ಯೆ	ಪರೀಕ್ಷೆಗೆ ದಾಖಲಾದವರು			ಪರೀಕ್ಷೆಗೆ ಹಾಜರಾದವರು		
				ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
1	ರಾಮನಗರ	336	1	97	239	336	97	233	330
2	ಚನ್ನಪಟ್ಟಣ	200	1	74	126	200	73	125	198
3	ಮಾಗಡಿ	200	1	69	131	200	69	131	200
4	ಕನಕಪುರ	200	1	56	144	200	56	144	200
	ಒಟ್ಟು	**936**	**4**	**296**	**640**	**936**	**295**	**633**	**928**

ಒಟ್ಟು ಫಲಾನುಭವಿಗಳ ಸಂಖ್ಯೆ 936, ಒಟ್ಟು ವೆಚ್ಚ ರೂ. 2.81 ಲಕ್ಷಗಳು.

ಜಿಲ್ಲಾ ಪಂಚಾಯತ್ ಲಿಂಕ್ ಅನುದಾನ ಲೆಕ್ಕಶೀರ್ಷಿಕೆ:2202–00–103–0–36(ಯೋಜನೇತರ) ರೂ.2.29 ಲಕ್ಷಗಳು

ಲೋಕ ಶಿಕ್ಷಣ ನಿರ್ದೇಶನಾಲಯದ ಮಾರ್ಗಸೂಚಿಯಂತೆ, ಜಿಲ್ಲಾ ಪಂಚಾಯತ್ ಲಿಂಕ್ ಅನುದಾನ ಲೆಕ್ಕಶೀರ್ಷಿಕೆ:2202–00–103–0–36 (ಯೋಜನೇತರ) ಅಡಿಯಲ್ಲಿ ರೂ.2.28 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿ ಸಾದಿಲ್ವಾರು, ಪ್ರಯಾಣ ಭತ್ಯೆ, ಸ್ವಚ್ಛತೆ ಮತ್ತು ಟೆಲಿಫೋನ್, ವಾಹನ ಬಾಡಿಗೆ ಹಾಗೂ ಇತರೆ ವೆಚ್ಚಗಳನ್ನು ಭರಿಸಲಾಗಿದೆ.

ಕ್ರ ಸಂ	ಒಟ್ಟು ಬಿಡುಗಡೆ	ಒಟ್ಟು ಖರ್ಚು	ಒಟ್ಟು ಉಳಿಕೆ
1	ರೂ. 2.28 ಲಕ್ಷಗಳು	ರೂ. 2.28 ಲಕ್ಷಗಳು	17,713.00 ವಾಪಸ್ ಸರ್ಕಾರಕ್ಕೆ ಜಮ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಜಿಲ್ಲಾ ಪಂಚಾಯತ್ ಕಾರ್ಯಕ್ರಮ:–

ನಿರ್ಗತಿಕ ಮಕ್ಕಳ ಕುಟೀರ:– ಲೆಕ್ಕ ಶೀರ್ಷಿಕೆ:–2211–00–102–0–26 ಯೋಜನೇತರ

ನಿರ್ಗತಿಕ ಮಕ್ಕಳ ಪಾಲನೆ, ಪೋಷಣೆ, ರಕ್ಷಣೆ ಹಾಗೂ ಪುನರ್ವಸತಿ ಹಾಗೂ ಅವರಿಗೆ ಕೌಟುಂಬಿಕ ವಾತಾವರಣ ಕಲ್ಪಿಸುವುದು, ಸಮಾಜದಲ್ಲಿ ಅವರ ಆರ್ಥಿಕ ಹಾಗೂ ಜೀವನ ಮಟ್ಟವನ್ನು ಸುಧಾರಿಸಿ, ಉತ್ತಮ ಪ್ರಜೆಗಳನ್ನಾಗಿ ರೂಪಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಸ್ವಯಂ ಸೇವಾ ಸಂಸ್ಥೆ, ಮಕ್ಕಳ ಕ್ಷೇತ್ರದಲ್ಲಿ ಕನಿಷ್ಟ ಮೂರು ವರ್ಷಗಳ ಅನುಭವ ಹೊಂದಿರುವ ನೊಂದಾಯಿತ ಸಂಸ್ಥೆಗಳು ನಿರ್ಗತಿಕ ಮಕ್ಕಳ ಪಾಲನೆ ಪೋಷಣೆಗಾಗಿ ಕುಟೀರವನ್ನು ತೆರೆಯಲು ಅರ್ಹತೆ ಪಡೆದಿರುತ್ತದೆ.

ಮಕ್ಕಳು:– ತಾಯಿ ತಂದೆ ಇಬ್ಬರೂ ಇಲ್ಲದ ಅಥವಾ ತಾಯಿ/ತಂದೆ/ಏಕಪೋಷಕತ್ವ ಹೊಂದಿದ್ದು ಮಾಸಿಕ 500/– ರೂ ಹಾಗೂ ಅದಕ್ಕು ಕಡಿಮೆ ಆದಾಯವನ್ನು ಹೊಂದಿರುವ 18 ವರ್ಷದ ಒಳಗಿನ ಮಕ್ಕಳು ಈ ಯೋಜನೆಯ ಪ್ರಯೋಜನವನ್ನು ಪಡೆಯಲು ಅರ್ಹರಿರುತ್ತಾರೆ. ಸದರಿ ಮಕ್ಕಳನ್ನು ನಿರ್ಗತಿಕರೆಂದು ದೃಡೀಕರಿಸಲು ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ರವರಿಂದ ಪ್ರಮಾಣ ಪತ್ರವನ್ನು ಒದಗಿಸಬೇಕಾಗುತ್ತದೆ. ಆದೇಶ ಸಂಖ್ಯೆ: ಮಮಇ/124/ಮಬಬ/2016 ಬೆಂಗಳೂರು ದಿ: 26–07–2016ರನ್ವಯ ಪ್ರತಿ ಮಗುವಿನ ಘಟಕ ವೆಚ್ಚ ಮಾಸಿಕ ರೂ: 400/– ರಿಂದ ರೂ: 1000/–ಗಳಿಗೆ ಹೆಚ್ಚಿಸಲಾಗಿರುತ್ತದೆ.

ರಾಮನಗರ ಜಿಲ್ಲೆಯಲ್ಲಿ ಈ ಯೋಜನೆಯಡಿಯಲ್ಲಿ ಮೂರು ಸಂಸ್ಥೆಗಳಿಂದ ಒಟ್ಟು 10 ಕುಟೀರಗಳಿಂದ 250 ಮಕ್ಕಳು ಸೌಲಭ್ಯ ಪಡೆದಿರುತ್ತಾರೆ.

ಮಾಗಡಿ ತಾಲ್ಲೂಕಿನ ಕಂಚುಗಲ್ ಬಂಡೇಮಠ ಗ್ರಾಮದ ಶ್ರೀ ಮಹಾಲಿಂಗೇಶ್ವರ ವಿಧ್ಯಾಸಂಸ್ಥೆಯು 2 ನಿರ್ಗತಿಕ ಮಕ್ಕಳ ಕುಟೀರಗಳನ್ನು 50 ನಿರ್ಗತಿಕ ಮಕ್ಕಳಿಗಾಗಿ, ಕನಕಪುರ ತಾಲ್ಲೂಕಿನ ಶ್ರೀ ಮರಳೇಗವಿ ಮಠ ಸಂಸ್ಥೆಯು 75 ಮಕ್ಕಳಿಗಾಗಿ ಮೂರು ಕುಟೀರಗಳನ್ನು ಹಾಗೂ ಶ್ರೀ ದೇಗುಲ ಮಠ ಸಂಸ್ಥೆಯು 125 ಮಕ್ಕಳಿಗಾಗಿ 5 ಕುಟೀರಗಳನ್ನು ಜಿಲ್ಲಾ ಪಂಚಾಯತ್ ಅನುದಾನದಿಂದ ನಡೆಸಲಾಗುತ್ತಿದೆ.

2018–19ನೇ ಸಾಲಿಗೆ ಒಟ್ಟು ರೂ:34.35 ಲಕ್ಷಗಳ ಅನುದಾನ ನಿಗದಿಯಾಗಿದ್ದು ಇದರಲ್ಲಿ ರೂ: 34.35 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ: 26.95 ಲಕ್ಷಗಳ ವೆಚ್ಚಭರಿಸಲಾಗಿದೆ.

ಜಿಲ್ಲಾ ಕಚೇರಿ ಕಾರ್ಯಕಾರಿ ಸಿಬ್ಬಂದಿ ಹಾಗೂ ಆಡಳಿತ ಮತ್ತು ನಿರ್ದೇಶನ: ಲೆಕ್ಕ ಶೀರ್ಷಿಕೆ:–2235–00–101–0–27 (ಯೋಜನೇತರ)

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿ ವರ್ಗದವರಾದ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳು ಸೇರಿದಂತೆ 04 ಸಿಬ್ಬಂದಿಗಳಿಗೆ ವೇತನ ಭತ್ಯೆ ಹಾಗೂ ಆಡಳಿತಾತ್ಮಕ ವೆಚ್ಚಗಳಿಗೆ 2018–19ನೇ ಸಾಲಿಗೆ ವಾರ್ಷಿಕ ರೂ: 18.72 ಲಕ್ಷಗಳ ಗುರಿ ನಿಗದಿಪಡಿಸಿದ್ದು, ರೂ: 18.72 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ: 13.15 ಲಕ್ಷಗಳ ಮೊತ್ತ ವೆಚ್ಚ ಮಾಡಲಾಗಿದೆ. ಉಪನಿರ್ದೇಶಕರ ಹುದ್ದೆಯು ದಿನಾಂಕ: 05–12–2018ರಂದು ಭರ್ತಿಯಾಗಿರುತ್ತದೆ. ಮಹಿಳಾ ಮತ್ತು ಅಭಿವೃದ್ಧಿ ಅಧಿಕಾರಿ ಹಾಗೂ 4 (2 ಪ್ರದಸ. 1 ದ್ವಿ.ದ.ಸ ಹಾಗೂ 1 ವಾಹನ ಚಾಲಕ) ಸಿಬ್ಬಂದಿಗಳ ಹುದ್ದೆ ಖಾಲಿ ಇರುತ್ತದೆ.

ಜಿಲ್ಲಾ ಐಸಿಡಿಎಸ್ ಕೋಶದ ನಿರ್ವಹಣೆ:ಲೆಕ್ಕ ಶೀರ್ಷಿಕೆ:–2211–00–102–0–02 (ಯೋಜನೆ)

ಉಪನಿರ್ದೇಶಕರ ಕಚೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಈ ಕಚೇರಿಯ ನಿರೂಪಣಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರ ವೇತನ ಹಾಗೂ ಇತರೆ ಖರ್ಚುಗಳಿಗಾಗಿ ಭರಿಸಲಾಗುತ್ತಿದೆ. 2018–19ನೇ ಸಾಲಿನಲ್ಲಿ ವಾರ್ಷಿಕ ರೂ: 6.00 ಲಕ್ಷಗಳು ನಿಗದಿಗೊಳಿಸಿದ್ದು ಇದರಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಗಳ ವೇತನಾಂಶದ ಸಲುವಾಗಿ ರೂ:3.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ದಿನಾಂಕ: 12–10–2018 ರಿಂದ ಜಿಲ್ಲಾ ನಿರೂಪಣಾಧಿಕಾರಿಗಳ ಹುದ್ದೆ ಭರ್ತಿ ಯಾಗಿದ್ದು ಸದರಿ ಅಧಿಕಾರಿಗಳ ವೇತನ ಮತ್ತು ಭತ್ಯೆಗಳನ್ನು ಪಾವತಿಸಲು ಹೆಚ್ಚುವರಿಯಾಗಿ ರೂ: 7.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಒಟ್ಟು ರೂ: 10.00 ಲಕ್ಷಗಳ ಅನುದಾನ ಬಿಡುಡೆಯಾಗಿತ್ತದೆ. ಇದರಲ್ಲಿ ರೂ: 7.60 ಲಕ್ಷಗಳ ವೆಚ್ಚ ಭರಿಸಲಾಗಿದೆ. ಇದರಲ್ಲಿ 3 ಪ್ರ.ದ.ಸ ಹಾಗೂ 1 ದ್ವಿ.ದ.ಸ ಹುದ್ದೆಗಳು ಖಾಲಿ ಇರುತ್ತದೆ.

ತಾಲ್ಲೂಕು ಪಂಚಾಯತ್ ಕಾರ್ಯಕ್ರಮ:–

ಸಮಗ್ರ ಶಿಶು ಅಭಿವೃದ್ಧಿ ಸೇವೆಗಳ ಯೋಜನೆ (ಐಸಿಡಿಎಸ್)
ಫಲಾನುಭವಿಗಳ ಕ್ರೂಡೀಕೃತ ವಿವರ

6 ತಿ–1 ವರ್ಷ	1–2 ವರ್ಷ	2–3 ವರ್ಷ	3–5 ವರ್ಷ	5–6 ವರ್ಷ	ಗರ್ಭಿಣಿಯರು	ಬಾಣಂತಿಯರು	ಕಿಶೋರಿಯರು	ಅಂಕಾಅಂಸ	ಒಟ್ಟು	ಶೇ ಸಾಧನೆ
7066	12829	12663	16756	3543	2414	2338	3081	2772	63462	85%

ಉದ್ದೇಶಗಳು:–

- ಮಕ್ಕಳ ಪೌಷ್ಟಿಕತೆಯ ಮಟ್ಟವನ್ನುಮತ್ತು ಆರೋಗ್ಯ ಸ್ಥಿತಿಯನ್ನು ಸುಧಾರಿಸುವುದು.
- ಮಗುವಿನ ಸರ್ವತೊಮುಖ ಬೆಳವಣಿಗೆಗೆ ಬುನಾದಿ ಹಾಕುವುದು.
- ಶಿಶು ಮರಣ ದರ, ಅಪೌಷ್ಟಿಕತೆ, ಖಾಯಿಲೆ ಪ್ರಮಾಣ ಹಾಗೂ ಮಕ್ಕಳ ಶಾಲೆ ಬಿಡುವಿಕೆಯನ್ನು ಕಡಿಮೆ ಮಾಡುವುದು.
- ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ಇತರೆ ಇಲಾಖೆಗಳೊಂದಿಗೆ ಪರಿಣಾಮಕಾರಿಯಾದ ಬಗ್ಗೆ ಸಮನ್ವಯತೆಯನ್ನು ಸಾಧಿಸುವುದು.
- ಪೌಷ್ಟಿಕಾಂಶ ಮತ್ತು ಆರೋಗ್ಯ ಶಿಕ್ಷಣ ನೀಡುವುದರ ಮೂಲಕ ಮಕ್ಕಳ ಆರೋಗ್ಯ ಹೆಚ್ಚಿಸಲು ತಾಯಂದಿರ ಸಾಮರ್ಥ್ಯ ಹೆಚ್ಚಿಸುವುದು.

ಸೇವೆಗಳು:–

- ಗರ್ಭಿಣಿ ಮತ್ತು ಬಾಣಂತಿಯರಿಗೆ ಪೂರಕ ಪೌಷ್ಟಿಕ ಆಹಾರ ನೀಡುವುದು.
- 3 ರಿಂದ 6 ವರ್ಷದ ಮಕ್ಕಳಿಗೆ ಶಾಲಾ ಪೂರ್ವ ಶಿಕ್ಷಣ ನೀಡುವುದು.
- ಮಕ್ಕಳಿಗೆ ಹಾಗೂ ತಾಯಂದಿರಿಗೆ ರೋಗ ನಿರೋದಕ ಚುಚ್ಚುಮದ್ದು.
- ಆರೋಗ್ಯ ತಪಾಸಣೆ.
- ಸಲಹಾ ಸೇವೆಗಳು
- ಮಹಿಳೆಯರಿಗೆ ಆರೋಗ್ಯ ಮತ್ತು ಪೌಷ್ಟಿಕ ಆಹಾರ ಶಿಕ್ಷಣ ನೀಡುವುದು.

ಐಸಿಡಿಎಸ್ ಯೋಜನೆಯನ್ನು ಜಿಲ್ಲೆಯ 5 ಶಿಶು ಅಭಿವೃದ್ಧಿ ಯೋಜನೆಗಳಲ್ಲಿ ಸ್ಥಾಪಿಸಿರುವ 1301 ಮುಖ್ಯ ಅಂಗನವಾಡಿ ಕೇಂದ್ರಗಳು, 242 ಮಿನಿ ಅಂಗನವಾಡಿ ಕೇಂದ್ರಗಳ ಮೂಲಕ ಒಟ್ಟು 1543 ಅಂಗನವಾಡಿ ಕೇಂದ್ರಗಳನ್ನು ಅನುಷ್ಟಾನಗೊಳಿಸಲಾಗುತ್ತಿದೆ. ತಾಲ್ಲೂಕು ಪಂಚಾಯತ್ ಕಾರ್ಯಕ್ರಮದ ಈ ಯೋಜನೆಯಡಿ ಪೌಷ್ಟಿಕ ಆಹಾರ ವಿತರಣೆಗೆ, ಆಡಳಿತ ವೆಚ್ಚ, ಅಂಗನವಾಡಿ ಕಟ್ಟಡಗಳ ನಿರ್ಮಾಣಗಳಿಗೆ ತಾಲ್ಲೂಕು ಪಂಚಾಯತ್ ಮೂಲಕ ಅನುದಾನ ಬಿಡುಗಡೆಯಾಗುತ್ತದೆ.

1. ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮ:–2235–00–101–0–61

ಸಮಗ್ರ ಬಾಲವಿಕಾಸ ಯೋಜನೆಯಡಿ ನಡೆಸಲಾಗುತ್ತಿರುವ ಈ ಕಾರ್ಯಕ್ರಮದ ಪೂರ್ಣ ವೆಚ್ಚದ ಅರ್ಧಭಾಗವನ್ನು ಕೇಂದ್ರ ಸರ್ಕಾರವು ಭರಿಸುತ್ತದೆ. 6 ವರ್ಷದೊಳಪಟ್ಟ ಮಕ್ಕಳು, ಗರ್ಭಿಣಿ, ಬಾಣಂತಿಯರಿಗೆ ಪೂರಕ ಪೌಷ್ಟಿಕ ಆಹಾರ ಮಟ್ಟವನ್ನು ಸುಧಾರಿಸುದು ಹಾಗೂ ಈ ವರ್ಗಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಅಪೌಷ್ಟಿಕತೆಯನ್ನು ಹೋಗಲಾಡಿಸುವುದು. ವಾರದ 6 ದಿನಗಳಲ್ಲಿ:–

6 ತಿಂಗಳಿಂದ 3 ವರ್ಷದ ಮಕ್ಕಳಿಗೆ ಪ್ರತಿ ದಿನ ರೂ:–8.00 ಮೌಲ್ಯದ ಆಹಾರ ನೀಡುವುದು ತಿಂಗಳಲ್ಲಿ 13 ದಿನ ಗೋಧಿ , ಹೆಸರುಬೇಳೆ, ಬೆಲ್ಲ/ಸಕ್ಕರೆ, ಕಡಲೆಬೇಳೆ ಮಿಶ್ರಣ ಹಾಗೂ 12 ದಿನ ಅಕ್ಕಿ ಖೀರು,(ಅಕ್ಕಿ, ಹೆಸರುಬೇಳೆ, ಬೆಲ್ಲ/ಸಕ್ಕರೆ) ಮಿಶ್ರಣವನ್ನು ಪುಡಿಯ ರೂಪದಲ್ಲಿ ವಿತರಿಸಿ ಮನೆಗೆ ತೆಗೆದುಕೊಂಡು ಹೋಗಲು ವಿತರಿಸಲಾಗುತ್ತಿದೆ.

3 ವರ್ಷದಿಂದ 6 ವರ್ಷದ ಮಕ್ಕಳಿಗೆ ಪ್ರತಿ ದಿನ ಘಟಕ ವೆಚ್ಚ ರೂ: 8/– ಮೌಲ್ಯದ ಆಹಾರ ನೀಡುವುದು, ವಾರಕ್ಕೆ 2 ಬಾರಿ ಬೆಳಿಗ್ಗೆ ಕಡಲೆ ಬೀಜ, ಬೆಲ್ಲದ ಬಿಕ್ಕಿ, ಮೊಳಕೆಭರಿಸಿದ ಹೆಸರುಕಾಳು ಹಾಗೂ ಮಧ್ಯಾಹ್ನ ವಾರದಲ್ಲಿ 3 ಭಾರಿ ಚಿತ್ರಾನ್ನ ಹಾಗೂ ಸಿಹಿಪೊಂಗಲ್ ಅನ್ನು ಅಂಗನವಾಡಿ ಕೇಂದ್ರಗಳಲ್ಲಿ ತಯಾರಿಸಿ ನೀಡಲಾಗುತ್ತಿದೆ. ಗರ್ಬಿಣಿ, ಬಾಣಂತಿ, ಕಿಶೋರಿಯರಿಗೆ, ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ಪ್ರತಿ ದಿನ ರೂ 21 ಮೌಲ್ಯದ ಆಹಾರ ನೀಡುವುದು,

2018–19ನೇ ಸಾಲಿಗೆ ಕಾರ್ಯಕ್ರಮದಡಿ ವಾರ್ಷಿಕ ಗುರಿ ರೂ: 2973.06 ಲಕ್ಷ ನಿಗಧಿಪಡಿಸಿದ್ದು ರೂ: 2638.59 ಲಕ್ಷ ಬಿಡುಗಡೆಯಾಗಿದ್ದು ರೂ: 2231.36 ಲಕ್ಷಗಳ ವೆಚ್ಚ ಭರಿಸಿ ಶೇ 85% ರಷ್ಟು ಗುರಿ ಸಾಧಿಸಲಾಗಿದೆ.

2. ಆಡಳಿತ ವೆಚ್ಚ:–ಲೆಕ್ಕ ಶೀರ್ಷಿಕೆ:–2211–00–102–0–22 (ಯೋಜನೆ)

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ತಾಲ್ಲೂಕು ಮಟ್ಟದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯ ಅಧಿಕಾರಿ ಸಿಬ್ಬಂದಿ ವರ್ಗದವರಿಗೆ, ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ಗೌರವಧನ ಹಾಗೂ ಕಚೇರಿ ಸಾದಿಲ್ವಾರು ವೆಚ್ಚವನ್ನು ಇದರಡಿಯಲ್ಲಿ ಭರಿಸಲಾಗುತ್ತಿದೆ. ಈ ಕಾರ್ಯಕ್ರಮವು ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ. 2018–19ನೇ ಸಾಲಿನಲ್ಲಿ ರೂ:–2113.69ಲಕ್ಷಗಳ ವಾರ್ಷಿಕ ಗುರಿ ನಿಗಧಿಯಾಗಿದ್ದು ಹೆಚ್ಚುವರಿ ಬಿಡುಗಡೆ ಅನುದಾನ ರೂ: 549.09 ಲಕ್ಷಗಳ ಒಳಗೊಂಡಂತೆ ಒಟ್ಟು ರೂ: 2662.78 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಈ ಪೈಕಿ ರೂ: 2548.51 ಲಕ್ಷ ವೆಚ್ಚವಾಗಿದ್ದು ಶೇ 94% ರಷ್ಟು ಪ್ರಗತಿ ಸಾಧಿಲಾಗಿದೆ.

3. ಅಂಗನವಾಡಿ ಕಟ್ಟಡ ನಿರ್ವಹಣೆ:– ಲೆಕ್ಕ ಶೀರ್ಷಿಕೆ:–2211–00–102–0–61 (ಯೋಜನೆ)

ಅಂಗನವಾಡಿ ಕೇಂದ್ರಗಳಿಗೆ ಬರುವ ಮಕ್ಕಳಿಗೆ ಶಾಲಾಪೂರ್ವ ಶಿಕ್ಷಣ ನಡೆಸಲು, ಮಕ್ಕಳಿಗೆ ಸುರಕ್ಷತೆ ಒದಗಿಸಲು ಹಾಗೂ ಮಳೆ ಗಾಳಿ ಬಿಸಿಲಿನಿಂದ ರಕ್ಷಣೆ ನೀಡಲು ಅಂಗನವಾಡಿ ಕಟ್ಟಡದ ಅವಶ್ಯಕತೆ ಇದೆ ಅಲ್ಲದೆ ಕೇಂದ್ರಗಳಿಗೆ ವಿತರಿಸುವ ಆಹಾರ ಸಾಮಾಗ್ರಿಗಳನ್ನು ಸುಭದ್ರವಾಗಿ ಶೇಖರಿಸಲು ಕಟ್ಟಡದ ಅವಶ್ಯಕತೆ ಇದೆ.

ಇದು ತಾಲ್ಲೂಕು ಪಂಚಾಯತ್ ಕಾರ್ಯಕ್ರಮವಾಗಿದ್ದು ಜಿಲ್ಲೆಯಲ್ಲಿ 1301 ಅಂಗನವಾಡಿ ಕೇಂದ್ರಗಳು 242 ಮಿನಿ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ಮಾರ್ಚ್–2019ರ ಅಂತ್ಯಕ್ಕೆ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಡಿ 90 ಗ್ರಾಮಗಳಲ್ಲಿ ಅಂಗನವಾಡಿ ಕಟ್ಟಡ ಪ್ರಗತಿಯಲ್ಲಿರುತ್ತವೆ. ಜಿಲ್ಲಾ ಪಂಚಾಯತ್ ವತಿಯಿಂದ ರೂ:60.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಇದರಲ್ಲಿ ರೂ:47.15 ಲಕ್ಷಗಳನ್ನು (ಶೇ 40%, 30%, 30%ರ ಅನುಪಾತದಲ್ಲಿ) ಅಂಗನವಾಡಿ ಕಟ್ಟಡಗಳ ದುರಸ್ಥಿ, ಶೌಚಾಲಯ ದುರಸ್ಥಿ, ಗೋಡೆಬರಹಗಳನ್ನು ಬರೆಸಲು ತಾಲ್ಲೂಕು ಪಂಚಾಯತ್ ಮೂಲಕ ವೆಚ್ಚ ಮಾಡಲಾಗಿದೆ.

ಶಿಶುಪಾಲನಾ ಕೇಂದ್ರಗಳು:–ಲೆಕ್ಕ ಶೀರ್ಷಿಕೆ:–2211–00–102–0–63 (ಯೋಜನೇತರ)

ಇದು ತಾಲ್ಲೂಕು ಪಂಚಾಯತ್ ಕಾರ್ಯಕ್ರಮವಾಗಿದ್ದು ಸದರಿ ಸ್ವಯಂ ಸೇವಾ ಸಂಸ್ಥೆಗಳನ್ನು ಸ್ಥಳೀಯ ಅಂಗನವಾಡಿ ಕೇಂದ್ರಗಳೊಂದಿಗೆ ವಿಲೀನಗೊಳಿಸಿರುವುದರಿಂದ ರಾಮನಗರ ಜಿಲ್ಲೆಯಲಿ 2014–15ನೇ ಸಾಲಿನಿಂದ ಯಾವುದೇ ಶಿಶು ಪಾಲನಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ. 2018–19ನೇ ಸಾಲಿಗೆ ರೂ: 2.14 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಖಜಾನೆಯಿಂದ ಸೆಳೆದಿರುವುದಿಲ್ಲ.

ರಾಜ್ಯ ವಲಯ ಕಾರ್ಯಕ್ರಮಗಳು :–

ಅ. ಸಾಂತ್ವನ ಯೋಜನೆ :–

ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರ, ಲೈಂಗಿಕ ಕಿರುಕುಳ ಮತ್ತು ವರದಕ್ಷಿಣೆ ಕಿರುಕುಳಗಳಿಗೆ ಸಿಲುಕಿರುವ ಮಹಿಳೆಯರಿಗೆ ಈ ಯೋಜನೆಯಡಿ ರಕ್ಷಣೆ ನೆರವು ನೀಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಜಿಲ್ಲೆಯಲ್ಲಿ ನಾಲ್ಕು ಮಹಿಳಾ ಸಾಂತ್ವನಾ ಕೇಂದ್ರಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. 2018–19ನೇ ಸಾಲಿನಲ್ಲಿ ರೂ: 13.00 ಲಕ್ಷಗಳ ಬಿಡುಗಡೆಯಾಗಿದ್ದು, ಇದರಲ್ಲಿ ರೂ: 13.00 ಲಕ್ಷಗಳ ವೆಚ್ಚ ಭರಿಸಲಾಗಿದೆ.

ಆ. ಸ್ವಾಧಾರ ಯೋಜನೆ (ಕೇಂದ್ರ ಯೋಜನೆ) :–

ಈ ಯೋಜನೆಯಡಿಯಲ್ಲಿ ವಿಧವೆಯರಿಗೆ, ನಿರ್ಗತಿಕ ಹೆಣ್ಣು ಮಕ್ಕಳಿಗೆ ಶಿಕ್ಷೆಗೆ ಒಳಗಾದ ಮಹಿಳೆಯರಿಗೆ, ಅಲೆಮಾರಿ ಮಹಿಳೆಯರಿಗೆ, ಪರಿತ್ಯಕ್ತತೆಯರಿಗೆ ತಾತ್ಕಾಲಿಕ ವಸತಿ, ವೃತ್ತಿ ಪರ ತರಬೇತಿ ನೀಡಿ ಸ್ವಾವಲಾಂಭಿಗಳಾಗಲು ಸಹಾಯ ಮಾಡುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿರುತ್ತದೆ. ಇದಕ್ಕಾಗಿ ಸ್ವಯಂ ಸೇವಾ ಸಂಸ್ಥೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. 2018–19ನೇ ಸಾಲಿಗೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಇ. ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ :–

ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ–2005 ನಿಯಮ–2006ರ ಅನುಷ್ಠಾನದ ಸಂಬಂಧ ಮಹಿಳೆಯರಿಗೆ ಕುಟುಂಬದಲ್ಲಿ ನಡೆಯುವ ಮಾನಸಿಕ ಹಾಗೂ ದೈಹಿಕ ದೌರ್ಜನ್ಯಗಳಿಂದ ರಕ್ಷಣೆ ನೀಡಲು ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಸಂಬಂಧ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಸಂರಕ್ಷಣಾಧಿಕಾರಿಗಳಿಂದ ರಕ್ಷಣೆ ಹಾಗೂ ಕಾನೂನು ಸಲಹೆ ಪಡೆಯಬಹುದಾಗಿದೆ. 2018–19ನೇ ಸಾಲಿಗೆ ಹೊರಗುತ್ತಿಗೆ ಸಿಬ್ಬಂದಿಗಳ ಗೌರವಧನ ಪಾವತಿಸಲು ಜಿಲ್ಲೆಗೆ ರೂ: 14.82 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ರೂ: 14.82 ಲಕ್ಷಗಳ ವೆಚ್ಚ ಭರಿಸಲಾಗಿದೆ.

ಈ. ಸ್ತ್ರೀ ಶಕ್ತಿ ಯೋಜನೆ :–

ಮಹಿಳೆಯರಲ್ಲಿ ಸ್ವಾವಲಂಭನೆ, ಆರ್ಥಿಕ ಸಬಲೀಕರಣ ಹೆಚ್ಚಿಸಿ ಆತ್ಮ ವಿಶ್ವಾಸವನ್ನು ಉಂಟು ಮಾಡುವ ಉದ್ದೇಶದಿಂದ ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಲಾಗಿರುತ್ತದೆ. ಸ್ತ್ರೀಶಕ್ತಿ ಗುಂಪುಗಳಲ್ಲಿ 18 ವರ್ಷ ಮೇಲ್ಪಟ್ಟ 15 ರಿಂದ 20 ಜನ ಸದಸ್ಯರಿರುತ್ತಾರೆ. ಜಿಲ್ಲೆಯಲ್ಲಿ ಒಟ್ಟು 5052 ಗುಂಪುಗಳ ರಚನೆಯಾಗಿದ್ದು, 85326 ಸದಸ್ಯರಿರುತ್ತಾರೆ. ಈ ಸಂಘಗಳ ಮೂಲಕ ರೂ: 399.90 ಲಕ್ಷಗಳ ಉಳಿತಾಯವನ್ನು ಮಾಡಲಾಗಿರುತ್ತದೆ. 2018–19ನೇ ಸಾಲಿಗೆ ರಾಮನಗರ ಜಿಲ್ಲೆಗೆ ಒಟ್ಟು 059 ರಡಿ ರೂ: 5.67 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ: 5.67 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 422 ವಿಶೇಷ ಘಟಕ ಯೋಜನೆಯಡಿ ರೂ: 3.13 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ: 3.13 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 423 ಗಿರಿಜನ ಉಪಯೋಜನೆಯಡಿ ರೂ: 2.22 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ: 2.22 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಜಿಲ್ಲಾ ಮಟ್ಟದಲ್ಲಿ ಮಹಿಳಾ ಸಮಾವೇಶ ಆಯೋಜನೆಗಾಗಿ ಜಿಲ್ಲೆಗೆ ರೂ: 1.50 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ: 1.50 ಲಕ್ಷಗಳನ್ನು ಖಜಾನೆಯಿಂದ ಸೆಳೆಯಲಾಗಿದೆ. 3 ದಿನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜನೆಗಾಗಿ ರೂ: 0.75 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ರೂ: 0.75 ಲಕ್ಷಗಳನ್ನು ಖಜಾನೆಯಿಂದ ಸೆಳೆದು ಮಾರಾಟ ಮೇಳ ಆಯೋಜನೆ ಮಾಡಲಾಗಿದೆ.

ಉ. ಭಾಗ್ಯಲಕ್ಷ್ಮಿ ಯೋಜನೆ:–

2011ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಹೆಣ್ಣು ಮಕ್ಕಳ ಲಿಂಗಾನುಪಾತವು ಗಂಡು ಮಕ್ಕಳಿಗಿಂತ ಅಧಿಕವಾಗಿರುತ್ತದೆ. ಸಮಾಜದಲ್ಲಿ ಹೆಚ್ಚಾಗಿ ಗಂಡು ಮಗುವಿನ ಜನನಕ್ಕೆ ಹೆಚ್ಚಿನ ಪ್ರಶಸ್ತ್ಯ ನೀಡುತ್ತಿರುವುದು ಕಂಡುಬರುತ್ತಿದ್ದು, ಇದಕ್ಕೆ ಹಲವಾರು ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳಿರುತ್ತವೆ. ಇದರಿಂದ ಹೆಣ್ಣು ಮಗುವಿಗೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಪೌಷ್ಟಿಕ ಆಹಾರ, ಆರೋಗ್ಯ ರಕ್ಷಣೆ, ಶಿಕ್ಷಣದಂತಹ ಸೌಲಭ್ಯಗಳನ್ನು ಪಡೆಯುವುದರ ಮೇಲೆ ಹಾಗೂ ಒಟ್ಟಾರೆ ಅಭಿವೃದ್ದಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ.

